ನವಭಾರತ

ವಾಣಿಜ್ಯ ಸಂಚಿಕೆ


HOLIDAY ANNUAL

1942

1941

1940

NAVABHARAT



Sri. Mangalore Jarappa.

MANAGING DIRECTOR:

The Badavara Bandhu Printing Press, Ltd.,

AND

PROPRIETOR:

The Ramani Ramana Granthamala,

MANGALORE, S. INDIA.

ಅನುಕ್ರಮಣಿಕೆ.



ಶ್ರೀ ಕಾಶೀಮಠಾಧೀಶ
ಶ್ರೀಮತ್ ಸುಕೃತೀಂದ್ರ ತೀರ್ಥ ಶ್ರೀಪಾದಂಗಳವರು.

ನವಭಾರತ

19 41

ಯುದ್ಧಕಾಲವಾಗಲಿ ಶಾಂತಿಸಮಯವಾಗಲಿ ಮಾನವನ ದಿನಚರ್ಯೆಯು ಸಾಗಲೇಬೇಕು. ಸಂಘ-ಸಂಸ್ಥೆಗಳು ತಮ್ಮ ಕಾರ್ಯಪಥದಲ್ಲಿ ಮುನ್ನಡೆಯಬೇಕು. ಮಾತ್ರ, ಕಾಲಕ್ಕನುಗುಣವಾಗಿ ತಂತಮ್ಮ ಕಾರ್ಯಗಳನ್ನು ಮನುಷ್ಯರೂ ಸಂಸ್ಥೆಗಳೂ ರೂಪಿಸಿಕೊಂಡು, ಪರಿಸ್ಥಿತಿಗೆ ವಿರೋಧವಾಗದಂತೆ ಜಾಗರೂಕತೆಯಿಂದ ಸಾಗುವಲ್ಲಿ ಹೆಚ್ಚಿನ ಗಮನ ಕೊಡಬೇಕಾಗುವುದು. ಈ ತತ್ವವನ್ನನುಸರಿಸಿ, ಕಳೆದ ವರ್ಷ, ಸಾಹುಕಾರರ ರಜಾದಿನ ಸಮಿತಿಯವರು (ಹೊಲಿಡೇ ಕಮಿಟಿ) ಜರಗಿಸಿದ ಪ್ರಥಮ ವರ್ಧಂತ್ಯುತ್ಸವದಂದು ಸ್ಥಾಪಿತವಾದ ಕೆನರಾ ಚೇಂಬರ್ ಒಫ್ ಕೊಮರ್ಸ್—ಈ ಸಂಸ್ಥೆಯು, ತನ್ನ ಪ್ರಥಮ ವರ್ಧಂತಿಯನ್ನು ಈ ದಿನ—ತಾ. 28—12—1941ರಂದು—ಆಚರಿಸುವುದು. ಇದೇ ತತ್ವವನ್ನನುಸರಿಸಿ,—ಕಾಗದದ ಬೆಲೆಯೇರಿದರೂ—"ನವಭಾರತ"ವು ತನ್ನ ಆಗಮನದ ವರುಷದಲ್ಲೇ ಜರಗಲಿರುವ ಈ ಪ್ರಥಮ ವರ್ಧಂತಿಯಂದು ತನ್ನ ಪ್ರಥಮ ವಿಶೇಷಾಂಕವನ್ನು, ಚಿಕ್ಕ ರೂಪದಲ್ಲಾದರೂ ಹೊರಡಿಸಲು ಸಾಹಸಪಡುವುದು.

ಯುದ್ಧಸ್ಥಿತಿಯಿಂದ ವ್ಯಾಪಾರೋದ್ಯೋಗಗಳಿಗೆ ಅಭಿವೃದ್ಧಿಯ ಸುಸಂಧಿಯೊದಗಿದೆಯೆಂದು ಸ್ಥೂಲವಾಗಿ ಹೇಳುವರಾದರೂ, ಎಲ್ಲ ವ್ಯಾಪಾರಸ್ಥರು, ಎಲ್ಲ ಉದ್ಯೋಗಗಳು, ಈ ಸುಖಚಿತ್ರದೊಳಗೆ ಇದ್ದಂತೆ ತೋರುವುದಿಲ್ಲ. ಯುದ್ಧಕ್ಕೆ ಸಂಬಂಧಿಸಿದ ಕೆಲ ಕೆಲವು ಕೈಗಾರಿಕೆಗಳಿಗೇನೊ ಸುದಶೆಯೊದಗಿದೆ. ಇದರಲ್ಲಿ ನಮ್ಮ ಜಿಲ್ಲೆಯ ಅಂಶವು ದೊಡ್ಡದಿಲ್ಲವೆಂದು ಹೇಳಬಹುದು. ಬದಲಾಗಿ ಅನೇಕ ವ್ಯಾಪಾ[illegible] ಸರಕು ರವಾನೆಯೇ ಮೊದಲಾದುದರ ಸೌಕರ್ಯಗಳಿಲ್ಲದೆ ಪೇಚಾಡುವಂತಾಗಿದೆ.

ಸಾಹುಕಾರರ ಈ ವರುಷದ ಮಹಾ ಸಮ್ಮೇಳನವು, ಅವರಿಗೆ ಸಂಬಂಧಪಟ್ಟ ಮಹತ್ವದ ಸಮಾಲೋಚನೆಗಳನ್ನು ನಡೆಸಲಿದೆ. ಜಿಲ್ಲೆಯ ಉತ್ಪತ್ತಿಯಿಂದ ಹಿಡಿದು ಪರದೇಶಗಳ ಸರಕುಗಳ ವರೆಗಿನ ವಿಷಯಗಳು ಚರ್ಚೆಯಾಗಲಿವೆ. ಈ ಕಾಲದಲ್ಲಿ ಜಿಲ್ಲೆಯ ರೈತರ ಹಿತಚಿಂತನೆಯೂ ಅವರ ಆಲೋಚನೆಗಳಲ್ಲಿ ಪೋಣಿಸಿರಬೇಕಾದುದು ಅವಶ್ಯವಿದೆ.

ಸಾಹುಕಾರರಲ್ಲಿ ದುಡಿಯುವ ನೌಕರರ ಬಗ್ಗೆ ಯಾವ ತರದ ಆಪದ್ಧನ ವ್ಯವಸ್ಥೆಯೂ, ಈ ತನಕ ಉಂಟಾದುದಿಲ್ಲ. ಕಳೆದ ವರುಷ ಈ ಬಗ್ಗೆ ಒಂದು ಸೂಚನೆಯಿತ್ತು. ಆ ವಿಷಯವಾಗಿ ಸಾಹುಕಾರರು ಚಿಂತಿಸಿರುವರೇ ಎಂಬುದು ತಿಳಿದುಬಂದಿಲ್ಲ. ತಮ್ಮ ಜೀವಮಾನವೆಲ್ಲ ಶ್ರಮಪಟ್ಟು, ವೃದ್ಧಾಪ್ಯದಲ್ಲಿ ಕೂಡಿಟ್ಟ ಧನವೇನೂ ಇಲ್ಲದೆ—ದೊಡ್ಡ ಕುಟುಂಬವನ್ನು ಹಿಡಿದುಕೊಂಡು ಜೀವನ ಸಾಗಿಸಬೇಕಾದ ನೌಕರ ವರ್ಗದ ಕುರಿತು ಸಾಹುಕಾರರು, ಯಾವುದಾದರೂ ಬಗೆಯ ನಿಧಿಯನ್ನೇರ್ಪಡಿಸಿದರೆ, ಸಾವಿರಾರು ಜೀವಿಗಳಿಗೆ ನಿತ್ಯಸಂತೋಷವನ್ನೊದಗಿಸಿದ ಮಹಾಕಾರ್ಯವನ್ನು ಸಾಧಿಸಿದಂತಾಗುವುದು. ಈ ಬಾರಿಯ ಸಮ್ಮೇಳನದಲ್ಲಿ ಆ ವಿಷಯವನ್ನು ಚರ್ಚಿಸಬೇಕೆಂದು ನಮ್ಮ ಆಗ್ರಹಪೂರ್ವಕ ವಿನಂತಿ.

ಯುದ್ಧವು ಭೀಕರವಾಗುತ್ತ ಬಂದಂತೆ ಜನರ ಸಂಕಷ್ಟಗಳು ಹೆಚ್ಚುವುವು. ಬಡವರು ಹೊಟ್ಟೆಗಿಲ್ಲದೆ ಬಳಲುವರು. ಮುಂದೆ ಸಂಭವಿಸಬಹುದಾದ ಕಷ್ಟಕಾಲದಲ್ಲಿ ಸಾಹುಕಾರರು ಕಡಿಮೆ ದರದಲ್ಲಿ ಆಹಾರ ಸಾಮಗ್ರಿಗಳು ಬಡವರಿಗೆ ಒದಗುವಂತೆ ಕಾಲಕಾಲಕ್ಕೆ ತಕ್ಕ ವ್ಯವಸ್ಥೆ ಮಾಡುತ್ತಿರಬೇಕು. ಈ ವಿಭಾಗದಲ್ಲಿ ಸರಕಾರದಿಂದ ಯಾವ ಸೌಕರ್ಯಗಳು ಅವಶ್ಯವಿವೆಯೋ ಅವುಗಳನ್ನು ಪಡೆವ ಬಗ್ಗೆ ಆಲೋಚನೆ ನಡೆಯತಕ್ಕದ್ದು. ಸಾಹುಕಾರರ ಇತರ ಸಮಸ್ಯೆಗಳೊಂದಿಗೆ, ಈ ವಿಷಯವೂ ಸೇರಿರಬೇಕಾದುದು ಅವಶ್ಯವಿದೆ.

ಸ್ವತಂತ್ರ ದೇಶದಲ್ಲಿ ಮಾತ್ರ ವ್ಯಾಪಾರೋದ್ಯೋಗಗಳು ಬಹುಮುಖ ಅಭಿವೃದ್ಧಿಗೊಳ್ಳುವುವು. ಭಾರತವು ಸ್ವತಂತ್ರವಾದಾಗ, ಇಲ್ಲಿಯ ವಾಣಿಜ್ಯವೂ ಶತಪಾಲು ಬೆಳೆದುಬರುವುದರಲ್ಲಿ ಸಂದೇಹವಿಲ್ಲ. ಸ್ವಾತಂತ್ರ್ಯದ ಹೋರಾಟದಲ್ಲಿ ಮಹಾಜನ ಸಹಾಯವು ಪ್ರಾಮುಖ್ಯವಾಗಿದೆ. ನಮ್ಮ ಸಾಹುಕಾರರು ಈ ಸತ್ಯವನ್ನು ಕಣ್ಣಮುಂದಿಟ್ಟುಕೊಂಡು, ದೇಶದ—ಜನಾಂಗದ ಗೌರವಕ್ಕೆ ಅನುಗುಣವಾಗಿ ತಮ್ಮ ಸಮಾಲೋಚನೆ ನಡೆಸಿ, ಯೋಗ್ಯ ಠರಾವುಗಳನ್ನು ಮಾಡುವರೆಂದು ಆಶಿಸಲಾಗಿದೆ.



ಶ್ರೀಮತಿ ಕಮಲಾದೇವಿಯವರು

ಭೂಭ್ರಮಣಮಾಡಿ ಮರಳಿದ ಭಾರತರಮಣಿ!

ಶ್ರೀಮತಿ ಕಮಲಾದೇವಿಯವರ ವಿದೇಶ ಸಂಚಾರ

ನಾಡಿನ ನೇತ್ರಿಯ ವಿಜಯಯಾತ್ರೆಯ ವಿವರ

(ಕುಡ್ವಿ ವಾಸುದೇವ ಶೆಣೈ, ಸಂಪಾದಕ: ನವಭಾರತ)

ವಿಲಾಸಕ್ಕಾಗಿ ಭೂಭ್ರಮಣ ಮಾಡುವ ಶ್ರೀಮಂತರ ಕಥೆಗಳನ್ನು ನಾವು ಕೇಳಿರುವೆವು; ವ್ಯಾಪಾರಕ್ಕಾಗಿ ಪ್ರವಾಸ ಕೈಕೊಳ್ಳುವವರ ಚರಿತ್ರವನ್ನು ಕೇಳಿರುವೆವು. ಆದರೆ, ದೇಶದ ಹೆಸರಲ್ಲಿ ಭೂಪ್ರದಕ್ಷಿಣೆಯ ಸಾಹಸವನ್ನು ಕೈಕೊಂಡು, ಎರಡುವರೆ ವರ್ಷಗಳ ತನಕ ಜಗತ್ತಿನ ನಾನಾ ಹವೆಗಳ ಭಾಗಗಳನ್ನು ಸುತ್ತಾಡಿ, ಭಾರತದ ಕೀರ್ತಿ ಧ್ವಜವನ್ನು ತಾನು ಹೋದಲ್ಲೆಲ್ಲ ಊರಿ ಮರಳಿರುವ ಗೌರವವು, ಸ್ತ್ರೀಯರಲ್ಲಿ ಶ್ರೀಮತಿ ಕಮಲಾದೇವಿಯವರಿಗೆ ಮಾತ್ರ ಸಲ್ಲುವುದು.

ನಾಡಿನ ನೇತ್ರಿಗೆ ಸುಸ್ವಾಗತವಿರಲಿ!

ಪ್ರವಾಸ

ಶ್ರೀಮತಿಯವರ ಪ್ರವಾಸವು, ಜಾಗತಿಕ ಯುದ್ಧವಾರಂಭವಾದಾಗಲೇ ಕೈಕೊಳ್ಳಲ್ಪಟ್ಟಿತು. ಸಮರ ಮೇಘಗಳು ವಾತಾವರಣದಲ್ಲಿ ಕೂಡಿ ಗರ್ಜಿಸುತ್ತಿರುವಾಗಲೇ—ನಾಳೆ ಸಂಭವಿಸಲಿರುವ ಈ ಅವಾಂತರವನ್ನು ಮುನ್ನೋಡಿಯೇ—ಈ ಸಾಹಸಿ ಮಹಿಳೆ, ಭ್ರಮಣಕ್ಕೆ ಹೊರಟರು. ಬೊಂಬಾಯಿಯಲ್ಲಿ ಇವರನ್ನು ಬೀಳ್ಕೊಡಲು ನೆರೆದವರು— ಪ್ರಪಂಚದಲ್ಲಿ ಆಗ ತೋರುತ್ತಿದ್ದ ಆ ಪ್ರಚಂಡ ಪ್ರಶ್ನಾರ್ಥಕ ಚಿಹ್ನೆಯ ವಿಷಯವೆತ್ತಿ ತಮ್ಮ ಸಂದೇಹ ಸೂಚಿಸಲು—ದೇವಿಯವರು ಈ ಉತ್ತರವಿತ್ತರು: "ಆ ಚಿಹ್ನೆಯು ಸ್ವಾತಂತ್ರ್ಯ ಸಮರದಲ್ಲಿ ಧುಮುಕಿದವನಿಗೆ ಅಪೂರ್ವ ಸಂದರ್ಭವನ್ನೊದಗಿಸಿದೆಯನ್ನುತ್ತೇನೆ. ದಿಗಂತವು ಕೃಷ್ಣ ಛಾಯೆಯಿಂದಾವರಿಸಲ್ಪಟ್ಟುದನ್ನು ಬಲ್ಲೆ. ಆದರೆ, ಈ ಕ್ಷಣಕ್ಕೆ ತೋರುವ ಅನಿಶ್ಚಿತತೆಯಲ್ಲಿ ಮುಂಬರುವ ಪ್ರಚಂಡ ಬದಲಾವಣೆಗಳ ಬೀಜಗಳು ಇರಬಾರದೇಕೆನಿಸುತ್ತದೆ. ಈ ಅನಿಶ್ಚಿತತೆಯು ಸಾಹಸಕ್ಕೆ ಪ್ರೇರೇಪಿಸುತ್ತಿದೆ. ಮೇಘಗಳೊಡೆದು ಹೊಸ ಮನ್ವಂತರವು ತೆರೆವ ದೃಶ್ಯವನ್ನು ಕಾಣುವ ಸುಯೋಗದಿಂದ ನಾನು ವಂಚಿತೆಯಾಗಲಾರೆ.

ಸ್ನೇಹಿತರು ಶ್ರೀಮತಿಯವರನ್ನು ಬೀಳ್ಕೊಟ್ಟರು; ಶ್ರೀಮತಿಯವರು "ಜುಲಿಯಸ್ ಸೀಝಾರೊ" ಜಹಜಿನಲ್ಲಿ ಹೊರಟರು.

ಪ್ರಯಾಣದಲ್ಲಿ ಸಹಾನುಭೂತಿಯ ನೆನಹು

ಕೆಂಪು ಸಮುದ್ರದಲ್ಲಿ ಪ್ರಯಾಣ ಮಾಡುತ್ತಿರುವಾಗ ಶ್ರೀಮತಿಯವರಿಗೆ ಎಂತಹ ದುಃಖಕರ ಸ್ಮರಣೆಗಳಾಗಿರಬೇಕು! ಮನೆಬಿಟ್ಟು ಬಂದೆನೆಂಬ 'ಮನೆ ಮರುಳಲ್ಲ' (Home sick). ಮೂರು ವರುಷಗಳ ಹಿಂದೆ, ಮುಸಲಿನಿಯ ಅಗ್ನಿವಾಹಕ ಬೋಂಬುಗಳೂ ವಿಷವಾಯುವೂ ಧೀರ-ಸ್ವತಂತ್ರ ಜನಾಂಗವೊಂದನ್ನು ನರಳಿಸಿ ಕೊಂದಿದ್ದುವಷ್ಟೆ? ಆ ಕೆಂಪು ಸಮುದ್ರದ ತೀರಗಳು, ಅಬಿಸೀನಿಯದೊಂದು ಭಾಗವು, ದೃಗ್ಗೋಚರವಾಗಿತ್ತು. ಸ್ವತಂತ್ರ ಅಬಿಸೀನಿಯವು, ಮುಸಲಿನಿಯ ಮುಸಲದಿಂದ ನುಚ್ಚುನೂರಾಗಿ, ಪರತಂತ್ರದಲ್ಲಿ ನರಳುತ್ತಿತ್ತು. ಸ್ವಾತಂತ್ರ್ಯ ಸಂಗ್ರಾಮನಿರತೆಯಾದ ಮಹಿಳೆಯ ಹೃದಯವು ರಕ್ತಪ್ರವಾಹದ ಆ ಕಥೆಯ ಕಹಿ ಭಾವನೆಗಳಿಂದ ಮುದುಡಿಕೊಳ್ಳದೆ ಇರಲಾಪುದೇ? ಶ್ರೀಮತಿಯವರು, ಜತೆಯಲ್ಲಿ, ಹಿಂದೂದೇಶದ ಪಾಡನ್ನು ನೆನಸಿರಬೇಕಲ್ಲವೇ?

ಇಜಿಪ್ಟಿನಲ್ಲಿ

ಜಹಜು ಮುಂದುವರಿಯಿತು. ಸುಯೇಝ್ ಕಾಲುವೆಯು ಕಾಣಿಸಿಕೊಂಡಿತು. ಪೋರ್ಟ್ ಸಯದದಲ್ಲಿ ಶ್ರೀಮತಿಯವರನ್ನು, ಇಜಿಪ್ಟಿನ ಬಾಂಧವರು—ಬೆಳಗಿನ ಝಾವ (2-30) ವಾದರೂ—ಬಂದು ಭೇಟಿಯಾಗಿ, ಸ್ವಾಗತೀಕರಿಸಿದರು. ನೂರಾರು ಮಂದಿ ನೆರೆದಿದ್ದರು. ಶ್ರೀಮತಿಯವರು ಈ ಗೆಳೆಯರೊಡನೆ ಇಜಿಪ್ಟಿನ ಕರಾವಳಿಯಲ್ಲಿಳಿದು ಹೋದರು. ಕೈರೋ, ಅಲೆಕ್ಸಾಂಡ್ರಿಯಾ ಮೊದಲಾದ ಕಡೆಗಳಲ್ಲಿ ಸಂಚರಿಸಿ, ಶ್ರೀಮತಿಯವರು ಅಲ್ಲಿಯ ಜನರೆಲ್ಲರಿಂದ ಸ್ವಾಗತ ಸನ್ಮಾನಗಳನ್ನು ಹೊಂದಿದರು. ಇಜಿಪ್ಟಿನ ರಾಜಕೀಯ ಮುಖಂಡರನ್ನೂ ಮುತ್ಸದ್ದಿಗಳನ್ನೂ ಕಂಡು ಅವರೊಡನೆ ವಿಚಾರ ವಿನಿಮಯ ಮಾಡಿದರು. ಹಿಂದೂದೇಶದ ರಾಜಕೀಯ ಹೋರಾಟದ ಯಥಾರ್ಥತೆಯನ್ನು ಅವರಿಗೆ ವಿಶದಪಡಿಸಿದರು. ಇಜಿಪ್ಟಿನ ಸ್ಥಿತಿಗತಿಗಳನ್ನು ತಾನು ಸರಿಯಾಗಿ ತಿಳಕೊಂಡರು. ಅಂತು ಇಜಿಪ್ಟಿನಲ್ಲಿ ಒಂದು ವಾರದ ತನಕ ನಿಂತು ಶ್ರೀಮತಿಯವರು, ಅವಿರಾಮವಾಗಿ ಅಲ್ಲಿಯ ಮುಖಂಡರೊಡನೆ ಭೇಟಿ-ಭಾಷಣ-ಭ್ರಮಣಗಳನ್ನು ನಡೆಸಿದರು. ಅಲ್ಲಿರುವ ಕಾಲ, ಇಜಿಪ್ಟಿನ ವಾಫ್ದ್ ಪಕ್ಷದ ಮುಖಂಡ ನಾಹಾಸ್ ಪಾಷಾರವರ



ನ್ಯೂಯೋರ್ಕ್ ನಗರದಲ್ಲಿರುವ ಭಾರತೀಯರು, "ಯಂಗ್ ಇಂಡಿಯಾ ಸೋಶ್ಯಲ್ ಕ್ಲಬ್ಬಿ"ನಲ್ಲಿ ಶ್ರೀಮತಿ ಕಮಲಾದೇವಿಯವರಿಗೆ ಔತಣಸತ್ಕಾರವಿತ್ತಾಗ ತೆಗೆದ ಭಾವಚಿತ್ರ. (ನವಂಬರ, ತಾ. 19, 1939)

ಅತಿಥಿಗಳಾಗಿದ್ದರು. (ಈಗ ಪ್ರಚಂಡ ರಣರಂಗವಾಗಿರುವ ಲಿಬ್ಯಾ ಮರುಭೂಮಿಯಲ್ಲಿ ಶ್ರೀಮತಿಯವರು ಮೋಟಾರಿನಲ್ಲಿ ಸಂಚರಿಸಿರುವರು.)

ಇಜಿಪ್ಟಿನಿಂದ ಮುಂದೆ ಶ್ರೀಮತಿಯವರು ಮೆಡಿಟರೇನಿಯನಿನ ಕೆಲವು ಪ್ರಾಮುಖ್ಯ ಸ್ಥಳಗಳನ್ನು ಸಂದರ್ಶಿಸಿದರು. ವೆನಿಸ್, ರ್‍ಹೋಡ್ಸ್‌ದ್ವೀಪ, ಅಥೆನ್ಸ್ (ಗ್ರೀಸ್ ರಾಜಧಾನಿ) ಮೊದಲಾದ ಮಹತ್ವದ ಸ್ಥಳಗಳನ್ನು ಸಂದರ್ಶಿಸಿ ಮುಂದುವರಿದರು. ಮೆಡಿಟರೇನಿಯನಿನ ಪ್ರವಾಸದಲ್ಲಿ ಶ್ರೀಮತಿಯವರು, ಇಟೇಲಿಯನ್ ಸಮುದ್ರವಿಭಾಗದಲ್ಲಿ ಎಲ್ಲೆಲ್ಲಿಯೂ ಇಟೇಲಿಯ ಯುದ್ಧಹಡಗಗಳನ್ನೂ ಸಬ್‌ಮೆರಿನುಗಳನ್ನೂ ಡಿಸ್ಟ್ರಾಯರುಗಳನ್ನೂ ಕಂಡರೆಂದು ಪ್ರಕಟವಾಗಿದೆ. ಯುದ್ಧದ ದಿನವು ಸಮೀಪಿಸವಾಯಿತೆಂದು ಈ ದೃಶ್ಯಗಳನ್ನು ಕಂಡವರು ಎಣಿಸಲೇ ಬೇಕು. ವೆನಿಸ್ ನಗರದಿಂದ ಶ್ರೀಮತಿಯವರು ಆಲ್ಪ್ಸ ಪರ್ವತಗಳನ್ನು ದಾಟಿ, ಫ್ರಾನ್ಸಿಗೆ ತೆರಳಿ, ಇಂಗ್ಲಾಂಡಿಗೆ ಮುಂದುವರಿದರು.

ಲಂಡನ್ ನಗರದಲ್ಲಿ

ಲಂಡನಿಗೆ ಶ್ರೀಮತಿಯವರ ಮೂರನೇ ಸಂದರ್ಶನವಿದು. ಹಲವು ವರ್ಷ ಹಿಂದೆ ಎರಡು ಬಾರಿ ಅವರು ಲಂಡನಿಗೆ ತೆರಳಿ, ಕೆಲಕಾಲ ಅಲ್ಲಿದ್ದರು. ಸುಕಾಲದ ನಂತರ ಅಲ್ಲಿಗೆ ತಲಪಿದ ಇವರು, ಅಲ್ಲಿ ಹೆಚ್ಚಿನ ಬದಲಾವಣೆಗಳನ್ನು ಕಾಣಲಿಲ್ಲವೆಂದು ತೋರುತ್ತದೆ. "ಇಷ್ಟು ವರ್ಷಗಳಲ್ಲಿ ಪ್ರಪಂಚವು ಬಹುಮುಖ ಚಪಲವಾಗಿದೆ. ಆದರೆ ಲಂಡನ್ ನಗರದಲ್ಲಿ ಮಹತ್ವದ ಬದಲಾವಣೆಗಳೇನೂ ಕಾಣುವುದಿಲ್ಲ"— ಹೀಗೆಂದು ಶ್ರೀಮತಿಯವರು, ಅಲ್ಲಿಯ ಪತ್ರಿಕಾಪ್ರತಿನಿಧಿಗಳೊಡನೆ ಹೇಳಿರುವರು. ನಗರದಲ್ಲಿ ಬದಲಾವಣೆಗಳಿಲ್ಲವೆಂದು ಶ್ರೀಮತಿಯವರು ನುಡಿವಾಗ, ಲಂಡನಿನ ಆಳುವ ಪ್ರಭುಗಳ ಹೃದಯಗಳೂ ಬದಲಾಗಿಲ್ಲವೆಂಬ ದ್ವಯಾರ್ಥವು ಹೇಗೆ ಸೂಚಿತವಾಗಿದೆ!

ಲಂಡನಿನಲ್ಲಿ ಶ್ರೀಮತಿ ಕಮಲಾದೇವಿಯವರು ಸಾಮಾನ್ಯವಾಗಿ, ಎಲ್ಲ ಪಕ್ಷಗಳ ಮುಖಂಡರನ್ನು ಕಂಡು, ಅವರೊಡನೆ ಹಿಂದೂದೇಶದ ವಿಷಯವಾಗಿ ಚರ್ಚಿಸಿದರು. ಅವರು ಅಲ್ಲಿಗೆ ತಲಪುವ ಮೊದಲೇ, ಅವರ ಬಗ್ಗೆ ಹಲವು ಕಡೆಗಳಲ್ಲಿ ಭಾಷಣ-ಭೇಟಿಗಳ ಕಾರ್ಯಕ್ರಮಗಳು ಸಿದ್ಧವಾಗಿದ್ದುವು. ಲಂಡನಿಗೆ ಇವರ ಆಗಮನವು ಅಸಾಮಾನ್ಯ ಆಕರ್ಷಣವೆನ್ನುವಂತೆ—ಪ್ರಮುಖರ ಚಿತ್ತವನ್ನು ಈ ಕಡೆ ಸೆಳೆಯಿತು.

ಎಲ್ಲೆಲ್ಲಿಯೂ ಈ ಪ್ರಶ್ನೆ ಎದ್ದು ನಿಂತಿತು:— **"ಬ್ರಿಟ್ಟೈನು ಯುದ್ಧಕ್ಕೆ ಹೋಗುವುದಾದರೆ ಹಿಂದೂದೇಶವೇನು ಮಾಡುವುದು?—"** ಈ ಪ್ರಶ್ನೆಯು ಕೇವಲ ಕಾಲ್ಪನಿಕ ಅಥವಾ ಅಸಂಬದ್ಧವಿರಲಿಲ್ಲ. ನೈಜ ಪ್ರಪಂಚದ ವಾಸ್ತವಿಕ ಪ್ರಶ್ನೆಯಾಗಿತ್ತು.

ಉರಿಯುತ್ತಿದ್ದ ಒಂದು ಪ್ರಶ್ನೆ

ಶ್ರೀಮತಿ ಕಮಲಾದೇವಿಯವರು ಹಲವು ಮುತ್ಸದ್ದಿಗಳನ್ನು ಕಂಡರು. ಇವರು ಹೋದಲ್ಲೆಲ್ಲ 'ಯುದ್ಧವಾದರೆ ಹಿಂದೂದೇಶದ ಭಾಗವೇನು' ಎಂಬ ಪ್ರಶ್ನೆಯೇ ಪ್ರಾಮುಖ್ಯವಾಗಿ ಮಿರುಗುತ್ತಿತ್ತು. ಆ ಕಾಲದಲ್ಲೇ ಯುದ್ಧ ವಿಷಯಕವಾಗಿ ಕೊಂಗ್ರೆಸ್ಸು ಸ್ಪಷ್ಟೀಕರಿಸಿದ ಧೋರಣೆಯು, ಅಲ್ಲಿಯ ಜನತೆಯಲ್ಲಿ ಒಂದು ಬಗೆಯ ಸಂದೇಹಕರ ಮಾನಸಿಕತೆಯನ್ನು ಹುಟ್ಟಿಸಿತು. ಹೀಗಿದ್ದರೂ, ಕೊಂಗ್ರೆಸ್ಸಿನ ನಿರ್ಧಾರಗಳಿಗಾಗಿ ಬೇಸರ-ಕಹಿ ಭಾವನೆಗಳಿರಲಿಲ್ಲ. ರಾಜಕೀಯ ಮಂಡಲಗಳಿಗೆ,—"ವಿಜಯ ಯತ್ನದಲ್ಲಿ ಬ್ರಿಟಿಷ್ ಸರಕಾರವು ಭಾರತದ ಸಹಾಯ-ಸಹಾನುಭೂತಿಗಳನ್ನು ಪಡೆವಂತೆ ನ್ಯಾಯಮಾಡಿಲ್ಲ"ವೆಂದೂ ಭಾಸವಾಗಿತ್ತೆನ್ನಬೇಕು. (ಇಂತಹ ಭಾವನೆಯಿತ್ತೇನೊ ನಿಜ. ಆದರೆ, ಯುದ್ಧವು ಬರುವುದಾದರೆ, ಬಂದರೆ, ಹಿಂದೂದೇಶದ ಸುರಕ್ಷಿತತೆಗಾಗಿ ಕೂಡ ಬ್ರಿಟೈನು ಜಯಹೊಂದಬೇಕಾಗಿದೆ ಎಂಬ ಭಾವನೆಯೂ ಜತೆಯಲ್ಲಿಲ್ಲದೆ ಇರಲಿಲ್ಲ.) ಕಮಲಾದೇವಿಯವರು, ಇಂಗ್ಲಾಂಡಿನಲ್ಲಿ ಹಲವು ಸಾರ್ವಜನಿಕ ಸಭೆಗಳಲ್ಲಿ, ಹಲವು ಪರಿಷತ್ತುಗಳಲ್ಲಿ ಭಾಷಣ ಮಾಡಿ, ಹಿಂದೂದೇಶದ ಆಕಾಂಕ್ಷೆಗಳನ್ನು ಸ್ಪಷ್ಟೀಕರಿಸಿದರು.



ಜಾಪಾನಿನಲ್ಲಿ ಶ್ರೀಮತಿ ಕಮಲಾದೇವಿಯವರಿಗೆ ಔತಣಸತ್ಕಾರವಿತ್ತಾಗ ತೆಗೆದ ಚಿತ್ರ.



ಪ್ರಖ್ಯಾತ ಅಮೇರಿಕನ್ ಚಲಚ್ಚಿತ್ರ ಕಂಪೆನಿ "ವಾರ್ನರ್ ಬ್ರದರ್ಸ್"—ಇದರ ಡೈರೆಕ್ಟರ್ ಲೂಯಿಸ್ ಕಿಂಗ್‌ರವರೊಡನೆ ಸಂಭಾಷಣೆಯಲ್ಲಿ. ([illegible] ರವರು, 'ಮೂನ್ ಓವರ್ ಬರ್ಮಾ' ಚಿತ್ರದ ದಿಗ್ದರ್ಶಕರು: "ತಾವು [illegible]ಲಾದೇವಿಯವರು ಹಿಂದೊಮ್ಮೆ "ವಸಂತಸೇನಾ" ಚಿತ್ರದಲ್ಲಿ ಪಾತ್ರವಹಿಸಿದವರು.)

ಪರಸ್ಪರ ವಿರುದ್ಧ ರಾಜಕೀಯ ಪಕ್ಷಗಳು ಒಂದೇ ವೇದಿಕೆಯ ಮೇಲೆ ನಿಂತು ಭಾಷಣಗಳಾದ ಇಂತಹ ಸಂದರ್ಭಗಳು ಕೇವಲ ಅಪರೂಪವೆನ್ನಬೇಕು.

ಡೆನ್ಮಾರ್ಕಿನಲ್ಲಿ

ಡೆನ್ಮಾರ್ಕಿನಲ್ಲಿ (ಕೋಪನ್‌ಹೇಜನ್ ನಗರದಲ್ಲಿ) ಅಂತರ್ರಾಷ್ಟ್ರೀಯ ಮಹಿಳಾ ಪರಿಷದವು ನೆರೆವುದಿತ್ತು. ಈ ಕಾರಣದಿಂದ ಶ್ರೀಮತಿ ಕಮಲಾದೇವಿಯವರು ಲಂಡನಿನಲ್ಲಿ ಹೆಚ್ಚು ಕಾಲ ನಿಲ್ಲಲಾಗಲಿಲ್ಲ. ಲಂಡನಿನಿಂದ, ಪರಿಷದಕ್ಕಾಗಿ ಡೆನ್ಮಾರ್ಕಿನ ರಾಜಧಾನಿಗೆ, ಹಿಂದೂದೇಶದ ಪ್ರತಿನಿಧಿಯಾಗಿ ಬಂದರು. ಪರಿಷತ್ತಿನಲ್ಲಿ ನೆರೆದ ಹಲವು ಪ್ರತಿನಿಧಿಗಳಿಗೆ ಭಾರತದ ಮಹಿಳೆಯರ ತತ್ವ-ಶ್ರೇಷ್ಠತೆ ಮೊದಲಾದುವನ್ನು ವಿಶದಪಡಿಸಿದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾರತ ಸ್ತ್ರೀಯರು ವಹಿಸುವ ಭಾಗವೇನೆಂದು ಸ್ಪಷ್ಟಪಡಿಸಿದರು.

ಸ್ಕ್ಯಾಂಡಿನೇವಿಯಾ ರಾಷ್ಟ್ರಗಳಲ್ಲಿ

ಡೆನ್ಮಾರ್ಕಿನಿಂದ ಕಮಲಾದೇವಿಯವರು ಸ್ವೀಡನ್ ಮತ್ತು ನೊರ್ವೆ ದೇಶಗಳ ಕಡೆಗೆ ಪ್ರಯಾಣ ಬೆಳೆಸಿದರು. ಮುಂದೆ, ಉತ್ತರಕ್ಕೆ, ಲೇಪ್‌ಲೆಂಡ್ ತನಕ ತೆರಳಿರುವರು. (ಅಲ್ಲಿ 'ನಡುರಾತ್ರೆಯ ಸೂರ್ಯನ ನಾಡು' ಎಂದು ಇದಕ್ಕೆ ಹೆಸರಿದೆ. ಇಲ್ಲಿ ಬೇಸಿಗೆ ಕಾಲದಲ್ಲಿ, ಆರು ತಿಂಗಳ ತನಕ, ರಾತ್ರೆ ಕಾಲದಲ್ಲಿಯೂ ಸೂರ್ಯಪ್ರಕಾಶವಿರುತ್ತದೆ. ಅಷ್ಟು ಕಾಲವೂ ರಾತ್ರೆಯು ಕತ್ತಲೆಂಬುದು ಇರುವುದಿಲ್ಲ. ಸೃಷ್ಟಿಯಲ್ಲಿ ಅತಿ ವಿಚಿತ್ರವಾದ ರಮಣೀಯವಾದ ಪ್ರದೇಶವಿದು.) ಶ್ರೀಮತಿಯವರು ಈ ಸ್ಕ್ಯಾಂಡಿನೇವಿಯ ದೇಶಗಳನ್ನು ಕೆಲಕಾಲ ಸುತ್ತಾಡಿದರು. ಇವರ ಸಂಚಾರ ಕಾಲದಲ್ಲಿ ಅಲ್ಲಿಯ ಸರಕಾರಗಳೂ ಜನತೆಯೂ ಶ್ರೀಮತಿಯವರಿಗೆ ಎಲ್ಲ ಸೌಕರ್ಯ-ಸಲಹೆಗಳನ್ನೊದಗಿಸಿವೆ.

ಈ ದೇಶಗಳು— ವಿಶೇಷವಾಗಿ ಸ್ವೀಡನ್ ಮತ್ತು ಡೆನ್ಮಾರ್ಕ್-ಪ್ರತಿಯೊಬ್ಬ ವ್ಯಕ್ತಿಗೆ ಅಬಾಧಿತವಾದ ಸುಗಮವಾದ ಜೀವನ ನಡೆಸುವ ಆರ್ಥಿಕ ವ್ಯವಸ್ಥೆಯನ್ನು ಪೂರ್ಣಗೊಳಿಸಿವೆ. (ಆದರೆ, ಮಹಾರಾಷ್ಟ್ರಗಳ ನೆಳಲಲ್ಲಿದ್ದು, ತಮ್ಮ ಅಸ್ತಿತ್ವವನ್ನು ಅವುಗಳೊಡನೆ ಬಂಧಿಸಿಕೊಂಡಿರುವ ಈ ಚಿಕ್ಕ ಪ್ರಜಾಸತ್ತೆಗಳಿಗೆ, ಇದರಿಂದೇನು ಶಾಶ್ವತವಾದ ಫಲ!)

1939ನೇ ಅಗೋಸ್ತು 23ನೇ ತಾರೀಕು!— ಅದು ಬಂತೇ ಬಂತು! ಮತ್ತೆ, ಆ ಸ್ಮರಣೀಯ ದಿನದೊಂದಿಗೆ— ವಿಸ್ಮಯಕರವಾದ ಆ ವಾರ್ತೆ— "ಸೋವಿಯಟ್-



ಫಿಲಿಪ್ಪಾಯಿನ್ಸ್ ದ್ವೀ... ರಾಜಧಾನಿ ಮನಿಲಾದಲ್ಲಿ, ಅಲ್ಲಿಯ ಅಧ್ಯಕ್ಷರೊಡನೆ.

ಜರ್ಮನ್ ಒಪ್ಪಂದ.” ಇಲ್ಲಿಗೆ, ಆ ಪ್ರಚಂಡ ಪ್ರಶ್ನಾರ್ಥಕ ಚಿಹ್ನೆಯ ಯೋಚನೆ-ಸಂದೇಹವೆಲ್ಲ ಮುಗಿಯಿತು. ಅದಿನ್ನು, ಭಯಪಡಿಸುವ ಸ್ವಪ್ನವಲ್ಲ.

ಒಪ್ಪಂದವು ಸಾರಲಾದ ಎಂಟು ದಿನಗಳಲ್ಲಿ, ಹಿಟ್ಲರರ ದೂತರು ಪೋಲೆಂಡಿಗೆ ನುಗ್ಗಿದರು. ಸಮರಮೇಘಗಳು ಘರ್ಷಿಸಿ, ವರ್ಷಗರೆದುವು. ಯುರೋಪು, ಯುದ್ಧದಲ್ಲಿ ತೊಡಗಿತು!

ಪೋಲೆಂಡಿನ ಮೇಲೆ ಜರ್ಮನಿಯು ದಂಡೆತ್ತಿ ಹೋದ ಎರಡೇ ದಿನಗಳಲ್ಲಿ ಬ್ರಿಟ್ಟನೂ ಫ್ರಾನ್ಸೂ ಜರ್ಮನಿಯ ಮೇಲೆ ಯುದ್ಧ ಸಾರಿದುವು! ಆದರೆ, ಇತರ ಚಿಕ್ಕ ದೇಶಗಳು ತಂತಮ್ಮ ಸ್ವಾತಂತ್ರ್ಯ ಹಾಗೂ ಪ್ರತ್ಯೇಕವಾದ ರಾಷ್ಟ್ರೀಯ ಅಸ್ತಿತ್ವವನ್ನು, ಸಾಧ್ಯವಿದ್ದಷ್ಟು ಕಾಲ ಕಾಯ್ದುಕೊಳ್ಳಲು ಪೇಚಾಡಿದುವು. ಪ್ರತಿಯೊಂದು ಚಿಕ್ಕ ದೇಶವೂ ತಾನು ತಾಟಸ್ಥ್ಯಭಾವ ವಹಿಸಿರುವೆನೆಂದು ಸಾರಿತು. ಅದರೊಂದಿಗೇ, ಇತರರು ಧಾಳಿಮಾಡಿದರೆ ತಾನು ರಕ್ಷಣೆಮಾಡಿಕೊಳ್ಳುವೆನೆಂದು ಸಾರಿತು. ಎಂತಹ ವಿಪರ್ಯಾಸ! ಮಹಾಶಕ್ತಿಗಳ ಮುಂದೆ ಈ ದೇಶಗಳ ಸೀತಿ ಮಾತ್ರ ಉಳಿಯಬೇಕಾಯಿತು. ತಾಟಸ್ಥ್ಯ ಎಂಬುದು ಮಂಕು-ಮಾಯೆ ಎಂದು ಅವುಗಳಿಗೇನು ಗೊತ್ತು! ಈ ಯುದ್ಧವು ಇತರ ಯುದ್ಧಗಳಂತಿರದೆ, ಜಗತ್ತಿನ ರೂಪವನ್ನೇ ಬದಲಾಯಿಸುವುದೆಂಬುದನ್ನು ಆ ದೇಶಗಳು ಎಷ್ಟು ಅರಿತಿದ್ದುವೋ! ಈ ಯುದ್ಧದಿಂದ, ಜಗತ್ತಿನ ಯಾವ ರಾಷ್ಟ್ರಕ್ಕೂ ತಪ್ಪಿಸಿಕೊಳ್ಳಲಾಗುವುದಿಲ್ಲವೆಂಬುದನ್ನು ಹೆಚ್ಚು ಮಂದಿ ಅರಿತಿದ್ದರೋ ಎಂಬುದು ಸಂದೇಹಕರ! ಪ್ರತಿಯೊಬ್ಬನೂ ಈ ಯುದ್ಧಕ್ಕೆ ಸಂಬಂಧಿಸಿಯೇ ಇದ್ದಾನೆ. ಏಕೆಂದರೆ, ಈ ಯುದ್ಧದ ಪರಿಣಾಮದ ಮೇಲೇ ಮಾನವಕೋಟಿಯ ಭವಿಷ್ಯವು ಆಧರಿಸಿದೆ.

ಅದಿರಲಿ. ಶ್ರೀಮತಿಯವರು, ಯುದ್ಧವಾರಂಭವಾದಾಗಲೇ ಡೆನ್ಮಾರ್ಕಿನಿಂದ ಇಂಗ್ಲಾಂಡಿಗೆ ತೆರಳಿದರು. ಆ ಕಾಲದಲ್ಲಿ, ಅಲ್ಲಿ ಪ್ರಾಮುಖ್ಯವಾಗಿ ಚರ್ಚಿಸಲ್ಪಡುತ್ತಿದ್ದ ಮಹತ್ವದ ಪ್ರಶ್ನೆಯೆಂದರೆ— ಸಾಮ್ರಾಜ್ಯದ ಸಂಪತ್ತಿನ ಆಸರೆಗಳನ್ನು ಗೊತ್ತುಪಡಿಸಿ, ಅವಶ್ಯವಿದ್ದುದನ್ನು ಸಂಗ್ರಹಿಸುವುದು. ಈ ಪ್ರಶ್ನೆಯಲ್ಲಿ ಹಿಂದೂದೇಶವೂ ಮುಖ್ಯವಾಗಿ, ಆಗಾಗ್ಗೆ ಚರ್ಚಿಸಲ್ಪಡುತ್ತಿತ್ತು. ಹಿಂದೂದೇಶವನ್ನೊಲಿಸಿಕೊಳ್ಳಲು ಏನಾದರೂ ಮಾಡಬೇಕೆಂದು ಪ್ರತಿಯೊಬ್ಬನಿಗೂ ಎನಿಸಿತ್ತು. ಆದರೆ ಆ ‘ಏನಾದರೂ’ ಎಂಬುದೇನು, ಹೇಗೆ ಮಾಡಲಿ ಎಂಬುದನ್ನು ಮಾತ್ರ ಯಾರೂ ಅರಿಯರು. ಕೆಲಕಾಲ, ಹಿಂದೂದೇಶದ ಪ್ರಶ್ನೆಯು ಆಳರಸರಲ್ಲಿ ಸ್ವಲ್ಪ ಅಲ್ಲೋಲ ಕಲ್ಲೋಲವನ್ನುಂಟುಮಾಡಿತು. ಲೊರ್ಡ್ ಝೆಟ್ಲೆಂಡರು, ಹಿಂದೂದೇಶದ ಅಭಿಪ್ರಾಯವನ್ನು ಸ್ಪಷ್ಟ ತಿಳಿದುಕೊಳ್ಳಲು ಆತುರಗೊಂಡರು. ಶ್ರೀಮತಿ ಕಮಲಾದೇವಿಯವರು, ಆ ಕಾಲದಲ್ಲೇ ಇಂಗ್ಲಾಂಡಿಗೆ ಹೋದುದು— ಝೆಟ್ಲೆಂಡ್ ಪ್ರಭುಗಳಿಗೆ ಅನುಕೂಲವೆನಿಸಿತು. ಝೆಟ್ಲೆಂಡರು ಶ್ರೀಮತಿಯವರನ್ನು ಇಂಡಿಯಾ ಆಫೀಸಿಗೆ ಆಹ್ವಾನಿಸಿ, ಹಿಂದೂದೇಶದ ಪ್ರಶ್ನೆಯನ್ನು ಅವರೊಡನೆ ಚರ್ಚಿಸಿದರು. ಶ್ರೀಮತಿಯವರು ಝೆಟ್ಲೆಂಡರೊಡನೆ, ಭಾರತದ ಧ್ಯೇಯ-ಧೋರಣೆಗಳನ್ನು, ನಿಸ್ಸಂದೇಹವೆನಿಸುವಂತೆ-ನಿರ್ದಾಕ್ಷಿಣ್ಯವಾಗಿ-ಸ್ಪಷ್ಟವಾಗಿ ತಿಳಿಸಿದರು. ಝೆಟ್ಲೆಂಡರಿಗೆ ಶ್ರೀಮತಿಯವರಿಂದ ಪಡೆದ ಅನುಭವದಿಂದ ಅತಿಯಾದ ನಿರಾಶೆಯಾಗಿದ್ದಿರಬೇಕು! ಬ್ರಿಟಿಷ್ ಸರಕಾರಕ್ಕೆ, ಭಾರತದ ಈ ಪ್ರತಿನಿಧಿಯಿಂದ ತಿಳಕೊಂಡ ಸ್ಪಷ್ಟ ವಿಚಾರಗಳಿಂದ ಕಹಿ ಭಾವನೆಯುಂಟಾಗಿದ್ದಿರಬೇಕು! ಹಿಂದೂದೇಶವು ಅರೆಮನಸ್ಸಿನ-ಅಸ್ಪಷ್ಟವಾದ-ರಿಯಾಯಿತಿಗಳಿಂದ ಏನೇನೂ ತೃಪ್ತಿಗೊಳ್ಳಲಾರದು. ಪೂರ್ಣ ಸ್ವಾತಂತ್ರ್ಯವೆಂಬ ತನ್ನ ಧೋರಣೆಯನ್ನು ಯಾವ ಕಾಲಕ್ಕೂ ತಿಲಮಾತ್ರ ಬದಲಾಯಿಸಲಾರದು—ಎಂಬೀ ಮಾತುಗಳು,—ದೇಶದ ಮೇಲಿನ ಹಿಡಿತವನ್ನು ಸಡಲಿಸಲಾರೆನೆಂದು ಕುಳಿತವರಿಗೆ ಸುಖವಾರ್ತೆಯಾಗಿಲ್ಲ. “ಯುದ್ಧದಲ್ಲಿ ತ... ಭಾಗವೇನು, ತಾನು ಸಹಾಯ ಕೊಡುವೆನೇ ಅಥವಾ ಕೊಡುವುದಾದರೂ ಹೇ... ಎಷ್ಟು—ಎಂಬಿವೇ ವಿಚಾರಗಳನ್ನು ಮಾಡಬೇಕಾದರೆ, ಮೊದಲು ಸ್ವಾತಂತ್ರ್... ಬೇಕು. ಅದಿಲ್ಲದೆ, ಈ ಪ್ರಶ್ನೆಯ ಕಡೆಗೆ ಭಾರತದ ಗಮನವಿಲ್ಲ.” ಈ... ಯಲ್ಲಿ ಶ್ರೀಮತಿಯವರು, ಭಾರತದ ಆಕಾಂಕ್ಷೆಯನ್ನು ಆಳರಸರಿಗೆ ತಿಳಿ... ಸಿದರು... ಅಕ್ಟೋಬರ ತಾ. ೨ರಂದು—ಮಹಾತ್ಮಾಜಿಯವರ ಜನ್ಮದಿನೋತ್ಸವದ ...ಂದು— ಮಹಾತ್ಮಾಜಿಯವರ ಜೀವನ ತತ್ವಗಳ ಕುರಿತು, ಲಂಡನಿನ “ಬಿ. ಬಿ. ...ಸಿ.”ಯಲ್ಲಿ (ಬ್ರಿಟಿಷ್ ಬ್ರೊಡ್‌ಕಾಸ್ಟಿಂಗ್ ಕೊರ್ಪೊರೇಶನ್) ಬ್ರೊಡ್‌ಕಾಸ್ಟ್... ಭಾಷಣ ಮಾಡಿದರು.

ಅಮೇರಿಕಕ್ಕೆ ಪ್ರಯಾಣ

ಕೆಲ ಕಾಲವಲ್ಲಿದ್ದು ಶ್ರೀಮತಿಯವರು, ಸ್ವದೇಶಕ್ಕೆ ಮರಳಲು... ಅಮೇರಿಕದ ಸುತ್ತುಬಳಿದು ಪ್ರಯಾಣ ಮಾಡುವಂತೆ ರಹದಾರಿ (Pass-por...t) ಕೇಳಿದರು. ಈ ಬಗೆಯ ಪಾಸ್‌ಪೋರ್ಟು ದೊರೆಯಲು ಅವರಿಗೆ ಸ್ವಲ್ಪ ವಿಳಂ...ಬವಾಯಿತೆಂದು ತಿಳಿಯುತ್ತೇವೆ. ಬ್ರಿಟಿಷರು ಅಮೇರಿಕವನ್ನೊಲಿಸುವ ಯತ್ನದ...ಲ್ಲಿರುವಾಗ, ಪರತಂತ್ರ ಭಾರತದ ಮುಖಂಡರೊಬ್ಬರು ಆ ದೇಶದಲ್ಲಿಳಿದು ಚಿತ್ರವನ್ನು... ಕೆಡಿಸಲೆತ್ನಿಸುವುದು ಬಹುಶಃ ಬ್ರಿಟಿಷ್ ಅಧಿಕಾರಿಗಳಿಗೆ ಹಿತಕರವೆನಿಸಲಿಲ್ಲ. ...ಮೇರಿಕದಲ್ಲಿ ಒಂದು ಕಡೆಯಲ್ಲಿ, ಬ್ರಿಟಿಷ್ ಅಧಿಕಾರಿಗಳಿಗೂ ಶ್ರೀಮತಿ ಕಮಲಾದೇವಿಯವರಿಗೂ ಮಾತಿಗೆ ಮಾತು ಬಂದು, ಅಧಿಕಾರಿಗಳು ಕುಪಿತರಾದುದೂ, ಆ ಸಭೆಯಲ್ಲಿ— “ಹಿಂದೂದೇಶದ ವಿಷಯವೇನು?” ಎಂದು ಸಭಿಕರು ಬ್ರಿಟಿಷ್ ಪ್ರತಿನಿಧಿಗಳೊಡನೆ ಕೂಗಿ ಕೇಳಿದುದೂ, ಸ್ವಾರಸ್ಯದ ವಿಷಯವಾಗಿದೆ. ಇದನ್ನು, ಶ್ರೀಮತಿ ಕಮಲಾದೇವಿಯವರೇ ಸ್ವತಃ, ಹಿಂದೂದೇಶಕ್ಕೆ ಮರಳಿ ಬಂದ ನಂತರ, ಮದರಾಸಿನಲ್ಲಿ ನಡೆದ ಸಭೆಯಲ್ಲಿ ವಿವರಿಸಿರುವರು.

ಹಿಂದೂದೇಶದಿಂದ ವಿದೇಶ ಪ್ರವಾಸಕ್ಕೆ ಹೊರಡುವ ಮೊದಲು, ಇಲ್ಲಿಯೇ ಶ್ರೀಮತಿಯವರಿಗೆ, ಪಾಸ್‌ಪೋರ್ಟು ದೊರೆಯಲು ಬಹು ಪ್ರಯಾಸವಾಗಿತ್ತು. ಎರಡೆರಡು ಬಾರಿ ಅವರು ಇಂಡಿಯಾ ದೊರೆತನಕ್ಕೆ ಬರಕೊಂಡರೂ, ಸಾಧ್ಯವಾಗಲಿಲ್ಲ. ಅಷ್ಟರಲ್ಲಿ ಕೊಂಗ್ರೆಸ್ ಮಂತ್ರಿಮಂಡಲಗಳು ಅಧಿಕಾರಕ್ಕೆ ಬಂದುವು. ಇದರ ಪ್ರಭಾವದಿಂದೆಂಬಂತೆ, ಕೇಂದ್ರ ಸರಕಾರವು, ಶ್ರೀಮತಿಯವರಿಗೆ ರಹದಾರಿ ಕೊಡುವುದರಲ್ಲಿ ಬಂತು.

ಹೇಗೂ ಕಮಲಾದೇವಿಯವರಿಗೆ, ಅವರು ಬಯಸಿದಂತೆ ರಹದಾರಿ ದೊರೆಯಿತು. ಶ್ರೀಮತಿಯವರು ಇಂಗ್ಲಾಂಡಿನಿಂದ ಹೊರಟು, ಕ್ಲಪ್ತ ಸಮಯದಲ್ಲಿ ನ್ಯೂಯಾರ್ಕ್ ನಗರವನ್ನು ತಲಪಿದರು.



ಮನಿಲಾ ಅಧ್ಯಕ್ಷರು ಮತ್ತು ಫಿಲಿಪ್ಪಾಯಿನ್ಸದ ಮಹಿಳೆಯರೊಡನೆ ಶ್ರೀಮತಿ ಕಮಲಾದೇವಿಯವರು.

ಅಮೇರಿಕದಲ್ಲಿ

ಅಮೇರಿಕವು ಸ್ವತಂತ್ರ ರಾಜ್ಯ; 'ಪ್ರಜಾಪ್ರಭುತ್ವ'ದ ಮಾದರಿಯೆಂದು ಈ ಕಡೆಗೆ ಬೆರಳು ತೋರಿಸುವರು. ಆದರೆ, ಬೆಳೆದ ಬುದ್ಧಿಮತಿಗೆ ಅಮೇರಿಕದ ಇಂದಿನ ಪ್ರಜಾಪ್ರಭುತ್ವವು ಪೂರ್ಣಾಂಗವಾಗಿದೆಯೇ ಎಂಬುದು ಸಂದೇಹಕರವಾಗಿ ತೋರುತ್ತಿದೆ. ವರ್ಣಭೇದವು—ದ್ವೇಷವು ಅಲ್ಲಿ ಇನ್ನೂ ನೆಲೆನಿಂತೇ ಇದೆ. ಇದು ಹೀಗಿದ್ದರೂ, ಇಂಗ್ಲಾಂಡಿಗೂ ಅಮೇರಿಕಕ್ಕೂ ಅಜಗಜಾಂತರವಿದೆ.

ಅಮೇರಿಕದ ಜನರು ಸ್ವಾತಂತ್ರ್ಯಪ್ರಿಯರು ಮಾತ್ರವಲ್ಲ, ವಿಶೇಷವಾಗಿ ವಾಣಿಜ್ಯಪ್ರಿಯರು. ಪ್ರತಿಯೊಬ್ಬನೂ ಕಾರ್ಯಾಸಕ್ತನಾಗಿ ತೋರುತ್ತಿದ್ದಾನೆ. ಪ್ರತಿಯೊಬ್ಬನೆಂಬಂತೆ, ಅನುವಿಲ್ಲದೆ ದುಡಿಯುತ್ತಿರುತ್ತಾನೆ. ಅವರಿಗೆ ದುಡಿವಂತೆ ಸುಖಪಡೆಯಬೇಕೆಂಬ ಇಚ್ಛೆಯೂ ಇದೆ. ದುಂದು ವ್ಯಯವೂ ಬಹುತರವಾಗುತ್ತಿದೆ. ಆದರೂ ಅಮೇರಿಕನ್ ಪ್ರಜೆಯು ಇತರ ದೇಶಗಳ ವಿಷಯ ಆಸಕ್ತಿ ತೋರಬಲ್ಲನು. ಅಮೇರಿಕಕ್ಕೆ ತೆರಳುವ ಪ್ರತಿಯೋರ್ವ ವ್ಯಕ್ತಿಯ ಅನುಭವವೇನೆಂದರೆ, ಎಲ್ಲಿಯೂ ಇಲ್ಲದಷ್ಟು ಅತಿಯಾದ ಪ್ರಮಾಣದಲ್ಲಿ, ಅಲ್ಲಿ ಜನರು ಸುತ್ತುಗಟ್ಟಿ ನಿಮ್ಮನ್ನು ನಾನಾರೀತಿ ಪ್ರಶ್ನಿಸುತ್ತಾರೆ. ಅಮೇರಿಕಕ್ಕೆ ಏಕೆ ಬಂದಿರಿ—ಹೇಗೆ ಬಂದಿರಿ—ಹೇಗೆ ಕಾಣುತ್ತಿದೆ ಅಮೇರಿಕದ ಜನ—ಮುಂತಾಗಿ, ಅವಿರಾಮವಾಗಿ ಪ್ರಶ್ನಿಸುತ್ತಲೇ ಇರುತ್ತಾರೆ. ಜನರು ಎಲ್ಲ ವಿಷಯಗಳ ಮೇಲೆಂಬಂತೆ ನಿಮ್ಮೊಡನೆ ಸಂಭಾಷಿಸಬಲ್ಲರು. ವಾಚಾಳಿಗಳಿದ್ದಂತೆ ಉದಾರಿಗಳೂ ಇರುತ್ತಾರೆ. (ಈ ವಿಚಾರವಾಗಿ ಶ್ರೀಮತಿ ಕಮಲಾದೇವಿಯವರು ಸ್ವತಹ ಬರೆದ ಒಂದು ಲೇಖನವಿದೆ. ಅದನ್ನು ಈ ಸಂಚಿಕೆಯ ಮತ್ತೊಂದು ಕಡೆಯಲ್ಲಿ ಪ್ರಕಟಿಸಿರುವೆವು.)

ಶ್ರೀಮತಿಯವರಿಗೆ ನ್ಯೂಯಾರ್ಕಿನಲ್ಲಿ ಅಭೂತಪೂರ್ವ ಸ್ವಾಗತ ದೊರೆಯಿತು. ಅವರ ಕೀರ್ತಿಯು ಅವರು ಅಲ್ಲಿಗೆ ತಲಪುವ ಮೊದಲೇ ಅಲ್ಲಿ ಹರಡಿತ್ತು. ಸ್ವಾತಂತ್ರ್ಯಪ್ರಿಯ ಯೋದ್ಧಳನ್ನು ಕಾಣುವ ಲವಲವಿಕೆಯು ಪ್ರತಿಯೋರ್ವ ಅಮೇರಿಕನನಲ್ಲಿ ಸಹಜವಾಗಿ ಹುಟ್ಟಿ, ಜನರು ಶ್ರೀಮತಿಯವರ ಆಗಮನದ ಕಡೆಗೆ ಆಕರ್ಷಿತರಾಗಿದ್ದರು. ಅವರ ಬಗ್ಗೆ ಭಾಷಣಗಳ ದೀರ್ಘ ಪಟ್ಟಿಯೊಂದೇ ಎಂಬಂತೆ ತಯಾರಾಗಿತ್ತು. ನ್ಯೂಯಾರ್ಕಿಗೆ ತಲಪಿದ ಅವರಿಗೆ, ಪ್ರಥಮತಃ ಅಲ್ಲಿಯ ಪುರಮಂದಿರ (Town Hall) ದಲ್ಲಿ ಸನ್ಮಾನವಾಯಿತು.

ಪತ್ರಿಕಾ ಪ್ರತಿನಿಧಿಗಳೊಡನೆ

ಅಮೇರಿಕದ ಪತ್ರಿಕಾ ಪ್ರತಿನಿಧಿಗಳು, ತಂಟೆಯ ತುಂಟರು. ನಿಮ್ಮನ್ನು ನಾನಾ ರೀತಿಯಲ್ಲಿ ಪ್ರಶ್ನಿಸುತ್ತಾರೆ. ಉತ್ತರವನ್ನೆ ಕೊಡಲಾರೆನೆಂದರೆ, ತಮ್ಮ ಮನಸ್ಸಿಗೆ ಬಂದಂತೆ ಬರೆದು, ಮೌನವಾಗಿದ್ದ ಅತಿಥಿಯ ಮೌನ ಭೇದಿಸುವಂತೆ ಕೆರಳಿಸುತ್ತಾರೆ. (ಈ ಸಂಬಂಧವಾಗಿ ಶ್ರೀಮತಿ ಸರೋಜಿನಿ ದೇವಿಯವರು, ಕಲ್ಕತ್ತೆಯ ಒಂದು ಸಭೆಯಲ್ಲಿ ತಮ್ಮ ಅನುಭವಗಳನ್ನು ಹೇಳುತ್ತ,—ತಾನು ಪತ್ರಿಕಾ ಪ್ರತಿನಿಧಿಗಳಿಗೆ ಯಾವ ಉತ್ತರವನ್ನೂ ಕೊಡದಿದ್ದುದನ್ನು ಕಂಡು ಅವರು, ತೀರ ಸುಳ್ಳುಸುಳ್ಳಾಗಿ ಅವರ (ಶ್ರೀಮತಿ ಸರೋಜಿನಿಯವರ) ವಿಷಯವಾಗಿ ಬರೆದು ಕೆರಳಿಸಿದ್ದರೆಂದು ವಿವರಿಸಿದ್ದರು.) ಶ್ರೀಮತಿ ಕಮಲಾದೇವಿಯವರಿಗೆ ನ್ಯೂಯಾರ್ಕಿನ ಟೌನ್‌ಹೋಲಿನಲ್ಲಿ ಸನ್ಮಾನವಾದ ಕೂಡಲೇ ಪತ್ರಿಕಾ ಪ್ರತಿನಿಧಿಗಳಿಂದ ಪ್ರಶ್ನೆಗಳು ಬಂದುವು. ಒಬ್ಬ ಪ್ರತಿನಿಧಿಯು ಕೇಳಿದನು: "ತಮಗೆ ಇಲ್ಲಿ ವಿಶೇಷವಾಗಿ ಆಕರ್ಷಿಸಿದುದಾವುದು?"

ಶ್ರೀಮತಿಯವರು ಅದಕ್ಕುತ್ತರವಾಗಿ ಎಂದರಂತೆ: "ಇಲ್ಲಿಯ ಸ್ತ್ರೀಯರು ಪುರುಷರಿಗಿಂತ ವಿಶೇಷ ಲಕ್ಷಣೀಯರಾಗಿ (Women more interesting than men) ನನಗೆ ಕಾಣುವರು. ಪುರುಷರಿಗಿಂತ ಸ್ತ್ರೀಯರೇ ನನ್ನ ಲಕ್ಷ್ಯವನ್ನು ಸೆಳೆದಿರುವರು."

ಈ ಮಾತು ಅಲ್ಲಿ ವಿಸ್ಮಯವನ್ನುಂಟುಮಾಡಿತು. ಮರುದಿನ ಪತ್ರಿಕೆಗಳು, ಎದುರಿನ ಪುಟದಲ್ಲಿ ಈ ವಾರ್ತೆಯನ್ನು ಸಾರಿದುವು. ಒಂದು ಪತ್ರಿಕೆಯಂತೂ



ಶ್ರೀಮತಿ ಕಮಲಾದೇವಿಯವರು, ಚುಂಗ್‌ಕಿಂಗ್ ನಗರದ ಸಮೀಪವಿರುವ ವಿಮಾನದಾಳಿ ನಿರೋಧಕ ಆಶ್ರಯಸ್ಥಾನಕ್ಕೆ (Air raid Shelter) ಚೀನದ ಮುಖಂಡ ಮಾರ್ಶಲ್ ಚಯಾಂಗ್-ಕೆಯಿ-ಶೇಕರ ಪತ್ನಿಯೊಡನೆ ತೆರಳುತ್ತಿರುವರು.

"INDIAN WOMAN LEADER FINDS AMERICAN WOMEN MORE INTERESTING THAN MEN" ಎಂಬ ದೊಡ್ಡ ಶಿರೋನಾಮೆಯಿಂದ ಅದನ್ನು ಮುದ್ರಿಸಿತು ಎಂದು ಪ್ರಕಟವಾಗಿದೆ. ಇದರಿಂದ ಪುರುಷರಿಗೆ ಬಹಳೇ ಕಹಿಯೆನಿಸಿತು! "ಸ್ತ್ರೀಯರಿಗಿಂತ ನಾವು ಕೀಳೇ? ನಮ್ಮಲ್ಲಿ ಲಕ್ಷಣೀಯ ಗುಣಗಳಾವುವೂ ಇಲ್ಲವೇ?"—ಎಂದು ಪುರುಷರಿಗನ್ನಿಸಿರಬೇಕು.

ಕೂಡಲೇ ಅವರಿಂದ ಪ್ರಶ್ನೆಗಳು ಬಂದುವು: "ತಾವು ಇಲ್ಲಿಗೆ ಬರುತ್ತಲೇ ಮೊದಲಾಗಿ ಭೇಟಿಯಾದವರಾರು? ಅವನಲ್ಲಿ ನ್ಯೋ-ತಪ್ಪು ಇದ್ದು, ಅವನು ಪ್ರತ್ಯೇಕ ವರ್ಗದವನಾಗಿದ್ದಿರಬೇಕು!"— ಈ ರೀತಿಯಾಗಿ ಅವರು ನಿಷೇಧಿಸಲಾರಂಭಿಸಿದರು. ಶ್ರೀಮತಿಯವರಿಗೆ ಬಹುಶಃ, ಅಮೇರಿಕದ ಪ್ರಜೆಗಳು, ಚಿಕ್ಕ ವಿಷಯವನ್ನಾದರೂ ವಿಶೇಷವಾಗಿ ಮನಸ್ಸಿಗೆ ಹಚ್ಚಿಕೊಳ್ಳುವರೆಂದು ಆಗ ತಿಳಿದಿರಲಿಕ್ಕಿಲ್ಲ. "ಪುರುಷರಿಗಿಂತ ಸ್ತ್ರೀಯರೇ ಮೇಲೆ"ಂಬ ಅರ್ಥ ಹೊರಡುವ ಅವರ ಹೇಳಿಕೆಯಂತೂ ಅಮೇರಿಕದ ಇಡೀ ಪುರುಷ ವರ್ಗದ ಮೇಲೇ ದೊಡ್ಡದೊಂದು ಅಪವಾದದಂತಾಗಿತ್ತು.

ಅಮೇರಿಕಕ್ಕೆ ಹಿಂದೂದೇಶದ ಗೊಡವೆಯಿಲ್ಲ

ಅಮೇರಿಕದಲ್ಲಿ ಹಿಂದೂದೇಶದ ಪ್ರಶ್ನೆಯು ಸಾಕಷ್ಟು ಪ್ರಚಾರ ಹೊಂದಿರಲಿಲ್ಲ; ಮತ್ತು ಆ ಕಡೆಗೆ ಯಾರ ಗಮನವೂ ಇದ್ದಂತೆ ತೋರಲಿಲ್ಲ. ಹಿಂದೂದೇಶವು ಹಾವುಗಳೂ, ಮಂತ್ರವಾದಿಗಳೂ, ಜೋಯಿಸರೂ ಇರುವ ದೊಡ್ಡ ದೇಶ—ಎಂದಿಷ್ಟೇ ಅವರು ಬಲ್ಲರು. ಹಿಂದೂದೇಶದ ವಿಷಯವಾಗಿ ಯಾರೂ ಅಲ್ಲಿ ಹೆಚ್ಚಿನ ತಿಳುವಳಿಕೆ ಕೊಟ್ಟುದಿಲ್ಲ. ಬ್ರಿಟಿಷರಂತೂ ಆ ಬಗ್ಗೆ ಜಾಗರೂಕರಾಗಿದ್ದಿರಬೇಕು. (ಅಮೇರಿಕವು ಪ್ರಗತಿಪರ-ನಾಗರಿಕ ದೇಶವಾದರೂ, ಅಲ್ಲಿ ಹಿಂದೂದೇಶಕ್ಕಿಂತ ಹೆಚ್ಚಿನ ಮೂಢ ನಂಬಿಕೆಗಳು ಬಲಗೊಂಡಿವೆ.)

ಅಮೇರಿಕದಲ್ಲಿ ಶ್ರೀಮತಿಯವರ ಒಂದು ಅನುಭವವನ್ನು, ನಮ್ಮ ಪ್ರತಿನಿಧಿಗಳು ಕೇಳಿ ತಿಳಕೊಂಡುದು ಸ್ವಾರಸ್ಯವಿದೆ. ಒಮ್ಮೆ ಅವರು ನ್ಯೂಯೊರ್ಕ್ ರಸ್ತೆಯಲ್ಲಿ ನಡೆದುಹೋಗುತ್ತಿದ್ದಾಗ, ಓರ್ವ ತರುಣಿಯು ಅವರನ್ನು ತಡೆದು, ತನ್ನ ಭವಿಷ್ಯ ಹೇಳಬೇಕೆಂದು ಪೀಡಿಸಿದಳಂತೆ. ಶ್ರೀಮತಿಯವರು ಲಕ್ಷ್ಯಗೊಡದೆ ಮುಂದುವರಿಯಲು, ಆ ತರುಣಿಯು ಅಲ್ಲಿಂದ ಕಾಣೆಯಾದಳು. ಮುಂದೆ ಕೆಲವೇ ಕ್ಷಣಗಳಲ್ಲಿ ಒಂದು ಚೊಕಲೇಟ್ ಪೆಟ್ಟಿಗೆ ಸಹಿತ ಬಂದು, ಶ್ರೀಮತಿಯವರೊಡನೆ "ಇಕೊಳ್ಳಿ ಚೊಕಲೇಟು! ಈಗಲಾದರೂ ದಯಮಾಡಿ ನನ್ನ ಭವಿಷ್ಯ ಹೇಳಿ!" ಎಂದು ವಿನಂತಿಸಿದಳಂತೆ! ಎಂತಹ ಜನರು!

ಶ್ರೀಮತಿ ಕಮಲಾದೇವಿಯವರು ಅಮೇರಿಕದಲ್ಲಿ ಸುಮಾರು ಒಂದುವರೆ ವರ್ಷಗಳಷ್ಟು ಕಾಲ ಇದ್ದರು. ಈ ಕಾಲವೆಲ್ಲ, ಅನೇಕ ನಗರಗಳಲ್ಲಿ, ಹಲವು ಸಭೆಗಳಲ್ಲಿ ಭಾಷಣ ಕೊಟ್ಟಿರುವರು. ಅನೇಕ ವಿದ್ಯಾಸಂಸ್ಥೆಗಳನ್ನು ಸಂದರ್ಶಿಸಿರುವರು. ಅಮೇರಿಕದ ಮುತ್ಸದ್ದಿಗಳನ್ನು ಕಂಡು ಸಂಭಾಷಿಸಿರುವರು. ಹೊವಾರ್ಡ್, ಸಿರೆಕ್ಯೂ, ಇಲ್ಲಿನೊಯ್, ಡೆನ್ವರ್ ಮೊದಲಾದ ಪ್ರಸಿದ್ಧ ವಿಶ್ವವಿದ್ಯಾಲಯಗಳು ಶ್ರೀಮತಿಯವರನ್ನು ಆಹ್ವಾನಿಸಿ, ವಿದ್ಯಾರ್ಥಿಗಳಿಗೆ ಅವರ ಭಾಷಣಗಳನ್ನು ಕೇಳುವ ಸುಯೋಗ ಒದಗಿಸಿಕೊಟ್ಟವು. **ಶ್ರೀಮತಿಯವರು ಕಾನ್ಸಾಸ್ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭದಲ್ಲಿ, ಪದವೀದಾನ ಭಾಷಣ ಮಾಡಿರುವರು. ಅಮೇರಿಕದ ಅಧ್ಯಕ್ಷ ರೂಸ್‌ವೆಲ್ಟ್‌ರವರ ಪತ್ನಿಯವರನ್ನು ಕಂಡು ಸಂಭಾಷಿಸಿರುವರಲ್ಲದೆ, ಅವರೊಂದಿಗೆ ಒಂದೇ ವೇದಿಕೆಯಲ್ಲಿ ನಿಂತು ಭಾಷಣ ಮಾಡಿರುವರು. ಕೆನಡಕ್ಕೆ ಎರಡು ಬಾರಿ ತೆರಳಿದ್ದು, ಅಲ್ಲಿಂದ ಪ್ರಧಾನ ಸಚಿವ ಮೆಕೆಂಝಿ ಕಿಂಗ್‌ರವರನ್ನೂ ಇತರ ಪ್ರಮುಖರನ್ನೂ ಕಂಡು ಮಾತಾಡಿರುವರು.**



ಚೀನಾದೇಶದ ಮಹಿಳಾ ಮುಖಂಡರೊಡನೆ ಶ್ರೀಮತಿ ಕಮಲಾದೇವಿಯವರು.



ಶ್ರೀಮತಿ ಕಮಲಾದೇವಿಯವರಿಗೆ ಕ್ವಾಮೆಂಟಾಂಗ್ ಪಕ್ಷದ ಕಾರ್ಯದರ್ಶಿ ಜನರಲ್ ವು-ಟಿ-ಚಿನ್ ಇವರು ಚಹಾ ಸತ್ಕಾರ ಮಾಡುತ್ತಿರುವರು. (ಕ್ವಾಮೆಂಟಾಂಗ್ ಪಕ್ಷವು ಚುಂಗ್‌ಕಿಂಗದಲ್ಲಿ ಅಧಿಕಾರದಲ್ಲಿರುವ ಪಕ್ಷ.)

ಅಮೇರಿಕದಲ್ಲಿ ಶ್ರೀಮತಿಯವರನ್ನು, ಅಲ್ಲಿರುವ ತುರ್ಕಿ, ಚೀನಾ, ಬ್ರಿಟೈನ್ ಮೊದಲಾದ ದೇಶಗಳ ರಾಯಭಾರಿಗಳು ಆಹ್ವಾನಿಸಿ, ಟೀಪಾರ್ಟಿ ಸತ್ಕಾರ ವಿತ್ತಿರುವರು.

ಕೆನಡದ ಪಾರ್ಲಿಮೆಂಟಿಗೆ ಶ್ರೀಮತಿಯವರು ತೆರಳಿದ ಸಂದರ್ಭದಲ್ಲಿ ಅವರ ಸಿನೆಮಾಚಿತ್ರ (News Reels) ಎತ್ತಲಾಗಿದೆ. ಕೆನಡದಲ್ಲಿ, ಹಲವು ಕಡೆಗಳಲ್ಲಿ ಶ್ರೀಮತಿಯವರು ಭಾಷಣವಿತ್ತು ಹಿಂದೂದೇಶದ ಅಂತರ್ಯವನ್ನು ಹೊರಗೆಡಹಿರುವರು. ಶ್ರೀಮತಿಯವರ ಅನುಭವದಂತೆ, ಅಮೇರಿಕದ ಜನರಂತೆ ಕೆನಡದವರು ಹಿಂದೂದೇಶದ ವಿಷಯ ಹೆಚ್ಚಿನ ಆಸಕ್ತಿ ತೋರುವುದಿಲ್ಲ. ಬದಲಾಗಿ, ಅಲಕ್ಷ್ಯ ಭಾವವನ್ನೇ ವ್ಯಕ್ತಗೊಳಿಸುವರು.

ಅಮೇರಿಕದಲ್ಲಿ ಶ್ರೀಮತಿಯವರು ಭಾರತದ ಕುರಿತಾಗಿ ನೈಜ ಚರಿತ್ರವನ್ನು ಪ್ರಚುರಿಸಿ, ತಾವೂ ಹೆಚ್ಚಿನ ಅನುಭವಗಳನ್ನು ಪಡೆದು, ಜಪಾನಿನ ಕಡೆಗೆ ತೆರಳಿದರು. ಜಪಾನ್-ಚೀನಗಳಲ್ಲಿ ಶ್ರೀಮತಿಯವರು ಕೆಲಕಾಲ ಸಂಚರಿಸಿ, ಅಲ್ಲಿಯ ರಾಜಕೀಯ ಮುಖಂಡರನ್ನು ಕಂಡು ವಿಚಾರ ವಿನಿಮಯ ಮಾಡಿ, 1941ನೇ ಸಪ್ಟಂಬರ ತಿಂಗಳಲ್ಲಿ ಹಿಂದೂದೇಶಕ್ಕೆ ಮರಳಿ ಬಂದರು. ಚೀನದಲ್ಲಿ ಶ್ರೀಮತಿ ಕಮಲಾದೇವಿಯವರು, ಮಾರ್ಶಲ್ ಚಯಾಂಗ್-ಕೆಯಿ-ಶೇಕರ ಪತ್ನಿಯ ಅತಿಥಿಯಾಗಿದ್ದರು. ಅವರೊಡನೆ ಚೀನದಲ್ಲಿನ ಯುದ್ಧ ವ್ಯವಸ್ಥೆಗಳನ್ನು, ಸಂಚರಿಸಿ, ಸ್ವತಃ ನೋಡಿರುವರು. (ಈ ವಿಷಯವಾಗಿ, ಶ್ರೀಮತಿಯವರಿಂದ ಬರೆಯಲ್ಪಟ್ಟ ಪ್ರತ್ಯೇಕ ಲೇಖನಗಳನ್ನು ನವಭಾರತದಲ್ಲಿ ಪ್ರಕಟಿಸಲಿರುವೆವು. ಈ ಸಂಚಿಕೆಯಲ್ಲಿ ಜಪಾನ್-ಚೀನಾಗಳಲ್ಲಿನ ಶ್ರೀಮತಿಯವರ ಪ್ರವಾಸದ ಕೆಲವು ಚಿತ್ರಗಳನ್ನೂ ಕೊಟ್ಟಿರುವೆವು.)

ಶ್ರೀಮತಿಯವರ ಪುತ್ರ ರಾಮಕೃಷ್ಣರವರು ತನ್ನ ಮಾತೃವಿನೊಂದಿಗೆ ತೆರಳಿದ್ದು, ಅಮೇರಿಕದಲ್ಲಿ, ರೆಡಿಯೋ ವಿಜ್ಞಾನದಲ್ಲಿ ಪ್ರೌಢಶಿಕ್ಷಣ ಹೊಂದುತ್ತಿರುವರು. ರಾಮಕೃಷ್ಣರವರು ಉಚ್ಛ ತರಗತಿಯ ಸಂಗೀತಗಾರರಿದ್ದು, ಅಮೇರಿಕದಲ್ಲಿ, ರೆಡಿಯೋ ಮೂಲಕ ಹಿಂದೀ ಸಂಗೀತವನ್ನು ಪ್ರಚುರಿಸುತ್ತಿರುವರು. ಇವರು ಆರು ತಿಂಗಳು ಕಲಿವ ರೆಡಿಯೋ ವಿಜ್ಞಾನವನ್ನು ನಾಲ್ಕೇ ತಿಂಗಳಲ್ಲಿ ಕಲಿತು, ಅಲ್ಲಿಯ ಶಿಕ್ಷಕರ ಮೆಚ್ಚುಗೆಗೆ ಪಾತ್ರರಾಗಿರುವರು. ಕೇವಲ ಹದಿನಾರು ವರ್ಷದ ಬಾಲಕನಾದರೂ, ಶ್ರೀ। ರಾಮಕೃಷ್ಣನವರು ಅಸಾಮಾನ್ಯ ಬುದ್ಧಿಮತಿಯಾಗಿರುವರು. ಬುದ್ಧಿಮತಿಯಾದ ತಾಯಿಯ ಶಿಕ್ಷಣದಿಂದ ಕುವರನು ಬುದ್ಧಿಮತಿಯಾಗದೆ ಇರಲಾಪನೇ?

ಶ್ರೀಮತಿಯವರು ತಮ್ಮ ಪ್ರವಾಸದಿಂದ ಹಿಂದೂದೇಶಕ್ಕೆ ಅಪಾರವಾದ ಉಪಕಾರ ಮಾಡಿರುವರು. ಅಮೇರಿಕದಲ್ಲಿ, ಯಾವ ಹಿಂದೀಯನೂ ತೆರಳಿರದಂತಹ ನಗರಗಳಿಗೆ ಕೂಡ ತೆರಳಿ ಹಿಂದೂದೇಶದ ವಿಷಯವಾಗಿ, ಅವಿಶ್ರಾಂತವಾಗಿ, ಪ್ರಚಾರಕಾರ್ಯ ನಡೆಸಿರುವರು. ಹಿಂದೂದೇಶದ ಪ್ರಶ್ನೆಯ ಕಡೆಗೆ ಅಮೇರಿಕಾನರ ಲಕ್ಷ್ಯವು ಚೆನ್ನಾಗಿ ಸೆಳೆಯಲ್ಪಡುವಂತೆ ಸಾಧಿಸಿರುವರು.

ರೆಡ್ ಇಂಡಿಯಾನರು (ಅಮೇರಿಕದ ಮೂಲನಿವಾಸಿಗಳು) ವಾಸಿಸಿರುವ ಪ್ರಾಂತ್ಯಗಳಿಗೆ ಈ ತನಕ ಯಾವ ಹಿಂದೀಯನೂ ತೆರಳಿಲ್ಲ. ಶ್ರೀಮತಿಯವರು ಅಲ್ಲಿಗೂ ತೆರಳಿ, ರೆಡ್ ಇಂಡಿಯಾನ್ ಮುಖಂಡರನ್ನು ಕಂಡು ಮಾತಾಡಿರುವರು. ಅಲ್ಲಿ ರೆಡ್ ಇಂಡಿಯಾನರು ಶ್ರೀಮತಿಯವರಿಗೆ ಕೊಟ್ಟ ಕೈನೂಲನ್ನು ಶ್ರೀಮತಿಯವರು ಹಿಂದೂದೇಶಕ್ಕೆ ತಂದು ಮಹಾತ್ಮಾಜಿಯವರಿಗೆ ಅರ್ಪಿಸಿರುತ್ತಾರೆ.


ಬಹುಶಃ, ಇಷ್ಟು ಪ್ರವಾಸ ಮಾಡಿ, ಈ ರೀತಿಯ ಪ್ರಚಾರಕಾರ್ಯ ನಡೆಸಿದ ಮತ್ತೋರ್ವ ಭಾರತ ಮಹಿಳೆಯು ಬೇರಾರೂ ಇಲ್ಲ. ಹಿಂದೂದೇಶವು ಶ್ರೀಮತಿ ಕಮಲಾದೇವಿಯವರಿಗಾಗಿ ಗೌರವ ತಾಳುವುದು! ಇಂತಹ ಮಹಿಳಾಮಣಿಗಳು ಇನ್ನೂ ತನ್ನಲ್ಲಿ ಜನಿಸಲೆಂದು ಭಾರತಮಾತೆಯು ಪ್ರಾರ್ಥಿಸುವಳು!

ಇಂತಹ ಸರ್ವಮಾನ್ಯ - ಕುಶಾಗ್ರಮತಿ - ಅಸಾಮಾನ್ಯ ಬುದ್ಧಿಮತಿ-ಮಹಿಳೆಯು ಕನ್ನಡನಾಡಿನವಳೆಂದು ತಿಳಿಯಲು ಯಾವ ಕನ್ನಡಿಗನು ಹೆಮ್ಮೆಪಡದಿರನು! ದಕ್ಷಿಣ ಕನ್ನಡ ಜಿಲ್ಲೆಯವಳೆಂದು ತಿಳಿದು ಯಾವನ ಹೃದಯವು ಸ್ವಾಭಿಮಾನ-ಗೌರವಗಳಿಂದ ತುಂಬಿ ತುಳುಕಾಡದು! ಶ್ರೀಮತಿಯವರಿಗೆ ಪರಮಾತ್ಮನು ಆಯುರಾರೋಗ್ಯಗಳನ್ನು ದಯಪಾಲಿಸಿ, ಅವರಿಂದ ನಾಡಿಗೆ ಇನ್ನೂ ಹೆಚ್ಚಿನ ಸೇವೆಯು ದೊರೆವಂತೆ ಕರುಣಿಸಲಿ!

"ನಾಡಿನ ರಾಯಭಾರಿಯಾಗಿ ಭೂಪ್ರದಕ್ಷಿಣೆ ಮಾಡಿ ಮರಳಿರುವ ನಾರೀಮಣಿಗೆ ಸುಸ್ವಾಗತ"ವೆಂದು ಪುನಃ ಶುಭಾಗಮನವನ್ನು ಕೋರುವೆವು!

ಋತುಯಾತ್ರೆ

(ಶ್ರೀ ಕೋ. ಶಿ. ಕಾರಂತ)



ಜನರು: ಬಾರೊ. ಬಾರೊ. ಒಲವನು ತೋರೋ ಮುಗಿಲನು ತಾರೋ

ಹಸಿಯನು ತಾರೋ ಬಾರೊ

ಹಸುರಾಯಿತು ಕಾಣದ ಬಸರು ಮಿಮಿಡುಕಿತು ಬಿಸಿಬಿಸಿ

ಬಾಯಾರಿತು ನದಿಯದು ತಿಳವೂ ಮೈಬಿರಿಯಿತು ನಾಡಿನ ಉಸಿರು

ಸವಿ ಬದಗಿತು ಹಕ್ಕಿಯ ಕೊರಳಿಂ ದನಿ ಉಡಾಂಗಿತು ಬಿರುವಿನ

ಒಡಲಿ

ಬಾರಾ ಬಾರಾ

ಗ್ರೀಷ್ಮ: [illegible]

ಜನರು: [illegible]

ಮುಗಿಲನು ತಾರೋ ಕಾರ ಮುಗಿಲನು ತಾರೊ

ನೀಲಿಯ ಬಾನಲಿ ನಗುತಿಹ ಸೂರ್ಯ

ನಿನ್ನಯ ನಗುವಿನ ಭೂಮಿಯೊಳ್ ಬರಿಯು

ಜಿಂಕಿಯ ನಾಲಗೆ ನೋಟಕೆ ಅಂದ

ಆದರದಿಂದಿಗು ನೀಡಿಸುತೆ ಬಾರಾ

ಕುಡಿಮಿರಾಸನು ನೀ ನಗುತಲಿ ಬಾರಾ!

ಗ್ರೀಷ್ಮ: ಮರುಳೇ ಮರುಳೇ ಮರುಳೆ

ನಮ್ಮಯ ನಗುವಿನ ನಿನ್ನಯ ಕೆರಳೇ

ಚೆಲುವಿನ ಬಿಂದನ ಬೇಡದ ನಿನಗೀ

ಸಲಿಸುವೆ ತಣ್ಣನ ಕರಿನೀರಿಯ ಜವವೇ

ಕುಡಿಮಿರಾಸಿನ ಭರಿಡಿಲಿನ ನಗುವಿಗೆ

ನಿನ್ನಡಿ — ಈ ನುಡಿ ನಡುಗದೆ ಇಹುದೆ?

ಜನರು:—ಗುಡುಗೇ ಗುಡುಗೇ ಗುಡುಗೇ

ಬರೆ ಸಿಡಿಲೇ ಸಿಡಿಲೇ ಸಿಡಿಲೇ

ಮಗ್ಗುಡಿಗಳ ಕೂಡಿಸ—ಕುಡಿಮಿಂಚಲ್ಲಿದು

ಬಾನ್ ಗುಡಿಯನೆ ಥಗಿಸುವ ಪಕ್ಕುರಿ ಇದು ಇದು

ಅತಿ ಜೇಡಿಕೆಯಾಯ್ತೇ ನಮ್ಮದು ಅತಿ ಜೇಡಿಕೆಯಾಯ್ತೆ?

ಸುಟ್ಟಿತು ಗಿಡಮರ—ನಡುಗಿತು ಗಿರಿಗಹ್ವರ

ಹೆಮ್ಮೆಯ ಈ ಶಿರ ನಡುಗಿತು ಥರ ಥರ

ಅತಿ ಜೇಡಿಕೆಯಾಯ್ತೇ ನಮ್ಮದು ಅತಿ ಜೇಡಿಕೆಯಾಯ್ತೆ

ಜನರು:—ಹೊಳವಾಗುತಲಿದೆ ಗೆಳೆಯಾ ಹೊಳೆ ಹರಿಯುತಲಿದೆ ಗೆಳೆಯಾ

ಮಳೆ ಮುದ್ದಿಸುತಿದೆ ಇಳೆಯಾ

ಹಸಿರೇಳುತಲಿದೆ—ಇದೊ ನೆಲವೆಲ್ಲಾ

ನದಿ ಉಕ್ಕುತಲಿದೆ ಇದೊ ಸೊಗವೆಲ್ಲಾ

ನಿಜಗೈಮೆಗೆ ಇದೆ ಸಮಯಾ

ಬಾ ಉಳುವ—ಬಾನುಡುವ

ಮೇಲಿಂದುದುರಲು ಮುತ್ತು, ರಾಜಸಿರಿಗೆಯನು ಕಿತ್ತು

ಮೈದುನಲಾಸ್ಯತೆ ಎತ್ತು- ಮೋದದಿ ಈಚಿಗೆ ಬಿತ್ತು!

ವರ್ಷ: - ತುರು ತುರು ತುಂತುರು ಹನಿವಾ

ಹಸುರಿನ ರಾಜ್ಯದಿ ನಲಿವಾ

ಹೊಡೆ ತುಂಬಲಿ ಗಿಡಗಳ ಜೀವಗಳಲ್ಲಿ

ರಸ ಉಕ್ಕಲಿ ಬಾಳ್ವೆಯ ನವಿಗನಸಲ್ಲಿ ॥ ತುರು ತುರು॥

ಜನರು:—ನೋಡಿರಿ ಅಕ್ಕಾ, ನೋಡೆಲೊ ಅಣ್ಣ

ರೈತನ ಗೈಮೆಯ ಸತ್ಯವು ಪೂರ!

ಕಾಣುತ ಕಾಣುತೆ ರೈತನ ಜೀವರು

ನೆಸಿದಾಯಿತು ಹೊನ್ನಿನ ಬಸಿರು

ಸೋನೆಯ ಮಳೆಯನು ಬಿದಿಂದ ಸತ್ಯ

ನಮ್ಮಯ ದುಡಿಮೆಯ ಗೈಮೆಯ ಕೃತ್ಯ!

ಬಾರಾ ಬಾರಾ ಬಾರಾ.......

ಕುಡುಗೋಲನು ತಾರಾ.......

ಶರದ್: ಕೊಟ್ಟವರನು ತಾನ್ ಮರೆಯುವೆಯಲ್ಲಾ

ಕಟ್ಟುವನೇ ತಾನ್ ಎಂಬುವೆಯಲ್ಲಾ

ಕೊಟ್ಟುದು ಕಾಕೆ ಸಿಗದಿರುವಂತೆ

ಕಟ್ಟುತೆ ಈ ಗಜರು ಬಂತೆ

ಗುಡು ಗುಡು ಗುಡಿ ....

ಜನರು: ನೀ ಬಾದಿರು! ನೀ ಬಡಿಯದಿರು! ನೀ ತಡೆಯದಿರು.

ನಿಡಿದ ತುತ್ತನು ಕಸಿಯದಿರು!

ಹುಟ್ಟಿಸ ಮಾತಿಗೆ ಕೆರಳದಿರು

ನಟ್ಟನ ಪೂಜೆಯ—ಸಲಿಸುವೆವು ॥

ಸಿಡುಮಿಂಚಡಗಿತು, ಕಾರ್ಮುಗಿಲೋಡಿತು

ಹೂಜಿಸಿಳೆರಚಿತು । ಬಾರಾ ಬಾರಾ ತೆನೆಕೊಯ್ಯುವ ಬಾರಾ ।

ಬಾನಿಗೊಯ್ಯು ಬಾರಾ ॥ ಸಿಗುಟ್ಟುವ ಬಾರಾ

ಬಾನ್ ದೇವನ ಕೊಂಡಾಡುವ ಬಾರಾ ॥

ಜನರು:—ಬಿತ್ತಿದ ಕಾಳೂ ಸೀರಾಗದಂತೆ

ಬಿತ್ತಿದ ಕಾಲೆಂ ಸೀರ್ನಕ್ಕಂತೆ

ಹೊತ್ತಿಸಿ ಹಣತೆಯ—ಸಾವಿರವಾಗಿಸಿ

ಬಾನಿನ ತಾರೆಗಳ್ ಇವರಂತಾಗಿ

ಮಳೆಯನು ನೀಡಿದ ಇಂದ್ರನು ಬರಲಿ

ದಿಕ್ಕುಗಳೆಲ್ಲಕೆ—ಸಲ್ಲಲಿ ಈ ಬಲಿ

ಈ ದೀಪದ ಮಿಣಿ ಮಿಣಿ —ಕಾಣುತ ಅಮರರು

ನಾಟ್ಯದ ಓಂ ತಿಣಿ ಗೈಯುತ ಬರಲಿ

ಹೇಮಂತ:—ಓ ಓ....... ....ಬನ್ನೀ

ಈ ಜನತೆಯು ಮರುಳೇನೆನ್ನೀ!

ಬಾಂಗರಗಳನ್ನಿವರೂ ನಾಚಿಸ ಹೊರಟಿಹರು

ತಮ್ಮಾಟಕ್ಕೆ ತಾವಿವರು ಬಲು ಬಲು ಮೈಮರೆತಿಹರು

ಓ ಓ...............ಬನ್ನೀ

ಚಳಿಗಾಳಿಯು ಬೀಸುವ ಬನ್ನಿ, ಚಳಿಮೋಡವ ಹಾಸುವ ಬನ್ನಿ

ತೆಳುಸರಿಯನು ಹೊದಿಸುವ ತನ್ನೀ—ಭ್ರಮೆಯಾಟಕೆ ಆಗಲಿ ಸೊನ್ನಿ ।

ಜನರು: —ಬಾ ಗೆಳತೀ — ಬಾ ಗೆಳೆಯಾ ಹಿಮ ಉದುರುತಿದೆ

ಬಾ ಗೆಳತೀ — ಬಾ ಗೆಳೆಯಾ ಎಲೆ ತುಟುಕುತಿದೆ

ದೀಪದ ನಾಟ್ಯಕೆ ಮಂಜೀ ಮುಸುಕುತಿದೆ

ಮೈಮನವೆಲ್ಲವು ಕುಟು ಕುಟು ಅನುತಿದೆ

ಹೇಮಂತರಾಯಗೆ ಬಂದಿದೆ ಕೋಪ ಚಳಿಯನು ಸುರಿಸುತೆ

ಕೊಡುತಿಹ ಶಾಪ

ಜನರು:—ಬಾ ಗೆಳತೀ —ಬಾ ಗೆಳೆಯಾ

ಸಂತೋಷ ಪಂಪಡಗುವ ಮೊದಲೇ

ತರುಗಳ ಎಲೆಗಳ ಕಳಚುವ ಮೊದಲೇ

ದುಡಿಮೆಯ ಸಲಿಸುವ ದುಡಿಮೆಯ ಬಾ........

ಮೊಗಿಯ ಚಳಿಗಾಳಿ ಬಡಿಯುವ ಮುನ್ನಮೆ

ಮುಗಿಸಲು ಬೇಹುದು ಎಲ್ಲಾ ದುಡಿಮೆ

ಬಾ ಗೆಳತೀ—ಬಾ ಗೆಳೆಯಾ

ಹರಿಯುವ ತೊರೆಗಳ ಓಟವ ತಡೆದು

ತುಂಬಿದ ನೀರನು ಬೇಗನೆ ಮೊಗೆದು

ಕರಿನೆಲವನು ತಾ ಪ್ರೀತೀಲಿ ಬಗೆದು

ಬಾ ನಡುವ—ಬಾ ಪಡುವಾ

ಹೇಮಂತ.

ಶಿಶಿರ:—ಮಾಗೀರಾಯ, ತಾಗಿಬಾರೋ

ಬೀಸುವ ಗಾಳಿಯ ಬೇಗನೆ ತಾರೋ ॥ ಬಾ....ಬಾ....ಬಾ

ಹೊದಿಸುತ ತೆರೆಯುವ ಹಿಮಗಳ ತೆರೆಯ ।

ಬೆಳೆಸುತೆ ಹರಸುವ ಬಿತ್ತಿದ ಬೆಳೆಯ । ಬಾ....ಬಾ....ಬಾ

ಜನರು:—ಹಿಗ್ಗಿ ಹಿಗ್ಗಿ ಜಗವೆಲ್ಲಾ ಬಗ್ಗೀ ಕೊಯ್ವರು ಪೈರೆಲ್ಲಾ

ಸುಗ್ಗಿ ಹುಗ್ಗಿಯನು ಬಂತೆಲ್ಲಾ । ಹಿಗ್ಗಿನ ಕಜ್ಜೀ—ಬಿಂತಲ್ಲಾ ।

ತಿತ್ತಿರಿ ತುಂಬಿದೆ ಬಿತ್ತಿದ ಕಣಜ

ತುತ್ತಿನ ಚಿಂತೆಯು ಮುಗಿದಿದೆ ಮನುಜ.

ಮುತ್ತಿನ ನಗುವನು ಮಿಗುವಂತೆ ಸಹಜ.

ಬೆಳದಿಂಗಳು ಕೋಲಾಟ
ಹೊಳೆದಂಡೆಯಲಿ ಸವಿಯೂಟ

ಶಿಶಿರ:—ಸದಿಯೂಟದ ಸೊಕ್ಕೇರುವ ಮೊದಲೇ
ಹದಗೈಯಲು ಬೇಕಿವರಾ
ನಲಿಮೆಯ ಮೇರೆಯು ಮೀರುವ ಮೊದಲೇ
ಚಳಿಸಲು ಬೇಕಿವರಾ
ಬಾ ಶಿಶಿರಾ- ·ಬಾ ಹಗುರಾ
ಮೈಗಳು ನಡುಗಲಿ, ಎಲೆಗಳು ಉದುರಲಿ
ಜೀವಕೋಟಿಗೇ ಹೆಳತನ ಬರಲಿ । ಬಾ ಶಿಶಿರಾ ಬಾ ಹಗುರಾ

ಜನರು:—ಅಮಮ ಚಳಿಯು ತಡೆಯದಿಹುದು
ಹಿಮವು ತುಂಬಿ ಕಾಣುತಿಹುದು
ಎಳೆವರ್ ಹಳವರ್ ಒಂದೆ ಬಗೆಯು
ಉಕ್ಕು ಆಯಿತು ಸುಕ್ಕು ನೆರೆಯು
ಹಸುರು ಜಗವು ಹೊನ್ನು ಆಯ್ತು
ಹೊನ್ನು ಎನಲು ಕಳಚಿ ಬಿತ್ತು
ಆದರೇನು ಜೀವದೊಳಗೆ ಬಿಗುಪು ಒಂದು ಮೂಡಿ ಬಂತು
ಸಮ್ಮ ಗೆಲ್ದ ಕಾಮನವಗೆ ಸೋಲುಗಳಿಗೆ ಕೂಡಿ ಬಂತು
ಕಾಮನನ್ನು ಹಳಿಯುವಾ
ಹೇಮಗೈದು ಮುಗಿಸುವಾ

ವಸಂತ:—ಸಸುಗಾಳಿಯ ಬೀಸುತೆ ಬರುವಾ
ಹುಸಿಯೂಟಕೆ ಕೊನೆಯ ತರುವಾ
ತಾನ್ ಕಾಮನ ಗೆದ್ದವರಂತೆ । ತಾನ್ ಸಿಯಮದ ಕಟ್ಟವರಂತೆ
ನಾನ್ ಬೀಸಲು ಮಾಯೆಯ ಜಾಲ—
ಆಗುವುದೆಲ್ಲವು ಬರಿಬಯಲು

ಜನರು:—ಮಂದ ಮಾರುತಾ
ಚಂದ ನಗುತಾ
ಅಂದ ಸೂಸುತಾ
ಸಲವಿಂದ ಬಂದನು—ತೂಗುತಾ, ಬಾಗುತಾ, ಸಾಗುತಾ!
ಬಾಂದಳವ ಕಡು ನೀಲಿಸಿ
ರೆಂಬೆಗಳ ತೆರೆ ತೂಗಿಸಿ
ಕೆಂದಳಿರನು ನಡು ಮೂಡಿಸಿ
ಸಭ ಸರಸಿಗೆ ನೈದಿಲೆ-ಯೂಗಿನಾ ಲಾಗಿಸಿ ಬಾಗಿಸಿ
ಅಲರುಗಳನು ಚೆಲು ಅರಳಿಸುತೆ
ಅರುಣೆಗಳ ಬಲು ಮರುಳಿಸುತೆ
ಒಲುಮೆಯ ತಂಪನು ಎರಚಿಸುತೆ
ಯೌವನ ಲಾಸ್ಯವ ಸೋಗಿಸಿ ಮಾಗಿಸಿ ರೇಗಿಸಿ
ಗುಂಗುರು ಕೂದಲ ಕುಣಿತ
ಕಾಲಲಿ ಗೆಜ್ಜೆಯ ಗಸಿಜ
ಕಿವಿಯೊಳು ಹೂವಿನ ಜೊಲ್ಲೆ
ಬದುಕೇ ಮಲ್ಲಿಗೆ ಮೊಲ್ಲೆ
ಗೆಣತೆಯೇ ಕೇಳಿಗೆ ಬಾರೇ
ಓಕುಳಿಯಾಟಕೆ— ಸೀರೆ
ಬಂದ ಮಾರುತಾ

ವಸಂತ,

ಗ್ರೀಷ್ಮ:—ನಗು ನಗು ನಗು·· ವಿರಕ್ತರಿವರು, ಪ್ರೇಮದ ಮರತಿಹರು
„ „ ನಿನ್ನೆಯ ಹುಣ್ಣಿಮೆ ಕಾಮನ ಸುಟ್ಟವರು
„ „ ಸಮ್ಮಯ ಲಬೆಂಗಿ ತೇಲುತೆ ತೂಗುವರು
„ „ [illegible] ತ್ವರೆ —ಜೆವರು ಮುಳುಗುವರು
ಜಿಸಿ ಉಸಿರನು ಎರೆ—

ಜನ: ಬಾರಾ........ಬಾರಾ........ಬಲಿವಸು ತೋರಾ

ಅಹಿಂಸೆಯಿಂದ ಮಾತ್ರ ಮಾನವಕೋಟಿಯ ಉದ್ಧಾರ

ಎಲ್ಲ ನೀತಿ-ಧರ್ಮಗಳ ಸಾರ---ಅಹಿಂಸೆ.

(ಶ್ರೀ ಯು. ಶ್ರೀನಿವಾಸ ಮಲ್ಯ)



ಅಹಿಂಸೆಯ ಮರುಳು ವೈಪರೀತ್ಯಕ್ಕೆ ತಲಪಿದ ಸನ್ಯಾಸಿಯೋರ್ವನು, ತಾನು ಕುಳಿತ ಮರದಡಿಯಲ್ಲಿ ಬಿಸಿಲಿಗೆ ನರಳುವ ಇರುವೆಯೊಂದನ್ನು ಕೈಯಿಂದ ಮುಟ್ಟಿದರೆ ಹಿಂಸೆಯಾದೀತೆಂದು ಗ್ರಹಿಸಿ, ಗಡ್ಡದಲ್ಲಿರಿಸಿ ನೆರಳಲ್ಲಿರುವ ಅದರ ಹುತ್ತಕ್ಕೆ ಆ ಗಡ್ಡವನ್ನೊಯ್ದಾಗ, ಲಕ್ಷ ಇರುವೆಗಳು ಗಡ್ಡಕ್ಕೆ ಮುತ್ತಿ ಸನ್ಯಾಸಿಯು ಕೈಯಲ್ಲಿ ಸ್ವರ್ಗ ಸೇರಿದ ಕಥೆಯೊಂದಿದೆ. ಕಥೆಯು ಎಷ್ಟು ವಿನೋದಕರವೋ ಅಷ್ಟೇ [illegible]ಪೂರಿತವೂ ಇದೆ.

"ಅಹಿಂಸೆ"ಯೆನ್ನುತ್ತಲೇ ಅದರ ಮೇಲೆ ದೀರ್ಘ ಚರ್ಚೆ ನಡೆದು, ನೂರು ಪುಟ [illegible]ಮೀಮಾಂಸೆ ಬರೆವಷ್ಟು ತರ್ಕ [illegible]ಸುವವರಿದ್ದಾರೆ. ಅಹಿಂಸೆಯೆಂಬುದನ್ನು ಇರುವೆಯನ್ನು ಕೂಡ. ತಿಳಿಯದೆ ಮೆಟ್ಟಿ, ಕೊಲ್ಲಬಾರದೆಂಬಷ್ಟಕ್ಕೆ ಒಯ್ಯುವವರಿದ್ದಾರೆ. ಎದುರಾಳಿಯು ಅನ್ಯಾಯದಿಂದ ಬಲವಾಗಿ ಥಳಿಸಿಬಿಟ್ಟರೂ ಮರುಮಾತಾಡದೆ ಸುಮ್ಮಗಿರುವುದು ಅಹಿಂಸೆಯೇ ಎಂದು ಕೇಳುವವರಿದ್ದಾರೆ. ನಾನಾ ತರ್ಕ-ವಿತರ್ಕಗಳನ್ನು ನೋಡುವಾಗ. ಅಹಿಂಸೆಯೆಂಬುದರ ನಿಜವಾದ ಅರ್ಥ ತಿಳಿಕೊಳ್ಳುವ ಬದಲಾಗಿ, ಅಹಿಂಸಾವಾದಿಯನ್ನು ಸೋಲಿಸಿ ಹಿಂಸೆಯ ಶ್ರೇಷ್ಠತ್ವ ಅಥವಾ ಅವಶ್ಯಕತೆಯನ್ನು ರುಜುಗೊಳಿಸಬೇಕೆಂಬ ಹಟವವರೇ ಹೆಚ್ಚೆಂದು ತೋರಿಬರುತ್ತದೆ.

'ಅಹಿಂಸೆ'ಯೆಂದರೆ ಶ್ರೇಷ್ಠ ತತ್ವವೆಂಬುದನ್ನು ಮಾತ್ರ ತಿಳಿದು, ಅದರ ತರ್ಕದ ಗೊಡವೆಗೆ ಹೋಗದೆ. 'ಅಹಿಂಸೆಯು ಶ್ರೇಷ್ಠ: ಅದು ನಮಗೆ ಅವಶ್ಯ' ಎಂದು ಪ್ರಕಟವಾಗಿ ಮಾತ್ರ ಒಪ್ಪಿ, ಒಳಗಿಂದೊಳಗೆ "ಹಿಂಸೆಯಿಲ್ಲದೆ ಜಗತ್ತು ಬದುಕಬಲ್ಲುದೇ? ಅಹಿಂಸೆಯ ಮರುಳು ನಮಗೇಕಪ್ಪ! ಅದನ್ನಾಚರಿಸುವುದು ಸಾಧ್ಯವೇ!' ಎಂದು ಸಂದೇಹಪಡುವವರ ವರ್ಗವೊಂದೂ ಇದೆ.

'ಅಹಿಂಸೆಯು ಕೇವಲ ಮೂರ್ಖತನ; ಹಿಂಸೆಯಿಲ್ಲದೆ ಬಾಳುವುದೇ ಕಷ್ಟ!" ಎಂದು ಪ್ರಕಟವಾಗಿ ಹೇಳಿ ನಡೆವವರೂ ಕೆಲವರಿದ್ದಾರೆ.

ಇವೆಲ್ಲ ವರ್ಗಗಳ ಕುರಿತು ಆಲೋಚಿಸಿದರೆ, ಅಹಿಂಸೆಗಿಂತ ಹಿಂಸೆಗೆ ಹೆಚ್ಚಿನ ಮತಗಳು ದೊರೆವುವು.

ಅಹಿಂಸೆಯ ಮೂಲವೆಲ್ಲಿ?

"ಅಹಿಂಸೆಯೆಂದರೇನು?" ಎಂದು ತರ್ಕಿಸುವ ಮೊದಲು ಅಹಿಂಸೆಯ ಮೂಲವೆಲ್ಲಿ ಎಂದು ವಿವೇಚಿಸೋಣ.

ಭೂಮಿಯು ಜೀವಕೋಟಿಗಳಿಗಾಗಿ ಇದೆ. ಎಲ್ಲ ಜೀವಿಗಳಿಗೆ ಸಾವು—ನೋವುಗಳುಂಟಾಗುವುವೆಂಬುದನ್ನು ಚೆನ್ನಾಗಿ ತಿಳಿದವನು ಮಾನವನು. [illegible] ಮೇಲೆ ಮಾನವನ ಶ್ರೇಷ್ಠತ್ವ ಅಸ್ತಿತ್ವಗಳು ಹೊಂದಿಕೊಂಡಿದ್ದ ಕಾಲವೊಂದಿತ್ತು. ಆ ಕಾಲದಲ್ಲಿ ಮಾನವನು [illegible] ಇಷ್ಟನ್ನು ಮಾತ್ರ ತಿಳಿದಿದ್ದನು. ಬಲಿಷ್ಠಮಾನವನು ಅಬಲನನ್ನು ಕೊಲ್ಲುತ್ತಿದ್ದನು. [illegible] ಬಲಿಷ್ಠರು [illegible]. ಅಬಲರು ತಲೆಮರೆಸಿಕೊಳ್ಳ[illegible] ಬಲಿಯಾದರು.

[illegible] ಬಲವಂತರು ಯಾರೂ ಶಾಶ್ವತವಾಗಿ ಆಳಲಿಲ್ಲ. [illegible] ಬಲಿಷ್ಠನಾದವನು [illegible]. ಅಬಲನಿಗೆ ಬಲಿಷ್ಠನಿಂದ ಸಾವು [illegible].

ಕ್ರಮೇಣ ಮಾನವನು ತುಸು ವಿಚಾರಕ್ಕೊಳಗಾದನು. ಮನುಷ್ಯನು ಮನುಷ್ಯನನ್ನು ಕೊಲ್ಲುತ್ತಿದ್ದಾನೆ. ಕಾರಣವು—ಒಬ್ಬನ ಶಕ್ತಿಗಿಂತ ಮತ್ತೊಬ್ಬನ ಶಕ್ತಿಯು ಹೆಚ್ಚು ಇರುವುದೆಂದೇ. ಮಾನವ ಕುಲವು ನಶಿಸುತ್ತ [illegible]! ಇನ್ನು ಕೆಲಕಾಲದಲ್ಲಿ ಉಳಿವವರಾರು?

ಮೊದಲನೇ ನೀತಿಶಾಸ್ತ್ರವು ಅಲ್ಲಿ ರಚಿತವಾಯಿತು. "ಒಬ್ಬನು ಅಬಲನು ಎಂಬ ಕಾರಣದಿಂದ ಬಲಿಷ್ಠನ ಅಸ್ತ್ರಕ್ಕೆ ಬಲಿಯಾಗಕೂಡದು!"

ಮಕ್ಕಳನ್ನು ಹೆತ್ತು ಕರುಳಿನ ಕರುಣೆ ಬಲ್ಲವರಿಗೆ ಈ ನೀತಿಯು [illegible]. ಅಬಲರಿಗೆ ಇದನ್ನೊಪ್ಪಲು ಒತ್ತಾಯ ಬೇಕಾಗಿರಲಿಲ್ಲ. ಬಲಿಷ್ಠರಿಗೆ ತಮ್ಮ ನಾಳೆಯ ವೃದ್ಧಾಪ್ಯದ ನೆನಹು ಬರುತ್ತಿದ್ದ ಕಾರಣ ಇದರ ಮಂಜೂರಾತಿಗೆ ಕಷ್ಟವೆನಿಸಲಿಲ್ಲ.

ವಿನಾ ಕಾರಣ ಕೊಲ್ಲಬಾರದು ಎಂಬ ನೀತಿಯೊಂದು ಸ್ಥಾಪನೆಯಾಯಿತು. ಈ ನೀತಿಯಲ್ಲಿ ಕಾಲಹೋದಂತೆ ಹೆಚ್ಚಿನ ಸುಧಾರಣೆಗಳಾದುವು. ಒಂದು ನೀತಿಯಿಂದ ಪ್ರಚಂಡವಾದ—ವಿಸ್ತಾರವಾದ ಒಂದು ಧರ್ಮಶಾಸ್ತ್ರವೇ ರಚಿತವಾಯಿತು. "ಕೊಲ್ಲಬಾರದು" ಎಂದಾಗ "ಏತಕ್ಕೆ ಕೊಲ್ಲಬಾರದು? ಕೊಲ್ಲುವುದಾದರೆ ಏತಕ್ಕೆ ಕೊಲ್ಲಬೇಕು?" ಎಂಬ ವಿಚಾರ ಸರಣಿಯುಂಟಾಗಿ ಪರಸ್ತ್ರೀ ಅಪಹರಣ ಮಾಡಿದವನಿಗೆ, ಪರವಿತ್ತವನ್ನು ಬಲಾತ್ಕಾರದಿಂದ ಉಪಯೋಗಿಸಿಕೊಂಡವನಿಗೆ, ಅಬಲನನ್ನು ಹಾಸಿಗೊಳಿಸಿ ಪೀಡಿಸುವವನಿಗೆ ಶಿಕ್ಷೆಯಾಗಬೇಕೆಂದು ನಿರ್ಣಯಗಳಾದುವು.

ನೀತಿಶಾಸ್ತ್ರವು ಬೆಳೆಯಿತು. ಹಿಂಸೆಯನ್ನು ನಿಲ್ಲಿಸಲು, ಮಾನವ ಸಮಾಜವು ಬೆಳೆಯತೊಡಗಿತು. ತಾಮಸವೃತ್ತಿಗೆ ತಡೆಯುಂಟಾದುದರಿಂದ ಮಾನವ ಸಮಾಜವು ಸಂಖ್ಯೆಯಲ್ಲಿ ವೃದ್ಧಿಗೊಂಡಿತು ಮಾತ್ರವಲ್ಲ, ಹೊಸ ವಿಚಾರಗಳೂ ವಿಕಾಸಗೊಂಡುವು. ಮಾನವನಿಗೆ ಒಂದು ವಿಧದ ಸ್ವಾತಂತ್ರ್ಯ ದೊರೆತುದರಿಂದ ಸ್ವಾತಂತ್ರ್ಯದೊಂದಿಗೆ ಹಿಂಸೆಯ ಆವೇಶವು ಕಡಿಮೆಯಾದುದರಿಂದ ಈ ಬಗೆಯ ವೃದ್ಧಿಗೆ ಅನುಕೂಲವಾಯಿತು. ಮಳೆ ನೀರಿನ, ಹೊಲ ಗದ್ದೆಗಳ ಮತ್ತು ಮಣ್ಣು ರಾಶಿಗಳ ಸದುಪಯೋಗಕ್ಕಾರಂಭವಾಯಿತು. ಈ ನೀತಿಪಾಲನೆಯಿಂದ ಸಾರ್ವತ್ರಿಕ ಕ್ಷೇಮಾಭಿವೃದ್ಧಿಗಳಾದುದನ್ನು ಕಂಡು, ನೀತಿಶಾಸ್ತ್ರವೂ ಶೋಧನೆ ವಿಚಾರಗಳಿಂದ ತಿದ್ದಿ ತಿದ್ದಿ ಸುಧಾರಣೆ ಹೊಂದುತ್ತ ಬಂತು. ಮಾನವನು ದೀರ್ಘವಾಗಿ ಆಲೋಚಿಸಿ ನೋಡಿದನು. ಸರ್ವರ ಕ್ಷೇಮಕ್ಕೆ. **ಎಲ್ಲ ನೀತಿ ಧರ್ಮಗಳಿಗೆ ಅಹಿಂಸೆಯೇ ತಳಹದಿ!**

"ಅಹಿಂಸಾ ಪರಮೋಧರ್ಮಃ"—ಎಂದಿತು ಋಷಿಗಣ.

ವೇದಕಾಲದಲ್ಲಿ

ವೇದಗಳ ರಚನೆಯ ಕಾಲವನ್ನು ನಿರ್ಣಯಿಸಿದವರಾರೂ ಇಲ್ಲ. ಅಹಿಂಸೆಗೆ ಪ್ರಾಮುಖ್ಯತೆ ಇದ್ದ ಕಾಲದಲ್ಲಿ. ಅಹಿಂಸೆಯ ಪ್ರಾಧಾನ್ಯವನ್ನು, ತಜ್ಞರು ಚೆನ್ನಾಗಿ ಅರಿತುಕೊಂಡ ಕಾಲದಲ್ಲಿ ಈ ವೇದಗಳು ಬರೆಯಲ್ಪಟ್ಟಿರಬೇಕು ಎಂದು ಮಾತ್ರ ಹೇಳಬರುತ್ತದೆ. ಮಾನವ ಕಲ್ಯಾಣವು ಹೇಗಾದೀತು—ಮಾನವನು 'ದೇವತೆ'ಯೆನಿಸಿಕೊಳ್ಳಲು ಹೇಗೆ ನಡಕೊಳ್ಳಬೇಕು ಎಂಬುದನ್ನು ವಿಚಾರಿಸಿ ಬರೆವ ಕಾಲದಲ್ಲಿ ಅಹಿಂಸೆಯು ಸಾರ್ವತ್ರಿಕವಾಗಿ ಹರಡುವಂತೆ ಪ್ರಚಾರವಾಗುತ್ತಿದ್ದು—ಹಿಂಸೆಯ ಕಡೆಗೆ ಸುಲಭವಾಗಿ ಧಾವಿಸುವ ದುಷ್ಕೃತ್ಯಗಳನ್ನು [illegible]ಗೊಳಿಸುವ ಯತ್ನಗಳಾಗುತ್ತಿದ್ದುವು ಎನ್ನಬಹುದು.

ಭಗವಾನ್ ಬುದ್ಧನು ಸಾರಿದ ಮತ

ಭಗವಾನ್ ಬುದ್ಧನು, ರಾಜಗೃಹದ ಸುಖಗಳಲ್ಲೋಲಾಡುತ್ತಿದ್ದಾಗ, ದೈಹಿಕ ಸುಖವನ್ನು ಮಾತ್ರ ಅರಿತವನಾಗಿದನು. ರಾಜಗೃಹದಿಂದ ಹೊರಗೆ ಬಂದು [illegible] ಜಗತ್ತಿನ ಮೇಲೆ ಪ್ರಥಮ ದೃಷ್ಟಿ ಬಿದ್ದಾಗ. ಸ್ವಾಭಾವಿಕವಾಗಿ ಕೋಮಲವಾಗಿದ್ದ ಅಂತಃಕರಣವನ್ನು ಹಿಂಸೆಯ ಭೀಕರ ನೋಟಗಳು ನೋಯಿಸಿದುವು. ಗೌತಮನು [illegible] ರಾಜ್ಯ ಪರಿತ್ಯಾಗ ಮಾಡಿ, ಆಂತರಿಕ ಶೋಧನೆಗೆ ತೊಡಗಿದನು. ದುಃಖಿತ ಆತ್ಮವು, ದುಃಖ ಹರಣಮಾಡಿ ಶಾಶ್ವತ ಸುಖಹೊಂದಲು ಏನು ಮಾಡಬಹುದೆಂದು ಅನ್ವೇಷಣಕ್ಕೆ ತೊಡಗಿತು. ಏಳು ವರ್ಷ ಕಾಲದ ದೀರ್ಘ ತಪಸ್ಸಿನಿಂದ ಗೌತಮನಿಗೆ "ಅಹಿಂಸೆ"ಯೇ ಸರ್ವ ಸುಖದ ಮೂಲವೆಂಬ ಉತ್ತರ ದೊರೆಯಿತು. "ಒಬ್ಬರು ಮತ್ತೊಬ್ಬರನ್ನು ನೋಯಿಸದಿರಿ. ದಯೆ-ಕಾರುಣ್ಯ-ಕ್ಷಮೆಗಳಿರಲಿ" ಎಂದು ಭಗವಾನ್ ಬುದ್ಧನು ಸಾರಿದನು.

ಯೇಸುಕ್ರಿಸ್ತನ ಬೋಧನೆ

ಯೇಸುಕ್ರಿಸ್ತನು ಮಹಾಪುರುಷನೆನಿಸಲು, ಸತ್ತವನಿಗೆ ಜೀವದಾನ ಮಾಡಬೇಕಾಗಿರಲಿಲ್ಲ. ಕುರುಡರಿಗೆ ಕಣ್ಣು ಕೊಡಬೇಕಾಗಿರಲಿಲ್ಲ. "ಮಾನವ. ದಯೆ-ಪರೋಪಕಾರ-ಪ್ರೇಮ" ಈ ಸಂದೇಶವೇ ಕ್ರಿಸ್ತನ ತತ್ವದ ತಿರುಳು. ಆ ತತ್ವಗಳೇ

ಯೇಸುಕ್ರಿಸ್ತನ ಶ್ರೇಷ್ಠತ್ವವನ್ನು ಉಳಿಸಿವೆ. "ಇತರರನ್ನು ನೋಯಿಸಬೇಡ"–ಇದುವೇ ಪ್ರಾಮುಖ್ಯವಾಗಿ ಯೇಸುಕ್ರಿಸ್ತನ ಧರ್ಮದ ತಿರುಳಾಗಿ ನಮಗೆ ತೋರುತ್ತದೆ.

ಮುಹಮ್ಮದ ಪೈಗಂಬರನು

ಮುಹಮ್ಮದೀಯ ಮತ ಸ್ಥಾಪಕನೂ, "ಸಹೋದರ ಭಾವ ಮತ್ತು ಅಹಿಂಸೆ ಈ ತತ್ವಗಳನ್ನೆ ಪ್ರಚುರಿಸಿ, ಮಹಾಪುರುಷನೆನಿಸಿದನು. ಒಬ್ಬರಿನ್ನೊಬ್ಬರೊಡನೆ, ಒಂದು ಪಂಗಡವು ಮತ್ತೊಂದರೊಡನೆ ಹೋರಾಡಿಕೊಂಡಿದ್ದುದನ್ನು ಕಾಣುತ್ತ ಮುಹಮ್ಮದ ಪೈಗಂಬರನ ಅಂತಃಕರಣವು ಕರಗಿತು. ಪೈಗಂಬರನು ತನ್ನ ಸುತ್ತುಮುತ್ತಲಿನ ಸಹೋದರರಿಗೆ ದಯಾ—ಕಾರುಣ್ಯಗಳ ಬೋಧಿಸುತ್ತನು.

ಮಹಾತ್ಮಾ ಗಾಂಧಿಯವರು

"ಮಹಾತ್ಮಾ ಗಾಂಧಿ"ಯೆನ್ನುತ್ತಲೇ "ಅಹಿಂಸೆ"ಯೆಂದು ತಾನಾಗಿ ಜಗತ್ತಿಗೆ ಹೊಳೆವಷ್ಟಕ್ಕೆ. ಗಾಂಧಿಜಿಯವರು ಅಹಿಂಸಾ ಪ್ರಚಾರಕರಾಗಿರುವರು. ರಾಜಕೀಯಗಳೂ ಅಹಿಂಸೆಯಿಂದ ಹೊರಗಾದುವಲ್ಲವೆಂದು ಸಾರುತ್ತಿರುವುದರಿಂದ. ನಮ್ಮ ಕಣ್ಣ ಮುಂದೆ ಈ ಮಹಾತ್ಮನು ತಾನು ಆಡಿದುದನ್ನು ಮಾಡಿ ತೋರಿಸುತ್ತಿರುವುದರಿಂದ ಗಾಂಧಿಜಿಯವರ ಆ ಪ್ರಶ್ನೆಯು ಇಂದು ಬಲು ಮಂದಿಯ ಚಿತ್ತವನ್ನು ಸೆಳೆದಿದೆ.

ಅಹಿಂಸೆಯೆಂದರೇನು?

"ಅಹಿಂಸೆಯೆಂದರೇನು?" – ಈ ಪ್ರಶ್ನೆ ಈಗ ಪ್ರತಿಯೊರ್ವನಲ್ಲಿ ವಿಚಾರಕ್ಕೆಡೆಗೊಟ್ಟಿದೆ. ಈ ಲೇಖನದ ಆರಂಭದಲ್ಲಿಂದಂತೆ, ಹೆಚ್ಚಿನವರು, ಈ ಪ್ರಶ್ನೆಯ ಅರ್ಥ ತಿಳಿಯದೆ, ಗೊಂದಲದಲ್ಲಿರುವರು. "ಇರುವೆಯನ್ನೂ ಕೊಲ್ಲಬಾರದೇ? ನಮ್ಮನ್ನು ಅನ್ಯಾಯದಿಂದ ಹೊಡೆದವನನ್ನು ಪುನಃ ನೋಯಿಸಬಾರದೆ? ಬುದ್ಧಿ ಹೇಳಿದರೂ ಕೇಳದೆ ನುಡುಕುವವರ ವಿಷಯದಲ್ಲಿಯೂ ಅಹಿಂಸೆಯೇ? ನಮ್ಮ ಸೊತ್ತನ್ನು ಅಪಹರಿಸುವಾಗಲೂ ಅಹಿಂಸೆಯೇ"...." ಇತ್ಯಾದಿ.

"ಅಹಿಂಸೆ"ಯೆಂದೊಡನೆ ಪ್ರಥಮತಃ ಇಷ್ಟು ಅರ್ಥ ಬರುತ್ತದೆ: "ಕಾಯಾ-ವಾಚಾ-ಮನಸಾ ಇತರರನ್ನು ದೈಹಿಕವಾಗಿಯಾಗಲಿ ಮಾನಸಿಕವಾಗಿಯಾಗಲಿ ನೋಯಿಸದೆ ಇರುವುದು."

ನಮ್ಮನ್ನು ಅನ್ಯಾಯವಾಗಿ ಥಳಿಸಿದವನಿಗೆ, ಮುಂದೆಯೂ ಅನ್ಯಾಯವಾಗದಂತೆ ಪುನಃ ಥಳಿಸುವುದು ಅಹಿಂಸೆಯಲ್ಲ, ನಿರೋಧಿಸುವುದು ಅಹಿಂಸೆಯೆನಿಸುತ್ತದೆ. ನಿರೋಧ ಶಕ್ತಿ ಇಲ್ಲದವನು ಪ್ರತಿಯಾಗಿ ಹೊಡೆವಷ್ಟು ಶಕ್ತನಲ್ಲವೆಂಬುದು ಸ್ಪಷ್ಟವಷ್ಟೆ! ಪುನ ನೋಯಿಸಬೇಕು ಎಂಬ ಸಂಕಲ್ಪವಾಗುತ್ತಲೇ—ಸೇಡಿನ ತೃಷೆಯುತ್ಪನ್ನವಾಗಿದೆಯೆಂದು ಅರ್ಥವಾಗುತ್ತದೆ. ಸೇಡಿನ ದುರಿಚ್ಛೆಯು ಅಹಿಂಸೆಯಲ್ಲ. ಅನ್ಯಾಯವನ್ನು ನಿರೋಧಿಸಬೇಕು. ಇಂತಹ ನಿರೋಧಕರು ಹೆಚ್ಚಿದಂತೆ, ಅನ್ಯಾಯವು ತಾನಾಗಿ ನಶಿಸುತ್ತ ಬರುವುದು.

ಚಿಕ್ಕ ಮಗುವು ಬುದ್ಧಿಯಿಲ್ಲದೆ ಬಯ್ದುಬಿಡಲಿ ಅಥವಾ ಕೈಬೀಸಿ ಹೊಡೆದರೆ, ತಂದೆಯು ಕುಪಿತನಾಗುವುದಿಲ್ಲ. ಮನಸ್ಸಿನಲ್ಲಿ ಆ ಮಗುವಿಗಾಗಿ ಮರುಕಪಡುವನು. ಇನ್ನೂ ಬುದ್ಧಿ ಬೆಳೆದಿಲ್ಲ ಅಥವಾ ವಿವೇಕವಿಲ್ಲ ಎಂದು ಆ ಮಗುವಿಗಾಗಿ ಕನಿಕರಪಡುವನು. ಆಗ, ಅವನು ಚೆನ್ನಾಗಿ ಆಲೋಚಿಸುತ್ತ ತನ್ನನ್ನು ಆ ಮಗುವಿಗೆ ಹೋಲಿಸಿ ನೋಡಿದರೆ. ತಾನು ಎಷ್ಟು ದೊಡ್ಡವನು (ಬುದ್ಧಿ ಗುಣ- ದಯೆ ಮುಂತಾದವುಗಳಲ್ಲಿ) ಮಗುವು ಎಷ್ಟು ಚಿಕ್ಕ ಪ್ರಾಣಿ ಎಂದು ಅವನಿಗೆ ಹೊಳೆಯುವುದು. ಈ ಭಾವನೆಯು ನಮ್ಮಲ್ಲಿ ನಮ್ಮ ಶತ್ರುಗಳ ವಿಚಾರವಾಗಿ ಹುಟ್ಟಿದರೆ ನಾವು ನಿಜವಾದ ಅಹಿಂಸಾವಾದಿಗಳಾಗುವೆವು. ತಂದೆಯು ಮಗುವಿನ ಮೇಲೆ ಪ್ರತೀಕಾರಕ್ಕಾಗಿ ತೊಡಗುವುದಿಲ್ಲ. ಬದಲಾಗಿ ಮಗುವನ್ನು ಕೆಟ್ಟ ದಾರಿಯಿಂದ ತಿದ್ದಲು ಯತ್ನಿಸುತ್ತಾನೆ. ಅದೇ ಬಗೆಯ ಯತ್ನ, ಅದೇ ಬಗೆಯ ವಾತ್ಸಲ್ಯ, ಮತ್ತು ಅದೇ ಬಗೆಯ ಶ್ರದ್ಧೆ ನಮ್ಮಲ್ಲಿ, ನಮಗೆ ಕೇಡು ಮಾಡಿದವರ ವಿಷಯದಲ್ಲಿ ಉಂಟಾಗಲಿ—ಎಂಬುದೇ ಅಹಿಂಸೆಯ ತಿರುಳಾಗಿದೆ.

ನಮ್ಮ ಮನೆಗೆ ದರೋಡೆಕೋರರು ಪ್ರವೇಶಿಸಿ ಸಂಪತ್ತನ್ನು ದೋಚಿಕೊಂಡು ಹೋಗುವಾಗ ದಂಡಪ್ರಯೋಗದಿಂದ ಮಾತ್ರ ಅವರನ್ನು ತಡೆಯಬಹುದು—ಮತ್ತು ದಂಡಪ್ರಯೋಗದ ಭಯವಿದ್ದರೆ ಮಾತ್ರ ಮುಂದೆಯೂ ದಂಗೆ ದರೋಡೆಗಳಾಗಲಾರವು ಎಂದು ವಾದಿಸುವವರು ಹೆಚ್ಚು. ಆದರೆ, ಅಹಿಂಸಾ ರೀತಿಯ ನಿರೋಧವು ದಂಡಪ್ರಯೋಗಕ್ಕಿಂತ ಹೆಚ್ಚಿನ ಅದ್ಭುತಗಳನ್ನುಂಟುಮಾಡಬಲ್ಲುದು. ಅಹಿಂಸಾ ವಚನಗಳಿಂದ ಕ್ರೂರ ಕಳ್ಳರು ದಯಾಳುಗಳಾಗಿ ಉದಾರಿಗಳೂ ಆಗಿ ಮಾರ್ಪಟ್ಟ ಉದಾಹರಣೆಗಳಿವೆ. ದಂಡೋಪಾಯಕ್ಕೆ ಹೆದರುವವರು ತಮ್ಮ ಬಲವನ್ನು ಹೆಚ್ಚಿಸಿಕೊಂಡರೆ ತಮ್ಮ ಕೆಲಸವಾಗುವುದೆಂಬುದನ್ನು ಆಲೋಚಿಸುವರು; ಮತ್ತು ತಮಗೆ ಉಂಟಾದ ನೋವಿಗೆ ಸೇಡು ತೀರಿಸಬೇಕೆಂಬ ಹಟ ಹೆಚ್ಚಿಸಿಕೊಳ್ಳುವರು. ಅಹಿಂಸಾ ಪ್ರಭಾವದಿಂದ, ದರೋಡೆ–ದಂಗೆ–ದಂಡಗಳ ಬಗ್ಗೆ ಮೇಲಾಟವಿಲ್ಲ. (ಇದರಂತೆ, ಸಾವಿರಾರು ಉದಾಹರಣೆಗಳನ್ನು ಕೊಡಬಹುದಾಗಿದೆ. ಆದರೆ, ಲೇಖನವು ಬೆಳೆದು ನೀರಸವಾಗದಂತೆ ಸಂಕ್ಷೇಪಗೊಳಿಸಿರುವೆನು.)

ಹಿಂಸೆಯು ಅಹಿಂಸೆಯ ಹಿಂದೆ ಆಶ್ರಯ ಪಡೆಯುತ್ತಿದೆ.

ಸುಳ್ಳು ಹೇಳುವವನು ಸತ್ಯದ ಹಿಂದೆ ಆಶ್ರಯ ಪಡೆವಂತೆ, ಹಿಂಸಿಸುವವನು ಅಹಿಂಸೆಯ ಹಿಂದೆ ಆಶ್ರಯಪಡೆಯುತ್ತಾನೆ. ಇದೊಂದೇ ಕಾರಣದಿಂದ ಅಹಿಂಸೆಯ ಶ್ರೇಷ್ಠತ್ವವು ಸ್ಥಾಪಿತವಾಗುತ್ತದೆ. "ಇನ್ನು ಮುಂದೆ ......ನು ಇತರರನ್ನು ಹಿಂಸಿಸಬಾರದೆಂದು ಈಗ ನಾನು ಅವನನ್ನು ಹಿಂಸಿಸುತ್ತಿದ್ದೇನೆ"—ಎಂದು ಹಿಂಸಕನು ನೆಪಹೇಳುತ್ತಾನೆ. ಸುಳ್ಳು ಮಾತಾಡುವವನು, ಸತ್ಯವೆಂದು ಜನರು ನಂಬಲೆಂದು ಸತ್ಯದ ಮರೆಯಲ್ಲಿ ನಿಂತೇ ಆ ಸುಳ್ಳನ್ನು ಹೇಳುವಂತೆ. ಹಿಂಸಕನ ಕೃತಿಯಾದರೂ ಇದೆ. "ಹಿಂಸೆಯನ್ನು ಜಗತ್ತಿನಲ್ಲಿ ಸ್ಥಾಪಿಸಬೇಕೆಂದು ನಾನು ಹಿಂಸೆಗೆ ತೊಡಗಿದ್ದೇನೆ" ಎಂದು ಹಿಂಸಕನು ನುಡಿಯುವುದಿಲ್ಲ. ಅಹಿಂಸಾತತ್ವವು ಪರಮಶ್ರೇಷ್ಠವೆಂದು, ಆ ಹಿಂಸಕನಾದರೂ ಬಲ್ಲನು. ತನ್ನ ಜೀವಮಾನದಲ್ಲಿ, ಯಾರಾದರೂ ಇತರರೊಬ್ಬರ ಅಹಿಂಸಾಪಾಲನೆಯಿಂದ ಆ ಹಿಂಸಕನಿಗೆ ಏನಾದರೊಂದು ಪ್ರಯೋಜನ ದೊರೆತಿರಬೇಕು. ಅದರ ಶ್ರೇಷ್ಠತ್ವವನ್ನು ಅವನು ಬಲ್ಲನಾದರೂ, ಅವನಲ್ಲಿ ಕೊಲ್ಲಲ್ಪಡದ ಪಶುಭಾವನೆಯು ಅವನನ್ನು ಹಿಂಸೆಗೆ ಪ್ರೇರಿಪಿಸುತ್ತಿದೆ. ಇದರಿಂದ ಅವನು ಸುಖಿಯಾಗುವುದಿಲ್ಲ. ಹಿಂಸೆಯು ಯಾರಿಗೂ ಶಾಶ್ವತವಾದ ಸುಖ ತಂದಿಲ್ಲ.

ರಾಜಕೀಯಗಳಲ್ಲಿ ಅಹಿಂಸೆ

'ಅಹಿಂಸೆ'ಯೆಂದಕೂಡಲೇ ರಾಜಕೀಯಗಳಲ್ಲೂ ಅಹಿಂಸೆ ಬೇಕೆ ಎಂಬ ಪ್ರಶ್ನೆ ಬರುತ್ತದೆ. ಅಹಿಂಸೆಯು ಮಾನವನ ಸರ್ವ ಕಾರ್ಯ ವಿಭಾಗಗಳಲ್ಲಿ ಅವಶ್ಯವಿದೆ. ರಾಜಕೀಯ ರಂಗಗಳಲ್ಲಿ, ರಾಜಕೀಯ ಪಕ್ಷಗಳಲ್ಲಿ, ಅಭಿಪ್ರಾಯಭೇದಗಳು ಬಲಗೊಂಡಾಗ, ಅಹಿಂಸೆಯು ಮಾತ್ರ ಆ ಪಕ್ಷಗಳನ್ನುಳಿಸಿ, ದೇಶದ ಭವಿತವ್ಯವು ಕೆಡದಂತೆ ರಕ್ಷಿಸುವುದು. ತನಗನುಕೂಲವಾದ ಅಭಿಪ್ರಾಯವನು ವ್ಯಕ್ತಮಾಡದ ಪಕ್ಷವೆನ್ನುತ್ತ ಅದರ ಮೇಲೆ ಕೋಪ ತಾಳಿ, ತನ್ನ ಬಲದಿಂದ ಅದನ್ನೊಡೆದು ಧ್ವಂಸಪಡಿಸುವುದು ಹಿಂಸೆಯಾಗಿದೆ. ಬದಲಾಗಿ, ಆ ಪಕ್ಷವನ್ನು ಅಥವಾ ಸಂಸ್ಥೆಯನ್ನು ಯಾವ ಸ್ವಾರ್ಥಿಗಳು ಕೆಡಿಸುತ್ತಿರುವರೆಂಬುದನ್ನು ಗೊತ್ತುಹಚ್ಚಿ, ಆ ಸಂಸ್ಥೆಯೊಳಗೆ ಪ್ರವೇಶಿಸಿ, ದುಶ್ಶಕ್ತಿಗಳನ್ನು ಬುದ್ಧಿಚಾತುರ್ಯದಿಂದ ಧಿಕ್ಕರಿಸಿ, ಸಂಸ್ಥೆಗೆ ತಗಲಿದ ಕಶ್ಮಲವನ್ನು ತೊಳೆಯಬೇಕು ವಿನಾ, ಆ ಪಕ್ಷ ಅಥವಾ ಸಂಸ್ಥೆಯೇ ಇರಬಾರದೆನ್ನುವ ವೃತ್ತಿಯು ತಾಮಸವೃತ್ತಿಯಾಗಿದೆ: ಅಂತಹ ಮಾನಸಿಕತೆಯು ಲಯಸಾಧಕವೆನಿಸುತ್ತದೆ. ಸೃಷ್ಟಿಸಾಧಕವಾಗಿರುವ—ರಚನಾತ್ಮಕವಾಗಿರುವ ಮಾನಸಿಕತೆಯು ಅಹಿಂಸಾವಾದಿಗಳ ಲಕ್ಷಣವಾಗಿದೆ.

ಅಹಿಂಸೆಯ ಮೇಲೆ ಇನ್ನೆಷ್ಟೋ ಬರೆಯಬಹುದು. ಸಾವಿರ ಉದಾಹರಣೆಗಳನ್ನೂ ಕೊಡಬಹುದು. ಆದರೆ, ಸಮಯ ಸಂಕೋಚ-ಸ್ಥಳ ಸಂಕೋಚದಿಂದ ಈ ಲೇಖವನ್ನು ಇಲ್ಲಿ ಮುಗಿಸಬೇಕಾಗಿದೆ.

ಅಹಿಂಸೆಯಿಂದ ಮಾತ್ರ ಮಾನವಕೋಟಿಯ ಉದ್ಧಾರ; ಇದನ್ನು ಜಗತ್ತು ಮರೆತ ದಿನವೇ ಸರ್ವನಾಶ!



ಜಯಸಿಂಗನ ನಿರೀಕ್ಷಣಾಲಯ

ಜಯಸಿಂಗನು ಜಗದ್ವಿಖ್ಯಾತ ಖಗೋಲ ವಿಜ್ಞಾನಿ. ಸಿಂಗನು ತನ್ನ ರಾಜಧಾನಿಯಲ್ಲಿ ರಚಿಸಿದ್ದ ನಿರೀಕ್ಷಣಾಲಯವು (Observatory) ಈಗಲೂ ಇದೆ. ಜಯಸಿಂಗನ ನಂತರ ಕೆಲಕಾಲ ಅದರ ಪಾಲನೆಯ ಕಡೆಗೆ ಯಾರ ದೃಷ್ಟಿಯೂ ಹೋಗದ ಕಾರಣ, ನಿರೀಕ್ಷಣಾಲಯವು ಸ್ವಲ್ಪ ಹೀನಸ್ಥಿತಿಗಿಳಿಯಿತು. ನಂತರ ಇದರ ರಕ್ಷಣೆಗೆ ತಕ್ಕ ವ್ಯವಸ್ಥೆಯಾಯಿತು. ನಿರೀಕ್ಷಣಾಲಯದಲ್ಲಿ ಉಳಿದುದೆಂದರೆ ಇದು. ಗ್ರಹಗಳ ಸ್ಥಾನಗಳನ್ನೂ, ಸಮಯವನ್ನೂ, ಚಲನಗಳನ್ನೂ, ಗ್ರಹಣಗಳನ್ನೂ ಈ ವಿಚಿತ್ರ ಉಪಕರಣಗಳ ಸಹಾಯದಿಂದ ನೋಡುತ್ತಿದ್ದರು.

"ನೃತ್ಯಕಲೆಯಲ್ಲಿ ಅಧಿಕೃತ ವಾಣಿಯಿಂದಾಡುವ ಶ್ರೇಷ್ಠ ಗುರುಗಳಿಂದ, ವಿದ್ಯಾರ್ಥಿಗಳಿಗೆ ಶಿಕ್ಷಣವನ್ನು ಕೊಡಬೇಕೆಂದು ನನ್ನ ಅಭಿಮತ. ತಮ್ಮ ಕಲೆಯನ್ನು ಬಚ್ಚಿಟ್ಟು, ಪೂರ್ಣ ಹೇಳಿಕೊಡಲಾರದ ಗುರುಗಳಿಂದ ಕಲಾಭ್ಯಾಸಿಗಳಿಗೆ ಅರೆಯುಣಿಸನ್ನು ಕೊಟ್ಟಂತಾಗುವುದು."

—ಉದಯಶಂಕರ

ಭಾರತೀಯ ಸಂಸ್ಕೃತಿಯ ಕೇಂದ್ರ

ಆಲ್ಮೋರದಲ್ಲಿನ ನೃತ್ಯಕಲಾ ಶಾಲೆ.

(ಲೇಖಕರು: ಉದಯಶಂಕರ)



ಪೂರ್ವ ಮತ್ತು ಪಾಶ್ಚಿಮಾತ್ಯ ದೇಶಗಳಲ್ಲಿ ಬಹು ವಿಧದ ಸಾದರ ಸತ್ಕಾರಗಳು ನನಗೆ ದೊರೆತುದೇನೊ ನಿಜ. ಆದರೆ [illegible] ನಾನು ಪ್ರ[illegible]ನಾಗಲಾರೆ; ಬದಲಾಗಿ ಹೇಗೋ ಅತೃಪ್ತಿ ಪಟ್ಟಿರುವೆನೆನ್ನುವೆನು. [illegible] ಕಾರ್ಯಕ್ಷೇತ್ರದಲ್ಲಿ ಹೆಚ್ಚಿನ ಪ್ರಯತ್ನಗಳು ನಡೆಯಬೇಕಾಗಿದೆ. ಇಷ್ಟರ ತನಕ ನಾವು [illegible]ಗ್ರಹಿಸಿರುವುದು ನೃತ್ಯಕಲೆಯ [illegible]ಯನ್ನು ಮಾತ್ರ. [illegible]ವು ಇನ್ನು ಆರಂಭವಾಗಬೇಕಷ್ಟೆ! ನೃತ್ಯಕಲೆಯ ಅಭಿವೃದ್ಧಿಗೆ ವಿವಿಧ ನೃತ್ಯಗಾರರು, ವಿದ್ಯಾರ್ಥಿಗಳು, ಕಲಾಭ್ಯಾಸಿಗಳು ಈ ವರೆಗೆ ಸಲ್ಲಿಸದ ಸೇವೆಯು ಅಪಿರಾಮ[illegible] [illegible] ಪೂರ್ಣ [illegible]ದಿಂದಲೇ [illegible] [illegible]ಕಿಗೆ [illegible] [illegible]ಯೂ [illegible]ತ್ಸಾಹವು [illegible]ತಿಂದರೆ [illegible] ವೈಭವ [illegible] ಮುಂದೆ [illegible] ಸಾಧ್ಯವಾ[illegible] ಕಲಾ ಕೇಂದ್ರ [illegible]ಸಬೇಕೆಂ[illegible] [illegible]ಂದ ನಾನು ನಿರೀಕ್ಷಿಸಿದುದು ಕಾರ್ಯರೂಪದಲ್ಲಿ ನಡೆಯಿತು. ಹಿಮಪರ್ವತ ಶ್ರೇಣಿಯ ಮಗ್ಗುಲ ಪ್ರದೇಶದಲ್ಲಿರುವ [illegible] ಕಲಾ [illegible].



[illegible]

ಕಲಾಕೇಂದ್ರದಲ್ಲಿ ಶಿಕ್ಷಣ ಪಡೆಯಲು [illegible]. [illegible] ಪ್ರಪಂಚ, ಅದರ ರೂಪ ಮತ್ತು [illegible]. ಇವೆರಡರೊಳಗಿರುವ ಪರಸ್ಪರ ಸಂಬಂಧ, ಗುಪ್ತರೀತಿಯ [illegible] ಜ್ಞಾನವು ಕೊಡಲ್ಪಡುತ್ತದೆ. [illegible] ನೃತ್ಯಭಂಗಿಯಲ್ಲಿ ಲಾವಣ್ಯ ಇತ್ಯಾದಿ ವಿಷಯಗಳ[illegible] ಶಿಕ್ಷಣವನ್ನು ವಿದ್ಯಾರ್ಥಿಗಳು ಇಲ್ಲಿ ಪಡೆಯುವುದು. [illegible] ಶಕ್ತಿಯು ಬೆಳೆಯುವಂತೆ ಯೋಗ ಸಾಧನಗಳಿಗೆ ಸಂಬಂಧಪಟ್ಟ ಪಾಠಗಳನ್ನು ಇಲ್ಲಿ ಹೇಳಿಕೊಡುತ್ತಾರೆ. ಇದರಿಂದಾಗಿ ವಿದ್ಯಾರ್ಥಿಗಳಿಗೆ ಅವರವರ ನ್ಯೂನತೆಗಳನ್ನು ಮತ್ತು ಇತರ ಕುಂದುಕೊರತೆಗಳನ್ನು ತಿಳಿಕೊಳ್ಳಲು ತುಂಬಾ ಸಹಾಯವಾಗುತ್ತದೆ. ಕಲಾಕೇಂದ್ರದ [illegible] ವಿದ್ಯಾರ್ಥಿಗಳನ್ನು ಕಲಾವಂತರನ್ನಾ[illegible]. [illegible] ಶಿಕ್ಷಣ ಪಡೆದ ಮಾತ್ರಕ್ಕೆ [illegible] ಪೂರ್ಣತೆಯನ್ನು ಪಡೆದಂತಾ[illegible]. [illegible] ಹೊಂದಿದರೆ ಮಾತ್ರ ವಿದ್ಯೆಯು [illegible]. [illegible]ಗೆ [illegible]ವಾಗಿ ಸಂಗೀತ, ದೃಶ್ಯಾವಳಿ, ವೇಷ, ವಿದ್ಯುದ್ದೀಪಾಲಂಕಾರ ಇವುಗಳ [illegible] ನೃತ್ಯಕ್ಕೆ ಶೋಭೆಯು ಹೆಚ್ಚುವುದು. [illegible] ಕಲಾವಂತನೆನಿಸಿಕೊಳ್ಳುವವನು ಕಲೆಯ ವಿಷಯ ಪೂರ್ಣ ಜ್ಞಾನವನ್ನು ಪಡೆಯಬೇಕೆಂದು.

ಮೇಲೆ ಹೇಳಿದುದು ಹೊಸ ವಿಚಾರವಲ್ಲ. ರಸ, ಭಾವ, ದೃಷ್ಟಿ, ಅಂಗಹಾರ ಸಂಗೀತ, ದೃಶ್ಯ ಮತ್ತು ಅಭಿನಯ ಇವುಗಳ ವಿಷಯ ಆದ್ಯಂತ ವಿವರಣೆ ಕೊಟ್ಟ ಗ್ರಂಥಗಳು ನೂರಾರು ಇವೆ: ಇದನ್ನು ಇತಿಹಾಸ ಬಲ್ಲವರು ಮತ್ತು ಕಲಾತಜ್ಞರು ಸಂಪೂರ್ಣ ಅರಿತುಕೊಂಡಿದ್ದಾರೆ. ಪ್ರಾಚೀನ ಕಾಲದಲ್ಲಿ ಕಲಾವಂತರೆಂದು [illegible]ಗೊಂಡವರು ಧವಳ ಕೀರ್ತಿ [illegible] ಕಾರಣವು ಬೇರೇನೂ ಅಲ್ಲ. ಕಲೆಯ ಕುರಿತು ಸಂಪೂರ್ಣ ಜ್ಞಾನ ಪಡೆದವನನ್ನು ಮಾತ್ರ ಕಲಾವಂತನೆಂದು ಆ ಕಾಲದಲ್ಲಿ ಕರೆಯುತ್ತಿದ್ದರು. ಕಲೆಗೆ [illegible] ಶಿಕ್ಷಣರೂಪದಲ್ಲಿ ಅವರಿಗೆ ಕೊಡ[illegible]. [illegible] ವೇನೆಂದರೆ ಪ್ರಾಚೀನ ಸಂಸ್ಕೃತಿಯ [illegible] ಪ್ರೇಕ್ಷಕ ವರ್ಗದ ಮನೋರಂಜನೆಗಾ[illegible] ಪ್ರದರ್ಶಿಸುವುದಲ್ಲವಾಗಿತ್ತು. ಕಲೆಯ [illegible]ದನ್ನು ಅವರು ಚೆನ್ನಾಗಿ ಅರಿತಿದ್ದರು. ಪ್ರ[illegible] ಶ್ರೇಷ್ಠ ವರ್ಣದವರಲ್ಲಿ ಪ್ರತಿಯೊಬ್ಬರೂ ಕಲಾಶಿಕ್ಷಣವನ್ನು ಪಡೆಯಬೇಕೆಂಬ ಪದ್ಧತಿಯು ಇತ್ತು. ಅವರ ಸಾಮಾನ್ಯ ಶಿಕ್ಷಣದಲ್ಲಿ ಕಲೆಯನ್ನು ಒಂದು ಅಂಗವನ್ನಾಗಿಟ್ಟಿದ್ದರು. ಕಲೆಯ ವಿಷಯ ಪಾಠಗಳನ್ನರಿಯದವನ ಶಿಕ್ಷಣವು ಅಪೂರ್ಣವೆನಿಸಿಕೊಳ್ಳುತ್ತಿತ್ತು. ಈ ವಿಷಯವೆಲ್ಲಾ ಹೆಚ್ಚಿನವರಿಗೆ ತಿಳಿದಿರುವುದರಿಂದ ಅದನ್ನು ಪುನಃ ಪ್ರಕಟಿಸುವುದು ಚರ್ವಿತ ಚರ್ವಣವಾಗಬಹುದೆಂದು ಅದಕ್ಕೆ ಪೂರ್ಣ ವಿರಾಮ.



[illegible]

ನೃತ್ಯಕಲೆಯ ಉದ್ಧಾರಕ್ಕಾಗಿ ನನ್ನ ಮನಸ್ಸು ಪರಿವರ್ತನೆಗೊಂಡಾಗ ಮೊದಲು ನಾನು ಇದಿರಿಸಿದ ಸಂಕಷ್ಟಗಳೆಂದರೆ ಯೋಗ್ಯ ಶಿಕ್ಷಕರ ಆಯ್ಕೆಯ ಕುರಿತು. ಕಲೆಯ ಕುರಿತು ಸಂಪೂರ್ಣ ಜ್ಞಾನವನ್ನು ಹೊರಗೆಡಹುವ ಗುರುಗಳೇ ನನಗೆ ಬೇಕಾದವರು. ಹೊರತು ಮತ್ಸರ, ದುರಾಗ್ರಹಗಳ ಪೋಷಕರಾದ್ದು ಪೂರ್ಣ ವಿದ್ಯೆಯನ್ನು ಒಯಲುಪಡಿಸಲು ಸಂಕೋಚಪಡುವವರಿಗೆ ಗುರುಪೀಠದಲ್ಲಿ ಸ್ಥಾನಕೊಡಲು ನನ್ನ ಮನಸ್ಸು ಒಡಂಬಡುತ್ತಿದ್ದಿಲ್ಲ. ಅಂತಹ ಶಿಕ್ಷಕರಿಂದ



ಕಲಾಕೇಂದ್ರದ ವಿದ್ಯಾರ್ಥಿಗಳ 'ಇಂಪ್ರೊವಿಶನ್' ಕ್ಲಾಸ್



[illegible]

ವಿದ್ಯಾರ್ಥಿಗಳಿಗೆ ಯಾವ ತರದ ಪ್ರಯೋಜನವೂ ದೊರೆಯದೆಂದು ನನ್ನ ಮತ. ಪ್ರಾಯಶಃ, ಜನರಲ್ಲಿ ಕಲೆಯ ಕಡೆ ನಿರುತ್ಸಾಹವು ತಲೆದೋರಲು ಅವರು ಕಾರಣರಾಗುತ್ತಾರೆ.

ಅಂತಹ ಗುರುಗಳು ಕಲಿಸುವುದಕ್ಕಿಂತ ಹೆಚ್ಚಿನ ಪಾಠಗಳನ್ನು ಜೀವನದಿಂದ ನಾನು ಸಂಗ್ರಹಿಸಿದ್ದೇನೆ. ಅದನ್ನು ಪ್ರದರ್ಶಿಸುವ ರೀತಿಯು ಜೀವನ ಧ್ಯೇಯಗಳಿಂದ ಪ್ರತ್ಯೇಕವಾಗಿದೆಯೆಂದು ತೋರಬಹುದು; ತೋರಿಕೆಗೆ ಹಾಗೆ ಕಂಡರೂ ನೃತ್ಯದ ವಿವಿಧ ಹಾವಭಾವಗಳೆಲ್ಲವೂ ಜೀವನ ಮತ್ತು ಅದರ ಅನುಭವಗಳ ಬೇರೆ ಬೇರೆ ರೂಪಗಳೆಂಬುದು ನಿರ್ವಿವಾದ. ಹಿಂದೂದೇಶದಲ್ಲಿ ನೃತ್ಯಕಲೆಯು ಅನೇಕ [illegible] ಕಾಣುತ್ತದೆ. ಅರ್ಥಸೂಚಕ ಸಂಯೋಜನೆಗಳಿಂದ ಹಾವಭಾವಗಳನ್ನು ಪ್ರದರ್ಶಿಸುವುದು ಪ್ರತಿಯೊಂದರಲ್ಲಿಯೂ ಇದೆ. ನಮ್ಮ ಕಲಾಕೇಂದ್ರದಲ್ಲಿ ಶಿಕ್ಷಣ ಪಡೆಯುವ ವಿದ್ಯಾರ್ಥಿಗಳಿಗೆ ಸಂಸ್ಕೃತಿ ಮತ್ತು ಕಲ್ಪನಾಶಕ್ತಿ ಇವುಗಳ ಕುರಿತು [illegible] ಕೊಡಲ್ಪಡುತ್ತವೆ. ನೃತ್ಯಗಾರನ ಉದ್ದೇಶವು ಪ್ರೇಕ್ಷಕ ವರ್ಗಕ್ಕೆ ಮನಮುಟ್ಟಬೇಕಾದರೆ ಈ ಜ್ಞಾನವು ತೀರಾ ಅವಶ್ಯ. ಇತರರ ಮನೋಭಾವನೆಗಳೇನೆಂಬುದು ನೃತ್ಯಗಾರನಿಗೆ ತಿಳಿಯಬೇಕಾದರೆ ಕಲ್ಪನಾಶಕ್ತಿಯು ಅತ್ಯಗತ್ಯ.

ಧನಸಂಗ್ರಹಗೊಳಿಸುವ ಅಭಿಲಾಷೆಯಿಂದ ನಾನು ಕೇಂದ್ರ ಸ್ಥಾಪಿಸಿದುದಲ್ಲ. ಅದನ್ನು ಸೂಚಿಸುವುದಕ್ಕಾಗಿಯೇ ಪರಿಮಿತ ವಿದ್ಯಾರ್ಥಿಗಳನ್ನು ಶಾಲೆಗೆ ಸೇರಿಸಿಕೊಳ್ಳುವ ವ್ಯವಸ್ಥೆ ಮಾಡಿದುದು. ನೃತ್ಯಕಲೆಯ ಕುರಿತು ಒಂದೆರಡು ಪಾಠಗಳನ್ನು ಕಲಿತೊಡನೆಯೇ ತಮ್ಮ ವಿದ್ಯೆಯು ಪರಿಪೂರ್ಣವಾಯಿತೆಂದು ಬಗೆದು ರಂಗಭೂಮಿಯ ಸುಧಾರಣೆಗೆ ಕಚ್ಚೆ ಕಟ್ಟುವ ನೂರಾರು ಮಂದಿ ವಿದ್ಯಾರ್ಥಿಗಳು ನಮಗೆ ದೊರೆತು ಫಲವೇನು? ಬದಲಾಗಿ, ಕಲಾರ್ಜನೆಯ ಕಡೆ ಉತ್ಸಾಹಪಡುತ್ತಿರುವ ಕೆಲವೇ ಮಂದಿ ಪ್ರಾಮಾಣಿಕ ವಿದ್ಯಾರ್ಥಿಗಳು ದೊರೆತರೂ ಚಿಂತೆಯಿಲ್ಲ. ಅವರ ಮೂಲಕ ಹೆಚ್ಚಿನ ಫಲಗಳನ್ನು ಪಡೆಯಲು ನಮಗೆ ಸಾಧ್ಯವಿದೆ.

ಸುತ್ತುಮುತ್ತಲಿನ ವಾತಾವರಣ ಮತ್ತು ಅನುಕೂಲತೆಗಳು ಸರಿಯಿದ್ದರೆ ಮಾತ್ರ ಇಂತಹ ಸಂಸ್ಥೆಗಳು ಅಭಿವೃದ್ಧಿ ಪಡೆಯಬಹುದು. ಅನುಕೂಲತೆಗಳ ಮಟ್ಟಿಗೆ ಹೇಳುವುದಿದ್ದರೆ ನಮ್ಮ ಕೇಂದ್ರದಲ್ಲಿ ಇನ್ನೂ ಕೆಲವು ಸುಧಾರಣೆಗಳಾಗಬೇಕಾಗಿದೆ. ಸುತ್ತುಮುತ್ತಲಿನ ವಾತಾವರಣವನ್ನು ಕುರಿತು ಯೋಚಿಸುವುದಾದರೆ, ನಮ್ಮ ಕೇಂದ್ರಕ್ಕೆ ಹಿಮಾಲಯದ ಮಗ್ಗುಲಲ್ಲಿ [illegible] ಅನುಕೂಲ ಪ್ರದೇಶವು ಎಲ್ಲಾ ವಿಷಯಗಳಲ್ಲಿ ಪರಿಪೂರ್ಣವೆನಿಸಿಕೊಳ್ಳುತ್ತದೆ. ವರ್ಷದ 365 ದಿನಗಳ ಕಾಲವೂ ನೈಸರ್ಗಿಕ ಶೋಭೆಯಿಂದೊಡಗೂಡಿದ [illegible] ವಾತಾವರಣವು ಇಲ್ಲಿ ನೆಲಸಿರುತ್ತದೆ. ಜೀವನದಲ್ಲಿ ಸುಳ್ಳು, ಮರೆ, ಮೋಸ ಇವುಗಳೆಲ್ಲ ನೀರಸವೆಂಬ ಭಾವನೆಯು ಮನಸ್ಸಿನಲ್ಲಿ ಉತ್ಪನ್ನವಾಗಲು ಇಲ್ಲಿಯ ವಾತಾವರಣವು ಅನುಕೂಲವಿದೆ. ಜೀವನಪಥವನ್ನು ಸುಧಾರಿಸಿಕೊಳ್ಳುವ ರೀತಿಯು ಮನುಷ್ಯನಿಗೆ ಹೊಳೆಯುವುದು ಈ ಪ್ರಕೃತಿ ಸೌಂದರ್ಯಗಳ ನಡುವೆ.

ನೃತ್ಯಕಲೆಯ ಪ್ರಾಚೀನ [illegible] ಪ್ರದರ್ಶಿಸಲು ಈ ಕಲಾಕೇಂದ್ರದಲ್ಲಿ [illegible] ರಾಗಲಿ ಎಂಬುದು ನನ್ನ ಹಾರೈಕೆ. [illegible] ವಾಗಲಿ!


ಜೀವನದಲ್ಲಿ ನೃತ್ಯ

(ಗುರು ಶಂಕರನ್ ನಂಬೂದ್ರಿಯವರಿಂದ)

ಗುರು ಶಂಕರನ್ ನಂಬೂದ್ರಿಯವರು ದಕ್ಷಿಣ ಭಾರತದ ಪ್ರಸಿದ್ಧ ಕಲೋಪಾಸಕರು. ಉದಯಶಂಕರರಿಗೆ ಕಥಕ್ಕಳಿ ನೃತ್ಯದಲ್ಲಿ ಗುರುಗಳು ಇವರು.

"ಕಲಾಕಾರನು ಮನೋಭಾವನೆಗಳಿಂದ ಪ್ರೇರಿತನಾಗಿ ಜೀವನದ ಉದ್ದೇಶವನ್ನು ಕಲಿಯಲು ಯತ್ನಿಸುತ್ತಾನೆ."

ಕಲೆಯು ದೈವಿಕ-ಸರ್ವಶ್ರೇಷ್ಠ.



ಗುರು ಶಂಕರನ್ ನಂಬೂದ್ರಿಯವರು

ಕಲೆಯಲ್ಲಿ ನುರಿತವನು ಜಗತ್ತಿಗೆ ಸಾರಬೇಕಾದ ಒಂದು ಸಂದೇಶವಿದೆಯೆಂಬುದು ಸರ್ವಸಾಮಾನ್ಯ ಎಲ್ಲರಿಗೆ ತಿಳಿದ ವಿಷಯ. ಅನುದಿನದ ನಮ್ಮ ಜೀವನದಲ್ಲಿ ಬರುವ ಅನುಭವಗಳಿಂದಲೇ ಈ ಸಂದೇಶಕ್ಕೆ ವಸ್ತುವನ್ನು ಆರಿಸಬೇಕಾಗಿದೆ ಎಂಬುದನ್ನು ಸಾಮಾನ್ಯ ವ್ಯಕ್ತಿಯು ಅರಿಯನು. ಕಲೆಗೂ ಮಾನವ ಜೀವನಕ್ಕೂ ಹತ್ತಿರದ ಸಂಬಂಧವಿದೆಯೆಂಬುದು ಮತ್ತೊಂದು ಶೋಧನೆ. ಕಲೆಯೆಂದಮೇಲೆ ನೃತ್ಯಕಲೆಗೂ ಅದು ಸಂಬಂಧಿಸುವುದೆಂದು ಬೇರೆ ಹೇಳಬೇಕಾಗಿಲ್ಲ. ಕಲಾಪ್ರೇಮಿಯು ಮೊದಲು ಗ್ರಾಹ್ಯಮಾಡಿಕೊಳ್ಳಬೇಕಾದ ವಿಷಯವೇನೆಂದರೆ, ಕಲೆಯಲ್ಲಿ ಅಡಕವಾಗಿರುವ ದೈವಿಕ ಮತ್ತು ಸಮಾಜೋದ್ಧಾರಕ ಶಕ್ತಿ: ಈ ಎರಡು ಮಹತ್ವದ ಶಕ್ತಿಗಳು ನೃತ್ಯಕಲೆಯಲ್ಲಿ ಸೇರಿಕೊಂಡಿವೆಯೆಂಬುದರ ಅರಿವಿಟ್ಟುಕೊಂಡೇ ನೃತ್ಯ ಪ್ರದರ್ಶನಗಳನ್ನು ನೃತ್ಯಗಾರನು ಕೈಕೊಳ್ಳಬೇಕಾಗಿದೆ. ಬದಲಾಗಿ, 'ನೃತ್ಯವೆಂದರೆ ಜನಸಾಮಾನ್ಯರ ಮನೋರಂಜನೆಗಾಗಿದೆ' ಎಂಬಿಷ್ಟನ್ನು ಮಾತ್ರ ತಿಳಿದುಕೊಂಡರೆ ಅದು ಸಂಪೂರ್ಣ ಕಲೆಯೆನಿಸದು. ವಿದ್ಯಾವಂತರೇ ಇಂತಹ ತಪ್ಪು ಭಾವನೆಗಳನ್ನೆಣಿಸಿದರೆ ಸಾರ್ವಜನಿಕ ಅಭಿಪ್ರಾಯವು ಹೇಗಿರಬಹುದು? ಆದುದರಿಂದ ನೃತ್ಯದ ಕುರಿತು ಪೂರ್ಣ ಜ್ಞಾನವನ್ನು ನೃತ್ಯಗಾರರು ಪಡೆಯಬೇಕು. ಆಗ ಮಾತ್ರ ಅವರ ಜೀವನದ ಉದ್ದೇಶವು ಸಫಲಗೊಂಡಂತಾಗುವುದು.

ನೃತ್ಯಗಾರನು ಜಗತ್ತಿಗೆ ಸಾರಬೇಕಾದ ಸಂದೇಶವು ಯಾವುದು? ನೃತ್ಯವು ಆ ಸಂದೇಶವನ್ನು ಜಗತ್ತಿನ ಜನರಿಗೆ ಪ್ರಸಾರಮಾಡುವ ರೀತಿ ಹೇಗೆ? ಜೀವನದ ಮೇಲೆ ಅದರಿಂದ ಮಹತ್ವದ ಪರಿಣಾಮಗಳಿವೆಯೇ?

ಆಹಾರ ಮತ್ತು ವಿರಾಮ ಈ ಎರಡು ವಿಷಯಗಳಿಗೆ ಮನುಷ್ಯನು ಆಸಕ್ತಿ ಪಡುವಂತೆ ಹೊಸ ಶೋಧನೆಗಳಿಗೂ ಮನುಷ್ಯನ ಮನಸ್ಸು ಆತುರಪಡುತ್ತಿದೆ. ಮನಸ್ಸಿನಲ್ಲಿ ಸಹಜವಾಗಿ ತಲೆದೋರುವ ಈ ಭಾವನೆಗಳನ್ನು ತಡೆಯಲೆತ್ನಿಸಿದರೆ, ಅಂತಹನ ಬುದ್ಧಿಶಕ್ತಿಯು ಕೆಟ್ಟು, ಮನೋತೃಪ್ತಿ ನೀಗಿಸಲು ಕಲ್ಪನಾ ಜಗತ್ತೊಂದನ್ನು ಅವನು ಸೃಷ್ಟಿಸದಿರಲಾರನು. ಮನಸ್ಸಿನಲ್ಲಿ ತಲೆದೋರುವ ಆ ರೀತಿಯ ಆಂತರಿಕ ಕರೆಯೇ ಇಂದಿನ ನಾಗರಿಕ ಸೃಷ್ಟಿಗೆ ಕಾರಣ. ನಮ್ಮ ಹಿರಿಯರಲ್ಲಿ ಅಂತಹ ಮನೋಭಾವನೆಗಳು ಉಂಟಾದುದರ ಪರಿಣಾಮವಾಗಿ ಮನುಷ್ಯನು, 'ಮೃಗವಾಗಿದ್ದವನು—ಮೃಗಗಳ ರಾಜನಾದನು'. ಕಲೆ, ಸಂಸ್ಕೃತಿ, ನಾಗರಿಕತೆ ಇವುಗಳೆಲ್ಲ ಉತ್ಪನ್ನವಾದುವು. ನಂತರ ಕಲಾವಂತನು ಮೇಲೆ ಸೂಚಿಸಿದಂತಹ ಮನೋಭಾವನೆಗಳಿಂದ ಪ್ರೇರೇಪಿತನಾಗಿ ಜೀವನದ ಉದ್ದೇಶವನ್ನು ಕಲಿಯಲು ಯಾಚಿಸುತ್ತಾನೆ. ನೃತ್ಯಗಾರನಿಗೆ ಅವನ ವಿವಿಧ ಅಂಗಗಳ ಚಲನವಲನಗಳು ಜೀವನದ ಮಹತ್ವ ತಿಳಿಯಲು ಅನುಕೂಲವಾಗುತ್ತವೆ—ಪ್ರಕೃತಿಯಿಂದ ಇತರ ವಸ್ತುಗಳು, ಬಣ್ಣ, ಮಾತು, ಇಲ್ಲವೆ ಶಬ್ದ—ಇವೆಲ್ಲ ಚಲನಗಳಿಗೆ ಕಳೆಕೊಡುವ ಉಪಸಾಹಿತ್ಯಗಳು ಮಾತ್ರ. ಜೀವನದ ರಹಸ್ಯವೆಲ್ಲವೂ ನೃತ್ಯಗಾರನು ಪ್ರದರ್ಶಿಸುವ ದೇಹದ ಹಾವಭಾವಗಳ ಮೇಲೆ ಹೊಂದಿಕೊಂಡಿದೆ. ಅನುಭವವು ಪ್ರಾರಂಭವಾಗುವುದು ಇಲ್ಲಿಂದ. ಉಚ್ಚ ತರಗತಿಯುದು ಮತ್ತು ಕೀಳುತರಗತಿಯದೆಂದು ನೃತ್ಯದಲ್ಲಿ ಭೇದಗಳನ್ನು ಕಲ್ಪಿಸುವುದು ಈ ಹಾವಭಾವಗಳ ಆಧಾರದಿಂದ. ಜೀವನಕ್ಕೆ ಹತ್ತಿರದ ಸಂಬಂಧವಿರುವ ವಿಷಯಗಳನ್ನು ಪ್ರದರ್ಶಿಸುವುದಿದ್ದರೆ ಉಚ್ಚತರಗತಿಯೆನಿಸುವುದು. ಅಂತೆಯೇ ಜೀವನದ ಅಸಹ್ಯಭಾಗವನ್ನು ಪ್ರದರ್ಶಿಸಿದರೆ ಕೀಳುತರಗತಿಯದಾಗುವುದು.

ಧ್ಯೇಯಕ್ಕಾಗಿ ನೃತ್ಯಗಾರನ ಜೀವನ—ಜೀವನಕ್ಕಾಗಿ ಧ್ಯೇಯ ಎಂಬುದು ನಂತರ ಅನುಭವವಾಗುತ್ತದೆ. ಅನುಭವಗಳು ಹೆಚ್ಚಿದಷ್ಟಕ್ಕೆ, ಹೊಸ ಹುರುಪು, ಹೊಸ ಶಕ್ತಿ, ಹೊಸ ಚೇತನ ಇವು ಮೂರು ಸ್ವಾಭಾವಿಕವಾಗಿ ಉಂಟಾಗುತ್ತವೆ. ಸಂದೇಶಕ್ಕೆ ಬೇಕಾದ ವಸ್ತು ಮೆಲ್ಲನೆ ಸಂಗ್ರಹವಾಗುತ್ತದೆ. ನೃತ್ಯಗಾರನು ನುಡಿಗಳ ದ್ವಾರಾ ಸಂದೇಶವನ್ನು ಜಗತ್ತಿಗೆ ಸಾರುವುದಲ್ಲ—ಅದಕ್ಕಿಂತ ಯೋಗ್ಯ ರೀತಿಯಲ್ಲಿ—ಅಂದರೆ ಕಾರ್ಯರೂಪದಲ್ಲಿ. ನೃತ್ಯ ಸಂದೇಶವನ್ನು ನುಡಿಯ ರೂಪದಲ್ಲಿ ತರ್ಜುಮೆಗೊಳಿಸಲು ಸಾಧ್ಯವಿರುವುದಿಲ್ಲ. 'ಆ ರೀತಿ ಮಾಡು. ಈ ರೀತಿ ವರ್ತಿಸು' ಇತ್ಯಾದಿ ರೀತಿಯಲ್ಲಿ ಜನರಿಗೆ ಬೋಧಿಸುವುದೂ ನೃತ್ಯಗಾರನಿಗೆ ಸಂಬಂಧಪಟ್ಟುದಲ್ಲ. ಜನರ ಮನಸ್ಸಿನ ಮೇಲೆ ವಿವಿಧ ಪರಿಣಾಮಗಳನ್ನು ಉಂಟುಮಾಡಲು ಆತನ ಕಲೆಯೇ ಶಕ್ತವಾಗುವುದು.

ಇದರ ಕುರಿತು ಮಹಾಭಾರತದಲ್ಲಿ ಒಂದು ಕತೆಯುಂಟು. ಪಾಂಡವ ಪತ್ನಿ ಪಾಂಚಾಲಿಯು ಭೀಮಸೇನನೊಡನೆ ಸೌಗಂಧಿಕಾ ಪುಷ್ಪವನ್ನು ಯಾಚಿಸಿದಳು. ಸೌಗಂಧಿಕಾ ಪುಷ್ಪವು ಸುಲಭವಾಗಿ ದೊರೆಯುವಂತಿದ್ದಿಲ್ಲ. ಅನೇಕ ಗಂಡಾಂತರಗಳನ್ನು ಭೀಮನು ಅನುಭವಿಸಬೇಕಾಯಿತು. ರಾಕ್ಷಸ ಸಮೂಹ (ಜೀವನದ ಶತ್ರುಗಳು)ದೊಡನೆ ಹೋರಾಟ ನಡೆಸಬೇಕಾಗಿ ಬಂತು. ಅಸುರರನ್ನು ಧ್ವಂಸಿಸಿದ ಮಾತ್ರದಿಂದ ಜೀವನದಲ್ಲಿ ಅವನು ಗೆದ್ದಂತಾಯಿತು. ಕೊನೆಗೆ ಸೌಗಂಧಿಕಾ ಪುಷ್ಪವನ್ನು ಪಡೆಯಲು ಅವನು ಸಮರ್ಥನಾದನು. ಅಗತ್ಯವು ಹೆಚ್ಚಿದಷ್ಟಕ್ಕೆ ಅನುಭವಗಳು ತಾವಾಗಿ ತಿಳಿದಂತಾಗುತ್ತವೆ ಎಂಬುದಕ್ಕೆ ಇದು ಸಾಮ್ಯ.

ಈ ವರೆಗೆ ಚಲನವಲನಗಳ ಕುರಿತು ಮಾತ್ರ ನಾವು ತಿಳಿದುದಾಗಿದೆ. ಸಂಗೀತ, ಕವಿತೆ, ನಾಟಕ, ವೇಷ, ದೃಶ್ಯ ಇವೆಲ್ಲವೂ ನೃತ್ಯಕ್ಕೆ ಹಿಮ್ಮೇಳವಾಗಿದ್ದರೆ ಜೀವನವನ್ನು ಮತ್ತಷ್ಟು ಸೊಗಸಾದ ರೀತಿಯಲ್ಲಿ ವರ್ಣಿಸಬಹುದು. ಕಲೆಯಲ್ಲಿ ಆಸಕ್ತಿ ಹುಟ್ಟಿದಂತೆ ಕಲಾಪ್ರೇಮಿಗಳಿಗೂ ಹೊಸ ಹುರುಪು, ಹೊಸ ಶಕ್ತಿಗಳು ಉಂಟಾಗುತ್ತವೆ. ಅದರ ಪ್ರೇರೇಪಣೆಯಿಂದಾಗಿ ಕಲೆಯ ಉದ್ಧಾರಕ್ಕೆ ಅವರು ಸಿದ್ಧರಾಗುತ್ತಾರೆ. ಅಂದ ಬಳಿಕ ಜೀವನವು ಸುಗಮವಾಗಿ ಪರಿಣಮಿಸಲೂ ಕಾರಣವಾಗುತ್ತದೆ. ಇದನ್ನು ಹೊಸದಾಗಿ ಕಂಡುಹಿಡಿದುದಲ್ಲ. ನೃತ್ಯಕಲೆಯ ಮಹತ್ವವು ನಮ್ಮ ಪೂರ್ವಜರಿಗೆ ಚೆನ್ನಾಗಿ ತಿಳಿದಿತ್ತು. ನೃತ್ಯಕಲೆಯ ಉದ್ಧಾರಕ್ಕೆ ಇಡೀ ಜೀವಮಾನವನ್ನು ಕಳೆದವರಿದ್ದಾರೆ. ಅವರು ಬರೆದಿಟ್ಟ ಮಹಾ ಮಹಾ ಗ್ರಂಥಗಳು ಈಗಲೂ ಇವೆ. ನೃತ್ಯಕಲೆಯ ಕುರಿತು ಚರ್ಚಿಸಲು ಆಗಾಗ ಅವರು ಸಭೆ ಕರೆಯುತ್ತಿದ್ದರು. ನೃತ್ಯಕಲೆಯ ಹೊಸ ವೇದವೊಂದನ್ನು ರಚಿಸುವುದಕ್ಕೂ ಅವರು ಪ್ರಯತ್ನಪಟ್ಟಿದ್ದಾರೆ. 'ಜೀವನದ ಉದ್ದೇಶವನ್ನು ತಿಳಿದುಕೊಳ್ಳಲು ನೃತ್ಯದ ಮೂಲಕ ಸಾಧ್ಯವಿದೆ' ಎಂಬುದು ಅವರ ಮತ. ಆದುದರಿಂದ ಜೀವನದಲ್ಲಿ ಹೆಚ್ಚಿನ ಪರಿಣಾಮಕಾರಿಯಾಗಿರುವ ನೃತ್ಯಕಲೆಯ ಉದ್ಧಾರ ಆಗಲೇಬೇಕು.

ಕತ್ತಲೆಯಲ್ಲಿ ಬೆಳಕು!

(ಶ್ರೀ ಎಸ್. ವಾಸುದೇವ ಪ್ರಭು, ಎಮ್ ಎ., ಎಲ್. ಟಿ.)

ಅಜ್ಞಾನವೆಂಬ ಕತ್ತಲೆಯಲ್ಲಿ ಮುಳುಗಿ ಕಷ್ಟಪರಂಪರೆಗಳನ್ನು ಅನುಭವಿಸುವಂತಹ ಈಗಿನ ಜನರ ಎಲ್ಲಾ ತೊಂದರೆಗಳನ್ನು ಪರಿಹರಿಸಿ ಅವರಿಗೆ ನಿಮಿಷಾರ್ಧದ ಸುಖವನ್ನಾದರೂ ಒದಗಿಸುವಂತಹ ಅಲ್ಪ ಸಾಧನವು ಆವುದೆಂದರೆ, ನಮ್ಮ ಬೀಡಿಯೇ. ಅದನ್ನು ಬಿಟ್ಟುಬಿಡಿರೆಂದು ಹೇಳುವವರಿರುವರು. ಅದು ಸದುಪದೇಶವೇ; ಆದರೂ ಜನರದನ್ನು ಸ್ವೀಕರಿಸುವಂತಿಲ್ಲ. ಏಕೆಂದರೆ ಬೀಡಿಯೆಂಬುದು ಜೀವನದ ಸಂಜೀವನ. ಬಡವರ ಭಾಗ್ಯನಿಧಿ. ಆದುದರಿಂದ ಬೀಡಿಯನ್ನು ಬಿಡುವುದೆಂದರೆ ಸುಲಭವೆ!

ನಾವು ಸಹ ಅದನ್ನಿಂದು ಎತ್ತಿ ಹಿಡಿದಿರುತ್ತೇವೆ. ಅಭ್ಯಾಸವಿಲ್ಲದುದರಿಂದ ಬರೆಯುವುದು ಸ್ವಲ್ಪ ಕಷ್ಟದ ವಿಷಯವಾಗಿದೆ. ಆದರೂ ಪ್ರಯತ್ನಿಸಬೇಕೆಂದು ಒಂದು ಬೀಡಿಯನ್ನು ಮುಂದಿಟ್ಟುಕೊಂಡು ಅದರ ಹಿಂದುಮುಂದಿನ ವಿಚಾರವನ್ನು ತಮ್ಮ ಮುಂದಿಡುತ್ತೇವೆ. ವಿಷಯವು ಅಲ್ಪವಾಯಿತೆಂದು ವಾಚಕರು ಮೂಗಿನ ತುದಿಯನ್ನು ಮೇಲೇರಿಸದಿದ್ದರೆ ಅದು ನಮ್ಮ ಬೀಡಿಯ ಪುಣ್ಯವಲ್ಲದೆ ಬರೆದವರ ಪುಣ್ಯವಲ್ಲ. ಅದು ಹೇಗೂ ಇರಲಿ. ವಾಚಕರು ನಮ್ಮ ಬೀಡಿಯನ್ನು ಪರೀಕ್ಷಿಸಲೆಂದು ಆ ಬೀಡಿಯನ್ನು ಅವರ ಕೈಯಲ್ಲಿ ಕೊಟ್ಟುಬಿಡುತ್ತೇವೆ.

ಹೀಗೆ ಧೈರ್ಯದಿಂದ ಅದನ್ನು ನಿಮಗೆಲ್ಲರಿಗೂ ಸಮರ್ಪಿಸಲಿಕ್ಕೆ ಮುಖ್ಯವಾದ ಕಾರಣವಾವುದೆಂದರೆ ಬೀಡಿಯನ್ನು ಬೇಡವೆಂದು ತಿರಸ್ಕರಿಸುವ ಜನರು ಬಹಳ ಕಡಿಮೆ. ಮತ್ತು ಜನರ ಮತವನ್ನು ತೆಗೆದು ನೋಡಿದರೆ, ಮುಕ್ಕಾಲು ವಾಸಿ ಜನರ ವೋಟುಗಳು ಈ ಬೀಡಿಗೆ ಸಿಗುವುದರಲ್ಲಿ ಸಂಶಯವಿಲ್ಲ. ಬಾಕಿ ಉಳಿದ ಜನರಲ್ಲಿ ಸಹ ಕೆಲವರು ಬೇಡವೆಂದು ದೃಢವಾಗಿ ಹೇಳುವಷ್ಟು ಧೈರ್ಯವುಳ್ಳವರಾಗಿರಲಿಕ್ಕಿಲ್ಲ.

"ಬೀಡಿಯಿಲ್ಲದ ನಗರವಿಲ್ಲ; ಬೀಡಿಯಿಲ್ಲದ ಮನೆಯಿಲ್ಲ." ಇದೊಂದು ಹೊಸ ಗಾದೆಯಾದರೂ ಹಳೇ ಗಾದೆಗಳಷ್ಟೇ ಅರ್ಥಗರ್ಭಿತವಾದುದು. ಮನೆಯ ಯಜಮಾನನು ಬೀಡಿಯ ಭಜಕನಲ್ಲವಾದರೆ, ಪ್ರಾಯಕ್ಕೆ ಬಂದ ಯುವಕರಲ್ಲಾದರೂ ಕೆಲವರು ಅದೇ ಮನೆಯಲ್ಲಿರುವ ಕತ್ತಲೆಯ ಕೋಣೆಯನ್ನು ಈ ಬೀಡಿಯ ಬೆಳಕಿನಿಂದ ಬೆಳಗಿಸುವರು. ಮತ್ತೆ ಕೆಲವರು ಅದರ ರುಚಿಯನ್ನು ನೋಡಿ, ಅದು ತಮಗೆ ಅಹಿತವೆಂದು ಖಂಡಿತವಾದರೆ ದೂರದಿಂದಲಾದರೂ ಅದರ ಸುವಾಸನೆಯನ್ನು ಆಘ್ರಾಣಿಸುವರು. ಚಿಕ್ಕ ಮಕ್ಕಳಿಗೆ ದೊಡ್ಡವರು ಬೀಡಿ ಸೇದುವುದನ್ನು ನೋಡುವುದೆಂದರೆ ಸಿನೇಮದಷ್ಟೇ ಸಿಹಿಯಾದ ನೋಟ. ಹೀಗೆ ಬೀಡಿಯಲ್ಲದಿದ್ದರೆ ಅದರ ಹೊಗೆಯಿಂದಲಾದರೂ ಪವಿತ್ರವಾಗದ ಮನೆಯಿಲ್ಲವೆಂದು ನಿಸ್ಸಂಶಯವಾಗಿ ಹೇಳಬಹುದು.

ಬೀಡಿಯ ಮಹತ್ವವನ್ನು ಅಥವಾ ಪ್ರಕಾಶವನ್ನು ನೋಡಬೇಕಾದರೆ ಕತ್ತಲೆಯಿಂದ ತುಂಬಿದ ರಾತ್ರಿಯಲ್ಲಿ ಒಂದು ಸಲ ನಮ್ಮ ದೊಡ್ಡ ಮೈದಾನಿಗೆ ಬನ್ನಿರಿ. ಹತ್ತಿರದಲ್ಲಿಯೆ ಜನರ ದಣಿವಿನ ಪರಿಹಾರಾರ್ಥವಾಗಿ ಇಂಪಾದ ಸ್ವರದಿಂದ ಒಂದು ದೊಡ್ಡ ರೇಡಿಯೊ ಕೂಗುತ್ತಾ ಇರುತ್ತದೆ. ಅದರದು ಕಿವಿಯಿದ್ದವರಿಗಾಯಿತು. ಬಾಕಿಯವರಿಗೂ ಇತರ ಬಗೆಯ ಸುಖವು ಅಲ್ಲಿದೆ. ಬಾಯಿಯ ಕೆಲಸ ಮುಖ್ಯವಾದವರಿಗೆ ನೆಲಗಡಲೆಯಿದೆ. ಬೀಡಿಯ ಅಂಗಡಿಗಳೂ ಇವೆ. ಶರಬತ್ತೂ ಇದೆ. ಆದರೆ ಇವುಗಳಿಗೋಸ್ಕರ ನಾವು ನಿಮಗೀ ಮೈದಾನಿಗೆ ಆಮಂತ್ರಿಸಿದ್ದಲ್ಲ. ಮುಖ್ಯವಾಗಿ ಬೀಡಿಯ ಮಹತ್ವವನ್ನು ನೋಡಲಿಕ್ಕಾಗಿಯೇ. ಅದೆಲ್ಲಿ? ಸುತ್ತಲೂ ನಿಮ್ಮ ನೋಟವನ್ನು ತಿರುಗಿಸಿರಿ. ಆಗ ಕತ್ತಲೆಯಲ್ಲಿ ನೂರಾರು ಚಿಕ್ಕ ಕೆಂಪು ನಕ್ಷತ್ರಗಳು ಕಾಣಿಸುವುವು. ಆ ಕೆಂಪು ನಕ್ಷತ್ರಗಳೇ ನಮ್ಮ ಬೀಡಿಯ ಅವತಾರಗಳು. ಚಂದ್ರಮಂಡಲಕ್ಕೆ ಸಮಾನವಾದ ರೇಡಿಯೊ ಗೂಡಿನ ಸುತ್ತಲೂ ಭೂಮ್ಯಾಕಾಶದಲ್ಲಿ ಈ ಚಿಕ್ಕ ನಕ್ಷತ್ರಗಳು ಮಿನುಗುವುವು. ಇವೇ ಕತ್ತಲೆಯಲ್ಲಿರುವ ಬೆಳಕುಗಳು.

ಇಂತಹ ಮಿಣುಕುಮಿಣುಕು ಬೆಳಕುಗಳಿಂದ ಪ್ರಯೋಜನವಿಲ್ಲವೆಂದು ಎಣಿಸಬಾರದು. ಬೆಳಗಿಸುವವರಿಗೆ ಸ್ವರ್ಗಸುಖ. ಇವು ಕತ್ತಲೆಯಲ್ಲಿ ಬರುವವರು ಎಡವಿತಡವಿ, ಕುಳಿತು ಆನಂದವನ್ನನುಭವಿಸುವವರ ಮೈಮೇಲೆ ಬೀಳದಂತೆ ಅವರನ್ನು ಎಚ್ಚರಿಸುವ ಸೊಡರು. 'ಕರುಣಾರಸಸಂಪೂರ್ಣವಾದ ದಿವ್ಯ ಜ್ಯೋತಿಯೆ, ಮಾರ್ಗದರ್ಶಕವಾಗಿ ನಮ್ಮನ್ನು ನಡೆಯಿಸು!' ಎಂದು ನ್ಯೂಮನ್ ದೊರೆಯು ಹಾಡಿರುವಂತಹದು ಇಂತಹ ಬೆಳಕಿನ ವಿಷಯವೇ ಎಂದು ನಮಗೆ ತೋರುತ್ತದೆ.

ಬೀಡಿಯ ಪ್ರಯೋಜನವು ಇಷ್ಟೇ ಅಲ್ಲ. ಹಲವು ಚಿಲ್ಲರೆ ಕೆಲಸಗಳು ಒಂದೇ ಒಂದು ಬೀಡಿಯಿಂದ ಸಾಧ್ಯವಾಗುವುವು. ಒಂದೇ ಒಂದು ಬೀಡಿಯಿಂದ ರೈಲ್ವೇ ಪ್ಲೇಟ್‌ಫೋರ್ಮಿಗೆ ಹೋಗಲು ಶಕ್ತಿಯಿರುವ ಜನರಿರುವರು. ಒಂದೇ ಬೀಡಿಯ ಮಹಾಶಕ್ತಿಯಿಂದ ಕೆಲವರಿಗೆ ಹೋಟೆಲ್ ಫಲಾಹಾರವು ವೆಚ್ಚವಿಲ್ಲದೆ ಸಿಗುವುದು. ದೊಡ್ಡ ಜನರನ್ನು ನೋಡಲಿಕ್ಕೆ ಹೋಗುವವರು ಒಂದು ಬೀಡಿಯನ್ನು ಕಿಸೆಯಲ್ಲಿ ಇಟ್ಟುಕೊಂಡರೆ, ಆ ಬೀಡಿಯು ಅವರಿಗೆ ಪರೋಪಕಾರಿಯಾಗುವುದು. ದ್ವಾರಪಾಲಕರಿಗೆ ಅದನ್ನು ತೋರಿಸಿದರೆ, ಅಥವಾ ಕೊಟ್ಟುಬಿಟ್ಟರೆ, ಗೃಹಪ್ರವೇಶಕ್ಕೆ ಮತ್ತೇನೂ ಅಡ್ಡಿಯಿರಲಾರದು. ಸನಕಾದಿಗಳಿಗೆ ಅಂದು ವೈಕುಂಠವನ್ನು ಪ್ರವೇಶಿಸಲಿಕ್ಕೆ ಸ್ವಲ್ಪ ಕಷ್ಟವಾದುದು ಈ ಬೀಡಿಯ ಮರವೆಯಿಂದಲೇ.

ಈಗಿನ ಕಾಲದಲ್ಲಿ ಈ ಬೀಡಿಗೆ ಇರುವ ಮನ್ನಣೆಯು ಮತ್ತಾವ ವಸ್ತುವಿಗೂ ಇರುವುದಿಲ್ಲ. ಎಲ್ಲಿ ನೋಡಿದರೂ ಬೀಡಿಯ ಕಾರಖಾನೆಗಳು; ಬೀಡಿಯ ಭಜಕರು; ಬೀಡಿಯ ಸೇವಕರು. ಕಾರಣವುಂಟು, ಈ ಬೀಡಿಯ ಸೇವೆಯಿಂದ ಸಾವಿರಾರು ಕುಟುಂಬಗಳ ರಕ್ಷಣೆಯಾಗುತ್ತದೆ. ಕೆಲಸಗಳಿಗೆ ಬರಗಾಲವಿರುವ ನಮ್ಮ ಈಗಿನ ದಿವಸಗಳಲ್ಲಿ ಸಾವಿರಾರು ಜನರಿಗೆ ಜೀವನದ ಮಾರ್ಗವನ್ನು ಕಲ್ಪಿಸಿಕೊಟ್ಟಂಥ ಸಾಧನವು ಇದೊಂದೇ. ಆದುದರಿಂದ ಜನರಿಗೆ ಇದರಲ್ಲಿ ಗೌರವವಿರುವುದು ಸಹಜವೇ.

ಜನರಿಗೂ ಇದರ ಮೇಲೆ ಆದರವು ಕಮ್ಮಿಯಾಗಲಿಲ್ಲ. ಇತರ ಎಲ್ಲಾ ವಸ್ತುಗಳಿಗೂ ಕ್ರಯವೇರಿದ ಸಮಯದಲ್ಲಿ, ಬೀಡಿಯು ಮಾತ್ರ ಅದೇ ದರವನ್ನಿಟ್ಟುಕೊಂಡಿದೆ. ಆದುದರಿಂದ ಜನರ ಆದರಕ್ಕೆ ಕಾರಣವು ಆ ದರವೇ. ಬೀಡಿಗಳು ಮುಂಚೆಯೂ ಪೈಗೆ ಮೂರು; ಈಗಲೂ ಪೈಗೆ ಮೂರೇ. ಹೆಚ್ಚೂ ಇಲ್ಲ; ಕಡಿಮೆಯೂ ಇಲ್ಲ. ಕೆಲವು ಸಾಮಾನುಗಳಿಗೆ ಕ್ರಯವೇರಿದಾಗ ಅವುಗಳ ಗೋಜಿಗೆ ಜನರು ಹೋಗುವುದಿಲ್ಲ. ಬೀಡಿಯ ವಿಷಯದಲ್ಲಿ ಇಂತಹ ಕಷ್ಟವಿಲ್ಲ. ಬೆಂಕಿಯ ಪೆಟ್ಟಿಗೆಗಳಿಗೆ ಕ್ರಯವೇರಿದಾಗ ಬೀಡಿಯ ಅಂಗಡಿಗಳಲ್ಲಿ ಕಾಗದದ ಚೂರುಗಳನ್ನು ಬೆಂಕಿಯ ಕಡ್ಡಿಯ ಬದಲಾಗಿ ಪ್ರಯೋಗಿಸುತ್ತಿದ್ದರು. ಅದನ್ನು ಹಚ್ಚಲಿಕ್ಕೆ ಒಂದು ಸಣ್ಣ ದೀಪವೂ ದಿವಾರಾತ್ರಿ ಉರಿಯುತ್ತಿತ್ತು. ಅದು ಈಗಲೂ ಉರಿಯುತ್ತಾ ಇದೆ. ಇದು ಬೆಳಕಿನಲ್ಲಿ ಬೆಳಗುವ ನಕ್ಷತ್ರ.

ಬೀಡಿಯನ್ನು ಸೇದುವವರಲ್ಲಿ ಮೈತ್ರಿಯು ಬೇಗನೆ ಬೆಳೆಯುತ್ತದೆ. ಒಂದು ಸಲ ಎರಡು ಬಾಯಿಯಲ್ಲಿರುವ ಎರಡು ಬೀಡಿಗಳು ಒಂದೇ ಕಡ್ಡಿಯಿಂದ ಬೆಳಗಿಸಲ್ಪಟ್ಟರೆ ಸಾಕು. ಆ ನಿಮಿಷದಲ್ಲಿಯೇ ಮೈತ್ರಿಯ ಬೀಜವು ಬಿತ್ತಿದಂತಾಯಿತು. ಅನಂತರ ಮಿತ್ರತ್ವವು ಬಹು ವೇಗದಿಂದ ಮುಂದುವರಿಯುತ್ತದೆ. ಏಕೆಂದರೆ ಬೀಡಿಯೆಂಬುದು ಒಂದು ಬಗೆಯ ಮೋಹನಾಸ್ತ್ರ. ಬೀಡಿಯನ್ನು ಸೇದುವವರಲ್ಲಿ ಭ್ರಾತೃತ್ವವೂ ಅಂಕುರಿಸುತ್ತದೆ. ಕೆಲವು ಸಲ ಒಂದೇ ಬೀಡಿಯನ್ನು ಇಬ್ಬರು ಸೇದುವುದುಂಟು. ಇದು ನಿಜವಾದ ಭ್ರಾತೃಭಾವವಲ್ಲದಿದ್ದರೆ ಮತ್ತಾವುದು?

ಬೀಡಿಯನ್ನು ಸೇದಿದ ನಂತರ ನಿಷ್ಪ್ರಯೋಜಕವೆಂದು ತ್ಯಜಿಸಿದ ಅದರ ಸಣ್ಣ ತುಂಡುಗಳು ಕೂಡ ನಿಜವಾಗಿ ನಿಷ್ಪ್ರಯೋಜಕವೆಂದು ಹೇಳಲು ನಮಗೆ ಧೈರ್ಯವು ಸಾಲದು. ಏಕೆಂದರೆ ಬೀಡಿಯ ಅಭ್ಯಾಸವನ್ನು ಪ್ರಾರಂಭಿಸುವವರಿಗೆ ಇದೊಂದು ಉತ್ತಮ ಸಾಧನವಾಗಿರುತ್ತದೆ. ಆದುದರಿಂದಲೇ ಇಂತಹ ತುಂಡುಗಳನ್ನು ಹೆಕ್ಕಿ ಶೇಖರಿಸುವವರಿದ್ದಾರೆ.

ಹೀಗೆ ತುಂಡುಗಳನ್ನು ಶೇಖರಿಸುವವರ ನೆನಪಾಗುವಾಗ ಒಂದು ಹಳೆಯ ಪುರಾಣದ ಕಥೆಯೂ ನೆನಪಿಗೆ ಬರುತ್ತದೆ. ಅದು ಬೀಡಿಯ ವಿಷಯವೇ. ಹಿಂದೆ ದ್ವಾಪರಯುಗದಲ್ಲಿ ಒಬ್ಬ ಮುನಿಯು ಬ್ರಹ್ಮನ ತಪಸ್ಸು ಮಾಡಿ ಆ ಜಗತ್ಪಿತನನ್ನು ತೃಪ್ತಿಗೊಳಿಸಿದನಂತೆ. ಅನಂತರ ವರವನ್ನು ಬೇಡುವಾಗ ಆ ಮುನಿಯು ಒಂದು ಹೊಸಮಾದರಿಯ ವರವನ್ನು ಬೇಡಿದನಂತೆ. "ಓ ದೇವ! ನನಗೆ ಇಹಲೋಕದಿಂದ ಅಗಲುವಿಕೆಯಿಲ್ಲದ ಮೋಕ್ಷವನ್ನು ಕೊಡು! ಆಗ ನನಗೆ ತೃಪ್ತಿಯಿದೆ" ಎಂದು ಕೇಳಿಕೊಂಡನಂತೆ. ಆಗ ಬ್ರಹ್ಮನು ಸ್ವಲ್ಪ ಆಲೋಚನಾಪರನಾಗಿ ಕಡೆಗೆ ಕಲಿಯುಗದಲ್ಲಿ ಈತನು ಬೀಡಿಯಾಗಿ ಜನ್ಮವೆತ್ತಲೆಂದು ಹರಸಿದನಂತೆ. ಆದರಿಂದಲೇ ಬೀಡಿಯೆಂಬುದು ಆ ಮುನಿಯ ಕಲಿಯುಗದವತಾರವೆಂದು ನಾವು ಗ್ರಹಿಸಬೇಕು. ಅದು ಎಂದೂ ಅಳಿಯದ ಸಾಧನ; ಮತ್ತು ಭ್ರಾತೃಭಾವದಿಂದಲೇ ಯಾವ ಬೈರಾಗಿಯಾದರೂ ಬೀಡಿಯ ವಿಷಯ ವೈರಾಗ್ಯವನ್ನು ತಾಳುವುದನ್ನು ನಾವು ಕಾಣುವುದಿಲ್ಲ. ಬೇಕಾದರೆ ಬೈರಾಗಿಗಳು ಬಂದು ಉಳಕೊಳ್ಳುವ ಧರ್ಮಸಾಲೆಯನ್ನು ಒಂದು ಕತ್ತಲೆಯ ರಾತ್ರಿಯಲ್ಲಿ ಸಂದರ್ಶಿಸಿರಿ. ಅಲ್ಲಿಯೂ ಮೈದಾನಿನ ಕೆಂಪು ನಕ್ಷತ್ರಗಳ ನೋಟವು ನಿಮಗೆ ಕಾಣದಿರದು.

ಹಿಂದೂದೇಶದಲ್ಲಿ ಕಾಗದದ ಕೈಗಾರಿಕೆ!

ಹುಲ್ಲು ಮತ್ತು ಬಿದಿರಿನಿಂದ ಉತ್ಕೃಷ್ಟ ಕಾಗದ.

ಪರದೇಶಗಳಿಂದ ಲಕ್ಷಗಟ್ಲೆ ಟನ್ ಕಾಗದವು ಹಿಂದೂದೇಶಕ್ಕೆ ಪ್ರತಿ ವರ್ಷವೂ ಆಮದಾಗುತ್ತಿದೆ. ದೇಶದಲ್ಲಿನ ಕಾಗದದ ಉತ್ಪತ್ತಿಯು ಇಲ್ಲಿ ಸಾಕಾಗುವುದಿಲ್ಲ. ಉತ್ಕೃಷ್ಟ ತರಗತಿಯ ಕಾಗದವನ್ನು ಇಲ್ಲಿ ತಯಾರುಮಾಡಬಹುದು. ಕಾಗದ ತಯಾರಿಗೆ ಈಗ ಉಪಯೋಗಿಸುವ ಬಿದಿರು 40,000 ಟನ್ ಮಾತ್ರ. ಇನ್ನೂ ಐದು ಲಕ್ಷ ಟನ್ ಬಿದಿರು ಉಳಿಕೆಯಿದೆ.



ಬಿದಿರನ್ನು ಜಜ್ಜಿ ಚೂರುಮಾಡುವ ಯಂತ್ರಗಳು

ಕಾಗದ ತಯಾರಿಯು ಹಿಂದೂದೇಶದಲ್ಲಿ ಅತಿ ಪುರಾತನ ಕಾಲದಿಂದಲೂ ಇತ್ತೆನ್ನುವರು. ಆದರೆ, ಅದು ಎಲ್ಲಿ ಆರಂಭವಾಯಿತು ಎಲ್ಲಿ ಮುಗಿಯಿತು ಎಂದು ಸ್ಪಷ್ಟವಾಗಿ ಹೇಳಬರುವುದಿಲ್ಲ. ಅಂತೂ. ಇಲ್ಲಿ ಕೈಯಿಂದ ಮಾಡಿದ ಕಾಗದವಿತ್ತು: ಮೊಗಲರ ಕಾಲದಲ್ಲಿದ್ದ ಕುರುಹುಗಳು ಈಗಲೂ ಇರುವುವು. ಆಧುನಿಕ ಕಾಗದ ಕೈಗಾರಿಕೆಯು ಮಾತ್ರ 1867ರಿಂದ ಇಲ್ಲಿ ಆರಂಭವಾಯಿತೆನ್ನಬಹುದು.

ಹಿಂದೂದೇಶದ ಮೊದಲನೇ ಕಾಗದದ ಗಿರಣಿಯು, 1867ರಲ್ಲಿ ಹೂಗ್ಲಿ (ಕಲ್ಕತ್ತಾ ಬಳಿ) ಸ್ಥಾಪಿಸಲ್ಪಟ್ಟಿತು. ಈ ಗಿರಣಿಯು ರಚನೆಯಾಗಿ ಹದಿನೈದು ವರ್ಷಗಳ ವರೆಗೆ ಹಿಂದೂದೇಶದಲ್ಲಿ ಇತರ ಕಾಗದದ ಗಿರಣಿಗಳು ಜನಿಸದಿದ್ದರೂ, ಈ ಗಿರಣಿಯಿಂದ ಕಾಗದದ ಗುಣದಲ್ಲಾಗಲಿ ವ್ಯಾಪಾರದಲ್ಲಾಗಲಿ ವಿಶೇಷ ಪ್ರಗತಿ ತೋರಲಾಗಲಿಲ್ಲ. 1879ರಲ್ಲಿ ಉತ್ತರ ಹಿಂದೂಸ್ಥಾನದಲ್ಲಿ ಎರಡನೇ ಕಾಗದದ ಗಿರಣಿಯೊಂದು ಸ್ಥಾಪನೆಯಾಯಿತು. 1882ರಲ್ಲಿ ಮೂರನೆ ಗಿರಣಿಯೊಂದು, ಲಿಮಿಟೆಡ್ ಸಂಸ್ಥೆಯಾಗಿ ಸ್ಥಾಪನೆಯಾಯಿತು. ಈ ಮೂರು ಗಿರಣಿಗಳು, ಗ್ವಾಲಿಯರ್ ಮತ್ತು ಪೂನೆಗಳಲ್ಲಿ ತಲೆಯೆತ್ತಿದ ಮತ್ತೆರಡು ಪುಟ್ಟ ಗಿರಣಿಗಳೊಡನೆ ಅಸ್ತಿತ್ವಕ್ಕಾಗಿ ಹೋರಾಡಿದುವು.

ಇಷ್ಟು ಕಾಲವೂ ವಿದೇಶೀ ಕಾಗದವು ಇಲ್ಲಿ ಧಾರಾಳವಾಗಿ ಬರುತ್ತಿತ್ತು. ವಿದೇಶೀ ಕಾಗದದ ತರಗತಿಯು ಉತ್ಕೃಷ್ಟವಿತ್ತು: ಬೆಲೆಯು ಕಡಿಮೆಯಿತ್ತು. ಹಿಂದೂದೇಶದಲ್ಲಿ ಹೊಸತಾಗಿ ತಲೆಯೆತ್ತಿದ ಈ ಉದ್ಯಮದ ಕಡೆಗೆ ಸರಕಾರದ ಲಕ್ಷ್ಯ ಹೋಗಲಿಲ್ಲ: ಅಥವಾ ಸರಕಾರವು ವಿಶೇಷ ಪ್ರೋತ್ಸಾಹ ಕೊಡಲಿಲ್ಲ. ಹೀಗಾಗಿ ಈ ಉದ್ಯಮವು ಮೃತಜೀವನ ನಡಿಸಿಯೇ ಇತ್ತು.

1925ರಲ್ಲಿ, ಹಿಂದೂದೇಶದ ಕಾಗದದ ಕೈಗಾರಿಕೆಯವರು, ತಮ್ಮನ್ನು ವಿದೇಶೀ ಸ್ಪರ್ಧೆಯಿಂದ ರಕ್ಷಿಸಲು, ಬಲವಾದ ಸುಂಕವನ್ನು ವಿದೇಶೀ ಕಾಗದದ ಆಯಾತದ ಮೇಲೆ ಹೊರಿಸಬೇಕೆಂದು ಸರಕಾರಕ್ಕೆ ನಿವೇದಿಸಿಕೊಂಡರು. ಆಗ 9 ಗಿರಣಿಗಳು ತಲೆಯೆತ್ತಿದ್ದುವೆನ್ನಬಹುದು. ಇದರಿಂದ ವಿಶೇಷ ಪ್ರಯೋಜನ ದೊರೆಯಲಿಲ್ಲ. ಅಲ್ಲಿಂದಿತ್ತೀಚೆ, 1940ರ ವರೆಗೆ ಎರಡು ಗಿರಣಿಗಳು ಮಾತ್ರ ಹೆಚ್ಚಿವೆ. ಈಗ ಹಿಂದೂದೇಶದಲ್ಲಿರುವ ಕಾಗದದ ಗಿರಣಿಗಳು ಹನ್ನೊಂದು ಮಾತ್ರ. ಕಾಗದ ತಯಾರಿಯಲ್ಲಿ ಉತ್ತಮ ತರಗತಿಯ ಉಪಕರಣಗಳಿಲ್ಲದೆಯೋ ತಜ್ಞರಿಲ್ಲದೆಯೋ-ಸರಕಾರದ ಸರ್ವತೋಮುಖ ಸಹಾಯವಿಲ್ಲದೆಯೋ ಈ ಕೈಗಾರಿಕೆಯು ಇನ್ನೂ ಮುಂದಡಿಯಿಟ್ಟಿಲ್ಲ.

ಈ ವರೆಗೆ ಕಾಗದದ ಗಿರಣಿಗಳು, ತಮ್ಮ ಉತ್ಪತ್ತಿಯ ವಿಕ್ರಯಕ್ಕಾಗಿ, ದೇಶದೊಳಗೇ ಸಂತೆಗಳನ್ನು ನಿರೀಕ್ಷಿಸಿರುವರಲ್ಲದೆ, ಹೊರದೇಶಗಳಿಗೆ ಕಳುಹುವ ಸುಪರಿಸ್ಥಿತಿಯನ್ನೂ ಒದಗಲಿಲ್ಲ. ಆದರೆ ಈ ಕೈಗಾರಿಕೆಯು ದೇಶದ ಪ್ರಾಮುಖ್ಯ ಕೈಗಾರಿಕೆಗಳಲ್ಲೊಂದಾಗುವ ಸಲ್ಲಕ್ಷಣಗಳು ಈಗ ತೋರಹತ್ತಿವೆ.

ಕಚ್ಚಾ ಮಾಲುಗಳು

ಹಿಂದೂದೇಶದಲ್ಲಿನ ಕಾಗದದ ಕೈಗಾರಿಕೆಯು, ತನ್ನ ಶೈಶವಾವಸ್ಥೆಯಲ್ಲಿ, ಉತ್ಕೃಷ್ಟ ತರಗತಿಯ ಬಿಳಿ ಕಾಗದದ ತಯಾರಿಯು ತನ್ನಿಂದಾಗದ ಕೆಲಸವೆಂದು ತಿಳಕೊಂಡಿತ್ತು. ಏಕೆಂದರೆ, ಆಗ, ಕಾಗದದ ತಯಾರಿಗೆ ಬೇಕಾಗುವ ಕಚ್ಚಾ ಮಾಲುಗಳಿಗಾಗಿ ಕೇವಲ ಹಳೆ ಬಟ್ಟೆಗಳ ಚಿಂದಿ ಮತ್ತು ಚೂರು ಕಾಗದದ ಮೇಲೆ ಹೊಂದಿಕೊಂಡಿರಬೇಕಾಗಿತ್ತು. ಆದರೆ ಈ ಪರಿಸ್ಥಿತಿಯು ಬೇಗನೆ ಪರಿವರ್ತನೆಯಾಯಿತು. ರೌಟ್ಲೆಜ್ಜನು, 1860ರಲ್ಲಿ, 'ಎಸ್ಪಾರ್ಟೋ' ಎಂಬ ಒಂದು ಜಾತಿಯ ಹುಲ್ಲನ್ನು ಕಾಗದಕ್ಕೆ ಉಪಯೋಗಿಸಬಹುದೆಂಬುದನ್ನು ರುಜುಗೊಳಿಸಿದನು. 1875 ಮತ್ತು 1879ರಲ್ಲಿ, ಬಿದಿರುಗಳಿಂದ ಕಾಗದ ತಯಾರಿಸಬಹುದೆಂಬ ಶೋಧನೆಯಾಯಿತು. ಮೊದಮೊದಲು ಇಲ್ಲಾದ ಶೋಧನೆಗಳ ವಿಷಯ, ಇಷ್ಟು ಅಪೂರ್ಣ ದಾಖಲೆಗಳು ಮಾತ್ರ ದೊರೆತಿವೆ. ಎರಡು ಗಿರಣಿಗಳೇನೊ 'ಮುಂಜ್' ಮತ್ತು 'ಸಬಾಯಿ' ಎಂಬ ಹುಲ್ಲನ್ನು ಕಾಗದದ ತಯಾರಿಗೆ ಉಪಯೋಗಿಸಿದುವು. ಬಿದಿರುಗಳಿಂದ ಕಾಗದ ತಯಾರಿಸಲ್ಪಡಬಹುದೆಂಬ ರೌಟ್ಲೆಜ್ಜನ ಶೋಧನೆಗೆ ಆಗ ಹೆಚ್ಚಿನ ಬೆಲೆ ದೊರೆತಂತೆ ತೋರುವುದಿಲ್ಲ. ಆಗಲೇ ಬಿದಿರುಗಳನ್ನು ಕಾಗದಕ್ಕೆ ಉಪಯೋಗಿಸುವುದರ ಕಡೆಗೆ ಹಿಂದೀಯರ ಲಕ್ಷ್ಯ ಹೋಗಿದ್ದರೆ, ದೇಶದ ಕಾಗದದ ಕೈಗಾರಿಕೆಯು, ಬಹುಮುಖ ಅಭಿವೃದ್ಧಿ ಹೊಂದಬಹುದಿತ್ತೋ ಏನೋ. ಹೇಗೂ, ಮುಂದೆ ಕೆಲಕಾಲದಲ್ಲಿ ಬಿದಿರಿನ ಉಪಯೋಗವು ಸ್ವಲ್ಪ ಪ್ರಚಾರಹೊಂದಿತು.


ಹಿಂದೂದೇಶದಲ್ಲಿ, ಕಾಗದದ ತಯಾರಿಗೆ ಬೇಕಾಗುವ ಬಿದಿರು ಸುಮಾರು 600,000 ಟನ್ ದೊರೆಯಬಹುದೆಂದು ಅಂದಾಜಾಗಿದೆ. ಬಿದಿರು ಬೆಳೆಯುವ, ಶೋಧನೆಯಾಗಿರದ ಸ್ಥಳಗಳೆಷ್ಟೋ ಇವೆ.

ಒಂದು ಟನ್ ಕಾಗದ ತಯಾರಿಸಬೇಕಾದರೆ 2·38 ಟನ್ ಬಿದಿರು ಬೇಕಾಗುತ್ತದೆ. ಈಗ ಸದ್ಯಕ್ಕೆ ನಮ್ಮ ಗಿರಣಿಗಳು ತಯಾರಿಸುವ [illegible] 40,000 [illegible] ಟನ್ ಬಿದಿರು ಅವಶ್ಯವಿದೆ. ಹೀಗಾಗಿ, ಕಾಗದ ತಯಾರಿಯನ್ನು [illegible] ದಾದರೆ, ಉಳಿಕೆಯ ಬಿದಿರು ಎಷ್ಟೋ ಇದೆ. ಬರ್ಮಾದಲ್ಲಿ, ಹಿಂದೂದೇಶಕ್ಕಿಂತ ಹೆಚ್ಚಿನ ಬಿದಿರು ದೊರೆಯುತ್ತಿದೆ. ಆದರೆ, ಬರ್ಮಾದಲ್ಲಿ ಕಾಗದದ ಗಿರಣಿಗಳು ಮಾತ್ರ ಇಲ್ಲ.

ಹಿಂದೂದೇಶದಲ್ಲಿ ಕಾಗದ ತಯಾರಿಯನ್ನು ಹೆಚ್ಚಿಸಲು ಧಾರಾಳವಾದ ಇಂಬು ಇದೆ. ಇಲ್ಲಿಗೆ ಬೇಕಾಗುವ ಕಾಗದದಲ್ಲಿ ಎರಡು ಲಕ್ಷಕ್ಕಿಂತಲೂ ಹೆಚ್ಚು ಟನ್ ಕಾಗದವು ಪರದೇಶಗಳಿಂದ ನಮಗೆ ಬರುತ್ತಿದೆ. 1938–39ನೇ ವರುಷದಲ್ಲಿ ಹಿಂದೂದೇಶಕ್ಕೆ ಆಮದಾದ ಕಾಗದದ ವಿವರ ಹೀಗಿದೆ:

	ಆಮದು	ಟನ್ನು
1)	ಮೆಕೆನಿಕಲ್ ವುಡ್‌ಪಲ್ಪ್ ಕಾಗದ	11,538
2)	ಹಳೆ ಪತ್ರಿಕೆ	17,384
3)	ಬರೆವ ಮತ್ತು ಮುದ್ರಣದ ಬಿಳಿ ಕಾಗದ	37,654
4)	ರಟ್ಟು ಇತ್ಯಾದಿ	27,057

ಹಿಂದೂದೇಶದ ತಯಾರಿಯು, ವರುಷಕ್ಕೆ ಸುಮಾರು 60,000 ಟನ್ ಇರಬಹುದು. ಈ ಕಾಗದ ಕೈಗಾರಿಕೆಯು ತೀವ್ರ ಬೆಳೆಯಬೇಕಾಗಿದೆ. ಯುದ್ಧ ಪರಿಸ್ಥಿತಿಯು ದೇಶದ ಕಾಗದ ಕೈಗಾರಿಕೆಯ ಬೆಳವಣಿಗೆಗೆ ಸುಸಂಧಿಯೊದಗಿಸಿದೆ. ಪರದೇಶಗಳ ಕಾಗದವೀಗ ಚೂರೂ ಬರುತ್ತಿಲ್ಲವೆಂಬಷ್ಟಕ್ಕೆ ಪರಿಸ್ಥಿತಿಯಿದೆ. ದೇಶೀ ಕಾಗದಕ್ಕೆ, ಪೂರೈಕೆಗಿಂತ ಎಷ್ಟೋ ಹೆಚ್ಚು ಪಾಲು ಬೇಡಿಕೆಯಿದೆ. ಹೊಸ ಗಿರಣಿಗಳ ರಚನೆಗೆ ಯಂತ್ರೋಪಕರಣಗಳು ದೊರೆವಂತಿದ್ದರೆ ಕಾಗದದ ಕೈಗಾರಿಕೆಗೆ ಈಗ ತುಂಬ ಅನುಕೂಲತೆ ದೊರೆವುದು.



ಕಾಗದವು ಸುರುಳಿಯಾಗಿ, ರೀಲುಗಳಾಗಿ ಸುತ್ತಲ್ಪಟ್ಟಿದೆ. ಇಂತಹ "ರೀಲು"ಗಳನ್ನು ಮತ್ತೆ ಬೇಕಾದ ಆಕಾರಕ್ಕೆ ಕಡಿದು, "ರೀಮು"ಗಳನ್ನು ಕಟ್ಟುವರು.

ವ್ಯಾಪಾರ ವೃತ್ತಿಯಿಂದ ಸುಖಜೀವನ

ಜೀವನದಲ್ಲಿ ಸುಖವನ್ನು ಸಂಪಾದಿಸಬೇಕಾದರೆ, ಪ್ರತಿಯೊಬ್ಬನಿಗೆ ಒಂದು ವ್ಯಾಪಾರ, ಒಂದು ಉದ್ಯೋಗ ಅಥವಾ ಒಂದು ವೃತ್ತಿಯು ಬೇಕಾಗಿದೆ. ಪರಂತು ಹೀಗೆ ವ್ಯಾಪಾರ, ಉದ್ಯೋಗ ವೃತ್ತಿಗಳಲ್ಲಿ ತೊಡಗಿರುವವರೆಲ್ಲರೂ ಜೀವನದ ಯತಾರ್ಥ ಸುಖವನ್ನು ಅನುಭವಿಸುವದಿಲ್ಲ. ಪ್ರಪಂಚದಲ್ಲಿ ಜೋಲು ಮೋರೆ ಹಾಕಿಕೊಂಡಿರುವ ಜನರೇ ಬಹಳವಾಗಿದ್ದಾರೆ. ಹಸನ್ಮುಖಿಗಳೂ ಸಂತೋಷಚಿತ್ತರೂ ಆಗಿರುವ ಜನರು ಪ್ರಪಂಚದಲ್ಲಿ ಅತ್ಯಂತ ವಿರಳವಾಗಿರುವರು.

"ಯದ್ಭಾವೋ ತದ್ಭವಂತೇ":—ಹೀಗಾಗಲು ಕಾರಣವೇನು? ಜನರು ಊಹಿಸಿರುವಂತೆ ಈ ಪ್ರಪಂಚವೆಂಬುದೆಲ್ಲ ದುಃಖಮಯವಾಗಿರುವದೆ? ದುಃಖಮಯವಾದ ಪ್ರಪಂಚವನ್ನು ನಿರ್ಮಿಸಿ, ಸೃಷ್ಟಿಕರ್ತನಾದ ಪರಮಾತ್ಮನು ಯಾವ ಉದ್ದೇಶವನ್ನು ತಾನೆ ಸಾಧಿಸಬಹುದು? ಪರಮಾತ್ಮನು ಸತ್ಯಸ್ವರೂಪಿಯು, ಮಂಗಳಕಾರಕನು ಮತ್ತು ಸುಂದರಮೂರ್ತಿಯು ಆಗಿದ್ದಾನೆಂದು ಹೇಳುವರು. ಅದು ಸುಳ್ಳೆಂದು ಯಾರೂ ಹೇಳುವದಿಲ್ಲ. ಹಾಗೆಂದ ಮೇಲೆ ಅಂಥಾ ಪರಮಾತ್ಮನಿಂದ ಸೃಷ್ಟಿಸಲ್ಪಟ್ಟ ಪ್ರಪಂಚವು ದುಃಖಮಯವಾಗುವದು ಅಸಾಧ್ಯ. ಪರಮಾತ್ಮನಂತೆ ಪರಮಾತ್ಮ ನಿರ್ಮಿತ ಪ್ರಪಂಚವೂ ಸುಖಕರವಾಗಿರಬೇಕು. ನಾವು ಮಾತ್ರ ಈ ಪ್ರಪಂಚವನ್ನು ನಶ್ವರ, ದುಃಖಮಯ ಮತ್ತು ಕುರೂಪವೆಂದು ಭಾವಿಸಿದ್ದೇವೆ. "ಯದ್ಭಾವೋ ತದ್ಭವಂತೆ" ನಮ್ಮ ಭಾವನೆಯಂತೆ ನಮಗೆ ನಮ್ಮ ಪ್ರಪಂಚವು ತೋರುತ್ತದೆ. ಇದು ಸಹಜವೂ ಸ್ವಾಭಾವಿಕವೂ ಆಗಿದೆ.

ವೃತ್ತಿ ಕ್ಷೇತ್ರ ವೃತ್ತಿಯಲ್ಲಿ ತೃಪ್ತಿ:—ಜೀವನಕ್ಕೋಸುಗ ಮನುಷ್ಯನು ಯಾವ ರಿಂದ ... ನೌಕರಿ ಚಾಕರಿಯನ್ನು ಕೈಕೊಂಡಿದ್ದರೂ ಅವನಿಗೆ ಅದ ... ಸಂತುಷ್ಟಿಯೂ ಸುಖವೂ ಪ್ರಾಪ್ತವಾಗಬೇಕು. ಯಾವ ವೃತ್ತಿ ಉದ್ಯೋಗ ...ಲ್ಲಿಯೂ ಕೊರತೆ ದೋಷ ಇರುವದಿಲ್ಲ. ಲೋಪ ದೋಷ ಕುಂದು ಕೊರತೆಗಳು ಇರುವದೆಲ್ಲ, ನಮ್ಮ ಹೃದಯದಿಂದ ಹುಟ್ಟುವ ಭಾವನೆಗಳಲ್ಲಿ, ಮನಸ್ಸಿನಿಂದ ಹುಟ್ಟುವ ವಿಚಾರಗಳಲ್ಲಿ ನಾವು ಕುಂದುಳ್ಳವರಾಗಿರುವದರಿಂದ, ದೋಷಿಗಳಾಗಿರುವದರಿಂದ ನಮ್ಮ ವೃತ್ತಿ ಉದ್ಯೋಗಗಳು ನಮಗೆ ವಾಂಛಿತ ಫಲವನ್ನು ಕೊಡುವದಿಲ್ಲ: ನಾವು ಹೀನ, ಹಾಳು ಎಂದು ತಿಳಕೊಂಡಿರುವ ವೃತ್ತಿ ಉದ್ಯೋಗಗಳನ್ನು ಕೈಕೊಂಡವರೂ ಜೀವನ ಸಾಫಲ್ಯವನ್ನು ಪಡೆದ ಉದಾಹರಣೆಗಳು ಪುರಾಣಗಳಲ್ಲಿ ಮಾತ್ರವಲ್ಲ, ಇತಿಹಾಸಗಳಲ್ಲಿಯೂ ಧಾರಾಳವಾಗಿ ದೊರೆಯುತ್ತವೆ. ನಮ್ಮ ಅತ್ಯಂತ ಪರಿಚಯದವರನ್ನು ತೆಗೆದುಕೊಂಡರೂ, ಕನಕನು ಯಾರು? ಕಬೀರನು ಯಾರು? ಅವರು ಯಾವ ವೃತ್ತಿ ಉದ್ಯೋಗಗಳನ್ನು ಕೈಕೊಂಡವರು? ಆದರೂ ಅವರು ತಮ್ಮ ವೃತ್ತಿಯ ಮೂಲಕವೇ ಜೀವನಸುಖವನ್ನು ಪಡೆಯಲಿಲ್ಲವೆ? ಅಮರಕೀರ್ತಿಯನ್ನು ಸಂಪಾದಿಸಲಿಲ್ಲವೆ? ನಾವು ವ್ಯಾಪಾರಿಗಳಾಗಿರಬಹುದು; ಕೈಕಾರಿಕೆಯವರಾಗಬಹುದು: ಬೇಸಾಯದವರಾಗಬಹುದು ಅಥವಾ ಇತರ ವೃತ್ತಿ ಉದ್ಯೋಗ, ನೌಕರಿ ಚಾಕರಿಗಳನ್ನು ಅವಲಂಬಿಸಿರಬಹುದು. ಯಾವ ಸ್ಥಿತಿಯಲ್ಲಿದ್ದರೂ, ಯಾವ ಸ್ಥಾನದಲ್ಲಿದ್ದರೂ ಜೀವನಸುಖವನ್ನು ಸಂಪಾದಿಸಲಿಕ್ಕೆ ಪ್ರತಿಯೊಬ್ಬನಿಗೆ ಸಾಧ್ಯವಿದೆ. ಪ್ರತಿಯೊಬ್ಬನು ಜೀವನವನ್ನು ಸಫಲ ಮಾಡಿಕೊಳ್ಳಬಹುದು. ಅದಕ್ಕೆ ಮಾತ್ರ ಒಂದು ರೀತಿಯಿಂದ ನಮ್ಮ ಹೃದಯ ಭಾವನೆ, ಮನೋಗತಿಗಳು ಬದಲಾಗುವದು ಅತ್ಯಂತ ಆವಶ್ಯಕವಾಗಿರುವದು.

ಜೀವನಸುಖದ ಒಂದೇ ಮಾರ್ಗ:—ಅಂಥ ಜೀವನಸುಖವನ್ನು ಸಂಪಾದಿಸಲಿಕ್ಕೆ ಒಂದೇ ಒಂದು ಮಾರ್ಗವಿದೆ. ಅದನ್ನು ಶ್ರೀ ಕೃಷ್ಣ ಭಗವಾನನು ಭಗವದ್ಗೀತೆಯಲ್ಲಿ ತೋರಿಸಿಕೊಟ್ಟಿದ್ದಾನೆ.

> ಕರ್ಮಣ್ಯೇ ವಾಧಿಕಾರಸ್ತೇ, ಮಾಫಲೇಷು ಕದಾಚನ ।
>
> ಮಾಕರ್ಮಫಲ ಹೇತುರ್ಭೂರ್ಮಾತೇ ಸಂಗೋಸ್ತ್ವ ಕರ್ಮಣಿ ॥

ಅಂದರೆ "ಕರ್ಮಮಾಡುವ ಬಗ್ಗೆ ಮಾತ್ರ ನಿನಗೆ ಅಧಿಕಾರವಿದೆ. ಫಲದ ಬಗ್ಗೆ ನಿನಗೆ ಅಧಿಕಾರವಿಲ್ಲ. ಕರ್ಮಫಲದ ಆಶೆ ಉಳ್ಳವನಾಗಬೇಡ. ಕರ್ಮ ಮಾಡದಿರುವದರಲ್ಲಿ ಪ್ರೀತಿಯನ್ನಿಡಬೇಡ: ಅಂದರೆ ಕರ್ಮಹೀನನಾಗಬೇಡ." ಫಲಾಪೇಕ್ಷೆಯನ್ನು ಇಟ್ಟುಕೊಳ್ಳದೆ. ಕೈಹಿಡಿದ ಕೆಲಸವನ್ನು ಮನಸ್ಸು ಕೊಟ್ಟು ಮಾಡುವದು, ಸಾಧಿಸುವದು—ಇದುವೇ ಜೀವನಸುಖವನ್ನು ಸಂಪಾದಿಸುವ ಉಪಾಯವಾಗಿರುವದು. ಮಾಡುವ ಕೆಲಸದಲ್ಲಿ ಸ್ವಾರ್ಥ, ಮರೆ, ಮೋಸ ಮೊದಲಾದವು ಎಡೆಗೊಡದು. ತ್ರಿಕರಣ—ಮನೋವಾಕ್ಕಾಯ—ಶುದ್ಧಿಯಿಂದ ಪ್ರತಿಯೊಂದು ...ವನ್ನು ಮಾಡಿಕೊಂಡು ಹೋಗಬೇಕು.


... ಒಂದೊಂದು ಉದ್ದೇಶವನ್ನು ಇಟ್ಟುಕೊಂಡು ಪ್ರತಿಯೊಂದು ಜೀವಿಯು ಹುಟ್ಟುತ್ತದೆ. ತಾನು ಹುಟ್ಟಿದ ಉದ್ದೇಶವನ್ನು ತಿಳಕೊಂಡು ಪ್ರತಿಯೊಬ್ಬನು ಕೆಲಸದಲ್ಲಿ ಪ್ರವೃತ್ತನಾಗಬೇಕು. ಯಾವ ಕೆಲಸವನ್ನೂ ಮಾಡದೆ ಇರುವದು ಯಾರಿಂದಲೂ, ಯಾವುದರಿಂದಲೂ ಸಾಧ್ಯವಲ್ಲ. ಪ್ರಪಂಚವೆಲ್ಲವೂ ಕ್ರಿಯಾತ್ಮಕವಾಗಿದೆ. ಆದ್ದರಿಂದ ಕ್ರಿಯಾಶೀಲನಾಗಿ ಇರುವದು ಮಾನವೋಚಿತ ಧರ್ಮವು.

ಕೆಲಸದಲ್ಲಿ ಪ್ರಾಮಾಣಿಕತೆ, ಆಸಕ್ತಿ—ಆದರೆ ಮನುಷ್ಯನು ಸ್ವೇಚ್ಛೆಯಂತೆ ಕೆಲಸ ಮಾಡಿಕೊಂಡು ಇರಲಿಕ್ಕೆ ಸ್ವತಂತ್ರನಾಗಿರುವನು. ಅವನು ಭಾಗ್ಯಾಧೀನ, ಅದೃಷ್ಟವಶನಾಗಿ ಇದ್ದಾನೆಂದು ಹೇಳುವದಾದರೂ ತನ್ನ ಭಾಗ್ಯ ಅದೃಷ್ಟಗಳನ್ನು ರೂಪಿಸುವವನು ಅವನೇ ಆಗಿದ್ದಾನೆ. ಅವನು ಮಾಡುವ ಕೆಲಸ ಕಾರ್ಯಗಳಿಂದ ಅವನ ಭಾಗ್ಯ ಅದೃಷ್ಟಗಳು ರೂಪುಗೊಳ್ಳುತ್ತವೆ. ಆದ್ದರಿಂದ ಕೆಲಸ ಕಾರ್ಯಗಳಲ್ಲಿ ಮೈಗಳ್ಳನಾಗಿರುವದು, ಹೃತ್ಪೂರ್ವಕವಾಗಿ ಕೆಲಸಗಳಲ್ಲಿ ಆಸಕ್ತನಾಗದಿರುವದು, ಮನಸ್ಸು ಕೊಟ್ಟು ಕೆಲಸ ಮಾಡದಿರುವದು, ಕೆಲಸಕಾರ್ಯಗಳಲ್ಲಿ ಸುಳ್ಳು, ಸ್ವಾರ್ಥ, ಮರೆ, ಮೋಸ ಮೊದಲಾದವನ್ನು ಇಟ್ಟುಕೊಳ್ಳುವದು—ಇವೆಲ್ಲಾ ಅವನ ದೌರ್ಭಾಗ್ಯ, ದುರದೃಷ್ಟಗಳ ಕಾರಣಗಳಾಗಿರುವವು. ಕೆಲಸಕ್ಕಾಗಿ ಕೆಲಸವನ್ನು ಮಾಡಬೇಕು. ಕೆಲಸದಲ್ಲಿ ಒಂದು ಬಗೆಯ ಸಂತೋಷವಿದೆ, ಆನಂದವಿದೆ. ಉದ್ಯೋಗಶೀಲನಾಗಿರುವವನಿಗೆ ಎಲ್ಲ ಪ್ರಕಾರಗಳ ಸುಖಗಳು ಪ್ರಾಪ್ತವಾಗುತ್ತವೆ. ಆದರೆ ನಾವು ಈ ಸುಖವನ್ನು ಹಂಚಿಕೊಂಡು ಅನುಭವಿಸಬೇಕು. ಎಲ್ಲ ಸುಖವು ತನಗೇ ಬೇಕೆಂದು ಕೆಲಸ ಕಾರ್ಯಗಳಲ್ಲಿ ತೊಡಗುವವನು ಯಾವ ಸುಖವನ್ನೂ ಪಡೆಯುವದಿಲ್ಲ. ಅವನು ಎಲ್ಲಾ ಸುಖಗಳಿಂದ ವಂಚಿತನಾಗುತ್ತಾನೆ. ಆದ್ದರಿಂದ ನಾವು ಮಾಡುವ ಪ್ರತಿಯೊಂದು ಕೆಲಸವು ಇತರರಿಗೆ ಸುಖದಾಯಕವಾಗಿರಬೇಕು. ಇಂಥ ಕೆಲಸಗಳ ಪರಿಣಾಮವು ನಮಗೆ ಸುಖವನ್ನು ಕೊಡುವದಾಗುತ್ತದೆ. ಇಂಥ ಒಂದು ಕೆಲಸದಿಂದ ನಮಗೇನು ಪ್ರಯೋಜನ? ಎಂದು ಪ್ರಶ್ನಿಸುವ ಬದಲಿಗೆ ಇಂಥ ಒಂದು ಕೆಲಸದಿಂದ ಇತರರಿಗೇನು ಪ್ರಯೋಜನವಿದೆ? ಎಂದು ಕೇಳುವಂತಿರಬೇಕು. ನಾವು ಮಾಡುವ ಕೆಲಸಗಳಿಂದ ಜಾತಿಯ, ಸಮಾಜದ, ರಾಷ್ಟ್ರದ, ಪ್ರಪಂಚದ ಕಲ್ಯಾಣವಾಗುತ್ತದೆ. ನಾವು ಪೂರ್ಣರಲ್ಲ. ಆದ್ದರಿಂದ ಯಾವ ಕೆಲಸದಲ್ಲಿಯೂ ವಾಂಛಿತ ಫಲವು ಸಂಪೂರ್ಣವಾಗಿ ದೊರೆಯುವದು ಅಸಂಭವವು. ಫಲಾಪೇಕ್ಷೆಯಿಲ್ಲದೆ ಕೆಲಸ ಮಾಡುವದೇ ವಿಹಿತವಾಗಿದೆ. ಆಗ ನಮ್ಮ ಕೆಲಸಗಳಲ್ಲಿ ಯಾವ ಫಲವು ದೊರೆಯದಿದ್ದರೂ, ನಮ್ಮ ಕೆಲಸಗಳನ್ನು ನಾವು ಮಾಡಿದ್ದೇವೆಂಬ ಸಂತೃಪ್ತಿ ಆನಂದಗಳಾದರೂ ನಮಗೆ ಸಿಕ್ಕುವವು. ಇವಾದರೂ ಅಲ್ಪವಲ್ಲ.

ಕೆಲಸಕ್ಕಾಗಿ ಕೆಲಸ:—ಕೆಲಸಕ್ಕಾಗಿ ಕೆಲಸ. ಪರಮಪದವಿಯು ದೊರೆಯಬೇಕಾದ್ದೇ ಕೆಲಸದ ಉದ್ದೇಶ. ಸಣ್ಣ ಪುಟ್ಟ ಉದ್ದೇಶಗಳನ್ನಿಟ್ಟುಕೊಂಡು ಕೆಲಸ ಕಾರ್ಯಗಳಲ್ಲಿ ತೊಡಗುವೆವಾದರೆ ಆ ಉದ್ದೇಶಗಳ ಸಾಧನೆಯಾದೊಡನೆ ನಾವು ಕೈಬೀಸಿ ತಿರುಗುವಂತಾಗುವದು. ಆ ಉದ್ದೇಶಗಳು ಸಾಧಿಸಲ್ಪಡದಿದ್ದರೂ ನಾವು ನಿರಾಶರಾಗುವೆವು. ಪರಮಪದವಿ, ಪರಮ ಸುಖದ ಪ್ರಾಪ್ತಿ ಇವೆರಡೂ ಸ್ಥಿತಿಗಳು ವಿಘ್ನಕಾರಿಗಳಾಗಿವೆ. ಆದ್ದರಿಂದ ಇಂಥ ವಿಷಯಗಳಲ್ಲಿ ಇಂಥ ಸಂದರ್ಭಗಳಲ್ಲಿ ಏನೂ ಸಿಕ್ಕದಾಗ ನಿರಾಶನಾಗಬಾರದು. ಸ್ವಲ್ಪ ಸಿಕ್ಕಿದಾಗ ಸಂತುಷ್ಟನಾಗಬಾರದು. ಪರಮಸುಖವು ಪ್ರಾಪ್ತವಾಗುವ ತನಕ ಕೆಲಸಮಾಡುತ್ತ ಇರಬೇಕು. ಇದನ್ನೇ ಫಲಾಪೇಕ್ಷೆಯಿಲ್ಲದೆ ಕೆಲಸಮಾಡುವದೆನ್ನುತ್ತಾರೆ. ಹೀಗೆ ಮಾಡುತ್ತಿರುವದರಿಂದಲೇ ನಮ್ಮ ಕಲ್ಯಾಣವಾಗುವದು. ಜಾತಿಯ, ಸಮಾಜದ, ರಾಷ್ಟ್ರದ ಮತ್ತು ಪ್ರಪಂಚದ ಉನ್ನತಿಯಾಗುವದು.

ಹಾಗಾದರೆ ವ್ಯಾಪಾರ ವೃತ್ತಿಯಿಂದ ಸುಖಜೀವನವು ಹೇಗೆ ಸಾಧ್ಯ? ತ್ರಿಕರಣ ಶುದ್ಧಿ ಬೇಕು: ಫಲಾಫಲಗಳ ಕಡೆಗೆ ದೃಷ್ಟಿ ಇರಬಾರದು. ಕೆಲಸಕ್ಕೆ ತಕ್ಕ ಫಲವು ಬರಬೇಕಾದ ಸಮಯದಲ್ಲಿ ತಾನಾಗಿ ಬರುವದು. ಅದು ನಾವು ಅಪೇಕ್ಷಿಸಿದ ಮಾತ್ರಕ್ಕೆ ಬರುವಂತಹದು ಆಗಿರುವದಿಲ್ಲ. ನಾವು ನಿರಾಶರೂ ನಿಷ್ಕ್ರಿಯರೂ ಆಗಿರಬಾರದು. ಸತ್ಯ ಧರ್ಮಕ್ಕೆ ಅನುಕೂಲವಾಗಿ ಕೆಲಸ ಕಾರ್ಯಗಳಲ್ಲಿ ತೊಡಗಬೇಕು. ಆಗ ನಮ್ಮ ಜೀವನವು ತಾನಾಗಿ ಸುಖಮಯವೂ ಸಫಲವೂ ಆಗುತ್ತದೆ.

—**ಕೆ. ಶ್ರೀನಿವಾಸ ಶೆಣೈ.**



ವ್ಯಾಪಾರ ಮತ್ತು ವ್ಯವಹಾರ ಸೌಕರ್ಯ!

ಹಿಂದೂದೇಶ ಮತ್ತು ಇತರ ದೇಶಗಳಲ್ಲಿ ಸರಕಾರದವರಿಗೆ ದೊರೆತ ಸೌಕರ್ಯಗಳೇನು?

(ಎನ್. ಬಿ.)

'ನಮ್ಮ ಹಳ್ಳಿಗಳ ಉದ್ಧಾರದ ವಿಚಾರದಲ್ಲಿ ವ್ಯಾಪಾರ ಮತ್ತು ವ್ಯವಹಾರ ಸೌಕರ್ಯಗಳ ಸಮಸ್ಯೆಯು ವಿಚಾರಾರ್ಹವಾಗಿದೆ. ರೈತರು ಬೆಳೆಸುವ ದವಸ ಧಾನ್ಯಗಳನ್ನೂ ತಯಾರಿಸುವ ಸಾಮಾನುಗಳನ್ನೂ ಸುಲಭವಾಗಿ ಸಂತೆಗೆ ಸಾಗಿಸಿ ಒಳ್ಳೆ ಬೆಲೆ ಬರುವಂತೆ ಮಾರಾಟಮಾಡುವುದಕ್ಕೆ ಸೌಕರ್ಯಗಳಿಲ್ಲದಿದ್ದರೆ, ಅವರ ಶ್ರಮವು ವ್ಯರ್ಥವಾಗುವುದು. ನಮ್ಮ ದೇಶದಲ್ಲಿ ವ್ಯಾಪಾರ ಸೌಕರ್ಯಗಳು ಸಮರ್ಪಕವಾಗಿಲ್ಲವೆಂದೇ ಹೇಳಬಹುದು. ಬ್ರಿಟಿಷರ ಆಡಳಿತದ ಫಲವಾಗಿ ಈಚೆಗೆ ಪ್ರಯಾಣ ಸೌಕರ್ಯಗಳು ಹೆಚ್ಚಿರುವುದು ನಿಜ. ರೈಲು ಮಾರ್ಗಗಳು, ಬಂಡಿಯ ಮಾರ್ಗಗಳು, ಹೆದ್ದಾರಿಗಳು ಇವು ಈಚೆಗೆ ಹೆಚ್ಚುತ್ತ ಬಂದಿವೆ. ಅದೇ ರೀತಿಯಲ್ಲಿ ರೈಲು, ಮೋಟರ್ ಇವುಗಳ ಸಂಚಾರವೂ ಹೆಚ್ಚಿದೆ. ಪೋಸ್ಟು, ಟೆಲಿಗ್ರಾಫ್. ಟೆಲಿಫೋನ್, ಆಕಾಶವಾಣಿ (Wireless Radio) ಮೊದಲಾದುವುಗಳ ಅನುಕೂಲತೆಯಿಂದ ವ್ಯವಹಾರ ಸೌಕರ್ಯಗಳ ವಿಷಯದಲ್ಲಿ ಪ್ರಗತಿಯುಂಟಾಗಿದೆ. ಏನಿದ್ದರೂ ವೃದ್ಧಿ ಹೊಂದುತ್ತಿರುವ ವ್ಯವಹಾರದ ಅನುಕೂಲ್ಯಗಳು ರೈತರ ದವಸ ಮಾರಾಟಕ್ಕೆ ಸಹಾಯಕವಾಗುವಂತೆ [illegible]. [illegible] ರೈತನ ಸಾಮಾನುಗಳಿಗೆ ನ್ಯಾಯವಾಗಿ ದೊರೆಯತಕ್ಕ ಪ್ರತಿಫಲವು ಅವನ ಕೈಗೆ ಬರುವುದಿಲ್ಲವೆಂದು ಹೇಳಬಹುದು.

ವ್ಯವಸಾಯದ ಪದಾರ್ಥಗಳಿಗೆ ದೊರೆಯುವ ಬೆಲೆಯಲ್ಲಿ ಶೇಕಡಾ 15ರಷ್ಟು ಅವುಗಳನ್ನು ಮಾರಾಟಮಾಡುವ ವರ್ತಕ ದಳ್ಳಾಳಿಗಳ ಕೈಗೆ ಸೇರುತ್ತಿರುವುದೆಂದು ತಿಳಿದುಬಂದಿದೆ. 1934—35ರಲ್ಲಿ ಒಳಗೆ ಮಾರಾಟವಾದ ವ್ಯವಸಾಯ ಉತ್ಪತ್ತಿಗಳ ಬೆಲೆ 711 ಕೋಟಿ ರೂಪಾಯಿಗಳು. ಆ ವರ್ಷವೊಂದರಲ್ಲಿಯೇ ಮಧ್ಯವರ್ತಿಗಳಾದ ವರ್ತಕರ ಲಾಭವು 106½ ಕೋಟಿ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ಅದಕ್ಕಿಂತಲೂ ಹೆಚ್ಚು ಅವರು ಪಡೆದಿರಬಹುದು. ಆದುದರಿಂದ ರೈತರಿಗುಂಟಾಗುವ ಈ ಬಗೆಯ ನಷ್ಟವನ್ನು ಹೋಗಲಾಡಿಸುವುದು ದೇಶಹಿತವನ್ನು ಬಯಸುವವನ ಕರ್ತವ್ಯವಾಗಿದೆ. ಅಕ್ಕಿ, ಗೋಧಿ ಮೊದಲಾದ ಧಾನ್ಯಗಳನ್ನೂ ಎಣ್ಣೆಯ ಬೀಜ, ಹತ್ತಿ. ನಾರು ಮೊದಲಾದ ಪದಾರ್ಥಗಳನ್ನೂ ಉಪಯೋಗ ಮಾಡುವ ಗಿರಾಕಿಗಳು ಕೂಡ ಈ ಬಗೆಯಲ್ಲಿ ರೈತರಿಗೂ, ತಮಗೂ ಉಂಟಾಗುವ ಆರ್ಥಿಕ ನಷ್ಟವನ್ನು ಹೋಗಲಾಡಿಸುವುದಕ್ಕೆ ಸಹಾಯ ಮಾಡಬೇಕು. ಗಿರಾಕಿಗಳು ರೈತರಿಂದಲೇ ನೆಟ್ಟಗೆ ಸಾಮಾನುಗಳನ್ನು ಪಡೆಯುವಂತೆ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನಿಸಿದರೆ, ಸಾಮಾನುಗಳನ್ನು ಅಗ್ಗವಾಗಿಯೂ ಪಡೆಯಬಹುದು.

ವ್ಯವಹಾರ ಸಮಿತಿಯವರೂ ಕೇಂದ್ರ ಬೇಂಕಿಂಗ್ ವಿಚಾರಣೆಯ ಸಮಿತಿಯವರೂ ನಮ್ಮಲ್ಲಿ ಪ್ರಚಾರವಾಗಿರುವ ಮಾರಾಟ ವ್ಯವಸ್ಥೆಯ ಕುಂದುಕೊರತೆಗಳನ್ನು ಒತ್ತಿ ಹೇಳಿದ್ದಾರೆ. ಅಂಥ ಕೊರತೆಗಳನ್ನು ನಿವಾರಿಸುವುದಕ್ಕೆ ಪ್ರಾಂತೀಯ ಮಾರ್ಕೆಟಿಂಗ್ ಸಮಿತಿಗಳನ್ನು ನೇಮಿಸುವುದು ಅವಶ್ಯವೆಂದು ಸಲಹೆಯಿತ್ತಿದ್ದಾರೆ. ಸರಕಾರದ ನೇತೃತ್ವದಲ್ಲಿ ಮಾರಾಟ ವ್ಯವಸ್ಥೆ ಮಾಡುವುದಕ್ಕೆ ಮಾರ್ಕೆಟಿಂಗ್ ಸಮಿತಿಗಳನ್ನು ಸ್ಥಾಪಿಸಿದರೆ, ಊರಲ್ಲಿರುವ ವರ್ತಕರೂ ದಳ್ಳಾಳಿಗಳೂ ಕಷ್ಟಕ್ಕೆ ಗುರಿಯಾಗುವರೆಂದು ಯಾರೂ ಭಯಪಡಬೇಕಾದುದಿಲ್ಲ. ಆ ಮೇಲೂ ಸರಕುಗಳನ್ನು ಶೇಖರಿಸಿ ನ್ಯಾಯವಾದ ರೀತಿಯಲ್ಲಿ ಮಾರಾಟ ಮಾಡುವ ಕೆಲಸವು ಅವರ ಕೈಯಿಂದ ತಪ್ಪಿಹೋಗುವಂತಿಲ್ಲ. ಆದರೆ ಹಿತಿತವಿಲ್ಲದ ಲಾಭವನ್ನು ಮಾತ್ರ ಅವರು ಗಳಿಸಲಾರರು. ಮಾರಾಟ ವ್ಯವಸ್ಥೆಯನ್ನು ಕ್ರಮಪಡಿಸುವುದು ಸರಕಾರದ ಕರ್ತವ್ಯವು. ವರ್ತಕರು ತಮ್ಮ ಉದ್ಯೋಗವನ್ನು ನ್ಯಾಯವಾದ ರೀತಿಯಲ್ಲಿ ನಡಿಸುತ್ತಾ ಸರಕಾರದ ಉದ್ದೇಶವನ್ನು ಸಫಲಗೊಳಿಸಬಹುದು.

ವರ್ತಕರೂ ದಳ್ಳಾಳಿಗಳೂ ಈಗ ಅಪಾರ ಲಾಭವನ್ನು ಗಳಿಸುತ್ತಿರುವರು. ಇದರಲ್ಲಿ ಹೆಚ್ಚಿನಂಶವು ನ್ಯಾಯವಾಗಿ ರೈತರಿಗೆ ಸೇರತಕ್ಕದು. **ಹೀಗಿದ್ದರೂ ಮಾರಾಟ ವ್ಯವಸ್ಥೆಯಲ್ಲಿ ಮಧ್ಯವರ್ತಿಗಳು ಸಮಾಜದ ಸುಸ್ಥಿತಿಗೆ ಕೆಲವು ಮಟ್ಟಿಗೆ ಸಹಾಯಕರಾಗಿರುವರೆಂದು ಹೇಳದೆ ನಿರ್ವಾಹವಿಲ್ಲ.** ರೈತರು ಚಿಲ್ಲರೆ ಚಿಲ್ಲರೆಯಾಗಿ ಬೆಳೆಸುವ ದವಸಗಳನ್ನು ಇವರು ಒಟ್ಟು ಕೂಡಿಸುವ ಕೆಲಸವನ್ನು ಮಾಡುತ್ತಾರೆ. ಯಾವ ಕಡೆಯಲ್ಲಿ ಯಾವ ಪದಾರ್ಥಗಳು ಬೇಕೋ ಅಲ್ಲಿಗೆ ಅವುಗಳನ್ನು ಒದಗಿಸಿ ಕೊಡುತ್ತಾರೆ. ಕೊಯ್ಲಿನ ಕಾಲದಲ್ಲಿ ಒಟ್ಟು ಕೂಡಿಸಿ ದಾಸ್ತಾನು ಮಾಡಿ. ಇಲ್ಲದ ಕಾಲದಲ್ಲಿ ಬೇಕಾಗುವ ಪದಾರ್ಥಗಳನ್ನು ಒದಗಿಸುತ್ತಾರೆ. ಗಿರಾಕಿ ಇಲ್ಲದಾಗ ತಾವು ಸಂಗ್ರಹಿಸಿದ ದವಸಗಳನ್ನು ಸುರಕ್ಷಿತವಾಗಿ ಇಟ್ಟುಕೊಳ್ಳುತ್ತಾರೆ. ಇವು ಸಾಮಾನ್ಯ ಕೆಲಸಗಳೆಂದು ಹೇಳಲಾಗುವುದಿಲ್ಲ. ಹೀಗೆ ಮಾಡುವುದಕ್ಕೆ ಚಾತುರ್ಯವೂ ಧೈರ್ಯವೂ ಬೇಕು. ಇವರ ಕೆಲಸವು ಒಂದು ವಿಧದಲ್ಲಿ ರೈತರಿಗೆ ಸಹಾಯಕವೇ ಆಗಿದೆ. ಇಂಥಾ ಕೆಲಸಕ್ಕೆ ತಕ್ಕ ಪ್ರತಿಫಲವನ್ನು ಕೋರುವುದು ಆಕ್ಷೇಪಕರವಲ್ಲ. ಆದರೆ ವರ್ತಕರು ಅನಿಯಂತ್ರಿತವಾದ ಲಾಭವನ್ನು ಪಡೆಯುವುದೆಂದರೆ ರೈತರ ಹೊಟ್ಟೆಯ ಅನ್ನವನ್ನು ಕಸಿದುಕೊಂಡಂತೆ ಸರಿ. ಈ ಬಗೆಯ ಅನ್ಯಾಯಲಾಭವನ್ನು ವರ್ತಕರಾಗಲಿ ದಳ್ಳಾಳಿಗಳಾಗಲಿ ಹೊಂದಬಾರದು. ಅದಕ್ಕೆ ತಕ್ಕ ನಿರ್ಬಂಧಗಳು ಅವಶ್ಯಕವಾಗಿವೆ.

ವರ್ತಕರು ನಮ್ಮ ದೇಶದಲ್ಲಿ ಮಾತ್ರವೇ ಅಲ್ಲ, ಸಂಯುಕ್ತ ರಾಷ್ಟ್ರದಂತಹ ಮುಂದುವರಿದ ದೇಶದಲ್ಲಿ ಕೂಡಾ ರೈತರಿಂದ ದವಸಗಳನ್ನು ಕೊಂಡು-ಕೊಡುವಾಗ ಹೆಚ್ಚು ಲಾಭವನ್ನು ಹೊಂದುವರೆಂದು ಗೊತ್ತಾಗಿದೆ. "ಈಗಿನ ವ್ಯಾಪಾರ ಪದ್ಧತಿಯು ಸಹನೀಯವಾಗಿಲ್ಲ. ವರ್ತಕರೂ ದಳ್ಳಾಳಿಗಳೂ ಪದಾರ್ಥಗಳನ್ನು ಬೆಳೆಸುವ ರೈತರಿಗಿಂತ ಹೆಚ್ಚು ಲಾಭವನ್ನು ಹೊಂದುತ್ತಾರೆ. ಅವರು ಸಮಾಜಕ್ಕೆ ಮಾಡುವ ಉಪಕಾರಕ್ಕಿಂತ ನೂರ್ಮಡಿಯಾಗಿ ಪ್ರತಿಫಲವನ್ನು ಪಡೆಯುತ್ತಾರೆ." ಎಂದು ಸಂಯುಕ್ತ ರಾಷ್ಟ್ರಗಳ ಅಧ್ಯಕ್ಷರಾದ ರೂಸ್‌ವೆಲ್ಟರು ಒಂದು ಕಡೆ ಹೇಳಿರುತ್ತಾರೆ. ಶಿಕ್ಷಣ, ವ್ಯವಸ್ಥೆ, ವ್ಯವಹಾರ ಸೌಕರ್ಯಗಳಲ್ಲಿ ನಮಗಿಂತ ಎಷ್ಟೋ ಪಾಲು ಮುಂದುವರಿದಿರುವ ದೇಶದ ಸ್ಥಿತಿಯೇ ಹೀಗಿದೆ. ಆ ಮೇಲೆ ನಮ್ಮ ರೈತರ ಪಾಡೇನು? ನಮ್ಮ ಬಡ ರೈತರು ಹಲವು ವಿಧದಲ್ಲಿ ವರ್ತಕರ ಹಿಡಿತದಲ್ಲಿರುತ್ತಾರೆ. ಮೊದಲನೆಯದಾಗಿ ತಮ್ಮ ದವಸಗಳನ್ನು ಕೊಡಲೊಪ್ಪಿಕೊಂಡು, ವರ್ತಕ ಅಥವಾ ಸಾಹುಕಾರರಿಂದ ಮುಂಗಡವಾಗಿ ಸಾಲ ಪಡೆಯುತ್ತಾರೆ. ಬಳಿಕ ಅವರು ಹೇಳಿದಾಗ ದವಸಗಳನ್ನು ಅವರ ಬಾಗಿಲಿಗೆ ತಲಪಿಸಲೇಬೇಕಾಗುತ್ತದೆ. ವರ್ತಕರು ನಮೂದಿಸುವ ಬೆಲೆಯ ದರವನ್ನು ಚರ್ಚೆಮಾಡದನೇ ಒಪ್ಪಿಕೊಳ್ಳದೆ ನಿರ್ವಾಹವಿರುವುದಿಲ್ಲ. ಅಂತೂ ಅವರು ಕೊಟ್ಟುದನ್ನು ತೆಗೆದುಕೊಳ್ಳಬೇಕಾಗುತ್ತದೆ. ಸಾಮಾನ್ಯವಾಗಿ ರೈತರಿಗೆ ಬೇಕಾಗುವ ಸಾಮಾನುಗಳನ್ನೂ ಅವರಿಂದಲೇ ಕೊಳ್ಳುತ್ತಾರೆ. ಅವುಗಳಿಗೆ ಕೂಡ ವರ್ತಕರು ಹೇಳಿದ ಬೆಲೆ. ಬೆಲೆಯನ್ನು ಇಂತಿಷ್ಟೇ ಎಂದು ಹೇಳುವುದೂ ಕಡಮೆ. ಪುಸ್ತಕದ ಲೆಕ್ಕದಲ್ಲಿ 'ಲೇವಾದೇವಿ' ನಡೆದು ಹೋಗುವುದು. ಈ ಪದ್ಧತಿಯಿಂದ ರೈತರಿಗೆ ಎರಡು ವಿಧವಾಗಿ ನಷ್ಟವಾಗದಿರುವುದಿಲ್ಲ.

"ನ್ಯಾಯವಾದ ಬೆಲೆಯಲ್ಲಿ ಕಡಮೆಮಾಡುವುದು ಬೇರೆ; ಸೋಡಿ, ರುಸುಂ, ದಳ್ಳಾಳಿ, ಪಡಿತರ, ಧರ್ಮ, ಮಜೂರಿ ಮೊದಲಾದ ನಾನಾ ರೀತಿಗಳಿಂದ ಸುಲಿಗೆ ಮಾಡುವುದು ಬೇರೆ. ರೈತರನ್ನು ಹೀಗೆ ತೊಂದರೆಪಡಿಸುವುದು ಮಾತ್ರವಲ್ಲದೆ, ಸಾಮಾನುಗಳನ್ನು ಯೋಗ್ಯತೆಗೆ ಅನುಸಾರವಾಗಿ ವಿಂಗಡಿಸದೆ ಒಟ್ಟಿಗೆ ಸೇರಿಸಿ ಅಂತೆಮಾಡಿ ತೆಗೆದುಕೊಳ್ಳುವ ಪದ್ಧತಿಯಿಂದ ರೈತರಿಗೆ ನಷ್ಟವಾಗುತ್ತದೆ." ಸಾಮಾನ್ಯವಾಗಿ ಕೀಳು ಮಾಲಿನ ದರವೇ ಒಳ್ಳೆಯ ಮಾಲಿಗೂ ದೊರೆಯುವಂತಾಗುತ್ತದೆ. ತೂಕ, ಅಳತೆಗಳಲ್ಲಿಯೂ ರೈತರು ಸುಲಿಗೆಗೆ ಗುರಿಯಾಗುತ್ತಾರೆ. ಸಾಮಾನ್ಯವಾಗಿ ವರ್ತಕರಲ್ಲಿ ಕೊಳ್ಳುವುದಕ್ಕೊಂದು ಬಗೆಯ, ಕೊಡುವುದಕ್ಕೆ ಬೇರೊಂದು ಬಗೆಯ ಸೇರು, ತಕ್ಕಡಿ, ಪಡಿಗಳಿರುತ್ತವೆ. "ಸೆಟ್ಟಿಯ ಬಳ್ಳ ಕಿರಿದು" ಎಂಬ ಗಾದೆಯುಂಟಾಗಿರುವುದು ಇದರಿಂದಲೇ ಎಂದು ತಿಳಿಯಬಹುದು. ಇನ್ನು ಸ್ವಲ್ಪ ಸ್ವಲ್ಪ ಪ್ರಮಾಣದಲ್ಲಿ ತೂಕಮಾಡುವಾಗ ಪ್ರತಿಸಲವೂ ಬಂದಿಷ್ಟು ಮುಂಗೋಲಾಗಿ ತೂಕಮಾಡುವುದರಿಂದ ಒಟ್ಟಿಗೆ ಹೆಚ್ಚು ನಷ್ಟವಾಗುತ್ತದೆ. ವರ್ತಕರಿಗೆ ಅಂಟಿಕೊಂಡಿರುವ ದಳ್ಳಾಳಿಗಳು ಹೆಚ್ಚಾಗಿ ವರ್ತಕರಿಗೇ ಸಹಾಯ ಮಾಡುವರು.

ದಳ್ಳಾಳಿಗಳ ಕಾಟದ ವಿಚಾರವಾಗಿ ವಿ. ಜಿ. ಕಾಳೆಯೆಂಬ ಅರ್ಥಶಾಸ್ತ್ರ ನಿಪುಣರು ಹೀಗೆನ್ನುತ್ತಾರೆ: 'ಈಗಿನ ಪರಿಸ್ಥಿತಿಯಲ್ಲಿ ಬೇಸಾಯಗಾರರು ದಳ್ಳಾಳಿಗಳ ವಜ್ರಮುಷ್ಟಿಯೊಳಗೆ ಇರುತ್ತಾರೆ. ಕೆಲವು ಕಡೆಗಳಲ್ಲಿ ಪರಸ್ಪರ ಸಹಾಯದ ಮೂಲಕ ಕೊಟ್ಟುಕೊಳ್ಳುವ ವ್ಯವಸ್ಥೆ ನಡೆಯುತ್ತಿದೆ. ಈ ದಾರಿಯಲ್ಲೇ ರೈತರ ಬಿಡುಗಡೆಯಾಗಬಲ್ಲುದು. ಬೇಸಾಯಗಾರನೇ ಆಗಲಿ ಈಗ ಸಾಮಾನುಗಳನ್ನು ಕೊಡುವಾಗಲೂ ಕೊಳ್ಳುವಾಗಲೂ ಹೇಳಿದ ಬೆಲೆಯನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಮಾಲಿನ ಗುಣದ ಮಾತು ಇರುವುದಿಲ್ಲ. ಆದುದರಿಂದ 'ದಳ್ಳಾಳಿ' (ಮಧ್ಯವರ್ತಿ)ಯನ್ನು ತಪ್ಪಿಸುವುದು ಇಂದಿನ ಮುಖ್ಯ ಸಮಸ್ಯೆಯಾಗಿದೆ."

ನಮ್ಮ ದೇಶದ ವ್ಯವಸಾಯದ ಉತ್ಪತ್ತಿಗಳೆಲ್ಲ ನಮ್ಮ ದೇಶದೊಳಗೆ ಉಪಯೋಗವಾಗುವುದಿಲ್ಲ. ಇಲ್ಲಿಯ ಹೆಚ್ಚು ಪದಾರ್ಥಗಳು ಪರದೇಶಗಳಿಗೆ ರಫ್ತಾಗುತ್ತವೆ. ಇಲ್ಲ ಬೆಳೆಯುವ ನೆಲಗಡಲೆಯ ಅರ್ಧಾಂಶವೂ ಹತ್ತಿಯ ಒಂದು ಮೂರನೆಯ ಅಂಶವೂ ಪರದೇಶಗಳಿಗೆ ಹೋಗುತ್ತವೆ. 1931 3?ರಲ್ಲಿ 34·95 ಲಕ್ಷ ರೂಪಾಯಿ ಬೆಲೆಬಾಳುವ ಹತ್ತಿ ನಮ್ಮ ದೇಶದಿಂದ ರಫ್ತಾಗಿರುವುದು. ಅಕ್ಕಿ ಮತ್ತು ಗೋಧಿ ಹೊರತಾಗಿ ಇತರ ಆಹಾರ ಪದಾರ್ಥಗಳು 11·84 ಲಕ್ಷ ರೂಪಾಯಿ ಬೆಲೆಯವು ಹೊರಗೆ ಕಳುಹಲ್ಪಟ್ಟವೆ. 13·66 ಲಕ್ಷ ರೂಪಾಯಿ ಬೆಲೆಬಾಳುವ ಎಣ್ಣೆಯ ಬೀಜಗಳು ಆ ವರ್ಷದಲ್ಲಿ ರಫ್ತಾಗಿವೆ. ಇವುಗಳಲ್ಲದೆ ಟೀ, ಹೊಗೆಸೊಪ್ಪು, ಸಣಬು ಮೊದಲಾದ ಅನೇಕ ಪದಾರ್ಥಗಳು ಹೆಚ್ಚಾಗಿ ರಫ್ತಾಗುತ್ತಿವೆ. ಇದರಿಂದ ರಫ್ತಾಗುವ ವಸ್ತುಗಳ ಮಾರಾಟದ ಮಹತ್ವವನ್ನು ತಿಳಿದುಕೊಳ್ಳಬಹುದು. ಒಳ್ಳೆಯ ಮಾರಾಟದ ವ್ಯವಸ್ಥೆ ಇದ್ದ ಪಕ್ಷದಲ್ಲಿ ಈ ದವಸಗಳನ್ನು ಬೆಳೆಸುವ ಹಳ್ಳಿಯ ರೈತರ ಆದಾಯವು ಹೆಚ್ಚುವುದಕ್ಕೆ ಅವಕಾಶವಿದೆ. ಹೊರ ದೇಶದ ವ್ಯಾಪಾರವು ಹೆಚ್ಚಾಗಿ ನಮ್ಮ ಮಾಲುಗಳಿಗೆ ಗಿರಾಕಿಗಳು ಹೆಚ್ಚಾದಂತೆ ರೈತರು ಸ್ವಂತ ಉಪಯೋಗಕ್ಕೆ ಅಲ್ಲದೆ ವ್ಯಾಪಾರಕ್ಕೋಸ್ಕರ ಬೆಳೆಯನ್ನು ತೆಗೆಯಲು ಆರಂಭಿಸಿದ್ದಾರೆ. ಸಾಮಾನ್ಯವಾಗಿ ಆಹಾರ ಪದಾರ್ಥಗಳನ್ನೇ ಬೆಳೆಸುವ ಬದಲಾಗಿ ಹತ್ತಿ, ಎಣ್ಣೆಯ ಬೀಜ, ಹೊಗೆಸೊಪ್ಪು, ಸಣಬು ಮುಂತಾದುವನ್ನು ಬೆಳೆಸಿ ಆದಾಯವನ್ನು ಹೆಚ್ಚಿಸಿಕೊಳ್ಳಬಹುದೆಂದು ಆಶಿಸುತ್ತಾರೆ. ಈಚೆಗೆ ರೈತರಲ್ಲಿ ಉಂಟಾಗುತ್ತಿರುವ ಜಾಗ್ರತಿಯ ದೆಸೆಯಿಂದ ಬೇಸಾಯವೂ ತಕ್ಕ ಮಟ್ಟಿಗೆ ಉತ್ತಮವಾಗತೊಡಗಿದೆ. ಹೀಗಿರುವಲ್ಲಿ ಅವರು ಶ್ರಮಪಟ್ಟು ಬೆಳೆಸುವ ದವಸಗಳಿಗೆ ಒಳ್ಳೆಯ ಬೆಲೆ ಬರುವಂತೆ ಮಾರಾಟ ಮಾಡಿಸುವುದು ಪ್ರಭುತ್ವಕ್ಕೆ ಸೇರಿದ ಹೊಣೆಗಾರಿಕೆಯಾಗಿದೆ. ಮುಖ್ಯವಾಗಿ ಒಳದೇಶದ ವ್ಯಾಪಾರ ವಹಿವಾಟಿನ ಕುಂದುಕೊರತೆಗಳನ್ನು ಹೋಗಲಾಡಿಸುವಂತೆಯೆ ಹೊರದೇಶದ ವ್ಯಾಪಾರ ವ್ಯವಸ್ಥೆಯನ್ನೂ ಕ್ರಮಪಡಿಸುವುದು ಆವಶ್ಯಕವಾಗಿದೆ.

ಈ ಭಾಗದಲ್ಲಿ ರೈತರಿಗೆ ಹೆಚ್ಚಿನ ಮಟ್ಟಿನ ಸಹಾಯ ಮಾಡುವುದಕ್ಕೆ ಸರಕಾರಕ್ಕೆ ಅವಕಾಶವಿದೆ. ನಮ್ಮ ಸರಕುಗಳಿಗೆ ಪರದೇಶಗಳಲ್ಲಿ ಒಳ್ಳೆಯ ಬೆಲೆ ಬರುವಂತೆ ಒಪ್ಪಂದವನ್ನು ಮಾಡಿಕೊಳ್ಳಬಹುದು. ರೈಲ್ವೆ ಕಂಪೆನಿಗಳು ರಿಯಾಯಿತಿ ದರದಲ್ಲಿ ರೈತರ ಸರಕುಗಳನ್ನು ಸಾಗಿಸುವಂತೆ ವ್ಯವಸ್ಥೆ ಮಾಡಬಹುದು. ರೈತರ ತಾತ್ಕಾಲಿಕ ಆವಶ್ಯಕತೆಗಳನ್ನು ನಿರ್ವಹಿಸಲು ಭಂಡವಾಳವನ್ನು ಒದಗಿಸಿ ಸರಕುಗಳನ್ನು ಒಟ್ಟಿಗೆ ಶೇಖರಿಸುವಂತೆ ಪ್ರೋತ್ಸಾಹಿಸಬಹುದು. ಇಂಡಿಯಾ ಸರಕಾರದವರು ಅನ್ಯರಾಷ್ಟ್ರಗಳ ಸರಕಾರದವರೊಡನೆ ಕೆಲವು ವಾಣಿಜ್ಯ ಕರಾರುಗಳನ್ನು ಈ ಮೊದಲು ಮಾಡಿಕೊಂಡುದುಂಟು. ವಾಣಿಜ್ಯ ನಿಪುಣರಾದ ಕೆಲವರು ಸ್ವದೇಶೀಯರ ಅಭಿಪ್ರಾಯದಂತೆ, ನಮ್ಮ ಸರಕಾರದವರು ಮಾಡಿಕೊಂಡ ಒಪ್ಪಂದಗಳಿಂದ ಕೆಲವು ಮಟ್ಟಿಗೆ ನಮ್ಮ ದೇಶಕ್ಕೆ ಆರ್ಥಿಕ ಹಾನಿಯುಂಟಾಗಿದೆಯೆಂದು ಗೊತ್ತಾಗಿದೆ. ಒಟ್ಟಾವಾ ವಾಣಿಜ್ಯ ಕರಾರಿನ ಮೂಲಕ ಅನೇಕ ಪ್ರಮುಖ ಪರದೇಶಗಳ ಬೆಂಬಲವನ್ನು ನಮ್ಮ ರೈತರು ಕಳಕೊಂಡಿರುವರೆಂದು ಹೇಳುವರು. ಜರ್ಮನಿ, ಇಟಲಿ, ಪೋಲೆಂಡ್, ಫ್ರಾನ್ಸ್ ಮೊದಲಾದ ದೇಶಗಳಲ್ಲಿ ನಮ್ಮ ಸರಕಿಗೆ ಪ್ರೋತ್ಸಾಹ ಕುಗ್ಗಿ ಹೋಗಲು ಒಟ್ಟಾವಾ ಒಪ್ಪಂದವು ಕಾರಣವಾಗಿರುವುದು. ಏನಿದ್ದರೂ ಬೇರೆ ವಿಧದಿಂದ ಆ ಒಪ್ಪಂದದ ಮೂಲಕ ನಮ್ಮ ದೇಶಕ್ಕೆ ಹಿತವಾಗಿರುವುದೆಂದು ಬ್ರಿಟಿಷ್ ಸಾಮ್ರಾಜ್ಯತತ್ತ್ವವಾದಿಗಳು ವಾದಿಸುತ್ತಾರೆ. ಅಂತೂ ಪರದೇಶಗಳೊಡನೆ ಒಪ್ಪಂದವನ್ನು ಮಾಡಿಕೊಳ್ಳುವ ಕಾಲದಲ್ಲಿ ನಮ್ಮ ದೇಶದ ರೈತರ ಹಿತದೃಷ್ಟಿಯನ್ನು ಗಮನಿಸುವುದು ಆವಶ್ಯವಾದುದೆಂಬುದು ನಿರ್ವಿವಾದವಾಗಿದೆ. ನಮ್ಮ ಕೇಂದ್ರ ಸರಕಾರವು ರೈತರ ಹಿತಕ್ಕಾಗಿ ಮಾಡಿರುವ ಮುಖ್ಯ ಕಾರ್ಯವೆಂದರೆ, ಸೆಂಟ್ರಲ್ ಮಾರ್ಕೆಟಿಂಗ್ ಡಿಪಾರ್ಟ್‌ಮೆಂಟ್ ಎಂಬ ಸಂತೆಯ ಸೌಕರ್ಯಗಳನ್ನು ಅಭಿವೃದ್ಧಿಗೊಳಿಸುವುದಕ್ಕಿರುವ ಒಂದು ಇಲಾಖೆಯನ್ನು ಸ್ಥಾಪಿಸಿದುದು; ಮತ್ತು 1937ರಲ್ಲಿ 'ಎಗ್ರಿಕಲ್ಚರಲ್ ಕಮಾಡಿಟೀಸ ಏಕ್ಟ್' ಎಂಬ ಕಾನೂನನ್ನು ಜಾರಿಮಾಡಿದುದು. ಇಂಡಿಯದ ಪರವಾಗಿ ಟ್ರೇಡ್ ಕಮಿಷನರ್ ಎಂಬ ಅಧಿಕಾರಿಗಳನ್ನು ಲಂಡನಿನಂಥ ವಾಣಿಜ್ಯ ಕೇಂದ್ರದಲ್ಲಿ ನೇಮಿಸಿರುವರಾದರೂ ನಮ್ಮ ದೇಶದೊಡನೆ ವ್ಯಾಪಾರ ಬೆಳೆಸುವ ಎಲ್ಲ ಕೇಂದ್ರಗಳಲ್ಲಿಯೂ ನೇಮಿಸಿರುವುದಿಲ್ಲ.

ಇತ್ತೀಚೆಗೆ ನಮ್ಮ ದೇಶದ ವ್ಯಾಪಾರ ಸೌಕರ್ಯಗಳ ಅಭಿವೃದ್ಧಿಯ ವಿಚಾರವು ಸರಕಾರದವರ ಗಮನಕ್ಕೆ ವಿಶೇಷವಾಗಿ ಬಂದಿರುವುದು ಶುಭಸೂಚನೆಯೆಂದು ಹೇಳಬಹುದು. ಈ ವರೆಗಿನ ಮಾರಾಟದ ವ್ಯವಸ್ಥೆಯ ಪ್ರಗತಿಯನ್ನೂ ಈ ಭಾಗದಲ್ಲಿ ಮುಂದೆ ನಡೆಸತಕ್ಕ ಕೆಲಸಗಳನ್ನೂ ಕುರಿತು ಆಲೋಚಿಸುವುದಕ್ಕಾಗಿ 1938ನೇ ವರ್ಷದ ಆದಿ ಭಾಗದಲ್ಲಿ ದಿಲ್ಲಿಯಲ್ಲೊಂದು ಮಹತ್ವದ ಸಭೆ ಸೇರಿತು. ಪ್ರಾಂತೀಯ ಹಾಗೂ ಆಶ್ರಿತ ರಾಜ್ಯಗಳ ಮಂತ್ರಿಗಳೂ ಕೇಂದ್ರ ಸರಕಾರದ ಇಲಾಖೆಗಳ ಮುಖ್ಯಾಧಿಕಾರಿಗಳೂ ಇಲ್ಲಿ ಒಟ್ಟು ಸೇರಿದ್ದರು. ಮಾರಾಟ ವ್ಯವಸ್ಥೆಯ ಅಭಿವೃದ್ಧಿಯ ವಿಚಾರದಲ್ಲಿ ಇಡೀ ಹಿಂದೂದೇಶದಲ್ಲಿ ಏಕರೂಪತೆಯ ಕಾರ್ಯಕ್ರಮವನ್ನು ಅನುಸರಿಸುವ ಆವಶ್ಯಕತೆಯನ್ನು ಎಲ್ಲರೂ ಒಪ್ಪಿಕೊಂಡು ತಂತಮ್ಮ ಪ್ರಾಂತ್ಯಗಳಲ್ಲಿ ತಕ್ಕ ಹಂಚಿಕೆಗಳನ್ನು ಹೂಡುವ ನಿರ್ಣಯವನ್ನು ಮಾಡಿಕೊಂಡಿರುವರು. ಈ ಸಂದರ್ಭದಲ್ಲಿ ವ್ಯವಸಾಯ ಪದಾರ್ಥಗಳ ಮಾರಾಟ ಸಂಬಂಧವಾಗಿ ನಮ್ಮ ದೇಶದಲ್ಲಿ ಪ್ರಯತ್ನಗಳು ನಡೆದಿವೆಯೆಂಬುವನ್ನು ಸಂಕ್ಷೇಪವಾಗಿ ವಿಮರ್ಶಿಸಬೇಕಾಗಿದೆ.

1928ನೇ ಇಸವಿಯ ವ್ಯವಸಾಯ ಸಮಿತಿಯವರು ಅನೇಕ ಮಹತ್ವದ ಸಲಹೆಗಳನ್ನು ಕೊಟ್ಟಿದ್ದರಷ್ಟೆ. ಒಂದಿಲ್ಲೊಂದು ಕಾರಣಗಳಿಂದ ಆ ಸಲಹೆಗಳನ್ನು ಕಾರ್ಯರೂಪದಲ್ಲಿ ತರುವುದಕ್ಕೆ ಸರಕಾರವು ವಿಳಂಬ ಮಾಡಿತು. ಕೊನೆಗೆ 1935ರಲ್ಲಿ ವ್ಯವಸಾಯ ಸಮಿತಿಯವರ ಸೂಚನೆಗಳನ್ನು ಜಾರಿಗೆ ತರುವುದಕ್ಕೆ ವ್ಯವಸಾಯ ನಿಪುಣರಾದ ಲಿವಿಂಗ್‌ಸ್ಟನ್ ಎಂಬ ಒಬ್ಬರು ಸಲಹೆಗಾರರನ್ನು ನೇಮಿಸಲಾಯಿತು. ಇವರ ಮಾರ್ಗದರ್ಶಿತೆಯ ಅನುಸಾರವಾಗಿ ಪ್ರತಿಯೊಂದು ಪ್ರಾಂತ್ಯದಲ್ಲಿಯೂ ವ್ಯಾಪಾರ ವ್ಯವಸ್ಥೆಯ ಅಭಿವೃದ್ಧಿ ಮಾರ್ಗವನ್ನು ಪರಿಶೀಲಿಸುವ ಸಲುವಾಗಿ ಮಾರ್ಕೆಟಿಂಗ್ ಸಿಬ್ಬಂಧಿಯ ಏರ್ಪಾಡಾಯಿತು. ಈಗ ಒಟ್ಟಿಗೆ 100 ಮಂದಿ ಮಾರ್ಕೆಟಿಂಗ್ ಆಫೀಸರ್ಸ್ ಎಂಬ ಅಧಿಕಾರಿಗಳು ಆಯಾ ಕಡೆಗಳಲ್ಲಿ ಕೆಲಸ ಮಾಡುತ್ತಿರುವರು. ಇವರ ಕೈಕೆಳಗೆ ಇದೇ ಕೆಲಸವನ್ನು ನಡೆಸುವುದಕ್ಕಾಗಿ ಸುಮಾರು 200 ಮಂದಿ ಇತರ ಅಧಿಕಾರಿಗಳು ಇರುವರು. ಈ ಅಧಿಕಾರಿಗಳು ವ್ಯವಸಾಯ ಪದಾರ್ಥಗಳ ಮಾರಾಟ ವ್ಯವಸ್ಥೆಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಈ ವರೆಗೆ ಸುಮಾರು ಮೂವತ್ತು ಬಗೆಯ ದವಸಗಳ ವಿಷಯ ಮಾಹಿತಿಗಳನ್ನು ಸಂಗ್ರಹಿಸಿರುವರು. ಗೋಧಿ, ಎಳ್ಳು, ಹೊಗೆಸೊಪ್ಪು, ಮೊಟ್ಟೆ, ಚರ್ಮ ಮೊದಲಾದ ಮುಖ್ಯ ಪದಾರ್ಥಗಳ ವ್ಯಾಪಾರಕ್ಕೆ ಸಂಬಂಧಿಸಿದ ವಿಷಯಗಳನ್ನು ಪ್ರಕಟಿಸಿಯೂ ಇರುವರು.

ಮಾರ್ಕೆಟಿಂಗ್ ಅಧಿಕಾರಿಗಳು ನಡೆಸಿದ ವ್ಯವಸಾಯ ದವಸಗಳ ಸಂಬಂಧವಾದ ವಿಚಾರಣೆಗಳ ಫಲವಾಗಿ ಕೆಲವು ಮಹತ್ವದ ಸಂಗತಿಗಳು ಬೆಳಕಿಗೆ ಬಂದಿವೆ. ರೈತರು ಬೆಳೆಸುವ ದವಸಗಳ ಮಾರಾಟದಿಂದ ಬರುವ ಬೆಲೆಯ ಹೆಚ್ಚಿನಂಶವನ್ನು ಅವರ ಕೈಗೆ ದೊರಕಿಸುವಂತೆ ಏನೇನು ಮಾಡಬಹುದೆಂದು ವಿಚಾರಿಸುವುದು ಈ ವಿಚಾರಣೆಗಳ ಮುಖ್ಯ ಉದ್ದೇಶವಾಗಿತ್ತು. ಗಿರಾಕಿಗಳು ಕೊಡುವ ಬೆಲೆಯ ಸ್ವಲ್ಪಾಂಶ ಮಾತ್ರ ದವಸಗಳನ್ನು ಬೆಳೆಸುವ ರೈತರ ಕೈಗೆ ಬರುತ್ತಿರುವುದೆಂದು ವಿಚಾರಣೆಗಳಿಂದ ತಿಳಿದುಬಂದಿದೆ. ಅಕ್ಕಿ, [illegible]

ಲಾದುವುಗಳಲ್ಲಿ, ಊರೊಳಗೆ ವ್ಯಾಪಾರಮಾಡುವ ರೈತರಿಗೆ ನಿಜವಾದ ಬೆಲೆಯ ಶೇಕಡಾ 50 ಅಥವಾ 60ಕ್ಕಿಂತ ಹೆಚ್ಚು ದೊರೆಯುತ್ತಿರುವುದಿಲ್ಲ. ಹೊಗೆಸೊಪ್ಪಿಗೆ ಲಂಡನಿನಲ್ಲಿ ದೊರೆಯುವ ಬೆಲೆಯ ಶೇಕಡಾ 30 ಯಾ 40 ಮಾತ್ರ ಇಲ್ಲಿ ಬೆಳೆಸುವ ಬೇಸಾಯಗಾರರ ಕೈಗೆ ಬರುವುದು. ಹಣ್ಣು ಹಂಪಲುಗಳಿಗೆ ಕೇವಲ ಶೇಕಡಾ 15 ಅಥವಾ 20ರಷ್ಟು ಮಾತ್ರ ಬೆಳೆಸುವವರಿಗೆ ಸಿಕ್ಕಿರುವುದು. ಮಿಕ್ಕ ಶೇಕಡಾ 80 ಅಥವಾ 85ರಷ್ಟು ವ್ಯಾಪಾರದ ಲಾಭ, ಹಾಳಾಗುವ ಅಂಶ ಸಾಗಿಸುವ ಮಜೂರಿ ಮುಂತಾದವುಗಳಿಗೆ ತಗಲುವುದು.

ಮೇಲೆ ಒಂದು ಕಡೆ ಹೇಳಿರುವಂತೆ ರುಸುಂ, ದಳ್ಳಾಳಿ, ದಾನ, ಧರ್ಮ, ಪಡಿತರ ಮೊದಲಾದ ನೆನೆಗಳಿಂದ ದವಸಗಳ ಬೆಲೆಯ ಸ್ವಲ್ಪ ಭಾಗವು ಅನ್ಯಾಯವಾಗಿ ರೈತರಿಂದ ವಸೂಲಾಗುತ್ತದೆ. ಉದಾಹರಣೆಗಾಗಿ "ಕಾನ್ಪುರದಲ್ಲಿ ಒಂದು ಗಾಡಿ ಗೋಧಿಯನ್ನು ಸಂತೆಗೆ ಮಾರುವುದಕ್ಕೆ ತಂದರೆ 13 ಬಗೆಯ ವಸೂಲಿಯ ಲೆಖ್ಖವಾಗುವುದೆಂದು ಗೊತ್ತಾಗಿದೆ. ಕೆಲವು ವ್ಯಾಪಾರದ [illegible]ಗಳಲ್ಲಿ ದವಸಗಳ ಬೆಲೆಯ ಶೇಕಡಾ 15ರಷ್ಟು ಇಂಥ ವಸೂಲಿಗಳಿಗೆ [illegible]. [illegible] ಬಾದು ಮೊದಲಾದ ಕೆಲವು ಕಡೆಗಳಲ್ಲಿ ವ್ಯವಸ್ಥಿತ ಮಾರ್ಕೆಟುಗಳಿರುವುವು. [illegible] ಇಂಥ ವಸೂಲಿಗಳು ಅತ್ಯಲ್ಪವಾಗಿರುವುವು. [illegible] ವಸ್ಥೆಯ ದೆಸೆಯಿಂದ ಬಗೆಬಗೆಯ [illegible] ಬಂಗಾಳದಲ್ಲಿ ಪ್ರಚಾರವಾಗಿರುವ [illegible] 100 ರಾತಲಿನ [illegible] 21 [illegible]

[illegible]

[illegible] ತಿಳಿದುಬಂದಿದೆ. [illegible]

[illegible] ಈ ಕಾನೂನಿನಂತೆ ಆಗ್ಮಾರ್ಕ್ (Agmark)[illegible] ಒಳ್ಳೆಯ ಬೆಲೆ ದೊರೆಯುವುದು. ವಿಂಗಡಿಸದ [illegible]

[illegible]

[illegible] ಕಡಮೆಯಾದ [illegible] 1930[illegible] ಕಾನೂನಿಗೆ ಅನುಸಾರ ಗೋಧಿಯ ಬೆಲೆ ನಿಶ್ಚಿತವಾಗಿ, ರೈತರು ಮತ್ತು [illegible] ವಿಷಯವಾಗಿ [illegible] ವ್ಯವಸ್ಥಿತವಾದ ಸಹಕಾರ ಸಂಘಗಳ ರೈತರಿಂದ ಗೋಧಿಯನ್ನು ಕೊಂಡುಕೊಳ್ಳುವುದಕ್ಕೆ ಏರ್ಪಾ ಡಾಗಿವೆ! ಬೇಂಕ್ ಆಫ್ ಫ್ರಾನ್ಸ್ [illegible] ಪ್ರದ [illegible] ರೈತರ ವಂತಿಗೆಯ ಸಂಗ್ರಹದಿಂದ ಒದಗಿಸಲಡುವುದು.

ಇಟಲಿ ದೇಶದಲ್ಲಿ ಮಾರಾಟ ಮಾಡತಕ್ಕ ಗೋಧಿಯನ್ನು ಸಂಗ್ರಹದ ಮಳಿಗೆಗೆ ಒಪ್ಪಿಸತಕ್ಕದ್ದು. ಕೇಂದ್ರ ವ್ಯವಸಾಯ ಶಾಖೆಯ ಮೂಲಕ ಅದನ್ನು ದಾಸ್ತಾನು ಮಾಡಿ ಒಟ್ಟಿಗೆ ಮಾರಾಟಮಾಡಲಾಗುವುದು. ಪ್ರತಿ ವರ್ಷವೂ ಮಂತ್ರಿಮಂಡಲವು ಗೋಧಿಯ ಬೆಲೆಯನ್ನು ನಿರ್ಣಯಿಸುವುದು. ಅಮೇರಿಕದ ಸಂಯುಕ್ತ ರಾಷ್ಟ್ರಗಳಲ್ಲಿ 1936ರ 'ಕಮೊಡಿಟೀಸ್ ಎಕ್ಸ್‌ಚೇಂಜ್ ಆಕ್ಟ' ಎಂಬ ದವಸಗಳ ವಿನಿಮಯ ಕಾನೂನಿಗನುಸಾರವಾಗಿ ಹಲವು ಬಗೆಯ ದವಸಗಳ ಮಾರಾಟ ಕ್ರಮವನ್ನು ನಿರ್ಣಯಿಸಿ ವ್ಯವಸ್ಥೆಪಡಿಸಿರುವರು. ವ್ಯಾಪಾರದಲ್ಲಿ ಮಧ್ಯವರ್ತಿಗಳು ಮಿತಿಗೆಟ್ಟ ಲಾಭವನ್ನು ಹೊಂದದಂತೆ ನಿರ್ಬಂಧವಿರುವುದು. ಮೋಸಕರವಾದ ರೀತಿಯಲ್ಲಿ ವ್ಯಾಪಾರ ನಡೆಸುವ ಅಂಗಡಿಗಳು ಬಹಿಷ್ಕರಿಸಲ್ಪಟ್ಟಿವೆ. ಅನ್ಯಾಯವಾಗಿ ಲಾಭಹೊಂದುವ ಚಟಗಳು ನಿಷೇಧಿಸಲ್ಪಟ್ಟಿವೆ. ವ್ಯವಸಾಯ ಪದಾರ್ಥಗಳ ಮಾರಾಟದ ಸಂಬಂಧವಾಗಿ ರೈತರಿಗೆ ನಷ್ಟವಾಗದಂತೆ ಯಾವ ಯಾವ ಉಪಾಯಗಳನ್ನು ಕೈಕೊಳ್ಳಬಹುದೋ ಅವೆಲ್ಲವನ್ನು ಕೈಕೊಂಡು ಅನುಸರಿಸುತ್ತಲಿವೆ.

ನಮ್ಮ ದೇಶದ ಸಮೃದ್ಧಿಯು ಗ್ರಾಮಾಂತರದ ರೈತರ ಸಂಪದಭಿವೃದ್ಧಿಯನ್ನು ಅವಲಂಬಿಸಿಕೊಂಡಿದೆ. ಗ್ರಾಮಾಭ್ಯುದಯದ ಕಾರ್ಯವು ನಮ್ಮ [illegible] ಸರಕಾರಗಳ ಪಾಲಿಗೆ ಸೇರಿದುದು. [illegible] ಹಿಂದಿನ ಕಾರ್ಯಕ್ರಮವನ್ನು ಕೈಕೊಳ್ಳಬೇಕು. [illegible] ವಾಗಬೇಕಾದರೆ, ನಿರ್ಬಂಧಕಾನೂನು [illegible]. ನಮ್ಮ ದೇಶದ ಅನುಭವದಿಂದ ಇದು ವಿದಿತವಾಗುವುದು. ರೈತರ ಸಾಲನಿವಾರಣೆಯು ಮುಸೂದೆ, ಸಾರ್ವಜನಿಕ ಆರೋಗ್ಯ ರಕ್ಷಣೆಯು ಮುಸೂದೆ, ಹರಿಜನ ಮಂದಿರ ಪ್ರವೇಶ ಮುಸೂದೆ [illegible]

[illegible] ಜೊಂಬೆ [illegible]

[illegible]

[illegible] ವನ್ನು ಸಾಧಿಸುವಂತಾಗುವುದು.

[illegible] ಈಚೆಗೆ ನಮ್ಮ ದೇಶದಲ್ಲಿ [illegible] ಚಲಾವಣೆಯು ಹೆಚ್ಚಿರುವುದಾದರೂ [illegible]ಗಳು ಇನ್ನೂ ಬಹಳ ಹಿಂದುಳಿದಿವೆ. ನಮ್ಮ ದೇಶದ [illegible]ವನ್ನು ಗಮನಿಸಿದರೆ, ಈಗಿರುವ ರೈಲು ಮಾರ್ಗಗಳಾಗಲಿ [illegible]ಗಳಾಗಲಿ ಸಾಕಷ್ಟು ವೃದ್ಧಿಗೊಂಡಿರುವುದಿಲ್ಲವೆಂದು ವ್ಯಕ್ತವಾಗದಿರದು. ಪ್ರಯಾಣ ಸೌಕರ್ಯಗಳೂ, ಪೋಸ್ಟ್, ಟೆಲಿಗ್ರಾಫ್ ಮುಂತಾದ [illegible] ಸೌಕರ್ಯಗಳೂ ಈಗ ಎಷ್ಟು ಹೆಚ್ಚಿರುವುದಾದರೂ ಅವು ನಗರವಾಸಿಗಳಿಗೆ ಹೆಚ್ಚು ಅನುಕೂಲವಾಗಿರುವುವೇ ಹೊರತು, ಗ್ರಾಮನಿವಾಸಿಗಳಿಗಲ್ಲ. [illegible] ಕಂಡರಿಯದ ಹಳ್ಳಿಗರಷ್ಟೋ ಮಂದಿ ನಮ್ಮ ದೇಶದಲ್ಲಿರುವರು. ವಾರ್ತಾ ಪತ್ರಿಕೆಗಳೆಂದರೇನೆಂದು ಅರಿಯದ ಹಳ್ಳಿಗರ ಸಂಖ್ಯೆಯೂ ಕಡಮೆಯಿಲ್ಲ. ಗ್ರಾಮಾಂತರಗಳಲ್ಲಿ ಅಂಚೆಕಟ್ಟೆಯ ಸೌಕರ್ಯಗಳನ್ನು ಹೊಂದಿಕೊಳ್ಳುವವರು ತೀರ ವಿರಳ. ಹೀಗಿರುವಲ್ಲಿ ತಂತಿ, ಆಕಾಶವಾಣಿಗಳ ಮಾತಂತೂ ಬಹುದೂರ ಉಳಿಯಿತು. ವ್ಯವಹಾರ ಸೌಕರ್ಯಗಳ ವಿಷಯದಲ್ಲಿ ನಮ್ಮ ದೇಶವು ಪಾಶ್ಚಾತ್ಯ ರಾಷ್ಟ್ರಗಳ ಮಟ್ಟವನ್ನು ಸಮೀಪಿಸುವುದಕ್ಕೆ ಇನ್ನೆಷ್ಟು ಕಾಲ ಬೇಕಾಗುವುದೆಂದು ಹೇಳುವುದು ಸುಲಭವಾಗಿಲ್ಲ.

ಬ್ರಿಟಿಷರ ಆಳ್ವಿಕೆಯಿಂದ ನಮ್ಮ ದೇಶದಲ್ಲಿ ಪ್ರಯಾಣ ವ್ಯವಹಾರ ಸೌಕರ್ಯಗಳು ಹೆಚ್ಚಿವೆಯೆಂದು ಹಿಂದೆ ಹೇಳಿದೆ. ಆದರೆ ಪಾಶ್ಚಿಮಾತ್ಯ ದೇಶಗಳೊಡನೆ ಹೋಲಿಸಿ ನೋಡಿದರೆ, ನಮ್ಮ ದೇಶವು ಎಷ್ಟು ಹಿಂದುಳಿದಿದೆಯೆಂದು ಸ್ವಯಂವ್ಯಕ್ತವಾಗುವುದು. "ಅಮೇರಿಕದ ಸಂಯುಕ್ತ ರಾಷ್ಟ್ರಗಳಲ್ಲಿ 12 ಕೋಟಿ ಜನರಿಗೆ 260438 ಮೈಲು ರೈಲುಮಾರ್ಗಗಳಿವೆ. ಕೆನಡಾದಲ್ಲಿ ಒಂದು ಕೋಟಿ ಜನರಿಗೆ 53061 ಮೈಲುಗಳಷ್ಟು ರೈಲುಮಾರ್ಗವಿರುವುದು. ಹಿಂದೂದೇಶದಲ್ಲಿ 35 ಕೋಟಿ ಜನಸಂಖ್ಯೆಗೆ (ಈಗ 38 ಕೋಟಿಗೆ) 42953·34 ಮೈಲುಗಳಷ್ಟು ಮಾತ್ರ ರೈಲುದಾರಿಯಿದೆ. ಮೋಟರ್ ವಾಹನಗಳ ವಿಚಾರದಲ್ಲಿ ನೋಡಿದರೆ, ಇಂಗ್ಲೆಂಡಿನಲ್ಲಿ

1930ರಲ್ಲಿ 23 ಲಕ್ಷ ಮೋಟರುಗಳಿದ್ದುವು. ಸಂಯುಕ್ತ ರಾಷ್ಟ್ರಗಳಲ್ಲಿ 368 ಲಕ್ಷ. ಇಂಡಿಯದಲ್ಲಿ ಕೇವಲ 2 ಲಕ್ಷ. ಅಮೇರಿಕದಲ್ಲಿ ಈಚೆಗೆ ಹೆಚ್ಚುಕಡಿಮೆ 5 ಜನರಿಗೆ ಒಂದರಂತೆ ಮೋಟರುಕಾರುಗಳನ್ನು ಇಟ್ಟಿರುವರೆಂದು ಅಂದಾಜು ಮಾಡಲಾಗಿದೆ." ಬಂಡಿಯ ರಸ್ತೆಗಳ ವಿಚಾರದಲ್ಲಿ ಅಂಕೆ ಸಂಖ್ಯೆಗಳನ್ನು ಹೋಲಿಸಿದರೆ ನಮ್ಮಲ್ಲಿ ರಸ್ತೆಗಳ ವಿಸ್ತಾರವು ಬಹು ಸ್ವಲ್ಪವೆಂದು ತೋರಿಬರುವುದು.

ಇಂಗ್ಲೆಂಡಿನಲ್ಲಿ ಉಂಟಾದ ಆರ್ಥಿಕ ಕ್ರಾಂತಿಯ ದೆಸೆಯಿಂದ ಅಲ್ಲಿಯ ನೆಲಮಾರ್ಗಗಳು ಅಭಿವೃದ್ಧಿಹೊಂದಿದ್ದಲ್ಲದೆ ನದಿ, ಕಾಲುವೆ ಮುಂತಾದ ಜಲಮಾರ್ಗಗಳೂ ಹೆಚ್ಚಿವೆ. ಅಲ್ಲಿ ನದಿ, ಕಾಲುವೆಗಳನ್ನೂ ಆಳ ಮಾಡಿ ಸಂಚಾರಕ್ಕೆ ಯೋಗ್ಯವಾಗಿ ಮಾರ್ಪಡಿಸಿರುವರು. ಫ್ರಾನ್ಸ್, ಜರ್ಮನಿ ಮೊದಲಾದ ಐರೋಪ್ಯ ರಾಷ್ಟ್ರಗಳಲ್ಲಿಯೂ ಯಾನಕ್ಕೆ ಯೋಗ್ಯವಾದ ನದಿ ಕಾಲುವೆಗಳು ಧಾರಾಳವಾಗಿವೆ. ಇಂತಹ ಕಾಲುವೆಗಳು ಇಂಗ್ಲೆಂಡಿನಲ್ಲಿ 4673 ಮೈಲುಗಳೂ, ಫ್ರಾನ್ಸಿನಲ್ಲಿ 6088 ಮೈಲುಗಳೂ, ಜರ್ಮನಿಯಲ್ಲಿ 1635 ಮೈಲುಗಳೂ ಉದ್ದವಾಗಿ ಸಂಚಾರಕ್ಕೆ ಅರ್ಹವಾಗಿವೆ. ಹಿಂದೂಸ್ಥಾನದಲ್ಲಿ ನದಿಗಳು ವಿಶೇಷವಾಗಿ ಯಾನಕ್ಕೆ ಅರ್ಹವಾಗಿರುವುದಿಲ್ಲ. ಕಾಲುವೆಗಳೂ ಹೆಚ್ಚಾಗಿಲ್ಲ. ಉತ್ತರ ಹಿಂದೂಸ್ಥಾನದಲ್ಲಿ ಕೆಲವು ನದಿಗಳು ಮಾತ್ರ ಸಂಚಾರಕ್ಕೆ ಉಪಯೋಗವಾಗಿವೆ. ದಕ್ಷಿಣ ಹಿಂದೂದೇಶದಲ್ಲಿ ಸಂಚಾರಾರ್ಹವಾದ ನದಿಗಳು ಹೆಚ್ಚಾಗಿಲ್ಲ. ಆದರೆ ಇದ್ದವುಗಳ ಸೌಕರ್ಯವು ರೈಲು ಮೋಟರುಗಳ ಮೇಲಾಟದಿಂದ ಹಿಂದೆ ಬಿದ್ದಿದೆ. ನಮ್ಮ ದೇಶದ ನೀರಿನ ಮಾರ್ಗಗಳನ್ನು ಹೆಚ್ಚು ಉಪಯೋಗಕರವಾಗುವಂತೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ವ್ಯವಸಾಯ ಸಮಿತಿಯವರು ಸೂಚಿಸಿದ್ದಾರೆ.

ಉತ್ತಮವಾದ ಸಂಚಾರ ವ್ಯವಹಾರದ ಅನುಕೂಲತೆಗಳು ರೈತರ ಬಹುಮುಖವಾದ ಅಭ್ಯುದಯಕ್ಕೆ ಸಹಾಯ ಮಾಡುತ್ತವೆ. ಅವು ಅಭಿವೃದ್ಧಿಗೊಂಡರೆ ದವಸಗಳನ್ನು ಸುಲಭವಾಗಿ ಸಂತೆಗೆ ಸಾಗಿಸಿ ಮಾರಾಟ ಮಾಡುವುದಕ್ಕೆ ಅನುಕೂಲವಾಗುವುದು. ದವಸಗಳನ್ನು ಸಾಗಿಸುವುದಕ್ಕೆ ತೊಂದರೆಗಳಿದ್ದರೆ ರೈತರು ತೊಂದರೆಗೆ ಗುರಿಯಾಗುತ್ತಾರೆ. ಬೇರೆ ಬೇರೆ ಕಡೆಗಳಲ್ಲಿ ದೊರೆಯುವ ಗಿರಾಕಿಗಳು, ಬೆಲೆ ಮೊದಲಾದುವನ್ನು ವಿಳಂಬವಿಲ್ಲದೆ ತಿಳಿದುಕೊಳ್ಳುವುದಕ್ಕೆ ರೈತರಿಗೆ ಅನುಕೂಲತೆಗಳಿರಬೇಕು. ಆರ್ಥಿಕ ದೃಷ್ಟಿಯಿಂದ ಮಾತ್ರವಲ್ಲ, ಇತರ ವಿಧದಲ್ಲಿಯೂ ವ್ಯವಹಾರ ಸೌಕರ್ಯಗಳು ಹೆಚ್ಚಾಗಬೇಕಾದುದು ಆವಶ್ಯಕ. "ಜನಜೀವನದ ಎಲ್ಲ ಭಾಗಗಳಲ್ಲಿ ವ್ಯವಹಾರ ಸೌಕರ್ಯಗಳ ಉಪಯೋಗವು ಪರಿಣಾಮವನ್ನುಂಟುಮಾಡದಿರುವುದಿಲ್ಲ. ಹಳ್ಳಿಯ ಜನರು ಕೂಪ ಮಂಡೂಕಗಳಂತೆ ಇದ್ದರೆ ಫಲವಿಲ್ಲ. ಹಳ್ಳಿಗರಿಗೂ ಪಟ್ಟಣಿಗರಿಗೂ ಇತರ ಪ್ರಾಂತ್ಯದವರಿಗೂ ಹೆಚ್ಚೇಕೆ ಅನ್ಯದೇಶೀಯರಿಗೂ ಅನ್ಯೋನ್ಯ ಸಂಪರ್ಕ ಬೆಳೆಯಬೇಕು. ಇದರಿಂದ ಜನರ ಮನೋವೈಶಾಲ್ಯವು ಹೆಚ್ಚುವುದು; ಸಂಕುಚಿತ ಭಾವನೆ ತೊಲಗುವುದು. ಅನೇಕ ವರ್ಷಗಳಿಂದ ಅಜ್ಞಾನ, ಅನಾರೋಗ್ಯ, ದಾರಿದ್ರ್ಯಗಳಿಂದ ನರಳುತ್ತಿರುವ ಗ್ರಾಮಾಂತರವಾಸಿಗಳ ಜೀವನದ ಅಂತಸ್ತು ಸುಧಾರಿಸುವುದಕ್ಕೂ, ತಿಳಿವಳಿಕೆ ಹೆಚ್ಚುವುದಕ್ಕೂ, ಆರ್ಥಿಕ ಸ್ಥಿತಿಯು ಉತ್ತಮವಾಗುವುದಕ್ಕೂ ವ್ಯವಹಾರ ಸೌಕರ್ಯಗಳು ಹೆಚ್ಚಬೇಕಾದುದು ಆವಶ್ಯಕ." ಮುಖ್ಯವಾಗಿ ವ್ಯವಹಾರ ಸೌಕರ್ಯಗಳು ವ್ಯಾಪಾರ ಸೌಕರ್ಯಕ್ಕೆ ತಳಹದಿಯಾಗಿರುವುದಷ್ಟೇ ಅಲ್ಲ. ಜನತೆಯ ಸಾರ್ವತ್ರಿಕ ಅಭಿವೃದ್ಧಿಗೆ ಮೂಲಾಧಾರವಾಗಿರುವುದೆನ್ನಬಹುದು.

ಇತ್ತೀಚೆಗೆ ಹಿಂದೂಸ್ಥಾನದಲ್ಲಿ ಪ್ರಯಾಣ ಮತ್ತು ವ್ಯವಹಾರ ಸೌಕರ್ಯಗಳು ಸಾಮಾನ್ಯವಾಗಿ ಹೆಚ್ಚುತ್ತ ಬಂದಿವೆಯೆಂಬುದು ನಿರ್ವಿವಾದವಾಗಿದೆ. ರೈಲ್ವೆಗಳು ಹೆಚ್ಚಿರುವುದರಿಂದ ದೇಶದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಪ್ರಯಾಣ ಬೆಳೆಸುವುದಕ್ಕೆ ಸುಲಭತೆಯನ್ನೊದಗಿಸಿರುವುದು, ಸಾಮಾನುಗಳು ಹಾಳಾಗದಂತೆ ಬೇಗನೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ತಲಪಿಸುವುದಕ್ಕೆ ಅನುಕೂಲವಾಗಿದೆ. ನಮ್ಮ ದೇಶದ ಕ್ಷಾಮ ನಿವಾರಣೆಗೆ ರೈಲ್ವೆಗಳೇ ಮುಖ್ಯವಾದ ಸಾಧನಗಳಾಗಿವೆ. ಅವುಗಳು ಇನ್ನೆಷ್ಟೋ ಪಾಲು ಹೆಚ್ಚಿಸುವುದಕ್ಕೆ ನಮ್ಮ ದೇಶದಲ್ಲಿ ಅವಕಾಶವಿದೆ. ಮೋಟರ್ ಬಸ್, ಲೋರಿಗಳು ಒಳನಾಡಿನ ಪ್ರಯಾಣ ಸೌಕರ್ಯಗಳನ್ನು ಹೆಚ್ಚಿಸಿವೆ. ರೈಲುಗಳನ್ನು ಬಿಟ್ಟರೆ, ಅನುಕೂಲವೂ ತ್ವರಿತಗತಿಯುಳ್ಳದ್ದೂ ಆಗಿರುವ ವಾಹನಗಳು ಇವೇ ಆಗಿವೆ. ಇವುಗಳು ಹೆಚ್ಚಬೇಕಾದರೆ ರಸ್ತೆಗಳು ವಿಸ್ತಾರವಾಗಬೇಕು. ಹಾಗಾದಪಕ್ಷದಲ್ಲಿ ಕೂಡ ಅವು ಪ್ರತಿಯೊಂದು ಹಳ್ಳಿಯನ್ನು ಮುಟ್ಟುವುದು ಸಾಧ್ಯವಲ್ಲ. ರೈಲು, ಮೋಟರುಗಳು ಎಷ್ಟು ಹೆಚ್ಚಿದರೂ ನಮ್ಮ ದೇಶದ ರೈತರಿಗೆ ಈಗಲೂ ಇನ್ನುಮುಂದಕ್ಕೂ ಸಮೀಪದ ಸಂತೆಗಳಿಗೆ ಸರಕುಗಳನ್ನೊಯ್ಯುವುದಕ್ಕೆ ಅನುಕೂಲವಾಗಿರುವುದು ಎತ್ತಿನ ಬಂಡಿಯೇ ಆಗಿದೆ. ಬೊಂಬೈಯಂತಹ ನಗರಗಳಲ್ಲಿ ಕೂಡ ರೈಲು, ಟ್ರೇಮ್, ಮೋಟಾರುಗಳು ಧಾವಿಸುತ್ತಿರುವಾಗ ಪಕ್ಕದಲ್ಲಿ ಸಾಮಾನುಗಳನ್ನು ಸಾಗಿಸುತ್ತಲಿರುವ ಎತ್ತಿನ ಬಂಡಿಗಳು ಹಾದುಹೋಗುವುದನ್ನು ನೋಡಬಹುದು. ಅಂತೂ ರೈಲುಮಾರ್ಗಗಳೂ ಮೋಟರ್ ರಸ್ತೆಗಳೂ ಹೆಚ್ಚುವುದರೊಡನೆ ಗಾಡಿಯ ಒಳರಸ್ತೆಗಳೂ ಹೆಚ್ಚಾಗಿ ವೃದ್ಧಿಗೊಳ್ಳಬೇಕು. ಸಾಧ್ಯವಿದ್ದಲ್ಲಿ ನದಿ ಕಾಲುವೆಗಳನ್ನು ದೋಣಿಯ ಸಂಚಾರಕ್ಕೆ ಹೆಚ್ಚು ಅನುಕೂಲವಾಗುವಂತೆ ಮಾಡಬೇಕು.

1935ರಲ್ಲಿ ಕೇಂದ್ರ ಸರಕಾರವು ಗ್ರಾಮಾಂತರಗಳ ಉದ್ಧಾರ ಕಾರ್ಯಗಳ ವಿನಿಯೋಗಕ್ಕಾಗಿ ಒಂದು ಕೋಟಿ ರೂಪಾಯಿಯ ಸಹಾಯಕ ನಿಧಿಯನ್ನು ಪ್ರಾಂತೀಯ ಸರಕಾರಗಳ ವಶಕ್ಕೊಪ್ಪಿಸಿತು. ಎಲ್ಲಾ ವಿಧದಲ್ಲಿಯೂ ಹಳ್ಳಿಗಳ ಉದ್ಧಾರಕ್ಕೆ ಆ ಹಣವು ವಿನಿಯೋಗವಾಗಬೇಕೆಂಬ ನಿಯಮವಿದೆ. ಮದರಾಸು ಸರಕಾರದವರು ತಮ್ಮ ಪಾಲಿಗೆ ಬಂದ ಹಣವನ್ನು ಹಳ್ಳಿಗಳಲ್ಲಿ ನೀರಿನ ಸರಬರಾಜು, ಆರೋಗ್ಯ, ವಿದ್ಯಾಭ್ಯಾಸ, ವ್ಯವಹಾರ ಸೌಕರ್ಯ, ಸಹಕಾರ ಮೊದಲಾದುವುಗಳ ಅಭಿವೃದ್ಧಿ ಕಾರ್ಯಗಳಿಗೆ ಸಹಾಯಕ ದ್ರವ್ಯವಾಗಿ ಕೊಟ್ಟು ಆಯಾ ಭಾಗದಲ್ಲಿ ತಕ್ಕ ಮಟ್ಟಿಗೆ ಪ್ರಚಾರಕಾರ್ಯವನ್ನು ನಡಿಸಿರುವರು. ಮದರಾಸು ಸರಕಾರದವರು 1938ರಲ್ಲಿ 70 ಹಳ್ಳಿಗಳಲ್ಲಿ ರೇಡಿಯೊ ರಿಸೀವಿಂಗ್ ಸೆಟ್ಟುಗಳನ್ನು ಇರಿಸಿ, ಆಕಾಶವಾಣಿಯ ಅನುಕೂಲತೆಗಳನ್ನು ಒದಗಿಸಿರುವರಾಗಿ ತಿಳಿದುಬಂದಿದೆ. ಇತರ ಪ್ರಾಂತೀಯ ಸರಕಾರಗಳೂ ಹಳ್ಳಿಗಳ ಉದ್ಧಾರಕಾರ್ಯದಲ್ಲಿ ಕೈಲಾದಷ್ಟು ಗಮನವಿತ್ತು ಪ್ರಯತ್ನಿಸುತ್ತಲಿವೆ. ಆದರೆ ದೇಶದ ವಿಸ್ತಾರ ಮತ್ತು ಜನಸಂಖ್ಯೆಯನ್ನು ಗಮನಿಸಿದರೆ ಇದು ಸಮುದ್ರದಲ್ಲಿ ಹುಣಿಸೆ ಹಣ್ಣನ್ನು ಗಿವುಚಿದಂತೆಯೆ ಸರಿಯೆಂದು ಗೊತ್ತಾಗುವುದು.

ಸದ್ಯದ ಪರಿಸ್ಥಿತಿಯಲ್ಲಿ ಟೆಲಿಗ್ರಾಫ್, ಟೆಲಿಫೋನುಗಳ ಸೌಕರ್ಯದ ಉಪಯೋಗವನ್ನು ಹಳ್ಳಿಗರು ಹೊಂದುವ ಸ್ಥಿತಿಯಲ್ಲಿರುವುದಿಲ್ಲ. ಅವುಗಳಿಂದ ಪಟ್ಟಣಿಗರು ವಿಶೇಷ ಪ್ರಯೋಜನವನ್ನು ಹೊಂದುತ್ತಿರುವರು. ಅವುಗಳಿಗಾಗಿ ಸರಕಾರದವರು ಹೆಚ್ಚು ಹಣವನ್ನು ಖರ್ಚುಮಾಡುತ್ತಲೂ ಇದ್ದಾರೆ. ಹಳ್ಳಿಗರಿಗೆ ಪ್ರಯೋಜನವಾಗತಕ್ಕದು ಅಂಚೆಕಟ್ಟೆಯ ಸೌಕರ್ಯ. ಸ್ವಲ್ಪ ವೆಚ್ಚದಲ್ಲಿ ಅವುಗಳನ್ನು ಹೆಚ್ಚಿಸುವುದಕ್ಕೆ ಸಾಧ್ಯವಾಗುವುದು. ಈಗ ಅಂಚೆಕಟ್ಟೆಯ ಪ್ರಯೋಜನವನ್ನು ಕೂಡಾ ಪಟ್ಟಣಿಗರೇ ಹೆಚ್ಚು ಹೊಂದುತ್ತಿರುವರಲ್ಲದೆ ಹಳ್ಳಿಗರಲ್ಲ. ನಮ್ಮ ದೇಶದಲ್ಲಿರುವ ಒಟ್ಟು 2575 ಪಟ್ಟಣಗಳಿಗೆ 5000 ಪೋಸ್ಟಾಫೀಸುಗಳಿವೆ. ಆದರೆ 7,00,000 ಹಳ್ಳಿಗಳಿಗೆ ಕೇವಲ 18,740 ಪೋಸ್ಟಾಫೀಸುಗಳಿರುವುವು. ಹೆಚ್ಚೇನು? ಸರಾಸರಿ 30 ಗ್ರಾಮಗಳಿಗೆ ಒಂದು ಅಂಚೆಕಟ್ಟೆಯಂತೆ ಇರುವುದು ಎಷ್ಟು ಶೋಚನೀಯ! ಸಾಮಾನ್ಯವಾಗಿ 14,225 ಜನರು ಒಂದು ಅಂಚೆಕಟ್ಟೆಯ ಉಪಯೋಗವನ್ನು ಮಾಡಿಕೊಳ್ಳಬೇಕಾಗಿದೆ. ಅಂಚೆ ಪೆಟ್ಟಿಗೆಗಳನ್ನು ಇರಿಸಿರುವ ವಿಷಯದಲ್ಲಿಯೂ ಹೀಗೆಯೇ. ಪ್ರತಿಯೊಂದು ಪಟ್ಟಣಕ್ಕೆ 7 ಟಪ್ಪಾಲು ಪೆಟ್ಟಿಗೆಗಳು ಇರಿಸಲ್ಪಟ್ಟಿವೆ. ಆದರೆ 16 ಗ್ರಾಮಗಳಿಗೆ ಒಂದು ಟಪ್ಪಾಲು ಪೆಟ್ಟಿಗೆಯಂತೆ ಮಾತ್ರ ಏರ್ಪಾಡಾಗಿರುವುದು. ಗ್ರಾಮಾಂತರಗಳಲ್ಲಿ ಪ್ರತಿಯೊಂದು ಗ್ರಾಮಕ್ಕೆ ಒಂದರಂತೆ ಟಪ್ಪಾಲು ಪೆಟ್ಟಿಗೆಗಳನ್ನು ಇರಿಸುವ ವ್ಯವಸ್ಥೆಯನ್ನು ಮಾಡುವುದು ಸರಕಾರದವರ ಹಾಗೂ ಟಪ್ಪಾಲು ಇಲಾಖೆಯ ಕರ್ತವ್ಯವಾಗಿದೆ.

ಸರಕಾರದವರು ಕಾನೂನುಗಳನ್ನು ಮಾಡಬಹುದು. ಸೌಕರ್ಯಗಳನ್ನೊದಗಿಸಿಕೊಡಬಹುದು. ಆದರೆ ಅವುಗಳನ್ನು ಪಾಲಿಸುವುದಕ್ಕೂ ಉಪಯೋಗಿಸಿಕೊಳ್ಳುವುದಕ್ಕೂ ಜನರು ಉತ್ಸಾಹಗೊಂಡು ಸಿದ್ಧರಾಗಿರಬೇಕು. ಸ್ಥಳೀಯ ಆವಶ್ಯಕತೆಗಳ ಪ್ರತಿಯೊಂದು ವಿಷಯದಲ್ಲಿಯೂ ಸರಕಾರದ ಅಧಿಕಾರಿಗಳಿಂದಲೇ ಸಹಾಯ ದೊರೆಯಬೇಕೆಂದು ಜನರು ನಿರೀಕ್ಷಿಸುವುದು ಸರಿಯಲ್ಲ. ಆತ್ಮಾವಲಂಬನೆ, ಪರಸ್ಪರ ಸಹಾಯ ಇವು ಜನರಲ್ಲಿ ಹೆಚ್ಚಬೇಕೆಂಬ ಉದ್ದೇಶದಿಂದಲೇ ಸ್ಥಳೀಯ ಸಂಸ್ಥೆಗಳ ಸ್ಥಾಪನೆಗೆ ಏರ್ಪಾಡಾಗಿರುವುದು. ಡಿಸ್ಟ್ರಿಕ್ಟ್ ಬೋರ್ಡುಗಳೂ ಗ್ರಾಮಪಂಚಾಯಿತಿಗಳೂ ಸ್ಥಳೀಯ ಸಮಸ್ಯೆಗಳನ್ನು ಪರಿಶೀಲಿಸಿಕೊಂಡು ರಸ್ತೆ, ಬಾವಿ, ಶಾಲೆ, ಪುಸ್ತಕಭಂಡಾರ ಮೊದಲಾದ ಸಾರ್ವಜನೋಪಕಾರಕ ಕಾರ್ಯಗಳಲ್ಲಿ ಕೈಯಿಕ್ಕಿ ಕೆಲಸ ಮಾಡಬಹುದು. ವ್ಯಾಪಾರ ವಹಿವಾಟಿಗೆ ಭಂಡವಾಳಗಳನ್ನೊದಗಿಸುವುದಕ್ಕೂ ಸಾಮಾನುಗಳನ್ನು ರೈತರಿಂದ ಕೊಂಡುಕೊಂಡು ವಿಕ್ರಯ ಮಾಡುವುದಕ್ಕೂ ಅವರಿಗೆ ಬೇಕಾದುದನ್ನು ತರಿಸಿ ಕೊಡುವುದಕ್ಕೂ ಇನ್ನೆಷ್ಟೋ ವಿಧವಾದ ಆರ್ಥಿಕಾಭಿವೃದ್ಧಿಯ ಕಾರ್ಯಗಳಿಗೂ ಸಹಕಾರ ಸಂಘಗಳು ಕೈಯಿಕ್ಕಿ ಕೆಲಸ ಮಾಡಬಹುದು. ವಿದ್ಯಾಪ್ರಚಾರ, ನ್ಯಾಯತೀರ್ಮಾನ, ಗ್ರಾಮಾಡಳಿತಗಳ ವಿಷಯದಲ್ಲಿ ಗ್ರಾಮಪಂಚಾಯಿತಿಗಳು ಉತ್ತಮ ಕಾರ್ಯಗಳನ್ನೇ ನಿರ್ವಹಿಸಬಹುದು. ವ್ಯವಸಾಯದಿಂದಾಗಲಿ ಕೈಗಾರಿಕೆಗಳಿಂದಾಗಲಿ ರೈತರು ಪಡೆಯುವ ದವಸಗಳನ್ನೂ ಸಾಮಾನುಗಳನ್ನೂ ಲಾಭಕರವಾಗುವಂತೆ ಹಾಗೂ ಅವುಗಳಿಗೆ ಸಂಬಂಧಿಸಿದ ಸೌಕರ್ಯಗಳನ್ನೊದಗಿಸುವುದಕ್ಕೆ ರೈತರು ತಾವಾಗಿ ಉತ್ಸಾಹದಿಂದ ಪ್ರಯತ್ನಿಸುವ ಅಂಶವು ಮುಖ್ಯವಾಗಿದೆ.

('ಗ್ರಾಮಾಭ್ಯುದಯ' ಎಂಬ ಅಪ್ರಕಟಿತ ಪುಸ್ತಕದಿಂದ)



ಜೈನಧರ್ಮದ ಐತಿಹಾಸಿಕ ಕಾಲ!

'ಅಹಿಂಸಾತತ್ವವನ್ನು ಶೋಧಿಸಿದವರು ನಾವು!'

ಲೇಖಕರು:—
ಶ್ರೀ ಬಿ. ಪುಟ್ಟಸ್ವಾಮಿಯವರು, ಬಿ. ಎ., ಬಿ. ಎಲ್., ಮಂಗಳೂರು.

ಜೈನಧರ್ಮದ ಪ್ರಗತಿ, ಪ್ರಚಾರಗಳು ಹೇಗಾದುವು ಎಂಬುದನ್ನು ಲೇಖಕರು. ಆದಿಚರಿತ್ರೆ, ಮಧ್ಯಚರಿತ್ರೆ, ಪುರಾತನ ಮಧ್ಯಚರಿತ್ರೆ, ಆಧುನಿಕ ಚರಿತ್ರೆ— ಈ ರೀತಿಯಾಗಿ ಪೃಥಕ್ಕರಿಸಿ, ಸಂಕ್ಷೇಪವಾಗಿ-ತಿಳಿಯಾಗಿ ವಿವರಿಸಿರುವರು. ಶ್ರೀ ಪುಟ್ಟಸ್ವಾಮಿಯವರು "ವಿವೇಕಾಭ್ಯುದಯ" ಪತ್ರಿಕೆಯ ಸಂಪಾದಕರು. 'ಅಹಿಂಸೆಯು ಜೈನಧರ್ಮದ ತಿರುಳು; ಇಂತಹ ಧರ್ಮತತ್ವಗಳನ್ನು ಜಗತ್ತು ತಿಳಿವಂತೆ, ಬಲ್ಲವರು ಬರೆದು-ಬರೆಯಿಸಿ-ಸಾರಬೇಕು' ಎಂದು ಲೇಖಕರ ವಿನಂತಿ.

ಪ್ರಸಿದ್ಧಿನ್ನವಾದ ಜೈನಧರ್ಮದ ಇತಿಹಾಸವನ್ನು ಈ ವರೆಗೆ ಬರೆದುದಿಲ್ಲ. ಅದನ್ನು ಸಂಗ್ರಹಿಸಿ ಬರೆಯುವುದಾದರೂ ಕಷ್ಟಸಾಧ್ಯವಾದ ಕೆಲಸ. ಜೈನಧರ್ಮ ಮತ್ತು ಅದರ ತತ್ವಗಳ ಇತಿಹಾಸ ಶಿಕ್ಷಣವು ಬಹಳ ಶೈಶವಾವಸ್ಥೆಯಲ್ಲಿದೆ. ಜೈನಧರ್ಮದ ಬೆಳವಣಿಗೆಯ ಮತ್ತು ಕುಂದುವಿಕೆಯ ಚರಿತ್ರೆಯನ್ನು ನಾವು ತಿಳಿಯಬೇಕಾದರೆ, ಅದರಲ್ಲಿ ಇನ್ನೂ ಸಂಶೋಧನೆಗಳು ಆಗಬೇಕು. ಇಷ್ಟರ ತನಕದ ಶೋಧನೆಯ ಫಲಿತಾಂಶವಾಗಿ, ಅದರ ಚರಿತ್ರೆಯ ಮೂರು ಸಾವಿರ ವರುಷಗಳ ಬೇರೆ ಬೇರೆ ಕಾಲದ ಉದಾತ್ತ ಗುಣಗಳು ತಿಳಿದುಬಂದಿವೆ. ಅದರ ಕಾಲಗಳನ್ನು ಈ ರೀತಿ ವಿಂಗಡಿಸಬಹುದು.

೧. ಆದಿ ಚರಿತ್ರೆಯ ಕಾಲ:—ಆರನೆ ಶತಮಾನ (ಕ್ರಿ. ಪೂ.) ದ ಹಿಂದೆ.

೨. ಮೊದಲ ಚರಿತ್ರೆಯ ಕಾಲ:—ಆರನೆಯ ಶತಮಾನ (ಕ್ರಿ. ಪೂ.)ದಿಂದ ನಾಲ್ಕನೆಯ ಶತಮಾನ (ಕ್ರಿ. ಶ.) ದ ವರೆಗೆ.

೩. ಪುರಾತನ ಮಧ್ಯ ಚರಿತ್ರೆಯ ಕಾಲ:—ನಾಲ್ಕನೆಯ ಶತಮಾನದಿಂದ ೧೨ನೆಯ ಶತಮಾನದ ವರೆಗೆ.

೪. ಮಧ್ಯ ಚರಿತ್ರೆಯ ಕಾಲ:—೧೨ನೆಯ ಶತಮಾನದಿಂದ ೧೬ನೆಯ ಶತಮಾನದ ವರೆಗೆ.

೫. ಆಧುನಿಕ ಚರಿತ್ರೆ:—೧೬ನೆಯ ಶತಮಾನದಿಂದ ಇಂದಿನ ವರೆಗೆ.

೧. ಆದಿ ಚರಿತ್ರೆಯ ಕಾಲ

ಈ ಕಾಲವು ಶ್ರೀ ಮಹಾವೀರ ತೀರ್ಥಂಕರರ ಕಾಲದಿಂದ ಹಿಂದಿನ ಪುರಾಣ ಕಾಲದ ತನಕ ಸರಿಯುತ್ತದೆ. ಅದರ ಕಾಲದ ನಿಜವಾದ ಜ್ಞಾನವು ನಮಗಿಲ್ಲದಿದ್ದುದರಿಂದ ಅದಕ್ಕೆ ಆದಿ ಚರಿತ್ರೆಯ ಕಾಲವೆಂದು ನಾವು ಹೇಳಬೇಕಾಯಿತು. ಜೈನ ದೇವಾಲಯವು ಗಣನೀಯವಾಗಿ. ಜೈನ ಮತವನ್ನು ಸರಿ ದಾರಿಗೆ ತಂದ ಮಹಾವೀರ ತೀರ್ಥಂಕರರ ಸಮಯದಲ್ಲೇ ಜೈನ ಮತವು ಹಿಂದಿನಿಂದಲೇ ದೊಡ್ಡ ಚರಿತ್ರೆಯಿಂದೊಡಗೂಡಿತ್ತು. ಎಂಬ ವಿಚಾರವು ವಿವಾದಬಾಹ್ಯವಾಗಿದೆ. ಕ್ರಿ. ಪೂ. ೬ನೆಯ ಶತಮಾನದಲ್ಲಿ ಪ್ರಶಸ್ತಿ ಹೊಂದಿದ ಜೈನ ಮತವು ಒಂದು ದೊಡ್ಡ ಚರಿತ್ರೆಯ ಕಾಲವನ್ನು ಸೂಚಿಸುವುದು. ಅಹಿಂಸೆಯನ್ನು ಬೋಧಿಸಿ, ವೈದಿಕ ಬಲಿ ಅರ್ಪಣೆಗಳನ್ನು ನಿಷೇಧಿಸಿ, ಬತ್ತಲೆಯಾಗಿ ತಿರುಗುವ ಧರ್ಮ ಶಾಸ್ತ್ರಜ್ಞರ ಬರವು ವೈದಿಕ ಶಾಸ್ತ್ರದಲ್ಲಿ ಕಂಡುಬರುತ್ತದೆ. ಮಹಾವೀರ ಮತ್ತು ಬುದ್ಧ ಇವರ ಕಾಲಕತ್ತದಲ್ಲಿ ಮುಂದರಿದು ಪ್ರಶಸ್ತಿ ಹೊಂದಿದ ಬ್ರಾಹ್ಮಣನಿಷೇಧ ಚಳವಳವು ಈ ಮುಂದಾಳುಗಳ ಕಾಲದ ಹಿಂದೆಯೇ ಜನ್ಮವೆತ್ತಿರುತ್ತದೆ.

ಈ ವಿಚಾರಗಳನ್ನು ಗ್ರಹಿಸಿ ಜೈನತತ್ವಗಳನ್ನು ಮನಗೊಂಡು, ನಿರ್ಗ್ರಂಥ ಜೈನ ಪಂಥದ ಬೆಳವಣಿಗೆಯನ್ನು ಪರ್ಯಾಲೋಚಿಸಿದರೆ ಆದಿಚರಿತ್ರೆಯ ಕಾಲವು ತನ್ನಿಂದ ತಾನೇ ಸೂಚಿತವಾಗುವುದು.

೨. ಮೊದಲ ಚರಿತ್ರೆಯ ಕಾಲ

ವಿದೇಹ ದೇಶದಲ್ಲಿ ಉಪನಿಷತ್ತುಗಳ ತತ್ವವು ಜನಕನಂತಹ ಅರಸುಗಳಿಂದ ಹೆಚ್ಚಾಗಿ ಪ್ರೋತ್ಸಾಹ ಪೂರ್ವಕವಾಗಿ ಮನನಮಾಡಲ್ಪಟ್ಟಿರುತ್ತದೆ. ಅದೇ ಪ್ರದೇಶದಲ್ಲಿ ೬ನೆಯ ಶತಮಾನದಲ್ಲಿ ಮಹಾವೀರನೂ, ಬುದ್ಧನೂ ಅವತಾರ ಹೊಂದಿದರು. ಬುದ್ಧದೇವನು ಅಂದು ಸಾರಿದ ಮತವು ಎಂದೋ ಹಿಂದೂದೇಶದಿಂದ ಹೊರಗಟ್ಟಲ್ಪಟ್ಟರೂ, ಸಾಧಾರಣ ಭೂಲೋಕದ ಜನರ ಮೂವರಲ್ಲಿ ಒಬ್ಬನು ಅದನ್ನು ಅವಲಂಬಿಸುತ್ತಾನೆ. ನಿರ್ಗ್ರಂಥವೆಂಬ ಮತವು ಮಹಾವೀರ ಸ್ವಾಮಿಯಿಂದ ಸಾರಲ್ಪಟ್ಟು ಆ ಮೇಲಿನ ಶತಮಾನಗಳಲ್ಲಿ ವಿವಿಧ ಅಂಕುರಗಳಲ್ಲಿ ಬೆಳೆದು ಬಂದಿದೆ.

ಅಹಿಂಸಾ ಪ್ರಚಾರ, ಜೈನ ತತ್ವ ಮತ್ತು ಧರ್ಮ ಶಾಸ್ತ್ರ, ಜೈನ ಸಂಘವನ್ನು ರಚಿಸುವುದು, ಶಾಂತರೀತಿಯಲ್ಲಿ ಮತಾಂತರಗೊಳಿಸುವಿಕೆಯೇ ಮೊದಲಾದ ಕಾರ್ಯಕ್ರಮಗಳು ಮಹಾವೀರ ಸ್ವಾಮಿಯಿಂದಾಗಿದ್ದುವು. ಈ ಶತಮಾನಗಳಲ್ಲಿ ಆದ ವಿಶೇಷ ಗುಣಗಳೆಂದರೆ—ಪಶುಬಲಿಯು ಮೆಲ್ಲನೆ ಮಾಯವಾಗುವಿಕೆ, ಜೈನ ಧರ್ಮವು ಅರಸರುಗಳಿಂದ ಪ್ರೋತ್ಸಾಹಗೊಳ್ಳುವಿಕೆ, ಚತುರ್ದಿಕ್ಕುಗಳಲ್ಲಿಯೂ ಈ ಧರ್ಮದ ಹರಡುವಿಕೆ ಅಂಗವೆಂಬ ಗ್ರಂಥಗಳ ಮನನ,

ಈ ವಿಷಯದಲ್ಲಿ ಮಹಾವೀರ ಸ್ವಾಮಿಯ ಶಿಷ್ಯರಿಂದ ನಡೆಯುತ್ತಿದ್ದವು. ಗ್ರೀಕ ಅರಸನಾದ ಅಲೆಗ್ಝಾಂಡರನು ಹಿಂದುಸ್ಥಾನದ ಮೇಲೆ ದಂಡೆತ್ತಿ ಬರುವ ಸಮಯದಲ್ಲೇ ಜೈನ ಗುರುಗಳು ಸಿಂಧೂ ನದಿಯ ದಡದಲ್ಲಿ ಕಾಣಿಸಿಕೊಂಡರು. ಜೈನ ಮತಾವಲಂಬಿಯಾದ ಮೌರ್ಯವಂಶದ ಚಂದ್ರಗುಪ್ತನ ಸಮಯದಲ್ಲಿ ಭದ್ರಬಾಹುವಿನ ನೇತೃತ್ವದಲ್ಲಿ ದಕ್ಷಿಣ ದೇಶಗಳಲ್ಲಿಯೂ ಈ ನಿರ್ಗ್ರಂಥ ಗುರುಗಳು ಇರುತ್ತಿದ್ದರು. ಕನ್ನಡ ಜಿಲ್ಲೆಗಳಲ್ಲಿ ಹಿಂದೆಯೇ ಜೈನ ಮತವು ಪ್ರಾಶಸ್ತ್ಯವನ್ನು ಹೊಂದಿಕೊಂಡಿದ್ದುದರಿಂದಲೇ ಭದ್ರಬಾಹುವು ಜೈನ ಮತ ಪ್ರಚಾರ ಕಾರ್ಯವನ್ನು ಮಾಡಲು ಧೈರ್ಯದಿಂದ ಮುನ್ನಡೆದನು. ಹೇಗೆಂದರೂ ಕನ್ನಡ ಜಿಲ್ಲೆಯಲ್ಲಿ ಅವನ ಪ್ರವಾಸದ ಕಾರ್ಯಕ್ರಮವು ಫಲದಾಯಕವಾಗಿ ಪರಿಣಮಿಸಿದ ಜೈನ ಮತವು ಅಲ್ಲಿ ಬಲವಾಗಿ ಬೇರೂರಿಗೊಂಡಿತು. ನಂತರ ಕಾಲದಲ್ಲೇ ಜೈನ ಮತವು ಕಳಿಂಗದಲ್ಲಿ ಸ್ಥಿರವಾಗಿ ಸಾಧಾರಣ ಕ್ರಿ. ಪೂ. ೨ನೆಯ ಶತಮಾನದಲ್ಲಿ ಖಾರವೇಲನು ಆಳುವ ತನಕ ದೇಶದ ಮತವಾಗಿದ್ದಿತು.



ಮಹಾವೀರಸ್ವಾಮಿ

ಕ್ರಿಸ್ತನ ಮೊದಲನೆಯ ಶತಮಾನದಲ್ಲಿ ಮಥುರದಲ್ಲಿಯೂ ಇತ್ತ ಶ್ರವಣ ಬೆಳ್ಗೊಳದಲ್ಲಿಯೂ ಜೈನ ಮತವು ಪ್ರಚಾರದಲ್ಲಿದ್ದುದು. ಇದಕ್ಕೆ ಆಧಾರವಾಗಿ ಆ ಕಾಲದ ಅನೇಕ ಶಾಸನಗಳು ದೊರಕಿವೆ. ಆ ಕಾಲದಲ್ಲಿ ಜೈನ ಮತವನ್ನು ಪ್ರಚಾರ ಮಾಡಲು ಮಹಾವೀರನ ಶಿಷ್ಯದಳವು ಬಲು ಹಣಗಾಡಿರುವುದು ಆ ಕಾಲದ ಗಣನೀಯ ಸಂಗತಿಯಾಗಿದೆ. ಜೈನ ಮತ್ತು ಬೌದ್ಧ ಮತಗಳು ಏಕ ರೀತಿಯಿಂದ ಬೆಳೆದು ಬರುತ್ತ ಇರುವ ಕಾಲದಲ್ಲಿ ಅವುಗಳೊಳಗೆ ಬಳೆದು ಬಂದ ಸಂಬಂಧವನ್ನು ಪರಿಶೀಲಿಸುವುದು ಅಗತ್ಯ.

೩. ಪುರಾತನ ಮಧ್ಯಚರಿತ್ರೆಯ ಕಾಲ

ಉಬ್ಬಿ ಬಂದಂತೆಯೇ ಅಭಿಪ್ರಾಯ ಭೇದಬೀಜಗಳು ಜೈನ ಮತದಲ್ಲಿ ಕಾಣಲಾರಂಭಿಸಿದವು. ಮಹಾ ವೀರ ದೇವನ ನಿರ್ವಾಣದ ನಂತರ ಅಭಿಪ್ರಾಯ ಭೇದಗಳು ತಲೆದೋರಿದರೂ ಅವು ಜೈನ ಸಮಾಜದ ಸಂಪೂರ್ಣತೆಯನ್ನು ಭೇದಿಸಲು ಅಸಮರ್ಥವಾದುವು. ಜೈನಮತದಲ್ಲಿ ದಿಗಂಬರ ಮತ್ತು ಶ್ವೇತಾಂಬರವೆಂಬ ಎರಡು ಪಂಗಡಗಳು ತಲೆದೋರಿದುವು. ಅದೇ ರೀತಿ ಬೌದ್ಧ ಮತದಲ್ಲಿ ಹೀನಯಾನ ಮತ್ತು ಮಹಾಯಾನ ಎಂಬ ಎರಡು ಪಂಗಡಗಳು ತಲೆದೋರಿದುವು. ಈ ಘಟನೆಯು ಭದ್ರಬಾಹುವಿನ ಕಾಲದಿಂದ ನಡೆಯಲಾರಂಭವಾಗಿ ದಕ್ಷಿಣ ಪ್ರವಾಸಗೊಂಡವರು ದಿಗಂಬರರಾಗಿಯೂ ಉತ್ತರದಲ್ಲಿದ್ದವರು ಶ್ವೇತಾಂಬರರಾಗಿಯೂ ಮಾರ್ಪಟ್ಟರು.

ಆ ಕಾಲದಲ್ಲಿಯ ವೈಶಿಷ್ಟ್ಯವೆಂದರೆ, ಬೇರೆ ಬೇರೆ ಪಂಗಡಗಳ ಬೇರೆ ಬೇರೆ ಸಾಹಿತ್ಯದ ಬೆಳವಣಿಗೆಯು. ಮಹಾವೀರನು ಶಿಷ್ಯರ ಭಾಷೆಯಾದ ಸಂಸ್ಕೃತದಲ್ಲಿ ಉಪದೇಶಿಸುವುದರ ಬದಲಾಗಿ ಸಾಮುದಾಯಿಕ ಮಹಾಜನರ ಭಾಷೆಯಾದ ಪ್ರಾಕೃತದಲ್ಲಿ ಉಪದೇಶಿಸತೊಡಗಿದನು. ಬೌದ್ಧಮತಾವಲಂಬಿಗಳಿಗೆ ಪಾಲಿಯು ಸಾಹಿತ್ಯದ ಭಾಷೆಯಾದಂತೆ ಜೈನರಿಗೆ ಪ್ರಾಕೃತವು ಆಗಿದ್ದಿತು. ದೇವನ ವಾಕ್ಯಗಳನ್ನು ಹನ್ನೆರಡು ಅಂಗಗಳಲ್ಲಿ ಕ್ರಮಾನುಗತವಾಗಿ ಅನುಗೊಳಿಸಿದರೂ ಅವು ಬಾಯಿಪಾಠವಾಗಿ ಇತ್ತೇ ವಿನಹ ಬರಹದಲ್ಲಿ ಇರಲಿಲ್ಲ. ಅದರ ನಂತರದ ಶತಮಾನಗಳಲ್ಲಿ ಈ ಅಂಗಗಳು ಕ್ರಮೇಣ ಮಾಯವಾಗುತ್ತ ಬಂದುವು.

೫ನೆಯ ಶತಮಾನದಲ್ಲಿ ಉತ್ತರದ ಶ್ವೇತಾಂಬರರು ಕಳೆದುಹೋದ ಅಂಗಗಳನ್ನು ಶೋಧಿಸಲು ಪ್ರಯತ್ನಪಟ್ಟರು. ಕ್ರಿ. ಶ. ೪೫೪ರಲ್ಲಿ ದೇವರ್ಧಿಗಣಿಯ ಪ್ರಭುತ್ವದಲ್ಲಿ ವಲ್ಲಭಿಯಲ್ಲಿ ನಡೆದ ಮಹಾಸಭೆಯಲ್ಲಿ ಹನ್ನೊಂದು ಅಂಗಗಳು ಸಿಕ್ಕಿದುವು. ಆದರೆ ಅವು ಶುದ್ಧವಾದವುಗಳಲ್ಲವೆಂದು ದಿಗಂಬರರು ವಾದಿಸಿದರು. ಶ್ವೇತಾಂಬರರು ಹೊಸದಾಗಿ ಹುಡುಕಿದ ಆ ಅಂಗಗಳ ಪಠನಕ್ಕೆ ಮೊದಲು ಮಾಡಿದರು.

ದಿಗಂಬರರು ಪ್ರಾಕೃತದಲ್ಲಿ ಬರೆದ ಜೈನ ತತ್ವದ ಮೂಲ ಗ್ರಂಥಗಳನ್ನು ಮುಂದಿಟ್ಟರು. ಅವುಗಳ ಮುಖ್ಯ ಕರ್ತರಾದ ಕುಂದಕುಂದಾಚಾರ್ಯ ಮತ್ತು ಉಮಾಸ್ವಾಮಿಯವರು ಕ್ರಿಸ್ತಪೂರ್ವ ಮೊದಲನೆಯ ಶತಮಾನದಲ್ಲಿ ಕೀರ್ತಿ ಹೊಂದಿದ್ದರಾಗಿ ತಿಳಿದುಬರುತ್ತದೆ.

ಬೌದ್ಧರೊಂದಿಗೆ ತತ್ವಚರ್ಚೆಗಾಗಿ ಸ್ಯಾದ್ವಾದಾಚಾರಕ್ರಮವು ಈ ಶತಮಾನದಲ್ಲಿ ಪ್ರಚಾರದಲ್ಲಿತ್ತು. ಬೌದ್ಧರನ್ನು ಧರ್ಮವಾದದಲ್ಲಿ ಸೋಲಿಸಿದ ಜೈನತಾರ್ಕಿಕರಲ್ಲಿ ಶ್ರೇಷ್ಠರಾದ ಸಮಂತಭದ್ರ ಮತ್ತು ಅಕಲಂಕರು ಈ ಕಾಲದಲ್ಲಿ ಪ್ರಸಿದ್ಧರು. ಧರ್ಮವಾದದಲ್ಲಿ ಸೋಲಿಸಿ ಬೌದ್ಧರನ್ನು ಬಹಿಷ್ಕರಿಸಿದ ಅವರಿಗೆ ಕಾರಣಕರ್ತರೆಂದು ತಿಳಿಯಬೇಕಾಗಿದೆ.

ಈ ಕಾಲದಲ್ಲಿ ಸಾಹಿತ್ಯ ಕಾರ್ಯದಲ್ಲಿ ದಿಗಂಬರರು ದಕ್ಷಿಣದಲ್ಲಿಯೂ ಶ್ವೇತಾಂಬರರು ಪಶ್ಚಿಮದಲ್ಲಿಯೂ ಪ್ರವೀಣತೆಯನ್ನು ಹೊಂದಿದ್ದರು. ಎರಡೂ ಪಂಗಡದವರು ಪ್ರಾಕೃತದಲ್ಲಿಯೂ ಸಂಸ್ಕೃತದಲ್ಲಿಯೂ ಅನೇಕ ಗ್ರಂಥಗಳನ್ನು ರಚಿಸಿರುವರು. ೪ನೆಯ ಶತಮಾನದಿಂದ ಜೈನರು ಜನಾದರಣೀಯವಾದ ಸಾಹಿತ್ಯವನ್ನುಂಟುಮಾಡಿರುತ್ತಾರೆ.

ದಕ್ಷಿಣದಲ್ಲಿ ಸಮಂತಭದ್ರ, ಜಿನಸೇನ, ಅಕಲಂಕ, ನೇಮಿಚಂದ್ರ ಇವರುಗಳ ಹೆಸರುಗಳೂ ಉತ್ತರ ಮತ್ತು ಪಶ್ಚಿಮದಲ್ಲಿ ಸಿದ್ಧಸೇನ ದಿವಾಕರ, ಹರಿಭದ್ರ ಸೂರಿ, ಧನಪಾಲ, ಹೇಮಚಂದ್ರಾಚಾರ್ಯ ಇವರುಗಳ ಹೆಸರುಗಳೂ ಲೋಕದಲ್ಲಿ ಪ್ರಖ್ಯಾತ ಹೊಂದಿವೆ. ಜೈನ ಲೇಖಕರಿಂದಲೇ ತಮಿಳು ಕನ್ನಡ ಮೊದಲಾದ ದೇಶ ಭಾಷೆಗಳು ಸಾಹಿತ್ಯದ ಆಕಾರಕ್ಕೆ ಆ ಕಾಲದಲ್ಲಿ ಬಂದಿವೆ.

ದೇಶಭಾಷೆಗಳಲ್ಲಿ ಮೊದಲಿನ ಪುಸ್ತಕಗಳು ಜೈನ ಲೇಖಕರಿಂದಲೇ ಬರೆಯಲಾಗಿವೆ. ದಕ್ಷಿಣದಲ್ಲಿ ದಿಗಂಬರರೂ ಉತ್ತರ ಮತ್ತು ಪಶ್ಚಿಮಗಳಲ್ಲಿ ಶ್ವೇತಾಂಬರರೂ ರಾಜಾಶ್ರಯವನ್ನು ಹೊಂದಿರುತ್ತಾರೆ. ಅದು ಜೈನಮತಕ್ಕೆ ಅಭ್ಯುದಯ ಕಾಲವಾಗಿತ್ತು.

೪. ಮಧ್ಯ ಚರಿತ್ರೆಯ ಕಾಲ

ಇದು ಅವಸ್ಥಾಂತರ ಮತ್ತು ಅವನತಿಯ ಕಾಲ. ಜೈನ ದೇವಾಲಯದ ಮುಖ್ಯ ಶಕ್ತಿಯಾದ ಗುರುಗಳ ವ್ಯವಸ್ಥಿತ ಪದ್ಧತಿಯು ಶಿಥಿಲವಾಗುತ್ತ ಬಂದು ಆತ್ಮಸಮರ್ಪಣೆಯ ಭಾವವು ಮಾಯವಾಗುತ್ತ ಬಂದಿತು. ತತ್ವಸಾರವು ಮೂಲೆಗೊಳ್ಳುತ್ತ ಬಂದು, ಗುರುಗಳು ಅರಿಯದ ಜನರಿಗೆ ತತ್ವಬೋಧನೆ ಮಾಡಲು ಅಸಮರ್ಥರಾದರು. ಮತಾಂಗಗಳು ಮೊಳೆತು ಪಂಗಡಗಳ ಬೋಧಕರಾಗಿ ತಮ್ಮ ಸ್ವಾರ್ಥಕ್ಕೆ ಹೆಚ್ಚು ಗಮನ ಕೊಡುವವರಾದರಲ್ಲದೆ, ಸಾರ್ವಜನಿಕ ಪಾಠವನ್ನು ಮರೆತರು. ಆದುದರಿಂದ ಈ ಕಾಲದಲ್ಲಿ ಮೆಲ್ಲಗೆ ವೈಷ್ಣವ ಮತ್ತು ಶಿವಾರಾಧಕರಾಗಲು ತೊಡಗಿ ಆ ಎರಡು ಮತಗಳು ಪ್ರಬಲಗೊಳ್ಳುತ್ತ ಬಂದುವು. ಈ ಸಂಘದ ಬಲಹೀನತೆಯಿಂದ ರಾಜರುಗಳ ಪೋಷಣೆ, ರಾಜಕೀಯ ಮತ್ತು ಸಾಮಾಜಿಕ ಪ್ರೀತಿಗಳು ಕಡಿಗೊಂಡುವು.

ಜೈನರು ಆ ಕಾಲದಲ್ಲಿ ಬಹಳ ಐಶ್ವರ್ಯವಂತರಾಗಿದ್ದರೆಂಬ ಸಂಗತಿಯನ್ನು ಆಲೋಚಿಸುವಾಗ, ಈ ಅವನತಿಯು ಆಶ್ಚರ್ಯಕರವೆಂಬುದಾಗಿ ತಿಳಿದುಬರುತ್ತದೆ. ಈ ಕಾಲದ ಮೊದಲ ಭಾಗದಲ್ಲಿ ಇಂಡಿಯಾ ದೇಶದ ಪುಣ್ಯಸ್ಥಳಗಳಲ್ಲಿ ಅನೇಕ ಅಂದವಾದ ಜೈನ ದೇವಸ್ಥಾನಗಳು ಹೆಚ್ಚು ಹೆಚ್ಚಾಗಿ ಉಂಬಳಿಗಳನ್ನು ಪಡೆದು ಕಟ್ಟಲ್ಪಟ್ಟಿದ್ದುವು. ಆದರೆ ಮಹಮ್ಮದೀಯರ ಉಪಟಳದಿಂದ ದೇವಸ್ಥಾನ ಕಟ್ಟುವ ಕೆಲಸವು ನಿಲ್ಲಲಾರಂಭವಾಯಿತು. ಆ ಸಮಯದಲ್ಲಿ ಮಹಮ್ಮದೀಯರು, ದೇವಸ್ಥಾನಗಳನ್ನು ಕೆಡಹಿ, ಅವುಗಳಿಂದ ಮಸೀದಿಗಳನ್ನು ಕಟ್ಟಿಸುತ್ತಿದ್ದರು. ಬಹುಜನರ ಮತಾಭಿಮಾನವು ಏಕ ರೀತಿಯಲ್ಲಿದ್ದಿತಾದರೂ ಈ ಸಂಘದ ಐಕ್ಯ ಮತ್ತು ಸಹನ ಶಕ್ತಿಯು ಒಡೆದುಹೋಯಿತು.

೫. ಆಧುನಿಕ ಚರಿತ್ರೆ

ಒಳಗಿನ ಒಡಕಿನಿಂದ ಜೈನ ಸಮಾಜವು ಬಲಗುಂದುತ್ತ ಬರಲಾರಂಭಿಸಿತು. ಅನೇಕ ಒಳಪಂಗಡಗಳಾಗಿ ಮತಪ್ರಚಾರಕ್ಕೆ ಯಾವ ಪ್ರಕಾರದಲ್ಲಿಯೂ ಉಪಯೋಗವಾಗಲಿಲ್ಲ. ಇವರ ಪೂಜಾ ಕ್ರಮಗಳಲ್ಲಿ ಮಾತ್ರ ಕೆಲವು ಭೇದಗಳು ಇದ್ದರೂ ಅವರು ಭ್ರಾತೃಗಳೆಂಬುವ ಬದಲಾಗಿ ದ್ವೇಷಿಗಳಾಗಿ ವರ್ತಿಸುತ್ತಿದ್ದರು. ಇತರ ಸಮಾಜಗಳೊಂದಿಗೆ ಸಂಪರ್ಕ ನಿಷೇಧದ ಹಿಂದುಗಳ ಧೋರಣೆಗೆ ವಿರೋಧವಿದ್ದ ಜೈನರು ಅವರಿಗಿಂತಲೂ ಒಂದು ಹೆಜ್ಜೆ ಮುಂದೆ ಹೋಗಿದರು! ಹೊರಗಿನಿಂದ ಬರುವ ಜನರ ಸಂಖ್ಯೆಯು ಕುಂದಿ ಬರುತ್ತಾ ಜೈನ ಮತಾವಲಂಬಿಗಳ ಸಂಖ್ಯೆಯು ಕ್ಷೀಣವಾಗಿ ಬಂದಿತು. ಅಕ್ಬರನ ರಾಜ್ಯಾಡಳಿತೆಯ ಸಮಯ ಜೈನರಿಗೆ ಹೆಚ್ಚಿನ

(35ನೇ ಪುಟಕ್ಕೆ ಮುಂದುವರಿಸಿಯದೆ)



ನಾಮಕೂಮ್‌ನಲ್ಲಿರುವ ಸರಕಾರೀ ಅರಗಿನ ಶೋಧನಾಲಯ.

ಅ ರ ಗು

ಹಿಂದೂದೇಶದಲ್ಲಿ ಮಾತ್ರ ಅರಗಿನ ಉತ್ಪತ್ತಿಯಾಗುತ್ತಿದೆ. ಗ್ರಾಮಫೋನ್ ರಿಕಾರ್ಡುಗಳ ಕೈಗಾರಿಕೆಯಲ್ಲಿ ಅರಗು ವಿಶೇಷವಾಗಿ ಉಪಯೋಗಿಸಲ್ಪಡುವುದು. ಬಾರೂದು, ಬಿರುಸು-ಬಾಣಗಳಿಗೂ ಅರಗನ್ನು ಉಪಯೋಗಿಸುತ್ತಾರೆ.



[illegible]

'ಅರಗು'—ಇದನ್ನು ಸಂಸ್ಕೃತದಲ್ಲಿ ಲಾಕ್ಷಾ ಎನ್ನುತ್ತಾರೆ. 'ಲಾಖ್' ಎಂದೂ ವಾಡಿಕೆಯಾಗಿ ಕರೆವರು. 'ಲಾಖ್' ಎಂದು ಹಿಂದೀಯಲ್ಲಿ 'ಲಕ್ಷ'ಕ್ಕೆ ಎನ್ನುವುದೂ ಇದೆ. ಲಕ್ಷ ಲಕ್ಷ ಸಣ್ಣ ಹುಳಗಳು ಮರದಲ್ಲಿ ತಿಂದ ಆಹಾರದಿಂದ ಇದನ್ನು ಹೊರಗೆಡಹುವುದರಿಂದ 'ಲಾಕ್ಷಾ'–'ಲಾಖ್' ಹೀಗೆ ಹೆಸರು ಬರಲು ಕಾರಣವಿರಬಹುದೆಂದೂ ಊಹಿಸುವರು. ಅದು ಹೇಗೂ ಇರಲಿ.

ಮಹಾಭಾರತದಲ್ಲಿ ಲಾಕ್ಷಾಗೃಹದ ಕಥೆಯಿದೆ. ಕೌರವರು, ಪಾಂಡವರ ಸಂಹಾರಕ್ಕೆ, ಅರಗಿನಿಂದಲೇ ಒಂದು ಸುಂದರ ಮನೆಯನ್ನು ರಚಿಸಿ, ಪಾಂಡವರನ್ನು ಅಲ್ಲಿಗೆ ಕರೆಸಿ, ಕೊಲ್ಲಲೆತ್ನಿಸಿದಂತೆ ವರ್ಣಿತವಾಗಿದೆ. ಹೀಗಾಗಿ, ಅರಗು ಎಂಬುದು ಪೂರ್ವಕಾಲದಿಂದಲೂ ಜನರಿಗೆ ತಿಳಿದ ಒಂದು ವಸ್ತುವಾಗಿತ್ತು. 'ಐನ್-ಇ-ಅಕ್ಬರಿ' ಗ್ರಂಥದಲ್ಲಿ (ಕ್ರಿ. ಶ. 1590) 'ಅಕ್ಬರನು ಅರಗನ್ನು ಸೇರಿಸಿ ಒಂದು ವಿಧದ ವಾರ್ನಿಶನ್ನು ತಯಾರಿಸಿ, ಸರಕಾರೀ ಕಟ್ಟಡಗಳಿಗೆ ಬಳಿಯಲು ಉಪಯೋಗಿಸುವಂತೆ ಆಜ್ಞಾಪಿಸಿದ್ದನೆಂದು ಉಲ್ಲೇಖವಿದೆ.

ಅರಗು, ಹಿಂದೂದೇಶದಿಂದ ಯುರೋಪಿಗೆ, ಪ್ರಥಮತಃ 1607ರಲ್ಲಿ ರಫ್ತಾಯಿತೆನ್ನಬಹುದು. ಕ್ರಮೇಣ ಈ ನಿರ್ಯಾತವು ಹೆಚ್ಚಿ, ಇಂದು ಅಮೇರಿಕ, ಇಂಗ್ಲಾಂಡು, ಜರ್ಮನಿ, ಜಪಾನು ದೇಶಗಳೆಲ್ಲ ಹಿಂದೂದೇಶದಿಂದ ಅರಗನ್ನು ತರಿಸಿಕೊಳ್ಳುವ ದೊಡ್ಡ ದೇಶಗಳಾಗಿವೆ. ಹೆಚ್ಚಾಗಿ ಅಮೇರಿಕವೇ ಹಿಂದೂದೇಶದ ಅರಗಿಗೆ ದೊಡ್ಡ ಸಂತೆಯಾಗಿದೆ.


ಅರಗಿನಿಂದ ಒಂದು ತರದ ರಂಗು ಮತ್ತೊಂದು 'ರೆಝಿನ್' ಹೀಗೆ ಎರಡು ಬಗೆ ದೊರೆಯುತ್ತದೆ. ಮೊದಮೊದಲು ಅರಗಿನ ರಂಗಿಗೆ ಒಳ್ಳೇ ಗಿರಾಕಿ ಇರುತ್ತಿತ್ತು. ನಂತರ 'ಎನಲಿನ್' ರಂಗುಗಳು ಬರಲು, ಅರಗಿನಿಂದ ದೊರೆವ ರಂಗಿಗೆ ಗಿರಾಕಿ ಇಲ್ಲದಾಯಿತು. ಈ ವ್ಯಾಪಾರವು ನಿಲ್ಲುವಾಗ, ಅರಗಿನಿಂದ ದೊರೆವ ರೆಝಿನಿನ ಉಪಯೋಗವು ಕಂಡುಹಿಡಿಯಲ್ಪಟ್ಟಿತು. ಅರಗಿನ ಮಹತ್ವವು ಹೆಚ್ಚುವುದಾಯಿತು. ಈಗ, ಅರಗು, ರೆಝಿನ್ ಬಗ್ಗೆ ಹೆಚ್ಚಾಗಿ ಉಪಯೋಗಿಸಲ್ಪಡುತ್ತಿದೆ.

ಅರಗನ್ನು ಈಗ ವಿಶೇಷವಾಗಿ ಗ್ರಾಮಫೋನ್ ರಿಕಾರ್ಡು ಬಗ್ಗೆ ಉಪಯೋಗಿಸುತ್ತಾರೆ. ಈ ಕೈಗಾರಿಕೆಯಲ್ಲಿ ನೇಕಡಾ 30ರಿಂದ 40ರಷ್ಟು ಅರಗು ಉಪಯೋಗಿಸಲ್ಪಡುವುದು. ಇಲೆಕ್ಟ್ರಿಕಲ್, ಪೇಂಟ್ ಮತ್ತು ವಾರ್ನಿಶ್ ಕೈಗಾರಿಕೆಗಳು ನೇಕಡಾ 35ರಷ್ಟು ಅರಗನ್ನು ಕೊಂಡುಕೊಳ್ಳುತ್ತಿವೆ. ಮೊಹರಿನ ಬಗ್ಗೆ ತಯಾರಿಸುವ ಅರಗು, ಫೋಟೋಗ್ರಾಫಿ ಸಾಮಾನುಗಳು, ಪೆಪ್ಪರ್‌ಮಿಠಾಯಿ ವ್ಯಾಪಾರ, ಬಾರೂದು, ಬಿರುಸು ಬಾಣ, ಬಳೆಗಳು, ಹಡಗಗಳ ಅಡಿಯಲ್ಲಿ ಹಚ್ಚುವುದೇ ಮೊದಲಾದುದಕ್ಕೆ ಅರಗು ಧಾರಾಳವಾಗಿ ಉಪಯೋಗವಾಗುತ್ತಿದೆ.


ಹೀಗೆ ನೂರಾರು ಬಗೆಯಲ್ಲಿ ಉಪಯೋಗಕ್ಕೆ ಬರುವ ಕಾರಣ, ಅರಗಿಗೆ, ಪ್ರಪಂಚದ ಮಾರ್ಕೆಟುಗಳಲ್ಲಿ ಮಹತ್ವದ ಸ್ಥಾನ ದೊರೆತಿದೆ. ಇತರ ಎಷ್ಟೋ ಕೈಗಾರಿಕೆಗಳಲ್ಲಿ, ನೈಸರ್ಗಿಕ ಪದಾರ್ಥದ ಬದಲಾಗಿ ಕೃತಕ ಪದಾರ್ಥಗಳು ಕಂಡುಹಿಡಿಯಲ್ಪಟ್ಟಿವೆಯಾದರೂ, ಅರಗಿನ ಸ್ಥಾನದಲ್ಲಿ ಅಂತಹದೇ ಕೃತಕ ವಸ್ತುವು ಇನ್ನೂ ಕಂಡುಹಿಡಿಯಲ್ಪಟ್ಟಿಲ್ಲ. ಗ್ರಾಮಫೋನ್ ರಿಕಾರ್ಡುಗಳನ್ನು ಕೃತಕ ಅರಗಿನಿಂದ ತಯಾರಿಸಲು ಬಹು ಯತ್ನಗಳಾದುದುಂಟು. ಆದರೂ, ಅರಗು ಇನ್ನೂ ಅಜೇಯವಾಗಿ ನಿಂತಿದೆ. ರಿಕಾರ್ಡುಗಳಿಗೆ ಅರಗು ಮಾತ್ರ ಪ್ರಯೋಜನಕಾರಿ ಎಂದು ಸಿದ್ಧಾಂತವಾಗಿದೆ. ಇಲೆಕ್ಟ್ರಿಕಲ್ ಉಪಕರಣಗಳಲ್ಲಿ ಮಾತ್ರ 'ಬೆಕೆಲಾಯಿಟ್' ಎಂಬುದು ಪ್ರಚಾರಕ್ಕೆ ಬಂದಿದೆ. ಅರಗನ್ನು ಕೂಡ ಅಂತಹ ಕೃತಕ ವಸ್ತುಗಳಷ್ಟೆ ಅನುಕೂಲವಾಗಿ ಮಾರ್ಪಡಿಸಿದರೆ (ಕ್ರಯ ಸೌಲಭ್ಯ ಇತ್ಯಾದಿಗಳಲ್ಲಿ) ಅರಗು ಎಂದೆಂದೂ ಕೃತಕ ವಸ್ತುಗಳಿಗೆ ಸ್ಥಾನಕೊಡದೆ, ಅಜೇಯವಾಗಿ ನಿಲ್ಲುವುದು. ಮಾತ್ರವಲ್ಲ, ಅರಗನ್ನು ಇನ್ನೂ ಯಾವ ಯಾವ ಹೊಸ ಕೈಗಾರಿಕೆಗಳಲ್ಲಿ ಹೇಗೆ ಉಪಯೋಗಿಸಬಹುದೆಂಬ ಬಗ್ಗೆ ಹೊಸ ಶೋಧನೆಗಳಾಗಬೇಕಾದುದು ಅವಶ್ಯವಿದೆ.

ಅರಗಿನ ಧಾರಣೆಗಳಲ್ಲಿ ಏರಿಳಿತಗಳಾಗುವುದುಂಟು. ಇದು ಉತ್ಪತ್ತಿಯ ಮೇಲೆ ಹೊಂದಿಕೊಂಡಿದೆ. ಉತ್ಪತ್ತಿಯು, ಹವೆಯ ಅನನುಕೂಲತೆಯಿಂದ, ಕೃಷಿಯಲ್ಲಿನ ನ್ಯೂನತೆಯಿಂದ, ಕ್ರಿಮಿಕೀಟಗಳಿಂದ ಕಡಿಮೆಯಾಗುವ ಕಾರಣವುಂಟು. ಈ ಕಾರಣಗಳಿಂದಲೂ "ಬೆಕೆಲಾಯಿಟ್" ಪೇಟೆಗೆ ಬಂದ ಕಾರಣವೂ ಇಂಡಿಯಾ ಸರಕಾರವು ಸರ್. ಎಚ್. ಎ. ಎಫ್. ಲಿಂಡ್ಸೇ, [illegible] ಇವರ ನೇತೃತ್ವದಲ್ಲಿ ಒಂದು ವಿಚಾರಣಾ ಸಮಿತಿಯನ್ನೇರ್ಪಡಿಸಿ, ಅರಗಿನ ಕೈಗಾರಿಕೆಯನ್ನು ವೃದ್ಧಿಗೊಳಿಸಿ ದೃಢಪಡಿಸುವ ಕುರಿತು ವರದಿಯೊಂದನ್ನು ಕೇಳಿಕೊಂಡಿತು. ಆ ವಿಚಾರಣಾ ಸಮಿತಿಯ ವರದಿಯು 1921ರಲ್ಲಿ ಪ್ರಕಟವಾದಾಗ, ಅರಗಿನ ಕೈಗಾರಿಕೆಯಲ್ಲಿ ಹೆಚ್ಚಿನ ಶೋಧನೆಗಳು ನಡೆಯುವುದರ [illegible] ಒತ್ತಿ ಹೇಳಲಾಗಿದೆ. ಈ ವರದಿಯನ್ನು ಲಕ್ಷಿಸಿ, ಸರಕಾರದವರು 1925ನೇ ಆಗೋಸ್ತು ತಿಂಗಳಲ್ಲಿ, ನಾಮಕೂಮ್ ಎಂಬಲ್ಲಿ (ರಾಂಚಿಯಿಂದ ಐದು ಮೈಲು ದೂರದ ಒಂದು ಊರು—ಇದು ಅರಗಿನ ಕೇಂದ್ರವಾಗಿದೆ) ಒಂದು ಶೋಧನಾಲಯವನ್ನು ಸ್ಥಾಪಿಸಿದರು. ಈ ಶೋಧನಾಲಯದಲ್ಲಿ [illegible] 'ಬಾಯೊಲಾಜಿಕಲ್' ಮತ್ತು '[illegible]' [illegible] ಶೋಧನೆಗಳಿಗಾಗಿ [illegible]. [illegible] ರಸಾಯನಾಲಯವನ್ನೂ ಇಲೆಕ್ಟ್ರಿಕ್ ಶೋಧನಾಲಯವನ್ನೂ [illegible]. [illegible] ಪ್ರಯೋಗಾರ್ಥವಾಗಿ ಒಂದು ಅರಗಿನ ಕಾರ್ಖಾನೆಯನ್ನು 1930ರಲ್ಲಿ ಸ್ಥಾಪಿಸಿದರು. ಇಲ್ಲಿ, ಎಲ್ಲ ಬಗೆಯ ಅರಗಿನ ಉತ್ಪತ್ತಿಯು ಶೋಧಗಳಾಗುತ್ತಿವೆ. 1922ರಿಂದ 1930ರ ವರೆಗೆ ಇಲ್ಲಿಂದ ಪರದೇಶಗಳಿಗೆ ರಫ್ತಾದ ಅರಗಿನ ಮೇಲೆ ಮಣಕ್ಕೆ 2ರಿಂದ ನಾಲ್ಕಾಣೆ ವರೆಗೆ ಹೇರಿಸಿದ ತೆರಿಗೆ ರೂಪದ ಹಣದಿಂದ ಈ ಕಾರ್ಖಾನೆ ನಡೆಯುತ್ತಿದೆ. 1930ರಿಂದ ಈ ತೆರಿಗೆಯು ಮಣಕ್ಕೆ [illegible]ರಿಂದ 7 ಆಣೆ ವರೆಗೆ ಹೆಚ್ಚಿಸಲ್ಪಟ್ಟಿದೆ. ಈ ಶೋಧನಾಲಯ ಹಾಗೂ ಕಾರ್ಖಾನೆಯು ಬಡಾವಣೆಗೆಂದೇ ತೆರಿಗೆಯನ್ನೂ ಹೆಚ್ಚಿಸಿರುವರು.

ಶೋಧನಾಲಯವನ್ನು ಮೊದಲು ಸ್ಥಾಪಿಸುವಾಗ, ಉತ್ಪತ್ತಿಯಲ್ಲಿ ಯಾವ ಸುಧಾರಣೆಗಳನ್ನು ಕೈಕೊಳ್ಳಬಹುದೆಂಬ ಉದ್ದೇಶ ಒಂದೇ ಇತ್ತು. ಈಗ, ಅರಗಿನ



[illegible]



ಚಿಕ್ಕ ಗೆಲ್ಲುಗಳಿಗೆ ಅಂಟಿಕೊಂಡಿದ್ದ ಅರಗನ್ನು ಕೆರೆದು ತೆಗೆವರು.

ಇತರ ಉಪಯೋಗಗಳಾವುವು ಎಂಬುದನ್ನು ಕಂಡುಕೊಳ್ಳುವ ಯತ್ನಗಳೂ ನಡೆದಿವೆ. ಅದರಂತೇ, ಇದರ ಮಾರಾಟವನ್ನು ಹೆಚ್ಚಿಸುವ ಯತ್ನಗಳೂ ಆಗುತ್ತಿವೆ.

ಅರಗು ಹಿಂದೂದೇಶದಲ್ಲಿ ಮಾತ್ರ ಹುಟ್ಟುತ್ತದೆ. ಅಸ್ಸಾಮ್ ಮತ್ತು ಬರ್ಮಾಗಳಲ್ಲಿಯೂ ಇದರ ಉತ್ಪತ್ತಿಯಿದೆ. ಛೋಟಾನಾಗಪುರ, ಒರಿಸ್ಸಾ ಸಂಸ್ಥಾನಗಳು ಮತ್ತು ಮಧ್ಯಪ್ರಾಂತ್ಯಗಳು ಈ ಉತ್ಪತ್ತಿಯ ಪ್ರಾಮುಖ್ಯ ಕೇಂದ್ರಗಳಾಗಿವೆ. ಈ ಕೇಂದ್ರಗಳಲ್ಲಿ, ದೇಶದ ಅರಗಿನ ಉತ್ಪತ್ತಿಯ ಸೇಕಡಾ ೫೦ರಷ್ಟು ಇದ್ದು, ಛೋಟಾನಾಗಪುರ ಒಂದರಲ್ಲೇ ಸೇಕಡಾ ೫೦ರಷ್ಟು ತಯಾರಾಗುತ್ತಿದೆ. ಸಿಲೋನ್, ಜಾವಾ, ಫೆಡರೇಟೆಡ್ ಮಲಯಾ ಸ್ಟೇಟ್ಸ್, ಇಂಡೋ-ಚೀನ ಮತ್ತು ಥೈಲಾಂಡು—ಈ ಕಡೆಗಳಲ್ಲಿಯೂ ಅಲ್ಪ ಪ್ರಮಾಣದಲ್ಲಿ ಅರಗು ತಯಾರಾಗುತ್ತಿದೆ. ಇದರಲ್ಲಿಯೂ ಹೆಚ್ಚಿನಂಶವು ಕಲ್ಕತ್ತಾ ದಾರಿಯಾಗಿ ಹಿಂದೂದೇಶಕ್ಕೆ 'ಶೆಲ್ಲಾಕ್' ಆಗಿ ಮಾರ್ಪಡಲು ಬರುತ್ತಿದೆ.

ಹಿಂದೂದೇಶದಲ್ಲಿ ವರ್ಷಕ್ಕೆ ಸುಮಾರು 1,200,000 ಹಂಡ್ರಡ್ವೈಟುಗಳಷ್ಟು ಅರಗು ತಯಾರಾಗುತ್ತಿದೆ. ಇದರ ಒಟ್ಟು ಮೌಲ್ಯವು ಸುಮಾರು ಇಪ್ಪತ್ತು ಮಿಲಿಯ ರೂಪಾಯಿಯಾಗಬಹುದು. ಈ ಬೆಲೆಯೇರಿ, ನೂರು ಮಿಲಿಯ ವಾದುದೂ ಇದೆ. ಕಳೆದ ೨೦ ವರ್ಷಗಳಲ್ಲಿ ಹಿಂದೂದೇಶದಿಂದ ಹೊರಗೆ ರಫ್ತಾದ ಅರಗಿನ ಮೊತ್ತ ಮತ್ತು ಮೌಲ್ಯವನ್ನು ಇಲ್ಲಿ ಕೊಡಲಾಗಿದೆ.

ವರುಷ	ತೂಕ (ಹಂಡ್ರಡ್ವೈಟು)	ಮೌಲ್ಯ (ಸಾವಿರ ರೂ. ಗಳಲ್ಲಿ)
1920-21	308,937	75,826
1921-22	434,934	79,158
1922-23	476,011	102,652
1923-24	485,671	90,627
1924-25	427,017	75,506
1925-26	539,924	69,010
1926-27	592,030	54,724
1927-28	543,584	69,886
1928-29	743,403	86,426
1929-30	668,914	69,672
1930-31	547,151	31,374
1931-32	463,724	18,391
1932-33	418,300	12,424
1933-34	730,988	24,644
1934-35	586,002	32,996
1935-36	487,581	15,836
1936-37	833,964	23,421
1937-38	664,671	16,218
1938-39	643,848	12,665
1939-40 (೧೧ ತಿಂಗಳು)	667,893	15,466

ಅರಗನ್ನು ಉತ್ಪತ್ತಿಗೊಳಿಸುವ ಕ್ರಿಮಿಗೆ 'ಲಾಕಿಫರ್ ಲಾರ್ಕ್' ಎಂದು ಹೆಸರು. ಇದು ಕೆಲವೊಂದು ಮರಗಳಲ್ಲಿ ಇದ್ದು, ಸಣ್ಣ ಕ್ರಿಮಿಗಳನ್ನು ತಿಂದು ಜೀವಿಸಿರುತ್ತದೆ. ಕ್ರಿಮಿಯು ತೀರ ಸಣ್ಣದಿರುತ್ತದೆ. ಹುಟ್ಟುವಾಗಲೇ ನಡೆದು ಹೋಗುವ ಶಕ್ತಿಯುಳ್ಳ ಕ್ರಿಮಿಗಳಿವು. ಕ್ರಿಮಿಗಳು ಹೆಚ್ಚಾಗಿ ಕುಸುಮ್, 'ಪ್ಲೈರ' ಮೊದಲಾದ ಜಾತಿಯ ಮರಗಳಲ್ಲಿ ವಾಸಿಸಿರುತ್ತವೆ.

ಕ್ರಿಮಿಗಳಲ್ಲಿ ಸೇಕಡಾ ೩೦ರಷ್ಟು ಕ್ರಿಮಿಗಳು ಗಂಡುಕ್ರಿಮಿಗಳೆಂದೂ, ಉಳಿದ ಸೇಕಡಾ 70 ಕ್ರಿಮಿಗಳು ಹೆಣ್ಣು ಎಂದೂ ಶೋಧನೆಯಾಗಿದೆ. ಇವು ಇತರ ಜೀವಿಗಳನ್ನು ತಿಂದು ಒಂದು ವಿಧದ ದ್ರಾವಕವನ್ನು ಹೊರಗೆಡಹಿ, ತಮ್ಮ ಪೈಸುತ್ತಲೂ ಗೂಡು ಕಟ್ಟಿಕೊಳ್ಳುತ್ತವೆ. ಇದು 'ರೆಸಿನ್'. ಇದರಿಂದಲೇ, ಮುಂದಿನ ಅವಸ್ಥೆಯಲ್ಲಿ ಅರಗುಂಟಾಗುವುದು.

ಕೆಲಕಾಲದ ನಂತರ ಗಂಡುಕ್ರಿಮಿಯು ಹೊರಬಂದು, ಹೆಣ್ಣು ಕ್ರಿಮಿಯೊಂದಿಗೆ ಕೂಡಿ, ಸಾಯುವುದು. ಹೆಣ್ಣು ಕ್ರಿಮಿಯು ತನ್ನ ಗೂಡಿನಿಂದ ಹೊರಬರುವುದಿಲ್ಲ. ಬದಲಾಗಿ, ಅರಗನ್ನು ಹೊರಗೆಡಹುತ್ತಲೇ ಇರುವುದು. ಹಾಗೆಯೇ ಹೊಸ ಕ್ರಿಮಿಗಳಿಗೆ ಜನನವಿತ್ತು, ಮುಂದೆ ಸಾಯುವುದು. ಹೆಣ್ಣುಕ್ರಿಮಿಯೇ ಅರಗಿನ ಉತ್ಪತ್ತಿಗೆ ಕಾರಣವೆನ್ನಬಹುದು.

ಕುಸುಮ ಜಾತಿಯ ಮರಗಳಲ್ಲಿ ಇಂತಹ ಹುಳಗಳು ಜೂನ್ ಜುಲೈ ತಿಂಗಳಲ್ಲಿಯೂ, ಅಕ್ಟೋಬರ-ನವಂಬರಗಳಲ್ಲಿಯೂ ಕೂಡಿಕೆಯಾಗಿ, ಅರಗಿನ ಗೂಡುಗಳನ್ನು ಕಟ್ಟುವುವು. ಇವುಗಳಿಗೆ 'ವೈಶಾಖಿ' ಮತ್ತು 'ಕಾರ್ತಿಕಿ' ಬೆಳೆಗಳೆಂದು ಹೇಳುತ್ತಾರೆ.

ಅರಗು ಮೊದಲು, ಚಿಕ್ಕ ರೆಂಬೆಗಳಿಗೆ ಅಂಟಿಕೊಂಡಿರುತ್ತವೆ. ಇದನ್ನು ತೆಗೆದು ಹುಡಿಮಾಡಿ, ತೊಳೆದು, ಕಶ್ಮಲ ತೆಗೆಯುತ್ತಾರೆ. ಇದು ಅರಗಾಯಿತು. ಇದರಲ್ಲಿ ಹೆಚ್ಚಿನಂಶವನ್ನು ಮತ್ತೂ ಶೋಧಿಸಿ, 'ಶೆಲ್ಲಾಕ್' ಆಗಿ ಮಾರ್ಪಡಿಸುವರು.

ನೇಹ

ಪಡುಗುಡ್ಡವಂಚಿನಲಿ ಬೆಳೆದಿಪ್ಪ ತರುಗಳಂ
ಪುಡಿಗುಟ್ಟಲೆಂದು ತೆಂಪುಡುವಿನಾ ಕಡಲಿಂದ
ಪಡೆಗಟ್ಟಿ ಸೀರಾನೆಗಳು ಜೊಬ್ಬಿಡುತ್ತಲುಂ
ಗುಡುಗುಡುಸಿ ಬರ್ಪವೋಲ್ ಸಾಗಿ ಬಂದುದು ಮುಗಿಲು!

ಪಸುರಾದ ಮೈಸಿರಿಯ ಗಾಡಿಯಿಂದೆಸೆದಿದ್ದು,
ಜಸತಳೆದ ತರುರಾಜಿಗಳ ಕಂಡು ಕಡುನೇಹ
[illegible]
[illegible]

ಮುಗಿಲು ಮುದದಿಂದಪ್ಪಿ ಪೋದುದಂ ಕಂಡು ತರು-
ಮಿಗೆ ಲಜ್ಜೆಯಿಂ ಬಾಗಿ, ಪೊಸಹರ್ಷದಿಂ ಬೇಗಿ
ಬಗೆಬಗೆಯ ಪೂಪಣ್ಗಳಂ ಪೇರುತಿನ್ನೆಂದು
ಗಗನದಿಂದಿಳಿದು ಬರ್ಪನೊ ಕಾಂತನೆಂದಿಹುದು!!

ನೇಹಕ್ಕೆ ಸೋಲದವರಿಲ್ಲಲ್ತೆ ಬಗೆದಲ್ಲಿ!
ನೇಹಕ್ಕೆ ಮಿಗಿಲು ಸೊತ್ತಿಲ್ಲಲ್ತೆ ಜಗದಲ್ಲಿ!!

—ಪುನಾಕ.

ವರ್ತಕಗೀತೆ

ಜಯ ವರ್ತಕ ಸಂಘ ಉದಾರಾ ।
ಜಯವೈ! ಜಯವೈ! ಪಲ್ಲ

ದೇಶಸಂಪದಭಿವೃದ್ಧಿ ವಿಶೇಷಾ ।
ದೇಶೋನ್ನತಿಗತಿಹಿತ ಅವಕಾಶಾ ॥
ದೇಶವಿದೇಶದ ಸಖ್ಯಾದರ್ಶಾ ।
ದೇಶಸೇವೆಯೆ ವಣಿಜಮುದ್ದೇಶಾ ॥ ೧ ॥

ಲೋಕುಪಕಾರದ ಗೈವುದು ಸತತಾ ।
ಬೇಕಾಗಿರುವ ದನದನೊದಗಿಸುತಾ ॥
ನ್ಯಾಕ್ ಪ್ರಮಾಣದಂತನುವರ್ತಿಸುತಾ ।
ಜೋಕೆಲಿ ಮೆರೆವುದು ವಣಿಜವಿಖ್ಯಾತಾ ॥ ೨ ॥

ಜಯಜಯ ಭಾರತ ವರ್ತಕ ಸಂಘಾ ।
ಜಯಜಯ ವರ್ತಕ ಸಕಲ ಜನಾಂಗಾ ॥
ಜಯಸಿರಿಯೊಲಿಯುತ ಮೆರೆದು ಜನಾಂಗಾ ।
ಪ್ರಿಯವೆನಿಸಲಿ ವಾಣಿಜ್ಯ ಸರಾಗಾ ॥ ೩ ॥

ಪ. ಶ್ರೀ. ಕುಡ್ವಾ.

ಹಿಂದೂದೇಶದಲ್ಲಿ ಕುರುಡರ ಸಂಖ್ಯೆ

ಪೂರ್ವ ಕರಾವಳಿಯಲ್ಲಿರುವ ಉಷ್ಣವಲಯ ಮತ್ತು ಅದರ ಮೇರೆಗೆ ಸಮೀಪವಿರುವ ಪ್ರದೇಶಗಳಲ್ಲಿ, ಕುರುಡರ ಸಂಖ್ಯೆಯು ಅಪರಿಮಿತವಾಗಿದೆ. ಪ್ರಯತ್ನಪಟ್ಟರೆ ಕುರುಡುತನವನ್ನು ಸಾಧ್ಯವಾದಷ್ಟು ಮಟ್ಟಿಗೆ ನಿವಾರಿಸಬಹುದು. ಮತ್ತು ಹೆಚ್ಚಿನ ಶ್ರಮಪಟ್ಟಲ್ಲಿ ಕುರುಡರ ಸಂಖ್ಯೆಯನ್ನು ಆದಷ್ಟು ಕಡಮೆಮಾಡ ಬಹುದು ಎಂಬುದು ಜನರು ಇತ್ತೀಚೆಗೆ ತಿಳಿದ ಸಂಗತಿ.

ಈಜಿಪ್ಟ್ ದೇಶದಲ್ಲಿದ್ದಷ್ಟು ಕುರುಡರು ಜಗತ್ತಿನ ಬೇರೆ ಯಾವ ಭಾಗ ದಲ್ಲಿಯೂ ಇಲ್ಲ. ಆದರೆ ಇತ್ತೀಚೆಗೆ ಈಜಿಪ್ಟಿನ ಪ್ರಮುಖರು ಇದರ ನಿವಾರಣೆ ಗಾಗಿ ಪಟ್ಟ ಶ್ರಮವು, ಇತರ ದೇಶದವರನ್ನು ಬೆರಗುಗೊಳಿಸಿದೆ. ಮೊದಲಾಗಿ ಈ ಕಾರ್ಯದಲ್ಲಿ ಮುಂದೆ ಬಂದವರೆಂದರೆ ಸರ್ ಆರ್ನೆಸ್ಟ್ ಕಾಸ್ಸಲ್ ಎಂಬವರು. ಇವರು ಕುರುಡುತನದ ನಿವಾರಣೆಗಾಗಿ 13,000 ಪವನುಗಳನ್ನು ಉದಾರ ದಾನ ವನ್ನಾಗಿ ಇತ್ತರು. ಕೂಡಲೇ ಇದರ ಫಲರೂಪವಾಗಿ ಮಿ। ಮೆಕ್ಲೀನರ ಕೈಕೆಳಗೆ ಸುಪ್ರಸಿದ್ಧ ಕಣ್ಣಾಸ್ಪತ್ರೆಯೊಂದು ತೆರೆಯಲ್ಪಟ್ಟಿತು. ಈ ಆಸ್ಪತ್ರೆಯಲ್ಲಿ ವರ್ಷಂ ಪ್ರತಿ ಮೂರು-ನಾಲ್ಕು ಲಕ್ಷಗಳಿಗೆ ಮಿಕ್ಕಿ ಕುರುಡರು ಚಿಕಿತ್ಸೆ ಹೊಂದುತ್ತಿದ್ದಾರೆ.

ಉತ್ತರ ಆಫ್ರಿಕಾ, ಟರ್ಕಿ, ಪರ್ಶಿಯಾ, ಹಿಂದೂಸ್ಥಾನ ಮತ್ತು ಚೀನಾ— ಈ ದೇಶಗಳಲ್ಲಿ ಕುರುಡರ ಸಂಖ್ಯೆಯು ದಿನೇ ದಿನೇ ಅಭಿವೃದ್ಧಿಗೊಳ್ಳುತ್ತಿದೆ. ಹಳ್ಳಿಗಳಲ್ಲಿ ವಾಸಿಸುವ ಅನಾಗರಿಕ ಜನರ ಮೇಲೆ, ಪಾಶ್ಚಾತ್ಯ ಔಷಧ ಪ್ರಯೋಗ ಗಳು ಹೆಚ್ಚಿನ ಪರಿಣಾಮವನ್ನುಂಟುಮಾಡಿಲ್ಲ. ಅವುಗಳ ಉಪಯೋಗವನ್ನು ಈ ತನಕ ಅವರು ಮನಗಂಡಿಲ್ಲ.

ಹಿಂದೂದೇಶವು ಕುರುಡುತನದ ವಲಯದಲ್ಲಿದೆ ಎಂದರೆ ಹೆಚ್ಚಾಗಲಾರದು. ಕಳೆದ ಖಾನೇಷುಮಾರಿಯಲ್ಲಿ 300 ಮಿಲಿಯ ಜನ ಸಂಖ್ಯೆ ಇರುವ ಈ ದೇಶದಲ್ಲಿ, 180,000 ಮಂದಿ ಪೂರ್ಣದೃಷ್ಟಿ ಇಲ್ಲದವರು ಇರುವರೆಂಬುದಾಗಿ ತಿಳಿದುಬಂದಿದೆ. ಅಂದರೆ ಒಂದು ಸಾವಿರಕ್ಕೆ ಒಂದುವರೆಯ ಪ್ರಕಾರ ಪೂರ್ಣದೃಷ್ಟಿ ಇಲ್ಲದವರು ಇರುವರೆಂದಾಯಿತು. ಆದರೆ ಈ ಸಂಖ್ಯೆಯು ಅಷ್ಟೊಂದು ಯಥಾರ್ಥವಾದು ದಲ್ಲ; ಚೆನ್ನಾಗಿ ಪರಿಶೀಲಿಸಿ ನೋಡಿದಾಗ, ಇದರ ಎರಡರಷ್ಟು ಕುರುಡರು ಇರುವ ರೆಂದು ನಿರ್ಧಾರಮಾಡಲಾಗಿದೆ. ಉದಾಹರಣೆಗಾಗಿ ನಾಸಿಕದಲ್ಲಿ ಸಾವಿರಕ್ಕೆ 4·38ರಂತೆ ಕುರುಡರು ಇರುವರೆಂದು ಕಂಡುಹಿಡಿದಿರುತ್ತಾರೆ. ಖಾನೇಷುಮಾರಿಯ ಪ್ರಕಾರ ಸಾವಿರಕ್ಕೆ 1·74 ಮಾತ್ರ ಆಗುತ್ತದೆ; ರತ್ನಗಿರಿಯಲ್ಲಿ ಖಾನೇಷುಮಾರಿಯ 0·7ಕ್ಕೆ ಬದಲಾಗಿ 1.5ರಂತೆ ಕುರುಡರಿರುವರಂತೆ. ಬಿಜಾಪುರದಲ್ಲಿ 0·7ಕ್ಕೆ ಬದ ಲಾಗಿ 2·6; ಸಂಯುಕ್ತ ಪ್ರಾಂತ್ಯದಲ್ಲಿ ಡೆಪ್ಯೂಟಿ ಕಮಿಶನರರು ಪುನರಾವರ್ತಿ ನೋಡಿದಾಗ ಸಾವಿರಕ್ಕೆ ಒಂಭತ್ತು ಮಂದಿಯಂತೆ ಕುರುಡರಿರುವರೆಂದು ಖಚಿತ ವಾಗಿದೆ. ಪಳನಪುರದಲ್ಲಿ ಸಾವಿರಕ್ಕೆ ಏಳರ ಪ್ರಕಾರ ಕುರುಡರಿರುವರಂತೆ. ಖಾನೇಶುಮಾರಿಯಲ್ಲಿ ಈ ರೀತಿಯ ವ್ಯತ್ಯಾಸಗಳು ತೋರಿಬರುವುದರಿಂದ, ನಿಜವಾದ ಸಂಖ್ಯೆಯು, ಪಟ್ಟಿಯಲ್ಲಿ ತೋರಿಸಿದಂತೆ ಅರ್ಧಮಿಲಿಯವಿರದೆ, ಒಂದುವರೆ ಮಿಲಿಯಕ್ಕೂ ಮಿಕ್ಕಿರಬಹುದು ಎಂದು ಅಂದಾಜುಮಾಡಲಾಗಿದೆ.

ಮೇಲೆ ಹೇಳಿದ ಸಂಖ್ಯೆಯು ಎರಡು ಕಣ್ಣುಗಳಲ್ಲಿಯೂ ನೋಡಲು ಬಾರದ ಪೂರ್ಣದೃಷ್ಟಿ ಇಲ್ಲದ ಕುರುಡರದ್ದಾಯಿತು. ಇನ್ನು ಒಂದು ಕಣ್ಣು ಇಲ್ಲದವರು, ಕಣ್ಣುಬೇನೆಯಿಂದ ಅಸ್ತವ್ಯಸ್ತವಾಗಿ ಕಾಣುವವರು, ಈ ತರದ ನ್ಯೂನತೆಗಳಿರು ವವರ ಸಂಖ್ಯೆಯು ಮತ್ತಷ್ಟು ಅಧಿಕವಾಗಿದೆ. 'ಕುರುಡುತನ' ಎಂಬ ಶಬ್ದಕ್ಕೆ ಆಯಾಯ ದೇಶಗಳಲ್ಲಿ ಬೇರೆ ಬೇರೆ ರೀತಿಯ ಅರ್ಥಗಳನ್ನು ಮಾಡಿಕೊಂಡಿರು ತ್ತಾರೆ. 'ಕುರುಡುತನದ ನಿವಾರಣೆ' ಎಂಬ ಹೆಸರಿನಿಂದ ರೆಡ್‌ಕ್ರಾಸ್ ಸಂಸ್ಥೆ ಯವರು ಹೊರಡಿಸಿದ ವರದಿಯಲ್ಲಿ, ಈ ಬೇರೆ ಬೇರೆ ಅರ್ಥರೂಪಗಳ ವಿಷಯ ತಿಳಿಸಿರುತ್ತಾರೆ. 'ದೃಷ್ಟಿಚಕ್ರದ ಸಹಾಯದಿಂದ ಓದಲು ಬಾರದವರು; ಸಾಮಾನ್ಯ ಜನರಿಗೆ ಹೇಳುವುದಾದರೆ ವಸ್ತುಗಳ ರೂಪ, ಪರಿಮಾಣ ಇತ್ಯಾದಿಗಳನ್ನು ಸರಿ ಯಾಗಿ ಗುರುತಿಸಲು ಸಮರ್ಥರಲ್ಲದವರು' ಇಂತಹರನ್ನು ಅಮೇರಿಕದ ಸಂಯುಕ್ತ ರಾಜ್ಯದಲ್ಲಿ ಕುರುಡರೆನ್ನುತ್ತಾರೆ. ಒಂದು ಮೀಟರ್ ಅಂತರದಲ್ಲಿ ಕೈಬೆರಳುಗಳನ್ನು ಗುರುತಿಸಲಾರದವನನ್ನು ಈಜಿಪ್ಟ ದೇಶದಲ್ಲಿ ಕುರುಡನೆಂದು ಕರೆಯುತ್ತಾರೆ. ಮೇಲೆ ಹೇಳಿದ ಎರಡು ರೀತಿಯ ಅರ್ಥಗಳನ್ನು ಹಿಂದೂದೇಶ ದವರು ಮಾಡಿಕೊಂಡರೆ, ಕುರುಡರ ಸಂಖ್ಯೆಯು ಎಂಟು ಸ್ಥಾನಗಳನ್ನು ಪಡೆಯು ವುದೋ ಎಂಬ ಸಂಶಯ ಉಂಟಾಗುತ್ತದೆ. 'ಆಲ್ ಇಂಡಿಯಾ ಬ್ಲಾಂಯಿಡ್ ರಿಲೀಫ್ ಅಸೋಸಿಯೇಶನಿನವರು, ಚೆನ್ನಾಗಿ ಪರೀಕ್ಷೆಮಾಡಿ, ಕಣ್ಣಾಸ್ಪತ್ರೆಗಳಿಗೆ ಚಿಕಿತ್ಸೆಗಾಗಿ ಬರುವವರಲ್ಲಿ, ಪೂರ್ಣ ದೃಷ್ಟಿ ಇಲ್ಲದ ಪ್ರತಿಯೊಬ್ಬ ಕುರುಡನಿಗೆ, ಮೂರರಂತೆ ಕಣ್ಣುಬೇನೆಯಿಂದ ನರಳುವ ಅಪೂರ್ಣ ದೃಷ್ಟಿಯುಳ್ಳವರು ಇರು ತ್ತಾರೆ ಎಂಬುದನ್ನು ಕಂಡುಹಿಡಿದಿದ್ದಾರೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಹಿಂದೂದೇಶದಲ್ಲಿ ಒಂದುವರೆ ಮಿಲಿಯಕ್ಕೆ ಮೇಲ್ಪಟ್ಟು, ಪೂರ್ಣದೃಷ್ಟಿಯಿಲ್ಲ ದವರೂ, ನಾಲ್ಕುವರೆ ಮಿಲಿಯದಷ್ಟು ಅಪೂರ್ಣದೃಷ್ಟಿಯುಳ್ಳವರೂ ಇರುತ್ತಾರೆ.

ಹಿಂದೂದೇಶದಲ್ಲಿ ಕುರುಡುತನಕ್ಕೆ ಕಾರಣಗಳು ಯಾವುವು ಎಂಬುದನ್ನು ಕುರಿತು, ಮದ್ರಾಸು ಕಣ್ಣಿನ ಆಸ್ಪತ್ರೆಯ ಮಾಜಿ ಸರ್ಜನರಾಗಿದ್ದ ಕರ್ನಲ್ ಆರ್. ಎಚ್. ಇಲಿಯಟ್ ಎಂಬವರು ಈ ರೀತಿ ಅಭಿಪ್ರಾಯಪಡುತ್ತಾರೆ:

"ನಿವಾರಿಸಲು ಶಕ್ಯವಿರುವ ಮತ್ತು ಗುಣಪಡಿಸಲು ಸಾಧ್ಯವಾದ ತರದ ಕುರುಡುತನವು ಹಿಂದೂದೇಶದಲ್ಲಿ ಎಷ್ಟಿದೆಯೆಂಬುದನ್ನು ಇಲ್ಲಿ ಸ್ವತಃ ಕೆಲಸ ಮಾಡಿದವನಿಗೆ ಹೊರತು ಅನ್ಯರಿಗೆ ತಿಳಿಯಲು ಸಾಧ್ಯವಿಲ್ಲ. ಕಾಳಿನಂತಹ ಕುರುಡುತನ (Granular blindness) ದಿಂದ ನರಳುವವರು ಈ ದೇಶದಲ್ಲಿ

ಹತ್ತುಸಾವಿರಕ್ಕೆ ಮೇಲ್ಪಟ್ಟು ಇರುತ್ತಾರೆ. ಈ ತರದ ಕುರುಡುತನವನ್ನು ಬರೇ ಅಲ್ಪ ತರದ ಚಿಕಿತ್ಸೆಯ ಮೂಲಕ ಸುಲಭವಾಗಿ ಹೋಗಲಾಡಿಸಬಹುದು. ಆದರೆ ಚಿಕಿತ್ಸೆಯು ಮಾತ್ರ ಆರಂಭದಲ್ಲಿಯೇ ನಡೆಯಬೇಕು. ಸಿಡುಬು ರೋಗವು ದೇಶದಲ್ಲಿ ತಲೆದೋರುವಾಗ, ಬರೇ ಅಜಾಗ್ರತೆಯಿಂದ ಕಣ್ಣು ಕಳಕೊಳ್ಳುವವರು ಅನೇಕ ಮಂದಿ ಇರುವರು. ಪ್ರಯತ್ನಪಟ್ಟರೆ ಇವನ್ನು ನಿಲ್ಲಿಸಲು ಸಾಧ್ಯವಿಲ್ಲವೇ? ನಯನ ವ್ಯಾಧಿಗಳು ಉಂಟಾದಾಗ. ಸಿಕ್ಕಿದ ಕೆಟ್ಟ ಮದ್ದುಗಳನ್ನು ಕಣ್ಣುಗಳಲ್ಲಿ ಹಾಕಿಸಿಕೊಳ್ಳುವುದು ಕುರುಡುತನಕ್ಕೆ ಮತ್ತೊಂದು ಕಾರಣ. ಗ್ಲೋಕೋಮಾ (Glaucoma) ಕೆಟರಕ್ಟ್ (Cataract) ಮುಂತಾದ ಕಣ್ಣು ರೋಗಗಳಿಂದ ಪೀಡಿತರಾದವರು, ಜೀವನಾಸೆಯ ವಿಷಯ ನಿರಾಶೆಪಟ್ಟು, ರೋಗವನ್ನು ಮರೆಮಾಡಿ, ಘಾಯಹೊಂದಿ ನರಳುವ ವನ್ಯಜಂತುಗಳಂತೆ, ಮರಣವೇ ಇದರಿಂದ ಪಾರಾಗಲು ಒಳಿತಾದ ದಾರಿಯೆಂದು, ಸಾವನ್ನು ಇದಿರುನೋಡುವುದನ್ನು ಕಂಡು ತುಂಬಾ ವ್ಯಸನವಾಗುತ್ತದೆ. ಇದೇನೂ ಕಲ್ಪನಾ ಚಿತ್ರವಲ್ಲ. ಇಲ್ಲಿಯ ವಾತಾವರಣದಲ್ಲಿ ಹಲವು ವರ್ಷಗಳಿಂದ ಶ್ರಮವಹಿಸಿ ಕೆಲಸಮಾಡಿ, ಕಂಡು ತಿಳಿದ ವಿಷಯ!"

'ದಿ ಇಂಡಿಯನ್ ಮೆಡಿಕಲ್ ಗಜೇಟ್' ಎಂಬ ಪತ್ರಿಕೆಯು 1923ನೇ ವರ್ಷದ ಮಾರ್ಚ್ ತಿಂಗಳ ಸಂಚಿಕೆಯಲ್ಲಿ, ಈಜಿಪ್ಟಿನ ದೃಷ್ಟಿ ಪರೀಕ್ಷೆಯ ಕಾರ್ಯಾಲಯದ ವಿಷಯ ಮತ್ತು ಹಿಂದೂದೇಶದಲ್ಲಿ ಅಂತಹ ಸಂಸ್ಥೆಯನ್ನು ಸ್ಥಾಪಿಸುವ ಆವಶ್ಯಕತೆಯನ್ನು ಕುರಿತು, ಸಂಪಾದಕೀಯದಲ್ಲಿ ಈ ಕೆಳಗಿನಂತೆ ಬರೆದಿರುತ್ತಾರೆ:

"ಈಜಿಪ್ಟಿನಲ್ಲಿ ಸ್ಥಾಪಿತವಾಗಿ ಊರ್ಜಿತಾವಸ್ಥೆಗೆ ಬಂದಿರುವ ಕುರುಡುತನ ನಿವಾರಣಾ ಸಂಸ್ಥೆಯ ಕಡೆಗೆ ಹಿಂದೂದೇಶದ ಸರಕಾರವು ಹೆಚ್ಚಿನ ಗಮನವನ್ನು ಕೊಡುವುದು ಲೇಸು. ಅಲ್ಲದೆ ಅಂತಹ ಸಂಸ್ಥೆಯೊಂದನ್ನು ಹಿಂದೂದೇಶದಲ್ಲಿ ಸ್ಥಾಪಿಸಲು ಕೂಡಲೇ ಪ್ರಯತ್ನಗಳನ್ನು ಮಾಡಬೇಕು. ಮದ್ರಾಸು ಒಂದನ್ನು ಬಿಟ್ಟು ಇತರ ಕಡೆಗಳಲ್ಲಿ ಇಂತಹ ಪ್ರಯತ್ನಗಳು ನಡೆದುದು ಕಂಡುಬರುವುದಿಲ್ಲ. ಅಲ್ಲಿ ಕೂಡಾ ಕಾರ್ಯದಕ್ಷತೆಯನ್ನು ವಹಿಸಿಕೊಂಡವರಿಗೆ, ತಮ್ಮ ಇತರ ಚಿಲ್ಲರೆ ಕೆಲಸಗಳನ್ನು ಪೂರೈಸಿ, ಈ ಮಹಾಕಾರ್ಯಕ್ಕೆ ಕೈಯೊಡ್ಡಲು ಸಮಯವೇ ದೊರಕುವುದಿಲ್ಲ. ಇದರಿಂದಾಗಿ ಸಂಸ್ಥೆಯು ಅಭಿವೃದ್ಧಿಯನ್ನು ಹೊಂದಲು ಬಲವಾದ ತಡೆಯುಂಟಾಗಿದೆ. ನಿಸ್ವಾರ್ಥತೆಯಿಂದ ಕೆಲವು ಕಡೆಗಳಲ್ಲಿ ವೈಯಕ್ತಿಕ ಪ್ರಯತ್ನಗಳು ನಡೆದುದರಿಂದಲೇ, ಆ ಸಂಸ್ಥೆಯು ಇನ್ನೂ ಜೀವಿತಾವಸ್ಥೆಯಲ್ಲಿದೆ. ಇಂತಹ ಉತ್ಸಾಹೀ ಕಾರ್ಯಜ್ಞರು ಪ್ರಯತ್ನಪಟ್ಟರೆ, ಈಜಿಪ್ಟಿನಲ್ಲಿ ಸ್ಥಾಪಿಸಿದಂತೆ ಹಿಂದೂದೇಶದಲ್ಲಿಯೂ ನಿವಾರಣಾ ಸಂಸ್ಥೆಯೊಂದನ್ನು ಊರ್ಜಿತಗೊಳಿಸಬಹುದು. ಆದರೆ ಮೊದಲಾಗಿ ದೃಷ್ಟಿಜ್ಞಾನದ ವಿಷಯ ಶಿಕ್ಷಣವನ್ನು ಕೊಡಲು, ಮದ್ರಾಸು, ಕಲ್ಕತ್ತಾ ಮುಂತಾದ ಕಡೆಗಳಲ್ಲಿ, ದೃಷ್ಟಿಶಾಸ್ತ್ರವನ್ನು ಕುರಿತು ಉಚ್ಚ ಶಿಕ್ಷಣವನ್ನು ಕೊಡುವ ಶಾಲೆಗಳನ್ನು ತೆರೆಯಬೇಕು. ಈ ವಿದ್ಯಾನಿಲಯಗಳಲ್ಲಿ, ದೃಷ್ಟಿಶಾಸ್ತ್ರದ ಕುರಿತು ಉಚ್ಚ ಶಿಕ್ಷಣ, ಪರಿಶೋಧನಾಕಾರ್ಯ ಮುಂತಾದ ಪಾಠಗಳನ್ನು ಕಲಿಸಿ, ವಿದ್ಯಾರ್ಥಿಗಳನ್ನು ಮುಂದಿನ ನಿವಾರಣಾಕಾರ್ಯಕ್ಕೆ ಶಕ್ತರಾಗುವಂತೆ ತರಬೇತಿ ಮಾಡಬೇಕು. ಇಷ್ಟಾದ ಮೇಲೆ ನಿವಾರಣಾಕಾರ್ಯಕ್ಕಾಗಿ ಪ್ರತ್ಯೇಕ ಸಂಸ್ಥೆಗಳನ್ನು ಮುಖ್ಯ ಕೇಂದ್ರಗಳಲ್ಲಿ ಸ್ಥಾಪಿಸಬೇಕು." (ಪ್ರಕೃತಕ್ಕೆ ಮದ್ರಾಸು, ಮುಂಬಾಯಿ, ಕಲ್ಕತ್ತಾ ಮತ್ತು ಲಾಹೋರ್ ಈ ನಾಲ್ಕು ಕಡೆಗಳಲ್ಲಿ ಮಾತ್ರ ದೃಷ್ಟಿಶಾಸ್ತ್ರವನ್ನು ಕಲಿಸುವ ಶಾಲೆಗಳು ಇವೆ.)

ಅದೇ ಪತ್ರಿಕೆಯು 1929ನೇ ವರ್ಷದ ಸಪ್ಟಂಬರ ಸಂಚಿಕೆಯಲ್ಲಿ ಸಂಪಾದಕರು ಈ ರೀತಿಯಲ್ಲಿ ಬರೆದಿರುತ್ತಾರೆ:-

"ಹಿಂದೂದೇಶದಲ್ಲಿ ಈಗ ಕಂಡುಬರುವ ಕುಂದು ಏನೆಂದರೆ, ವಿಸ್ತಾರ ಕ್ಷೇತ್ರದಲ್ಲಿ ಸಂಸ್ಥಾಪನಾ ಕಾರ್ಯವು ನಡೆಯಬೇಕಾಗಿದೆ. ಚಿಕಿತ್ಸೆಗಿಂತ ನಿವಾರಣೆಯು ಯೋಗ್ಯವೆಂಬುದನ್ನು ಚೆನ್ನಾಗಿ ತಿಳಿಯತಕ್ಕದ್ದು. ಕುರುಡುತನ ನಿವಾರಣೆಗಾಗಿ ನಿಖಿಲ ಹಿಂದೂಸ್ಥಾನ ಚಳವಳವನ್ನು ಹೂಡಬೇಕು. ಸಾರ್ವಜನಿಕ ಆರೋಗ್ಯಕ್ಕೆ ಸಂಬಂಧಪಟ್ಟ ವಿಷಯವಾದುದರಿಂದ ಆರೋಗ್ಯ ಖಾತೆಯವರು ಇತರ ನಿಯೋಗಿ ಮತ್ತು ಸ್ವಯಂಸೇವಕರೊಡನೆ ಯೋಗ್ಯರೀತಿಯಿಂದ ಸಹಕರಿಸಬೇಕು."

"ಬ್ಲಾಯಿಂಡ್ ರಿಲೀಫ್ ಅಸೋಸಿಯೇಶನ್" ಎಂಬ ಹೆಸರಿನ ಸಂಸ್ಥೆಗಳು, ಕುರುಡುತನವನ್ನು ಹೋಗಲಾಡಿಸಲು, ಪಶ್ಚಿಮ ಹಿಂದೂಸ್ಥಾನದಲ್ಲಿ ಅವಿಶ್ರಾಮ ಶ್ರಮವನ್ನು ಪಟ್ಟಿರುತ್ತವೆ. ಸರಕಾರೀ ಕಣ್ಣಾಸ್ಪತ್ರೆಗಳಿಗೆ ಸಹಾಯಕ ಸಂಸ್ಥೆಗಳಾಗಿ ಅವು ಕೆಲಸಮಾಡುತ್ತವೆ. ಹಳ್ಳಿಗಳಲ್ಲಿ ತಾತ್ಕಾಲಿಕ ಆಸ್ಪತ್ರೆಗಳನ್ನು ತೆರೆದು, ದೃಷ್ಟಿಹೀನರನ್ನು ಉಪಚರಿಸುವ ಕೆಲಸವನ್ನು ಈ ಸಂಸ್ಥೆಗಳು ಮಾಡಿರುತ್ತವೆ. ಹಳ್ಳಿಗಳಲ್ಲಿ ಕೆಲಸಮಾಡಲು ಪ್ರತ್ಯೇಕ ಜನರನ್ನು ನೇಮಕಮಾಡಿ, ಅವರ ಮೂಲಕ ಮರೆಯಲ್ಲಿರುವ ಕುರುಡರನ್ನು (Hidden blind) ಬಯಲಿಗೆ ತಂದು, ಅವರಿಗೆ ಚಿಕಿತ್ಸೆ ಕೊಡಿಸುತ್ತಾರೆ. ಸಿಡುಬುರೋಗಿಗಳಲ್ಲಿ ದೃಷ್ಟಿಗೆ ಸೋಂಕು ತಟ್ಟಿದವರನ್ನು ಹುಡುಕುವುದು. ಜನಿಸಿದ ಶಿಶುಗಳ ದೃಷ್ಟಿ ಪರೀಕ್ಷೆ ಮಾಡಿಸುವುದು, ಪೂರ್ಣ ದೃಷ್ಟಿಯಿಲ್ಲದವರ ಮತ್ತು ಅಪೂರ್ಣ ದೃಷ್ಟಿಯುಳ್ಳವರ ಅಲ್ಲದೆ ಕಣ್ಣು ನೋವಿನಿಂದ ನರಳುವವರ ಪ್ರತ್ಯೇಕ ಪಟ್ಟಿಯನ್ನು ತೆಗೆದಿಡುವುದು. ಹಳ್ಳಿಗಳಲ್ಲಿ ಕೆಂಗಣ್ಣು ಮುಂತಾದ ಸಾಮಾನ್ಯ ಕಣ್ಣುರೋಗಗಳಿಂದ ನರಳುವವರ ಚಿಕಿತ್ಸೆ ಮಾಡಿಸುವುದು, ಇವೇ ಮುಂತಾದ ಉಪಕಾರ್ಯಗಳು ಮೇಲಿನ ಸಂಸ್ಥೆಗಳಿಗೆ ಸೇರಿದ್ದಾಗಿವೆ. ಈ ಸಂಸ್ಥೆಗಳು ಹುಟ್ಟಿದಂದಿನಿಂದ ಎಷ್ಟೋ ಸಾವಿರ ಮಂದಿ ದೃಷ್ಟಿಹೀನರು. ದೃಷ್ಟಿಯನ್ನು ಹಿಂದೆ ಪಡೆದು ಸಂಪೂರ್ಣ ವಾಸಿಯಾಗಿರುವರು. ಜೊತೆಗೆ ಸಾವಿರಾರು ಮಂದಿ ಇತರರು ಕುರುಡರೆನಿಸುವ ದುರ್ಯೋಗದಿಂದ ಪಾರಾಗಿರುವರು. 1917ರಲ್ಲಿ ಕರ್ನಲ್ ಇಲಿಯಟರು, ಸಂಸ್ಥೆಗಳು ನಡೆಸಿದ ಕಾರ್ಯವನ್ನು ಕೇಳಿ, ಹರ್ಷಪಟ್ಟು, ಈ ರೀತಿಯಲ್ಲಿ ತಮ್ಮ ಅಭಿಪ್ರಾಯವನ್ನು ಸೂಚಿಸಿರುತ್ತಾರೆ:—"ಈ ಕಾರ್ಯವನ್ನು ಸ್ವತಃ ಕೈಯಲ್ಲಿ ತಕ್ಕೊಂಡು, ಅದರ ವಿಷಯ ಪ್ರಯತ್ನಪಟ್ಟು ಕೆಲಸಮಾಡುವುದು ಸರಕಾರದ ಮುಖ್ಯ ಕರ್ತವ್ಯವಾಗಿದೆ. ಈ ವಿಷಯ ಎಷ್ಟು ಪ್ರಚಾರಮಾಡಿದರೂ ಅದು ಮರ್ಯಾದೆಯನ್ನು ಮೀರಿಸಲಾರದು. ಆದರೆ ಈಗಿನ ಸ್ಥಿತಿ ನೋಡುವಾಗ ಇತರ ಖಾಸಗಿ ಜನರು ಈ ಮಹತ್ತರವಾದ ಕಾರ್ಯಕ್ಕೆ ಮಾಡಿದ ಸಹಾಯವು ಸರಕಾರಕ್ಕಿಂತ ಮಿಗಿಲೆನಿಸಿಕೊಂಡಿದೆ. ಇಲ್ಲಿ ಮಿ. ಹೆಂಡರ್‌ಸನರ ವಿಷಯ ಒಂದು ಮಾತು ಹೇಳುವುದು ತೀರಾ ಅವಶ್ಯವಾಗಿದೆ. ಇವರು 1913ರಲ್ಲಿ ಬ್ಲಾಯಿಂಡ್ ರಿಲೀಫ್ ಅಸೋಸಿಯೇಶನ್ ಚಳವಳವನ್ನು ಸ್ಥಾಪಿಸಿದ ಮಹಾವ್ಯಕ್ತಿಗಳು. ಇವರ ಉದಾಹರಣೆಯನ್ನು ಇತರ ಶಿಕ್ಷಿತ ಹಿಂದೀಯರು ಆದರ್ಶವನ್ನಾಗಿಟ್ಟುಕೊಂಡರೆ, ಕಾರ್ಯರೂಪದ ಮುಗಿಲು ಒಂದು ಗೇಣಿನಷ್ಟು ಪರಿಮಾಣವುಳ್ಳದ್ದಾಗಿದ್ದರೂ, ಫಲವು ಯಥೇಷ್ಟ ವೃಷ್ಟಿಯ ರೂಪದಲ್ಲಿ ಸುರಿಯಬಹುದು."

1917ನೇ ವರ್ಷದಲ್ಲಿದ್ದುದಕ್ಕಿಂತ ಸ್ಥಿತಿಯು ಈಗ ಎಷ್ಟೋ ಪಾಲು ಸುಧಾರಿಸಲ್ಪಟ್ಟಿದೆ. ಸರಕಾರದ ಬೆಂಬಲವು ಸಾಕಷ್ಟು ದೊರಕಿ, ಕಾರ್ಯಕ್ಷೇತ್ರವು ವಿಸ್ತಾರವಾಗಿ ಬೆಳೆದಿದೆ. ದೃಷ್ಟಿಶಾಸ್ತ್ರವನ್ನು ಕಲಿಸುವ ಶಾಲೆಗಳು ಅನೇಕ ಕಡೆಗಳಲ್ಲಿ ತೆರೆಯಲ್ಪಟ್ಟಿವೆ; ಸರಕಾರಿ ಕಣ್ಣಾಸ್ಪತ್ರೆಗಳಲ್ಲಿ ಕೆಲಸವು ಯೋಗ್ಯರೀತಿಯಿಂದ ಸಾಗುತ್ತಿದೆ; ಆದರೆ ಸಾಮಾನ್ಯ ದೃಷ್ಟಿಗೆ ಕಂಡುಬರುವ ಮಹಾದೋಷವೇನೆಂದರೆ, ದೊಡ್ಡ ದೊಡ್ಡ ಶಹರುಗಳಲ್ಲಿ ಮಾತ್ರ ಕಣ್ಣಾಸ್ಪತ್ರೆಗಳು ತೆರೆಯಲ್ಪಟ್ಟಿವೆ ಹೊರತು ಹಳ್ಳಿಗಳಲ್ಲಿ ಈ ವಿಷಯ ಪ್ರಯತ್ನಗಳು ಇನ್ನೂ ನಡೆಯಲಿಲ್ಲ ಎಂಬುದು.

ಕುರುಡುತನವೆಂಬ ಮಹಾನ್ಯೂನತೆಯ ನಿವಾರಣೆಗಾಗಿ ಅಲ್ಲಲ್ಲಿ ಪ್ರಯತ್ನಗಳು ನಡೆದಿರುವುದು ನಿಜ; ಕಾರ್ಯಕ್ಷೇತ್ರವು ಸಾಕಷ್ಟು ವಿಸ್ತಾರವಾಗಿ ಹರಡಿಕೊಂಡಿರುವುದೆಂಬುದು ಒಪ್ಪತಕ್ಕ ಮಾತು. ಆದರೆ, ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಪಡೆಯಬೇಕಾದರೆ, ಸರ್ ಅರ್ನೆಸ್ಟ್ ಕಾಸ್ಸಲರಂತಹ ಉದಾರಿಗಳು ಮುಂದೆ ಬಂದು, ಧನಸಹಾಯವನ್ನು ಮಾಡುವುದು ತೀರಾ ಅವಶ್ಯ.

ಬಾ ಕ್ಕೆ [illegible] ರು

ತಂಬೆಲರ ಇಂಚರದ ಹಿಮ್ಮೇಳ ನಾದದೊಳು
ತುಂಬಿ ಪಾಡುವ ಗಾಣದ ಸವಿಸೂದೆವೊನಲಿನೊಳು
ತೇಲಾಡುತ ಎಲೆ ಬಿರಿಮುಗುಳೆ ನೀನೇತಕೆ ಬಸವಳಿದು ಕುಣಿಯುವೆ!
ಎನ್ನ ಬನ್ನದೊಳು ಎನ್ನ ಕಣ್ಣೆದಿರು ನೀ ಅರಳಿ
ಬನ್ನ ತರುವೆಯೇತಕೆ ನನ್ನ ಹೃದಯ ಜೀವಕೆ?
ಓ ಕುಸುಮ! ನೀ ಅರಳೆ ಹೃತ್ಖೇದನೆ ಇಮ್ಮಡಿಯಾಗುವುದು ತಿಳಿಯೆ!
ನಿನ್ನೆ ಕಿರಿಮುಗುಳಾಗಿಹೆ ಇಂದೇಕೆ ಅರಳಿದೆ?
ನೀ ಅರಳುವೊಡೆ ಅರಳು; ಚೆನ್ನಾಗಿ ಅರಳು. ನಿ-
ನ್ನ ಧರ್ಮವುದು ಬಿಡದಿರು. ಎನ್ನ ಕಣ್ಮುಂದೆ ಬಿರಿ
ಯದಿರು ಬೀರಿಸದಿರು. ಬಿರಿದೆನ್ನ ಬಾಳ್ಬೇಣೆಯಂ ನಿಟಿಲಕದಿರು ಅಲರೆ!
ಈ ಪರಿಮಳವೆಲ್ಲಿಯದ. ನಿನಗೆ ಎಲೆ ಸುಮುಗುಳೆ?
ನಿನ್ನೊಳ್ ಮಕರಂದವಿದೆಂತು ದೊರೆಕೊಂಡುದೆನ-
ಗೆ ಹೇಳಿಲ್ಲಿ? ನಿನಗೀ ಬಣ್ಣಮಾರು ಕೊಟ್ಟರು ಪೇಳ್ ಕುಸುಮ ಬೇಕು.
ಪೇಳೆಯಾ? ಎನ್ನೊಡನೆ ನಿನಗೇತಕೀ ವಿನಗು?
ಎನ್ನ ಬಾಳ್ಗುಸುಮದೊಳು ಮಕರಂದವಿಲ್ಲೆಂದೆ
ಎನ್ನ ಹೃದಯವರಳಿ ಗಮಗಮಿಸದೆ ಚೆಲುವು ಪಡೆದಿಲ್ಲವೆಂದೆ ನಗು!
ನಗು! ಮುಗುಳೆ ನಗು!!! ನಿನ್ನ ನಗುವಿನಿಂ ಎನ್ನ ಬಾ-
ಳ್ಗುಸುಮದೊಳೊಸರುವುದು ರಸಂ. ಎನ್ನ ಹೃದಯ ಪು-
ಷ್ಪ ಪ್ರಫುಲ್ಲಿಸಿ ಪರಿಮಳಿಸುವುದು. ಎಲೆ ಕುಸುಮ ನಗು ಚೆನ್ನಾಗಿ ನಗು.

—ಕಾಸರಗೋಡು ವೆಂಕಟೇಶ ಭಟ್ಟ.



ದೇವ ಗುಡಿಯೊಳಗಿಹನೆ?

(ಕೆ. ವಿ. ಬ್ರಹ್ಮಾನಂದ, ಮಂಗಳೂರು.)

ದೇವ ಗುಡಿಯೊಳಗಿಹನೆ? ಇಷ್ಟೇನ ಮಾಡುವನು? ನಿದ್ರೆಯನು ಮಾಡುವನೆ? ಸದ್ದಿಲ್ಲದಿಹನೆ? ಬುದ್ಧಿಯನು ನೀಗಿಹನೆ? ಕರ್ತವ್ಯಮೂಢನಂತಾಗಿ ಬಿದ್ದಿಹನೆ?

ಮೂಲೋಕ ನಡೆಸುವಾ ಸೂತ್ರ ಹಿಡಿದಿಹನವನು—ತ್ರಿಲೋಕ ಕಾಯುವಾ ಭಾರ ಹೊತ್ತಿಹನು—ಶಿಷ್ಟರನು ಪೊರೆವವನು—ದುಷ್ಟರನು ತರಿವವನು—ಜಗವ ನಿಜ ನೊಗದಿಂದೆ ನಡೆಸುವವ ತಾನು. ಗುಡಿಯೊಳಗೆ ಗುಟ್ಟಾಗಿ ಏಕೆ ನಿಂದಿಹನು? ಕತ್ತಲೆಯ ಕಂದರದಿ ಏಕೆ ಅಡಗಿಹನು?

ಪಾಲ್ಗಡಲಿ ಹೃದಯವೇ ಅವನ ವಾಸಸ್ಥಾನ! ಆದಿಶೇಷನ ಮಡಿಲೆ ಅವನ ಸುಖತಲ್ಪ! ಸಿರಿಯರಸಿ ಲಕುಮಿಯೇ ಅವನ ಚರಣದ ದಾಸಿ? ಇನಿತೆಲ್ಲ ತೊರೆದವನು ಇಲ್ಲೇಕೆ ವಾಸ?

ಲೋಕದುದ್ದಿನ ಜ್ಯೋತಿ ಅವನಾಗಿ ಇಹನು. ಅಣುರೇಣು ಬಿಡದೆಲ್ಲ ಚರಿಸುತಿಹನು. ಲೋಚನಕಗೋಚರನು ಅವನಿಹನು ಎಂದು ಲೋಕ ಸ್ವಾರ್ಥವ ಸಾತಿಶ್ರುತನನ ಎಂದೆಂದೂ. ಅಂತಿರುವ ದೇವನಿಂದು ಗುಡಿ ಏಕೆ ಕಂಡ? ಮತ್ತೆ ತಾ ಮನುಜರಿಗೆ ತೋರಿಕೊಂಡ?

* * * * * * *

ಅಹೊ! ಏನಿಹುದಿದು? ದೇವನಿರುವ ಗುಡಿಯೆ? ಅಲ್ಲ. ಸೆರೆಮನೆಯು? ಕಠಿಣದ ಕಬ್ಬಿಣದ ಸರಳ ಬಾಗಿಲು ಇಹುದು. ದ್ವಾರದಲಿ ಬೀಗ ಮುದ್ರೆ ಇಹುದು. ಸಾಲದೇಡ, ಬಿಟದೇಕು—ದೇವ ನಿಜದಿಲ್ಲಿಹನೆ? ಇದರೊಳಗೆ ಇರಲೇನು ಬಂಧಿ ತಾನಿಹನೆ? ಜನತೊರೆದ ಜಾಗವಿದು—ಜೀರ್ಣ ವಾತಾವರಣ—ಕತ್ತಲೆಯು ತವರಿಹುದು—ಕೊಳಕ ಕಂದರ ಜೇರೆ ಭವನವಿಯನು ಹಿಡಿಸದೆ ಈ ಬಂಧ ವೇಕೊ! ಕಾವನಿಗೆ ಈ ಕೋಣೆ ಏಕೊ ನಾ ಕಾಣೆ! ಹಾ! ಬಲ್ಲವಗೆ ಬರಬರಲು ಬಂಧುಗಳಿವೆಲ್ಲ?

ಬಂಧನದೊಳಿರಲಿವನು ಮಾಡಿರುವ ಏನೊ! ಆವ ಪಾತಕಕಾಗಿ ಪ್ರಾಯಶ್ಚಿತ್ತವಿದು? ಕೊಲೆಗಡಕನೇ ಅವನು? ಅಲ್ಲ ಚೋರನೆ ಮತ್ತೆ?

ಹಿಂದೆ ಬಲಿಯನು ತುಳಿದು ಬಲು ಕಾಯವಾಗಿಹನು—ವಾಲಿಲೀಲೆಯು ತೋರಿ ವಾಲಿಯನು ಕೆಡಿಸಿಹನು—ಸೂಳೆಯೊಡನೆ ಕೊಲೆಯ ಸಲಿಗೆಯ ಮಾಡಿಹನು—ಕ್ಷತ್ರಕುಲವನೆ ಕಾಡಿ ಕಾದಾಡಿದವನಾಗಿಹನು—ಹೆಚ್ಚೇನು? ಪಾಪವನೆ ಕಡೆಗಂಡ ಪಾತಕಿಯು ಇಹನು—ದೇವನಾಗಿರಲೇನು, ಅವನಾಗಿರಲೇನು? ಕೃತತ್ರೇತವಲ್ಲಿರಲಿ. ದ್ವಾಪರದಯುಗವಿರಲಿ—ಪಾತಕಿಗೆ ತಕ್ಕ ಶಿಕ್ಷೆಯು ನಿತ್ತೆ ನೀನು ಕಲಿಪುರುಷ ಭಲೆ ನಿನ್ನ ನ್ಯಾಯವೇ ನ್ಯಾಯವಲೆ!

* * * * * *

ಬಾಗಿಲನು ತೆರೆಯೊಮ್ಮೆ. ನಾನವನ ಕಾಣುವೆನು—ಬಿದಂಬೇತಿಲೊ. ನನ್ನ ಧೈರ್ಯವಿರಲಿ—ಬಾಗಿಲನು ತೆರೆದವನೆ ದೀಪವನು ಹಚ್ಚಿದೆಯಾ? ಚೆನ್ನಾಯ್ತು. ಚೆನ್ನಾಯ್ತು. ಸುಖದಿ ನೋಳ್ಪೆ.

ಅರರೆ. ಏನಿಹುದಿದುವು! ಬರಿಯ ಶಿಲೆಯಲ್ತೆ! ಹಗ್ಗವನು ತಂದಿಟ್ಟು ಹಾವೆನ್ನುತಿಹೆಯಾ? ಕಾವವನೆ ಇಲ್ಲಿಹನು ಎಂದು ವಂಚಿಸೆಯಾ?......ಅಲ್ಲ. ಕಲಿಯಲಿ ಕಾವ ಕಲ್ಲಾಗಿ ಇಹನೆ? ಪೊರೆವವನು ಪಾಷಾಣವಾಗಿ ಬಿದ್ದಿಹನೇ? ಹಾ! ಆವ ಪಾಪದ ಫಲವೊ!

ಪಾಪ! ಪಾಪ ಬೇರಾವದಿದು? ಬಡಜನರ ತಾಪ! ಪೂರ್ವದಲಿ ಪುರುಷನೊಬ್ಬನು ಕರೆಯೆ ಸಾಕು—ನಾರಿಯಾ ರೋದನದ ದನಿಯು ಸಾಕು—ಅಲ್ಲದಿದ್ದರೆ ಒಂದು ಮೃಗದ ಮೊರೆ ಸಾಕು! ದೇವ ಬಂದಲ್ಲಿ ಸಂಕಟ ಹರಿಸುತಿದ್ದ! ಇಂದು ಇದಿ ಭಾರತದ ಬಡಜನರ ಬಳಗ—ಹೊಟ್ಟೆಗಿಲ್ಲದ ತಾಪ, ಬಟ್ಟೆಯಿಲ್ಲದ ತಾಪ. ರೆಟ್ಟೆ ಅಬಲದ ತಾಪ. ಬಟ್ಟೆಯಾಳ್ವರ ಕೋಪದಿಂ ಬೆಂದು ನೊಂದು—ದೇವದೇವನ ಕರೆಯೆ. ಬಂದು ಪೊರೆ ಎಂದೊರೆಯೆ. ಜೇಡರು, ಕಾಡರು ಅವ ಬಿಡನು ಎಲ್ಲಿ? ಅಧಿಕಾರ. ಧನ, ದರ್ಪ ಅವನ ತಲೆಯಲ್ಲಿ—ಸಿರಿಯೊಡನೆ ಸ್ವರಸದಿಂ ಆನಿಸಿರಲು ಅಲ್ಲಿ. ಬಡವರಂ ಪೊರೆಯುವಾ ಭಾರವೇಕಿಲ್ಲಿ? 'ಬಧಿರನಾಗಿರಲಿವನೆ ಬಧಿರನೇ ಇರಲಿ: ಮೂಕನಾಗಿರಲವನು ಹಾಗೆಯೇ ಇರಲಿ: ಕಣ್ಣು ಕುರುಡಾಗಿರಲು ಅಂಧನಾಗಿರಲಿ. ಚಲಿಸಲಾಗದೆ ಇರಲು ಶಿಲೆಯಾಗಿ ನಿಲಲಿ. ಹೃದಯವೇ ಕಲ್ಲಾಗೆ ಕಲ್ಲಾಗಿ ಇರಲಿ' ಎಂದು ಬಡಜನರವನ ಶಪಿಸದೇ ಇಹರೇ? ಬಹುಜನರ ಶಾಪವದು ಗುರುತರವು ಇಹುದು. ಭಾರತದ ನಾಲ್ಕು ದಶಕೋಟಿ ಹೃದಯದ ಉರಿಯು ಅವನ ತಲೆಮೇಲೆ ತಾನುರಿಯದಿಹುದೇ? ಹಾಗಾಗಿ ಕಲಿಯಲ್ಲಿ ಕಲ್ಲಾಗಿ ಇಹನೇ!

* * * * * * * *

ದೇವ ಗುಡಿಯೊಳಗಿಹನೆ? ಇಹನು. ಇಹನು ನಮ್ಮ ಕಾಯುವನಲ್ಲ. ನಾವು ಕಾಯುವನು ಕಿವಿಯಿರುವ ಕಿವುಡನವ. ಬಾಯಿರುವ ಮೂಕ. ಕಣ್ಣಿದ್ದು ಕುರುಡನವ. ತಲೆಶಿಲೆಯು ಬಳಿದ—ರೂಪವೆನಿತಿದ್ದರೂ ಜೀವಕಳೆ ಲೋಪ. ಕಾವವನು ಅವನಲ್ಲ. ಕಾಯಲಾರದನು.

ಸುಖದಿಂದ ಜನನುತಿಸೆ 'ದೇವ'ನೆಂದಾದ—ದುಃಖದಿಂ ಜನ ತುಳಿದು ದೇವ ಕಲ್ಲಾದ—ಇಂತಿಹುದು ಲೀಲೆಯಾ ದೇವನಾಟ—ಜಗಜನಿತ [illegible] ಬಡ ಉರಿಯ ಮಾಟ!

(30ನೇ ಪುಟದಿಂದ

ರಿಯಾಯತಿಗಳು ಕೆಲವು ಗುರುಗಳಿಂದ ದೊರೆತವಲ್ಲದೆ. ಅವರ ಜಾತಿಸಂಖ್ಯೆಯು ಬಲದಿಂದಲ್ಲ.

ಹಿಂದೀ ಭಾಷೆಯು ಹೆಚ್ಚು ಹೆಚ್ಚಾಗಿ ಪ್ರಾಮುಖ್ಯತೆಯನ್ನು ಹೊಂದುತ್ತ ಸಂಸ್ಕೃತದಲ್ಲಿ ಮತ್ತು ಪ್ರಾಕೃತದಲ್ಲಿ ಬರೆಯಲಾಗುವ ಗ್ರಂಥಗಳು ಕಾಣದಾದುವು. ಪ್ರಾಕೃತ ಮತ್ತು ಸಂಸ್ಕೃತಗಳಲ್ಲಿಯ ಯಾವತ್ತೂ ಗ್ರಂಥಗಳು ಹಿಂದೀ ಭಾಷೆಯಲ್ಲಿ ಭಾಷಾಂತರ ಹೊಂದಲು ಆ ಭಾಷೆಯು ಧಾರ್ಮಿಕ ಗ್ರಂಥಗಳ ಪ್ರಕಟನೆಗಳಲ್ಲಿ ಪ್ರಸಿದ್ಧಿ ಹೊಂದಲಾರಂಭಿಸಿತು. ಮೊದಲು ಶಾಸ್ತ್ರಭಂಡಾರಗಳನ್ನು ಮಹಮ್ಮದೀಯ ದಾಳಿಯಿಂದ ರಕ್ಷಿಸಲು ಜಾಗರೂಕತೆಯಿಂದಿಡಬೇಕಿತ್ತು. ಆದರೆ. ಆ ಹೆದರಿಕೆಯು [illegible] ಪವಿತ್ರ ಗ್ರಂಥಗಳನ್ನು ಜಾಗರೂಕತೆಯಿಂದ ಕಾಯುವ ಅಭ್ಯಾಸವು ಅದರ ಅಧ್ಯಯನದ [illegible] ಅದರ ಪ್ರಾಶಸ್ತ್ಯವನ್ನು ನಾಶ ಮಾಡುತ್ತಿದೆ.

[illegible] ಜೈನರನ್ನು [illegible] ಅವರ [illegible] ಅವರು ಹೇಗಿದ್ದರೆ [illegible]

ದಾರಿಗೆ ಬಂದು ದೊಡ್ಡ ಸಾಮಾಜಿಕ ಬದಲಾವಣೆಗೆ ಪ್ರಯತ್ನಿಸುವ ಸಮಯವು ಬಹಳ ದೂರವಿರಲಿಕ್ಕಿಲ್ಲ.

ಇದೇ ಭೂಲೋಕದಲ್ಲಿ ಅಹಿಂಸಾ ತತ್ವವು ಪ್ರಸಿದ್ಧಿ ಹೊಂದಿರುವುದರಿಂದ "ನಾವು ಅದನ್ನು ಶೋಧಿಸಿದವರು" ಎಂದು ಜಗತ್ತಿಗೆ ಜೈನರು ಸಾರುವುದು ಅವರ ಗೌರವಕ್ಕೆ ಸಲ್ಲುವ ಕರ್ತವ್ಯ. ಜೈನಚರಿತ್ರೆಯನ್ನು ಕೂಲಂಕಷವಾಗಿ ಮುಂದಿಡುವುದು ಅಗತ್ಯ. ಆ ಮಹಾಮತದ ಉನ್ನತಿಯ ಮತ್ತು ಅವನತಿಯ ವಿಷಯದ ಕತೆಯು ಬೋಧಪರವೂ ಆನಂದದಾಯಕವೂ ಆಗಿರುವುದು. ಆ ವಿಷಯವಾಗಿ ಲೇಖನಗಳನ್ನು ಬರೆಯುವ ಚತುರರನ್ನು ಕೂಡಿಸಿ, ಅವರಿಂದ ಈ ಧರ್ಮದ ಪ್ರತಿಯೊಂದು ಭಾಗವನ್ನು ಬರೆಯಿಸಿ, ಅನಂತರ ಅದನ್ನು ಒಂದುಗೂಡಿಸಬೇಕು. ಜೈನಮತವು ಶತಮಾನದಿಂದ ಶತಮಾನದಲ್ಲಿ. ಪ್ರಾಂತ್ಯದಿಂದ ಪ್ರಾಂತ್ಯದಲ್ಲಿ. [illegible] ಧಾರ್ಮಿಕ, ರಾಜಕ ಮತ್ತು ಸಾಮಾಜಿಕ [illegible] ಬಲದಿಂದ [illegible] ರಂಗದಿಂದ [illegible]. ತಾನು [illegible] ರಕ್ಷಣಾಯಿತೆಂಬುದನ್ನು ಅವಲೋಕಿಸಲು. ಸ್ವತಂತ್ರ ಪ್ರಯತ್ನವನ್ನು [illegible] ಈಗ ಬಂದೊದಗಿದೆ.

ಚರಕದ ನೂಲು ಮತ್ತು ಕೈಮಗ್ಗದ ಬಟ್ಟೆ

ಮಹಾತ್ಮಾ ಗಾಂಧಿಯವರು ಭಾರತದ ಉದ್ಧಾರಕ್ಕೆ ಚರಕದಿಂದ ನೂಲು ಹೊಸೆಯುವುದು ಉತ್ತಮ ಮಾರ್ಗವೆಂದು ಬೋಧಿಸುತ್ತಾರೆ. ಮಾನಸಿಕ ವೃತ್ತಿಯನ್ನು ಅನುಸರಿಸುವವರಿಗೆ ಇದು ಎಷ್ಟರ ಮಟ್ಟಿಗೆ ಅನುಕೂಲವಾಗುವುದೆಂದು ಹೇಳಲಾಗುವುದಿಲ್ಲ. ಗಾಂಧಿಯವರು ನೂಲುವುದರ ಪರವಾಗಿ ಹೇಳುವ ಕಾರಣಗಳನ್ನು ಗಮನಿಸಿದರೆ ಇದರಿಂದ ಬೇಕಾದವರು ಬೇಕಾದ ಪ್ರಯೋಜನವನ್ನು ಹೊಂದಬಹುದೆಂದು ತೋರುವುದು. ಗ್ರಾಮವಾಸಿಗಳಾದ ರೈತರ ಮಟ್ಟಿಗೆ ಹೇಳುವುದಾದರೆ, ಇದು ಅವರು ಅನುಸರಿಸಬಹುದಾದ ಸುಲಭವಾದ ಅವಲಂಬನವೆಂದು ಹೇಳಬಹುದು. ಉತ್ಪತ್ತಿಯ ದೃಷ್ಟಿಯಿಂದ ಇದಕ್ಕಿಂತ ಉತ್ತಮ ವೃತ್ತಿಗಳು ಬೇರೆ ಇರಬಹುದು. ಆದರೆ ರೈತರು ಇಂಥ ಉಪವೃತ್ತಿಯನ್ನೇ ಅನುಸರಿಸಬೇಕೆಂಬ ನಿರ್ಬಂಧವೇನೂ ಇರುವುದಿಲ್ಲ.

ಈ ನೂಲುವ ವೃತ್ತಿಯು "ನಮ್ಮ ದೇಶದಲ್ಲಿ ಹೊಸತಾದ ವೃತ್ತಿಯೇನೂ ಅಲ್ಲ. ಪ್ರಾಚೀನ ಕಾಲದಲ್ಲಿ ರೈತರ ಪ್ರತಿಯೊಂದು ಮನೆಯಲ್ಲಿಯೂ ಚರಕಗಳು ತಿರುಗುತ್ತಿದ್ದವು." ವ್ಯವಸಾಯ, ಪಶುಪಾಲನೆ ಮತ್ತು ನೂಲುವುದು ಇವು ಮೂರು ರೈತರು [illegible] ಅನುಸರಿಸುತ್ತಿದ್ದ ವೃತ್ತಿಗಳು. [illegible] ಪಾಶ್ಚಾತ್ಯ ಸಂಪರ್ಕದಿಂದುಂಟಾದ ನವಸನ್ನಿವೇಶಗಳ [illegible] ನೂಲುವುದು ರೈತರ ಕೈ ಬಿಡುವಂತಾಯಿತು. ವ್ಯವಸಾಯ, ಪಶುಪಾಲನೆ ಮಾತ್ರ ಅಪೂರ್ಣಕವಾಗಿಯಾದರೂ ನಿರ್ವಹಿಸಲ್ಪಡುತ್ತಿವೆ. [illegible] ನೂಲುವ ವೃತ್ತಿಯನ್ನು ರೈತರು ಪುನರುಜ್ಜೀವನಗೊಳಿಸಿ ಅವಲಂಬಿಸುವುದು ಯೋಗ್ಯವಾದುದು. ಈ ಉಪವೃತ್ತಿಯ ಅನುಕೂಲ, [illegible] ಪ್ರಯೋಜನ [illegible] ಮನನಮಾಡಿ ಅನುಸರಿಸತಕ್ಕ ಆವಶ್ಯಕತೆಯನ್ನು ಕುರಿತು ಮಹಾತ್ಮಾಗಾಂಧಿಯವರು ಒತ್ತಿ ಹೇಳಿರುವರು. ಚರಕದ ಪುನರುದ್ಧಾರವು ಏಕೆ ಅಗತ್ಯವಾದುದೆಂದು ತೋರಿಸುವುದಕ್ಕೆ ಅವರು ಕೊಡುವ ಕಾರಣಗಳಲ್ಲಿ ಯಾವುದೊಂದೂ ರಾಜಕೀಯ ವಿಚಾರಕ್ಕೆ ಸಂಬಂಧಪಟ್ಟುದಲ್ಲ. ರೈತರು ಅನುಸರಿಸಬಹುದಾದ ಯೋಗ್ಯವಾಗಿರುವ ಇತರ ಅನೇಕ ವೃತ್ತಿಗಳ ಯೋಗ್ಯತೆಗೂ ಈ ಕಾರಣಗಳು [illegible] ಅನ್ವಯಿಸುವುವೆಂದು ಹೇಳಬಹುದು.

ಚರಕದ ಯೋಗ್ಯತೆಯನ್ನು ಕುರಿತು ಮಹಾತ್ಮಾಗಾಂಧಿಯವರು ಹೇಳುವ ಮುಖ್ಯಾಂಶಗಳು ಈ ಪ್ರಕಾರವಾಗಿವೆ:—

1. ಇದು [illegible] ಪ್ರಯೋಗಸಾಧ್ಯವಾಗಿದೆ. ಏಕೆಂದರೆ ಹೆಚ್ಚು ಬಂಡವಾಳ ಮತ್ತು ಉಪಕರಣಗಳ ಸಹಾಯವಿಲ್ಲದೆ ಇದನ್ನು ಕೈಕೊಳ್ಳಬಹುದು. ಇದಕ್ಕೆ ಬೇಕಾಗುವ ಕಚ್ಚಾ ಪದಾರ್ಥಗಳೂ ಉಪಕರಣಗಳೂ ಸುಲಭವಾಗಿ ಅಲ್ಲಲ್ಲೇ ದೊರೆಯುತ್ತವೆ. ಇದಕ್ಕೆ ಬಡವರೂ ಪಾಮರರೂ ಆದ ನಮ್ಮ ಜನರಲ್ಲಿರುವುದಕ್ಕಿಂತ ಹೆಚ್ಚಾದ ಚಾತುರ್ಯ, ಬುದ್ಧಿಶಕ್ತಿಗಳ ಆವಶ್ಯಕತೆಯಿಲ್ಲ. ಮಕ್ಕಳೂ ಮುದುಕರೂ ಕೈಲಾದಷ್ಟು ಕೆಲಸಮಾಡಿ ಕುಟುಂಬದ ಆದಾಯವನ್ನು ಹೆಚ್ಚಿಸಬಹುದು. ನೂಲುವ ಸಂಪ್ರದಾಯವು ನಮ್ಮ ದೇಶಕ್ಕೆ ಹೊಸತಲ್ಲವಾದುದರಿಂದ ಇದನ್ನು ಪ್ರಯೋಗಿಸುವುದಕ್ಕೆ ವಿಶೇಷವಾಗಿ ಯಾವ ಸನ್ನಿವೇಶಗಳನ್ನೂ ಹೊಸತಾಗಿ ಕಲ್ಪಿಸಬೇಕಾಗಿರುವುದಿಲ್ಲ.

2. ಆಹಾರವನ್ನು ಹೊರತಾಗಿ ಮನುಷ್ಯನಿಗೆ ಅವಶ್ಯಕವಾದುದು ಬಟ್ಟೆಯು ನೂಲೇ ಆಗಿರುವುದು. ಆದುದರಿಂದ ಇದಕ್ಕೆ ಗಿರಾಕಿಗಳಿಲ್ಲವೆಂಬ ಹೆದರಿಕೆಯಿಲ್ಲ. ಯಾವಾಗಲೂ ಎಲ್ಲೆಲ್ಲಿಯೂ ನೂಲು ಬೇಕೇ ಬೇಕಾಗಿರುವುದರಿಂದ ಕೆಲಸಗಾರನ ಮನೆಯ ಬಾಗಿಲಲ್ಲೇ ಗಿರಾಕಿಗಳು ಒದಗುತ್ತಾರೆ. ಅಂತೂ ಇದು ಸಾರ್ವತ್ರಿಕವೂ ಶಾಶ್ವತವೂ ಆಗಿರುವ ಆವಶ್ಯಕತೆ. ಹೀಗಿರಲು ಬಡ ರೈತನಿಗೆ ಇದರಿಂದ ಆದಾಯವು ತಪ್ಪದೆ ಬರುವುದು.

3. ಹವಾ ಬದಲಾವಣೆಯಿಂದ ಇದಕ್ಕೆ ಬಾಧಕವಿಲ್ಲ. ಆದುದರಿಂದ ಕ್ಷಾಮ ಕಾಲದಲ್ಲಿಯೂ ಚರಕವನ್ನು ನಡೆಯಿಸಬಹುದು.

4. ಇದು ಜನರ ಧಾರ್ಮಿಕ ಭಾವನೆಗಾಗಲಿ ಸಾಮಾಜಿಕ ಪದ್ಧತಿಗಾಗಲಿ ವಿರೋಧವಾಗಿಲ್ಲ.

5. ಕ್ಷಾಮವನ್ನು ಎದುರಿಸುವುದಕ್ಕೆ ಇದು ಅತ್ಯುತ್ತಮವಾದ ಅನುಕೂಲ ಸಾಧನವು.

6. ರೈತನ ಕುಟುಂಬದವರೆಲ್ಲರಿಗೂ ಮನೆಯೊಳಗೆಯೇ ಇದರಿಂದ ಕೆಲಸ ಒದಗಿದಂತಾಗುವುದು. ಆದುದರಿಂದ ಆರ್ಥಿಕ ಸಂಕಷ್ಟದಿಂದ ಯಾರಿಗೂ ಮನೆಯನ್ನು ಬಿಟ್ಟು ಹೋಗಬೇಕಾದ ಆವಶ್ಯಕತೆಯಿಲ್ಲ.

7. ಗ್ರಾಮ ಸಮಾಜ ವ್ಯವಸ್ಥೆಯ ಪ್ರಯೋಜನಗಳನ್ನು ಇದೊಂದು ಮಾತ್ರ ಉಂಟುಮಾಡಬಲ್ಲುದು.

8. ಇದು ಕೈ ನೆಯ್ಗೆಗಾರನಿಗೂ ಬೇಸಾಯಗಾರನಿಗೂ ಬೆನ್ನು ಮೂಳೆಯಂತೆ ಆಧಾರವಾದುದು. ಏಕೆಂದರೆ ಕೈ ಮಗ್ಗದ ಕೈಗಾರಿಕೆಗೆ ಅಗತ್ಯವಾದ ವಸ್ತುವನ್ನು ಮಾತ್ರ ಇದು ಒದಗಿಸಬಲ್ಲುದು.

9. ಇದನ್ನು ಪುನರುಜ್ಜೀವನಗೊಳಿಸಿದರೆ ಇದಕ್ಕೆ ಹೊಂದಿಕೊಂಡಿರುವ ಇನ್ನೆಷ್ಟೋ ಗ್ರಾಮ ವೃತ್ತಿಗಳಿಗೆ ಪ್ರೋತ್ಸಾಹ ದೊರೆಯುವುದು. ಆ ಮೂಲಕ ಹಳ್ಳಿಗಳನ್ನು ಸದ್ಯದ ದುರವಸ್ಥೆಯಿಂದ ಉದ್ಧರಿಸಬಹುದು.


10. ಮಿಲಿಯಗಟ್ಟಲೆ ಭಾರತವಾಸಿಗಳೊಳಗೆ ಸರಿಯಾಗಿ ಸಂಪತ್ತಿನ ಹಂಚಿಕೆಯಾಗುವಂತೆ ಇದು ಮಾತ್ರ ಭದ್ರತೆಯನ್ನುಂಟುಮಾಡಬಲ್ಲುದು.

11. ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಇದರಿಂದ ಮಾತ್ರ ಸಾಧ್ಯವಾಗುವುದು. ಅಲ್ಲಿ ಉದ್ಯೋಗವಿರುವ ರೈತನಿಗೆ ಮಾತ್ರವಲ್ಲದೆ ಉದ್ಯೋಗವನ್ನು ಅರಸುತ್ತ ಸುಮ್ಮನೆ [illegible] ಇದು ಉದ್ಯೋಗವನ್ನು ಒದಗಿಸುವುದು.

ಚರಕದಿಂದ ಅಗತ್ಯಕ್ಕೆ ಪ್ರಯೋಜನಗಳು [illegible] ವೃತ್ತಿಯನ್ನು ಅನುಸರಿಸಿದರೆ ಸಾಕೆಂದು [illegible] ಹೊಂದುವ ವೃತ್ತಿಯೇ ಯೋಗ್ಯವಾದುದು. [illegible] ಸ್ವೀಕಾರಗಳಾಗಿ [illegible] ಅವಲಂಬಿಸುವುದಕ್ಕೆ ಏನೂ ಆತಂಕವಿರುವುದಿಲ್ಲ. ಈಚೆಗೆ ಇಂಗ್ಲೆಂಡಿನಲ್ಲಿ ನೂಲುವುದನ್ನೂ ನೇಯುವುದನ್ನೂ ಉಪವೃತ್ತಿಗಳನ್ನಾಗಿ ಅವಲಂಬಿಸುವಂತೆ ರೈತರಿಗೆ ಹೆಚ್ಚು ಪ್ರೋತ್ಸಾಹ ಉಂಟಾಗಿದೆ ಎಂದು ಗೊತ್ತಾಗಿದೆ. ಅವರು ತಮ್ಮ ಉಪಕರಣಗಳನ್ನು [illegible] ಕೊಳ್ಳುವುದಕ್ಕೆ ಹೆಚ್ಚು ಪ್ರಯತ್ನಪಟ್ಟು ಚತುರತೆಯಿಂದ ಕೆಲಸಮಾಡಿ ಹೆಚ್ಚು ಲಾಭವನ್ನು ಹೊಂದುತ್ತಾರೆ. ಇಂಗ್ಲೆಂಡಿನ ಡೆವನ್‌ಶಾಯರ್ ಪ್ರಾಂತ್ಯದಲ್ಲಿ ಒಂದು ನೂಲುವ ರಾಟೆಯಿಂದ ಏಕಕಾಲದಲ್ಲಿ ಒಬ್ಬನೇ ಏಳು ನೂಲುಗಳನ್ನು [illegible] ಸಣ್ಣ ಯಂತ್ರವನ್ನು ಸಿದ್ಧಗೊಳಿಸುವುದಕ್ಕೆ ಪ್ರಯತ್ನ ನಡೆಯುತ್ತಿರುವುದೆಂದು **ಸ್ಪೆನ್ಸರ್ ಹೇಷ್** ಎಂಬವರು ಹೇಳುತ್ತಾರೆ. ನಮ್ಮ ದೇಶದಲ್ಲಿಯೂ ಸುಲಭವಾಗಿ ಹೆಚ್ಚು ನೂಲನ್ನು ತಯಾರಿಸುವುದಕ್ಕೆ ಅನುಕೂಲವಾಗತಕ್ಕ ಹೊಸ ಚರಕಗಳನ್ನು [illegible] ಪ್ರಯತ್ನಗಳು ನಡೆದಿವೆ. ಅಂತೂ ನಮ್ಮ ಜನರು ಉತ್ತಮವೂ ಸುಲಭವೂ ಆಗಿರುವ ಸಾಧನಗಳನ್ನು ಉಪಯೋಗಿಸಿಕೊಂಡು ನೂಲುವುದನ್ನು ಉಪವೃತ್ತಿಯಾಗಿ [illegible].

ಕೈ ಮಗ್ಗದ ನೇಯ್ಗೆಯಿಂದ ಬಟ್ಟೆ ತಯಾರಿಸುವುದು ಗ್ರಾಮಾಂತರವಾಸಿಗಳು ಅವಲಂಬಿಸಬಹುದಾದ ಇನ್ನೊಂದು [illegible] ಉಪವೃತ್ತಿ. ಈಗ ನಮ್ಮ ದೇಶದಲ್ಲಿ ಕೈ ಮಗ್ಗ ಕೈಗಾರಿಕೆಯು [illegible] ಜನರಿಗೆ ಜೀವನೋಪಾಯವನ್ನು ಒದಗಿಸುತ್ತಿದೆ. [illegible] ಒಂದಂಶದಷ್ಟು ಬಟ್ಟೆಬರೆಗಳ ಆವಶ್ಯಕತೆಗಳನ್ನು ಕೈಮಗ್ಗಗಳು ಪೂರೈಸುತ್ತಿವೆ. ಕೈ ಮಗ್ಗದ ಕೆಲಸದಿಂದ ಕೇವಲ ನೂಲುವುದಕ್ಕಿಂತ ಹೆಚ್ಚಿನ ಆದಾಯವನ್ನು ಕೂಡಾ ಹೊಂದಬಹುದು. ಆದರೆ ಹಳೆಯ ರೀತಿಯ ಮಗ್ಗಗಳನ್ನು [illegible] ಉತ್ತಮವಾದ ಫ್ಲೈಷಟ್ಲ್ ಮಗ್ಗಗಳನ್ನು ಪ್ರಚಾರಕ್ಕೆ ತರಬೇಕು. ಗಿರಾಕಿಗಳ ಅಭಿರುಚಿಗೊಪ್ಪುವಂತೆ ಹೊಸ ಹೊಸ ತರದ ಬಟ್ಟೆಗಳನ್ನು ತಯಾರಿಸುವುದಕ್ಕೆ ಅಭ್ಯಾಸಮಾಡಬೇಕು. ಫ್ಲೈಷಟ್ಲ್ ಮಗ್ಗಗಳಲ್ಲಿ ಹಳೆಯ ಮಾದರಿಯ ಮಗ್ಗಗಳಿಗಿಂತ ಅರ್ಧಾಂಶದಷ್ಟು ಕಡಮೆ ಶ್ರಮವು ಸಾಕು. ಬಟ್ಟೆಗಳೂ ಉತ್ತಮವಾಗಿರುತ್ತವೆ. ಒಂದು ಫ್ಲೈಷಟ್ಲ್ ಮಗ್ಗಕ್ಕೆ ಸುಮಾರು [illegible] ಹೆಚ್ಚು ಬೇಕಾಗುವುದಿಲ್ಲ. ಪ್ರತಿಯೊಬ್ಬ ರೈತನ ಮನೆಯಲ್ಲಿ ಒಂದೊಂದು ಮಗ್ಗವನ್ನಿಟ್ಟುಕೊಂಡರೆ, ಮನೆಯವರೆಲ್ಲರೂ—ಹೆಂಗಸರೂ ದೊಡ್ಡ ಮಕ್ಕಳೂ ಎಲ್ಲರೂ—ಬಿಡುವಿದ್ದಾಗ ಇದರಲ್ಲಿ ಕೆಲಸಮಾಡಬಹುದು. ನೂಲು, ಬಣ್ಣ ಮೊದಲಾದುವುಗಳನ್ನು ಕೊಂಡುಕೊಳ್ಳುವುದಕ್ಕೂ ತಯಾರಾದ ಬಟ್ಟೆಗಳನ್ನು ಮಾರುವುದಕ್ಕೂ ಸಹಕಾರ ವ್ಯವಸ್ಥೆಯನ್ನು ಮಾಡಿಕೊಂಡರೆ ಪ್ರಯೋಜನವಾಗಬಹುದು. ಕೈಮಗ್ಗದ ಬಟ್ಟೆಗೆ ಹೆಚ್ಚು ಪ್ರೋತ್ಸಾಹಕೊಡುವಂತೆ ಸರಕಾರದವರು ಮಾಡತಕ್ಕ ಕಾರ್ಯಭಾಗಗಳು ಕೆಲವಿರುವುವು. ಗಿರಣಿಗಳ ಬಟ್ಟೆಯ ಮೇಲಾಟವನ್ನು ತಡೆಯತಕ್ಕ ಉಪಾಯಗಳನ್ನು ಸುಂಕ ನಿರ್ಬಂಧಗಳಿಂದ ಸರಕಾರವು ಕೈಕೊಳ್ಳಬೇಕಾಗಿರುವುದು. ಮುಖ್ಯವಾಗಿ ರೈತರಿಗಾಗಲಿ ಇತರರಿಗಾಗಲಿ ಕೈಮಗ್ಗ ವೃತ್ತಿಯು ಅನುಕೂಲವೂ ಲಾಭದಾಯಕವೂ ಎಂಬುದು ಸರ್ವಸಮ್ಮತವಾದುದು.

ಎನ್. ಬಿ.



ಹಿಂದೂದೇಶದಲ್ಲಿ ಸಕ್ಕರೆಯ ಕೈಗಾರಿಕೆ!

ಮೊದಲನೆ ಕಬ್ಬಿನ ನಾಡು—ಭಾರತ!

ಜಪಾನು, ಬ್ರಿಟೈನ್-ಅಮೇರಿಕೆಗಳ ಮೇಲೆ ಯುದ್ಧ ಸಾರಿತೆಂದ ಕೂಡಲೇ, ಹಿಂದೂದೇಶದಲ್ಲಿ ಸಕ್ಕರೆಯ ಬೆಲೆಯು ಒಂದೇ ಸವನೆ ಏರಿತು. ಹಿಂದೂದೇಶದಲ್ಲಿ ಸಕ್ಕರೆಯ ಕಾರ್ಖಾನೆಗಳು ಹಲವಿವೆ. ಆದರೂ ಇಂತಹ ಪರಿಸ್ಥಿತಿ ಏಕೆ ಒದಗಿತು?.... ಈ ಲೇಖನದಲ್ಲಿ ಸಕ್ಕರೆಯ ಕೈಗಾರಿಕೆಯ ಕುರಿತು ಎಲ್ಲ ವಿವರವನ್ನು ಕೊಡಲಾಗಿದೆ.

ಪ್ರಪಂಚದಲ್ಲಿ ಕಬ್ಬಿನ ಮತ್ತು ಹತ್ತಿಯ ಪ್ರಥಮದ ಜನನಸ್ಥಾನವು ಹಿಂದೂದೇಶ. ಈ ಬಗ್ಗೆ ಎರಡು ಅಭಿಪ್ರಾಯಗಳಿಲ್ಲ. ಆದರೆ, ಸ್ವತಂತ್ರವಲ್ಲದ ಒಂದು ರಾಷ್ಟ್ರದಲ್ಲಿ ಇದಕ್ಕೆ ಪ್ರಾಧಾನ್ಯತೆಯು, ರಾಷ್ಟ್ರದಭ್ಯುದಯದ ದೃಷ್ಟಿಯಲ್ಲಿ, ದೊರೆವುದು ಅಸಂಭವ.

ಬ್ರಿಟಿಷರು ಹಿಂದೂದೇಶದ ಆಡಳಿತವನ್ನು ವಹಿಸಿದ ನಂತರ ಹಿಂದೂದೇಶದ ಹತ್ತಿ ಹಾಗೂ ಕಬ್ಬಿನ ವ್ಯವಸಾಯದ ಕಡೆಗೆ ವಿಶೇಷ ಲಕ್ಷ್ಯ ಕೊಟ್ಟಂತೆ ತೋರುವುದಿಲ್ಲ. ಹಿಂದೂದೇಶದಲ್ಲಿ ಈ ಕೈಗಾರಿಕೆಯ ಮಹತ್ವವು, ಪ್ರಥಮತಃ, ಕಳೆದ ಮಹಾಯುದ್ಧದ ನಂತರವೇ ತಿಳಿಯಿತು. (ಅಥವಾ ಸರಕಾರವು ಆ ಕಡೆಗೆ ಗಮನ ಕೊಟ್ಟಿತು) ಎನ್ನಬಹುದು. 1920ರಲ್ಲಿ ಸರಕಾರದವರಿಂದ ನಿಯೋಜಿಸಲ್ಪಟ್ಟ "ಶುಗರ್ ಕಮಿಟಿ"ಯು, ಹಿಂದೂದೇಶದ ಆರ್ಥಿಕೋನ್ನತಿಯಲ್ಲಿ ಸಕ್ಕರೆ ಕೈಗಾರಿಕೆಯ ಮಹತ್ವವನ್ನು ಕುರಿತು ಪ್ರಸ್ತಾಪಿಸಿತು. ಶುಗರ್ ಕಮಿಟಿಯು ಈ ಸಲಹೆಯ ನಂತರವೂ ಬ್ರಿಟಿಷ್ ಸರಕಾರವು ಮಹತ್ವದ—ಅಭ್ಯುದಯ ಸಾಧಕ—ಕಾರ್ಯವೇನನ್ನೂ ಮಾಡಲಿಲ್ಲ. 1929ರಲ್ಲಿ "ಇಂಪೀರಿಯಲ್ ಕೌನ್ಸಿಲ್ ಒಫ್ ಎಗ್ರಿಕಲ್ಚರಲ್ ರಿಸರ್ಚ್"ನವರು (ಸರಕಾರದ ಕೃಷಿ ಶೋಧನಾ ಇಲಾಖೆ) ಹಿಂದೂದೇಶದಲ್ಲಿ ಸಕ್ಕರೆ ಕೈಗಾರಿಕೆಯ ಸ್ಥಾಪನೆಯ ಕುರಿತು, ಸರಕಾರದ ಲಕ್ಷ್ಯವನ್ನು ಸೆಳೆದರು. ದೇಶದಲ್ಲಿ ಈ ಕೈಗಾರಿಕೆಯು ಈಗಿನ ಸ್ಥಿತಿಗಾದರೂ ಬಂದು ಮುಟ್ಟಿದಕ್ಕೆ, ಆ ಕಮಿಟಿಯವರೇ ಕಾರಣರೆನ್ನಬಹುದು.

– ಸಕ್ಕರೆ ಕೈಗಾರಿಕೆಯು ಆರಂಭವಾಗಿ, ವೃದ್ಧಿಗೊಳ್ಳಲು ಚಡಪಡಿಸುವ ದುರ್ದಶೆಯೊದಗಿತು. ಏಕೆಂದರೆ, ಹಿಂದೂದೇಶದಲ್ಲಿ ಸಕ್ಕರೆಯು ತಯಾರಾಗುತಿದ್ದರೂ, ವಿದೇಶೀ ಸಕ್ಕರೆಯ ಹಾವಳಿಯು ನಿಲ್ಲಲಿಲ್ಲ. ಬದಲಾಗಿ, ವಿದೇಶೀ ಸಕ್ಕರೆಯು, ರಕ್ಷಣಾರೂಪದ ಬಲವಾದ ಸುಂಕಗಳ ಗೋಡೆಗಳನ್ನು ದಾಟುವ ಆತಂಕಗಳಿಲ್ಲದೆ– ಹಿಂದೂದೇಶಕ್ಕೆ ಸರಾಗವಾಗಿ ಬರುವುದು ಮಾತ್ರವಲ್ಲ, ದೇಶೀ ಸಕ್ಕರೆಯ ಧಾರಣೆಗಳೊಡನೆ ಬಲವಾದ ಸ್ಪರ್ಧೆಗೂ ತೊಡಗಿತು. ಸಕ್ಕರೆ ಕೈಗಾರಿಕೆಯವರು "ರಕ್ಷಣೆ"ಗಾಗಿ ಕೂಗುವ ಕಾಲವೊದಗಿತು. ಸರಕಾರವು, ಬಹು ಕಾಲದ ನಂತರ, 1930–31ರಲ್ಲಿ, "ಟಾರೀಫ್ ಬೋರ್ಡ"ನ್ನು ನೇಮಿಸಿ, ಸಕ್ಕರೆ ಕೈಗಾರಿಕೆಗೆ ಹೇಗೆ ರಕ್ಷಣೆ ಕೊಡಬೇಕೆಂಬ ಬಗ್ಗೆ ಕೇಳಿತು. ಟಾರೀಫ್ ಬೋರ್ಡಿನವರು ವಿಚಾರಣೆ ನಡೆಸಿ, ದೇಶಕ್ಕೆ ಆಮದಾಗುವ ವಿದೇಶೀ ಸಕ್ಕರೆಯ ಮೇಲೆ ಬಲವಾದ ಆಯಾತ ಕರವನ್ನು ಹಾಕುವ ಸಲಹೆ ಕೊಟ್ಟ ಮೇರೆಗೆ, ಇಂಡಿಯಾ ದೊರೆತನವು, 1932ನೇ ಎಪ್ರಿಲ್ ತಿಂಗಳಲ್ಲಿ, ದೇಶೀಯ ಸಕ್ಕರೆ ಕೈಗಾರಿಕೆಗೆ ಯೋಗ್ಯವಾದ ಸುಂಕದ ರಕ್ಷಣಾ ಕವಚವನ್ನು ತೊಡಿಸುವುದರಲ್ಲಿ ಬಂತು. ಮತ್ತು ಈ ಕೈಗಾರಿಕೆಯು ಶೈಶವಾವಸ್ಥೆಯನ್ನು ದಾಟಿ ಬೆಳೆದು ಬರಲನುಕೂಲವಾಗುವಂತೆ ಹದಿನೈದು ವರ್ಷಗಳ ತನಕ ಈ ಸುಂಕದ ಕೋಟೆಯನ್ನು ಇಡುವುದಾಗಿಯೂ ಆಶ್ವಾಸನೆಯಿತ್ತಿತು. ಭಾರತದ ಸಕ್ಕರೆಯ ಕೈಗಾರಿಕೆಯ ಇತಿಹಾಸದಲ್ಲಿ, ಇದು ಮಹತ್ವದ ಅಧ್ಯಾಯವೆನ್ನಬಹುದು.

1931 32ನೇ ವರುಷದ ವರೆಗೆ, ವಿದೇಶೀ ಸಕ್ಕರೆಯ ಮೇಲೂ ಹೊಂದಿಕೊಂಡಿರಬೇಕಾಗಿದ್ದ ಹಿಂದೂದೇಶಕ್ಕೆ ಅಲ್ಲಿಂದಿತ್ತೀಚೆಗೆ ದೇಶೀಯ ಸಕ್ಕರೆಯೇ ಒದಗುವಂತಾಯಿತು. ಇದರಿಂದಾಗಿ, ಇಂದು, **ಹಿಂದೂದೇಶವು, ಪ್ರಪಂಚದ ಎಲ್ಲ ರಾಷ್ಟ್ರಗಳಿಗಿಂತ ಹೆಚ್ಚಿನ ಸಕ್ಕರೆಯನ್ನು ತಯಾರಿಸುತ್ತಿದೆ. ಹಿಂದೂದೇಶದಲ್ಲಿ, ಇಲ್ಲಿಯ ಪೂರೈಕೆಗೆ ಬೇಕಾಗುವುದಕ್ಕಿಂತ ಒಂದೂವರೆ ಪಾಲು ಹೆಚ್ಚು ಸಕ್ಕರೆ ಈಗ ತಯಾರಾಗುತ್ತಿದೆಯೆಂದು ಸರಕಾರದ ವರದಿಯಿದೆ.** ಭಾರತವು, ವರುಷಕ್ಕೆ ಹದಿನೈದು ಲಕ್ಷ ಟನ್ ಸಕ್ಕರೆಯನ್ನು ತಯಾರಿಸಬಲ್ಲುದು!

ಇದರ ಫಲವಾಗಿ, ವರುಷಂಪ್ರತಿ ಭಾರತವು ಪರದೇಶಗಳಿಂದ ತರಿಸುತಿದ್ದ 900,000 ಟನ್ ಸಕ್ಕರೆಯ ಆಯಾತವು ಸರ್ವಸಾಮಾನ್ಯ ಕಡಿಮೆಯಾದಂತಿದೆ. (9 ಲಕ್ಷ ಟನ್ ಸಕ್ಕರೆಯ ಮೌಲ್ಯವು 150 ಮಿಲಿಯ ರೂಪಾಯಿ ಎಂದು ಅಂದಾಜು ಹಾಕಲಾಗಿದೆ.)

ಇಷ್ಟಿದ್ದರೂ ಜಾವಾದಿಂದ ಇನ್ನೂ ಸಕ್ಕರೆ ಬರುತ್ತಿದೆ. ಈ ಆಯಾತವು 1940–41ರಲ್ಲಿ 35,000 ಟನ್ನಿಗೆ ಇಳಿಸಲ್ಪಡುವುದೆಂದು ಇಂಡಿಯಾ ಸರಕಾರವು, 1940ನೇ ಆಗೋಸ್ತು ತಿಂಗಳಲ್ಲಿ ಪ್ರಕಟಣೆ ಕೊಟ್ಟಿದ್ದಿದೆ. ಹಿಂದೂದೇಶದ ಸಕ್ಕರೆ ಕೈಗಾರಿಕೆ ಮತ್ತು ವಿದೇಶೀ ಸಕ್ಕರೆಯ ಆಮದು ಈ ಕುರಿತಾದ ಅಂಕೆಸಂಖ್ಯೆಗಳನ್ನು ಇಲ್ಲಿಕೊಡಲಾಗಿದೆ.

ಹಿಂದೂದೇಶದಲ್ಲಿ ಸಕ್ಕರೆ ಮತ್ತು ಬೆಲ್ಲದ ಕೈಗಾರಿಕೆ, ಇಲ್ಲಿಗೆ ಆಮದಾಗುವ ವಿದೇಶೀ ಸಕ್ಕರೆ ಇತ್ಯಾದಿ ವಿವರ.

ವರುಷ (ನವಂಬರ—ಅಕ್ಟೋಬರ)	ಸಕ್ಕರೆ ಕಾರ್ಖಾನೆಗಳ ಸಂಖ್ಯೆ	ಕಾರ್ಖಾನೆಗಳಲ್ಲಿ ತಯಾರಾದ ಸಕ್ಕರೆ (ನವಂಬರ—ಅಕ್ಟೋಬರ)	ಬೆಲ್ಲದಿಂದ ತಯಾರಾದ ಸಕ್ಕರೆ (ಡಿಸೆಂಬರ—ನವಂಬರ)	ಖಂಡಸಾರಿ (ನವಂಬರ—ಅಕ್ಟೋಬರ)	ಒಟ್ಟು ಸಕ್ಕರೆ ಉತ್ಪತ್ತಿ	ಆಮದಾದ ಸಕ್ಕರೆ (ಬೆಲ್ಲವೂ ಸೇರಿ) (ನವಂಬರ—ಅಕ್ಟೋಬರ)	ಕಾರ್ಖಾನೆಗಳು ಬಳಸಿದ ಬೆಲ್ಲ (ನವಂಬರ—ಅಕ್ಟೋಬರ)
		(ಟನ್ನು)	(ಟನ್ನು)	(ಟನ್ನು)	(ಟನ್ನು)	(ಟನ್ನು)	(ಟನ್ನು)
1931-32	32	158,581	69,539	250.000	478.120	438,797	92,678
1932-33	57	290,177	80.106	275.000	645.383	321 081	68.649
1933-34	112	453,965	61.094	200.000	715.059	233.366	87.094
1934-35	130	578.115	39.103	153.000	767.218	196.775	113,365
1935-36	137	932.100	50.067	125.000	1.107.167	86,962	45.218
1936-37	137	1.111.400	19.500	100.000	1.230.900	11.960	12.870
1937-38	136	930.700	16,600	125.000	1.072.300	9.410	12.284
1938-30	139	650.800	14.200	100.000	765.000	254.430	76.700
1939-40	143	1.241.700	31.700	100,000	1,373.400	(10 ತಿಂಗಳು) 34.700	32.200
1940-41	145	950.000	50.000	200.000	1.200.000		

1937ರಲ್ಲಿ ಸಕ್ಕರೆ ಸಂಬಂಧವಾಗಿ ಮಾಡಲ್ಪಟ್ಟ ಒಂದು ಅಂತರ್ರಾಷ್ಟ್ರೀಯ ಒಪ್ಪಂದದ ಪ್ರಕಾರ, ಹಿಂದೂದೇಶವು ಬರ್ಮಾ ವಿನಹಾ ಇತರ ಯಾವ ದೇಶಗಳಿಗೂ 1942ಕ್ಕೆ ಅಂತ್ಯವಾಗುವ ಐದು ವರ್ಷಗಳ ತನಕ, ಸಮುದ್ರಮಾರ್ಗವಾಗಿ ಸಕ್ಕರೆ ಕಳುಹಬಾರದೆಂದು ತೀರ್ಮಾನವಾಯಿತು. 1939ರ ತನಕ ಈ ಒಪ್ಪಂದ (ಅಥವಾ ನಿರ್ಬಂಧ)ವು ಹಿಂದೂದೇಶದ ಕೈಗಾರಿಕೆಗೆ ವಿಶೇಷ ಬಾಧಕವೆನಿಸಲಿಲ್ಲ. ಏಕೆಂದರೆ, ಆ ವರೆಗಿನ ಇಲ್ಲಿಯ ಸಕ್ಕರೆಯ ಉತ್ಪತ್ತಿಯು ಇಲ್ಲಿಗೇ ಸಾಕಾಗುವಷ್ಟಿತ್ತು. ಕೈಗಾರಿಕೆಯವರೂ ವಿಶೇಷ ಚಳವಳವೆಬ್ಬಿಸಲಿಲ್ಲ.

1939ರಲ್ಲಿ ಈ ಪರಿಸ್ಥಿತಿಯು ಬದಲಾಯಿಸುವಂತಾಯಿತು. ಹಿಂದೂದೇಶದ ಉತ್ಪತ್ತಿಯು ಹೆಚ್ಚಿತು. ಅಂತರ್ರಾಷ್ಟ್ರೀಯ ಒಪ್ಪಂದವು ಬಾಧಕವೆನಿಸತೊಡಗಿತು. ಅಷ್ಟರಲ್ಲೇ ಮಹಾಯುದ್ಧವು ಆರಂಭವಾಯಿತು. ಬ್ರಿಟೈನು ಯಾರಿಂದ ಸಕ್ಕರೆಯನ್ನು ಕೊಂಡುಕೊಳ್ಳುತಿತ್ತೊ, ಅಲ್ಲಿಂದೆಲ್ಲ ಅದು ದೊರೆಯದಂತಾಯಿತು. ಯುರೋಪಿನ ಸಕಾಶೆಯಲ್ಲಿ ಬದಲಾವಣೆಗಳಾದುವು. ಆಗ ಬ್ರಿಟೈನಿಗೂ ಇತರ ಕೆಲವು ರಾಷ್ಟ್ರಗಳಿಗೂ ಬೇಕಾಗುವ ಸಕ್ಕರೆಗೆ ಹಿಂದೂದೇಶವೇ ಒದಗಿಸಬೇಕಾಯಿತು. ಹಿಂದೂದೇಶದ ಸಕ್ಕರೆ ಕೈಗಾರಿಕೆಯವರು 1940ರಲ್ಲಿ, ತಮ್ಮ ಮೇಲಿನ ನಿರ್ಬಂಧವನ್ನು ತೆಗೆದುಹಾಕಬೇಕೆಂದು ನಿವೇದಿಸಿಕೊಂಡರು. ಅಷ್ಟೇ ಅಲ್ಲ, ಸರಕಾರಕ್ಕೆ ಮಣಕ್ಕೆ ರೂ. 1/-ರಂತೆ ಸಕ್ಕರೆ ವಿಕ್ರಯಿಸುವುದಾಗಿಯೂ ತಿಳಿಸಲಾಯಿತು. (ದೇಶದೊಳಗೆ ರೂ. 12ರಂತೆ ವಿಕ್ರಯವಾಗುತಿತ್ತು—ಬಂಗಾಲಿ ಮಣಕ್ಕೆ). ಸಕ್ಕರೆಯು ರಾಶಿರಾಶಿ ಉಳಿದ ಕಾರಣ ಹೀಗೆ ಮಾಡಬೇಕಾಗಿ ಬಂತು. ಬಲು ಕಡಿಮೆ ದರದಲ್ಲಿ ಮಾರಾಟ ಮಾಡುವುದಾದರೂ, ಕೈಗಾರಿಕೆಯವರಿಂದ ... ಅಡಮಾನಕ್ಕಿರಿಸಿದ ಸ್ಟಾಕನ್ನು ಬಿಡಿಸಿ ಕೊಡಲಾಗಲಿಲ್ಲ. ಮಾರಾಟದ ... ಹೆಚ್ಚಾಗಿ ಬ್ಯಾಂಕುಗಳಿಂದ ಪಡೆದುದೇ ಕಾರಣ. ಮೂರು ಲಕ್ಷ ಟನ್ ಸಕ್ಕರೆಯ ದಾಸ್ತಾನು ಉಳಿವ ಸ್ಥಿತಿಯೊದಗಿತು.

ಬ್ರಿಟೈನಿಗೆ 1939—40ರಲ್ಲಿ ದೊರೆವ ಸಕ್ಕರೆ ಎಲ್ಲಿಂದ ಎಷ್ಟು ... ಇಲ್ಲಿ ಕೊಡಲಾಗಿದೆ.

ಆಸ್ಟ್ರೇಲಿಯದಿಂದ	564,000	ಟನ್‌ಗಳು
ದಕ್ಷಿಣಾಫ್ರಿಕ	215,000	..
ಮೊರೀಶಿಯಸ್ ("ಮೋರಿಸ್")	262,000	..
ಫಿಜಿ	127,000	..
ಬ್ರಿಟಿಷ್ ವೆಸ್ಟ್ ಇಂಡೀಸ್	518,000	..
ಜುಮ್ಲಾ.	1,686.000	ಟನ್ನು

ಹಿಂದೂದೇಶವು 1940-41ರಲ್ಲಿಯೂ ಬ್ರಿಟ್ಯನಿಗೆ 3 ಲಕ್ಷ ಟನ್ನು ಒದಗಿಸ ಬಲ್ಲುದು. ಹಿಂದೂದೇಶದಲ್ಲಿ ಈಗ ಉತ್ತಮ ತರಗತಿಯ ಸಕ್ಕರೆಯು ತಯಾರಾಗುತ್ತಿದೆ.

ಹಿಂದೂದೇಶದಲ್ಲಿ, ಕಬ್ಬು, ಪ್ರಪಂಚದ ಇತರ ಯಾವ ದೇಶಕ್ಕಿಂತಲೂ ಹೆಚ್ಚಾದ ಸ್ಥಳದಲ್ಲಿ ಬೆಳೆಯುತ್ತಿದೆ. ಈಗ ಸುಮಾರು 1,215,000 ಎಕ್ರೆಯಷ್ಟು ಸ್ಥಳದಲ್ಲಿ ಇಲ್ಲಿ ಕಬ್ಬು ಬೆಳೆಯುತ್ತಿದೆಯೆನ್ನಬಹುದು. ಕಬ್ಬಿನ ಹೊಲಗಳು ಹೆಚ್ಚಿದಂತೆ, ಕಬ್ಬಿನ ತರಗತಿಯೂ ಉತ್ತಮಗೊಂಡಿದೆ. ಅದರಂತೇ, ಒಂದು ಕ್ರೆಗೆ ಮೊದಲು 12.3 ಬೆಳೆಯುತಿದ್ದುದಲ್ಲಿ ಈಗ 15.6ರಷ್ಟು ಬೆಳೆಯುತ್ತಿದೆ. (ಆದರೆ, ಜಾವಾದಲ್ಲಿ ಪ್ರತಿ ಎಕ್ರೆಗೆ ಇದಕ್ಕಿಂತಲೂ ಹೆಚ್ಚು ಕಬ್ಬು ಬೆಳೆಯುತ್ತಿದೆ. ಇಲ್ಲಿಂದ ಬೆಳೆಯನ್ನು ಹೆಚ್ಚಿಸಲು ಇನ್ನೂ ಶೋಧನೆಗಳು ನಡೆಯಬೇಕಾಗಿದೆ.)

1938ನೇ ಸಪ್ಟಂಬರ ತಾ. 1ರಿಂದ 1939ನೇ ಅಗೋಸ್ತು ತಾ. 31ರ ವರೇಗೆ, ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ಸರಾಸರಿ ತಲಾ ಎಷ್ಟರಂತೆ ಸಕ್ಕರೆಯು ಖರ್ಚಾಗಿದೆಯೆಂದು ನೋಡಿರಿ:

ದೇಶ	ಪ್ರತಿಯೊಬ್ಬನಿಗೆ
ಅಮೇರಿಕದಲ್ಲಿ	103 ರಾತ್ತಲ
ಬ್ರಿಟ್ಯನು	112 ..
ಜಾವಾ	11 ..
ಡೆನ್ಮಾರ್ಕ್	128 ..
ಇಜಿಪ್ಟ್	20 ..
ಜಾಪಾನ್	29 ..
ಆಸ್ಟ್ರೇಲಿಯಾ	111 ..
ನ್ಯೂಝಿಲಾಂಡ್	115 ..
ಹಿಂದೂದೇಶ	21 .. (ಬೆಲ್ಲ ಸಹಿತ)

ಹೀಗಾಗಿ ಹಿಂದೂದೇಶದಲ್ಲಿ ಸಕ್ಕರೆಯನ್ನು ಹೆಚ್ಚಾಗಿ ತಿನ್ನುವ ಅಭ್ಯಾಸ ವನ್ನು ಹೆಚ್ಚಲು ಇಂಬು ಇದೆ. ಬಡವರು ಹೆಚ್ಚಿದ ದೇಶ. ದಿನದ ಬಟ್ಟಲು ಗಂಜಿಯೇ ದೊರೆವ ಕಷ್ಟವಿರುವಲ್ಲಿ ಸಕ್ಕರೆ ಮತ್ತು ಬೆಲ್ಲದ ಸುಖವನ್ನು ಹೇಗೆ ಅನುಭವಿಸಲಿ! ದೇಶದ ಸಕ್ಕರೆ ಕೈಗಾರಿಕೆ ಬೆಳೆದರೂ, ಬೆಲೆ ಇಳಿಯಲಿಲ್ಲ! ಬೆಲ್ಲ ವಾದರೂ ಈಗ ಇರುವ ದರಕ್ಕಿಂತಲೂ ಕಡಿಮೆ ದರದಲ್ಲಿ ದೊರೆತರೆ, ಹೆಚ್ಚು ಜನರು ಉಪಯೋಗಿಸಬಹುದು.

ಕಬ್ಬು ವಿಪುಲವಾಗಿ ಸಂಯುಕ್ತ ಪ್ರಾಂತ್ಯ ಮತ್ತು ಬಿಹಾರಗಳಲ್ಲಿ ಬೆಳೆಯುತ್ತಿದೆ. ಇವೆರಡು ಪ್ರಾಂತ್ಯಗಳಲ್ಲೇ, ಹಿಂದೂದೇಶದಲ್ಲಿನ ಜುಮ್ಲಾ ಕಬ್ಬಿನ ಬೆಳೆಯಲ್ಲಿ ಸೇಕಡಾ 61ರಷ್ಟು ಉತ್ಪತ್ತಿಯಾಗುತ್ತಿದೆ. ಈ ಕಾರಣದಿಂದ ಇಲ್ಲಿ ಸಕ್ಕರೆ ಕಾರ್ಖಾನೆಗಳೂ ಅಧಿಕವಾಗಿವೆ. ದೇಶದಲ್ಲಿನ ಸಕ್ಕರೆ ತಯಾರಿಯಲ್ಲಿ, ಸೇಕಡಾ 75ರಷ್ಟು ಸಕ್ಕರೆಯೂ ಆ ಪ್ರಾಂತ್ಯಗಳಲ್ಲೇ ತಯಾರಾಗುತ್ತಿದೆ.

1939—40ನೇ ವರುಷದ ವರದಿಯಂತೆ ಹಿಂದೂದೇಶದಲ್ಲಿ 140 ಸಕ್ಕರೆ ಕಾರ್ಖಾನೆಗಳಿದ್ದುವು. ಇವುಗಳಲ್ಲಿ 105 ಕಾರ್ಖಾನೆಗಳು ಸಂಯುಕ್ತ ಪ್ರಾಂತ್ಯ ಮತ್ತು ಬಿಹಾರಗಳಲ್ಲಿವೆ.

ಬೇರೆ ಬೇರೆ ಪ್ರಾಂತ್ಯಗಳಲ್ಲಿನ ಸಕ್ಕರೆ ಕಾರ್ಖಾನೆಗಳು

ಪ್ರಾಂತ್ಯ	1937-38	1938-39	1939-40
ಸಂಯುಕ್ತ ಪ್ರಾಂತ್ಯ	68	69	72
ಬಿಹಾರ್	33	32	33
ಪಂಜಾಬ ಮತ್ತು ಸಿಂಧ	3	3	3
ಮದರಾಸು	8	7	7
ಬೊಂಬಾಯಿ	7	7	7
ಬಂಗಾಳ	6	8	9
ಒರಿಸ್ಸಾ	2	2	2
ದೇಶೀ ಸಂಸ್ಥಾನಗಳು	9	11	11
	136	139	143

ಜಾವಾ ಮತ್ತು ಹಿಂದೂದೇಶದೊಳಗಿನ ಸಕ್ಕರೆ ಕಾರ್ಖಾನೆಗಳೊಳಗೆ ಈ ತಾರತಮ್ಯವಿದೆ. ಜಾವಾದಲ್ಲಿ, ಕಾರ್ಖಾನೆಗಳವರೇ ಕಬ್ಬು ಬೆಳೆಸುತ್ತಾರೆ. ಅವರ ಸ್ಥಳದಲ್ಲೇ, ಸರಕಾರದಿಂದ ವಿಶೇಷ ರಿಯಾಯಿತಿ ಪಡೆದು, ಈ ಬೆಳೆಯಾಗುತ್ತಿದೆ. ಹಿಂದೂದೇಶದಲ್ಲಿ ಕಬ್ಬಿನ ಬೆಳೆಯು ಕಾರ್ಖಾನೆಗಳಿಗೆ ಸಂಬಂಧಪಟ್ಟ ಹೊಲಗಳಲ್ಲಿ ಮಾತ್ರವಲ್ಲ. ಹಿಂದೂದೇಶದಲ್ಲಿ ವರ್ಷದಲ್ಲಿ ನಾಲ್ಕು ತಿಂಗಳಲ್ಲಿ ಮಾತ್ರ ಕಬ್ಬು ಬೆಳೆಯುತ್ತದೆ. ಮೈಸೂರು ಸಂಸ್ಥಾನವೊಂದರಲ್ಲಿ ವರ್ಷಕ್ಕೆ 9 ತಿಂಗಳು ಬೆಳೆಯುತ್ತಿದೆ. ಇದು ಹಿಂದೂದೇಶದಲ್ಲಿ ಒಂದು ಕಡೆಯಲ್ಲಿ ಮಾತ್ರ. ಹಿಂದೂದೇಶದಲ್ಲಿ, ಸರಕಾರದ ಪ್ರೋತ್ಸಾಹವು ವಿಶೇಷ ದೊರೆತು, ಶೋಧನೆಗಳು ನಡೆದರೆ, ಬೆಳೆಯನ್ನು ಹೆಚ್ಚಿಸಲು ದಾರಿಯಿದೆ. ಕಬ್ಬಿನ ಬೆಲೆಯು ಇಳಿಯಬೇಕಾದರೆ ಬೆಳೆಯು ಹೆಚ್ಚಬೇಕು.

ಹಿಂದೂದೇಶದ ಸಕ್ಕರೆ ಕೈಗಾರಿಕೆಯ ಭವಿಷ್ಯವು ಇನ್ನೂ ಉಜ್ವಲವೆನ್ನಬರುವುದಿಲ್ಲ. ಬಹುಶಃ ಸ್ವತಂತ್ರ ಭಾರತವು ಮಾತ್ರ ಈ ಸಮಸ್ಯೆಯನ್ನು ಬಿಡಿಸಬಲ್ಲುದು.



ತಾ 12—12—41ರಲ್ಲಿ ಹಿಂದೂ ಸೇವಾ ಸಂಘದ ಆಶ್ರಯದಲ್ಲಿ ಶ್ರೀ ಕಾಶೀಮಠಾಧೀಶ ಶ್ರೀಮತ್ ಸುಕೃತೀಂದ್ರತೀರ್ಥ ಶ್ರೀಪಾದಂಗಳವರ ಪವಿತ್ರ ಹಸ್ತದಿಂದ ಬಾಲಿಕಾಶ್ರಮವು ತೆರೆಯಲ್ಪಟ್ಟಿತು. ಆ ಸಂದರ್ಭದಲ್ಲಿ ಶ್ರೀಪಾದಂಗಳವರಿಗೆ, ಸಂಘದ ಕಾರ್ಯದರ್ಶಿ ಶ್ರೀ ಎಮ್. ವೆಂಕಟೇಶ್ಪೈಯವರು ಪಾದಪೂಜೆ ಮಾಡುವ ದೃಶ್ಯ.



ಬಾಲಿಕಾಶ್ರಮದ ಉದ್ಘಾಟನಾ ಸಮಾರಂಭ ಕಾಲದಲ್ಲಿ, ಹಿಂದೂ ಸೇವಾ ಸಂಘದ ಅಧ್ಯಕ್ಷರಾದ ಶ್ರೀ ಎಮ್. ಕೇಶವ ಪೈಯವರು ಭಾಷಣ ಮಾಡುವಾಗ ತೆಗೆದ ಚಿತ್ರ.

ಅಭಿನಯ ಚತುರ — ಮೋತಿಲಾಲ

ನಾವಿಕನಾಗಲು ಹೊರಟಿದ್ದ — ನಟನಾಗಿ ಎದ್ದ!

ಆಡುತ್ತಾನೆ, ಹಾಡುತ್ತಾನೆ, ಅಭಿನಯಿಸುತ್ತಾನೆ.

ಚಲಚ್ಚಿತ್ರ ಪ್ರಪಂಚದಲ್ಲಿ ಪ್ರಖ್ಯಾತ ನಟನೆನಿಸಿಕೊಂಡ ಮೋತಿಲಾಲನ ಸಂಕ್ಷಿಪ್ತ ಪರಿಚಯವನ್ನು ಇಲ್ಲಿ ಕೊಟ್ಟಿರುತ್ತದೆ. ಬಾಲ್ಯಪ್ರಾಯದಲ್ಲಿ ಮೋತಿಲಾಲನನ್ನು ನೋಡಿದವರು, ಅವನು ಕೀರ್ತಿಯ ಪ್ರಥಮ ಸೋಪಾನವನ್ನು ಏರುವಷ್ಟು ಸಮರ್ಥನಾಗುವನೆಂದು ಕನಸಿನಲ್ಲಿಯೂ ಎಣಿಸಿರಲಿಲ್ಲ. ಕನಸಿನಲ್ಲಿ ಕಾಣದ್ದನ್ನು ಇಂದು ಪ್ರತ್ಯಕ್ಷ ಕಂಡಂತಾಯಿತು.

"ನಮ್ಮನ್ನು ಕಾಣಲು ಜನರು ಚಿತ್ರಶಾಲೆಯತ್ತ ಕಡೆ ಪ್ರವಹಿಸಿ ಬರುವುದನ್ನು ಕಂಡರೆ ನಮಗೆ ತುಂಬಾ ನಾಚಿಕೆಯಾಗುತ್ತದೆ. ಅಂತಹ ಯೋಗ್ಯತೆಯು ನಮ್ಮಲ್ಲಿರುವುದೇ ಎಂಬ ಪ್ರಶ್ನೆಯು ಇದಕ್ಕೆ ಕಾರಣ" ಎಂಬುದಾಗಿ ಅದನ್ನು ಕಾಣಲು ಹೋದವರೊಬ್ಬರಿಗೆ ಮೋತಿಲಾಲನು ನಗುಮುಖದಿಂದ ಹೇಳಿದ್ದನಂತೆ. ನಿಜವಾಗಿಯೂ ಮೋತಿಲಾಲನಂತಹ ವಿನಯ ಸ್ವಭಾವದವರು ನಮ್ಮ ಚಲಚ್ಚಿತ್ರ ಪ್ರಪಂಚದಲ್ಲೇ ಅತೀ ವಿರಳ. ಅಹಂಭಾವ ರಹಿತವಾದ ಅವನ ಮೃದುನುಡಿಗಳನ್ನು ಕೇಳಲು ಕಿವಿಗಳಿಗೆ ತುಂಬಾ ಆನಂದ. ಅಚ್ಚುಮೆಚ್ಚಾದ ರೂಪ, ಅಮೋಘ ನಟನಾ ಚಾತುರ್ಯ, ಸರಳ ಸ್ವಭಾವ ಇವು ಅವನ ಕೀರ್ತಿಗೆ ಕಾರಣಭೂತವಾದವುಗಳು.

ಇತರ ಸಿನೇಮಾ ನಟನಟಿಯರಲ್ಲಿ ಇದ್ದಂತೆ ಬಾಲ್ಯಪ್ರಾಯದಲ್ಲಿ ಮೋತೀಲಾಲನಲ್ಲಿ ವಿಶೇಷ ತರದ ಜಾಣ್ಮೆಯು ಇದ್ದಿಲ್ಲ. ಏಳು ವರ್ಷಗಳಿಗೆ ಮೊದಲು ಬೊಂಬಾಯಿಗೆ ಬಂದಾಗ ಮಾತ್ರ, ಚಲಚ್ಚಿತ್ರಕ್ಕೆ ಸೇರುವ ಮನಸ್ಸು ಅವನಿಗೆ ಥಕ್ಕನೆ ಉಂಟಾಯಿತು. ಮೂವತ್ತೊಂದು ವರ್ಷಗಳಿಗೆ ಹಿಂದೆ, ಡಿಸೆಂಬರ ತಿಂಗಳ ನಾಲ್ಕನೇ ದಿನ ಸಿಮ್ಲಾದಲ್ಲಿ ಮೋತಿಲಾಲನ ಜನನವಾಯಿತು. ಮೋತಿಲಾಲನು ಅದೊಂದು ದೊಡ್ಡ ಕುಟುಂಬಕ್ಕೆ ಸೇರಿದ ಕಿರಿಯ ಪುತ್ರ. ಬಾಲ್ಯದಲ್ಲಿ ಇತರ ಹುಡುಗರಂತೆ ಸಾಮಾನ್ಯ ಚಟುವಟಿಕೆಗಳಲ್ಲಿಯೇ ಅವನ ಪ್ರಾಯವು ಕಳೆದು ಹೋಯಿತು. ಬಾಲ್ಯವನ್ನು ದಾಟಿ, ತರುಣಾವಸ್ಥೆಗೆ ಕಾಲಿಟ್ಟಾಗ, ಇತರರಲ್ಲಿ ಇರುವುದಕ್ಕಿಂತ ಎರಡು ವಿಶೇಷ ಗುಣಗಳು ಅವನಲ್ಲಿ ಕಂಡುಬಂದುವು. ಒಮ್ಮೆ ಓದಿ ತೀರಿಸುವುದರೊಳಗೆ ಪಾಠಗಳನ್ನು ಅವನು ಬಾಯಿಪಾಠ ಮಾಡುತಿದ್ದನು ಮತ್ತು ಯತ್ನದಲ್ಲಿ ಹುಡುಗ ತುಂಬಾ ಗಟ್ಟಿಗ. ಹಲವು ಬಾರಿ ಹುಡುಗರೊಡನೆ 'ಪ್ರೋಕ್ರಿ' ಮಾಡಿ, ಕೆಲವೊಮ್ಮೆ ಮೂಳೆ ಮುರಿದುಕೊಂಡದ್ದೂ ಉಂಟು.

19೨೮ರಲ್ಲಿ ಮೋತಿಲಾಲನು ಮೆಟ್ರಿಕ್ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ, ಉಚ್ಚ ಶಿಕ್ಷಣವನ್ನು ಪಡೆಯಲು ಡಿಲ್ಲಿಗೆ ಹೋದನು. ನಾಲ್ಕು ವರ್ಷದ ವರೆಗೆ ಅಲ್ಲಿ ಕಲಿತು, 'ಡಿಗ್ರಿ' ಪಡೆಯುವ ಮುಂಚೆಯೇ ಅವನು ಅಲ್ಲಿಂದ ನಡೆದು ಬಿಟ್ಟನು. ಕೈಯ ಮೂಳೆ ಮುರಿದುದರ ದೆಸೆಯಿಂದ ಕೊನೆಯ ಪರೀಕ್ಷೆಗೆ ಹಾಜರಾಗಲು ಅವನಿಗೆ ಸಾಧ್ಯವಾಗಲಿಲ್ಲ. ಗುಣ ಹೊಂದಿ, ಆಸ್ಪತ್ರೆಯಿಂದ ಹೊರಗೆ ಬಂದಾಗ, ನೌಕಾ ಪಡೆಯನ್ನು ಸೇರಬೇಕೆಂದು ಅವನಿಗೆ ಮನಸ್ಸಾಯಿತು. ಬಾಹ್ಯ ಪ್ರಪಂಚದಲ್ಲಿದ್ದು, ಹೊರಗಿನ ವಾತಾವರಣದಲ್ಲಿ ತಂಗಾಳಿಗೆ ಮೈಯೊಡ್ಡಿ ಸುಖಪಡೆಯುವುದೆಂದರೆ ಅವನಿಗೆ ಬಾಲ್ಯದಿಂದಲೂ ತುಂಬಾ ಇಷ್ಟ. ಅಪಾಯಕರವಾದ ಬೇಟೆ, ಶಿಕಾರಿ ಮೊದಲಾದುವುಗಳಿಗೆ ಹೋಗಿ ಆನಂದ ಪಡೆಯುವುದರಲ್ಲಿ ಅವನಿಗೆ ಮಮತೆ ಹೆಚ್ಚು. ಇಂತಹ ಅನೇಕ ಸಂದರ್ಭಗಳಲ್ಲಿ, ತಾಯಿಯ ಮಾತನ್ನೂ ಮೀರಿದ್ದುಂಟು. ಹೀಗಾಗಿ ನೌಕಾಪಡೆಯನ್ನು ಸೇರಲು ಅವನು ಇಚ್ಛೆಪಟ್ಟುದರಲ್ಲಿ ಆಶ್ಚರ್ಯವಿಲ್ಲ. ಧನವಂತರಿಂದ ಶಿಫಾರಸು ಪತ್ರಗಳನ್ನು ಪಡೆದು, ಇಂಡಿಯನ್ ನೇವಿ (Indian Navy)ಯಲ್ಲಿ ಕೆಲಸ ಹುಡುಕಲು ಮೋತಿಲಾಲನು ಬೊಂಬಾಯಿಯಲ್ಲಿ ಬಂದಿಳಿದನು.

ಮೋತಿಲಾಲನು ಎಣಿಸಿದುದು ಒಂದು; ದೈವ ಬಗೆದದ್ದು ಮತ್ತೊಂದು. ನೌಕಾಧಿಕಾರಿಗಳನ್ನು ಕಾಣಲು ಅವನು ದಿನ ಗೊತ್ತುಹಚ್ಚಿದನು. ಆದರೆ, ಅದಕ್ಕೆ ಎರಡು ದಿವಸಗಳ ಮುಂಚಿತವಾಗಿ, ಅಕಸ್ಮಾತ್ತಾಗಿ ಸಂಭವಿಸಿದ ಮೋಟರ್‌ಸೈಕಲ್ ಅಪಘಾತದಿಂದ ಮೋತಿಲಾಲನಿಗೆ ಆಸ್ಪತ್ರೆಯನ್ನು ಸೇರಬೇಕಾಯಿತು. ಈ ಅಪಾಯದಿಂದ ಅವನು ಪಾರಾಗುವನೆಂದು ಯಾರೂ ಎಣಿಸಲಿಲ್ಲ. ಸ್ಥಿತಿಯು ತುಂಬಾ ಶೋಚನೀಯವಾಗಿತ್ತು. ಆದರೆ, ಮುಂದೆ ಅವನಿಂದ ತುಂಬಾ ಕಾರ್ಯಗಳನ್ನು ನಡೆಸಲು ಇದ್ದುದರಿಂದ, ದೇವರು ಮೋತಿಯನ್ನು ಉಳಿಸಿದ. ಆಸ್ಪತ್ರೆಯಲ್ಲಿ ಅವನಿಗೆ ಅನೇಕ ಮಂದಿಯ ಸ್ನೇಹವಾಯಿತು. ಸಲಿಗೆಯಿಂದ ವರ್ತಿಸುವವರಿಗೆ ಸ್ನೇಹ ಸಂಪಾದಿಸಲು ತೊಡಕಿರುವುದಿಲ್ಲ. ಆದುದರಿಂದ ಸರಳ ಸ್ವಭಾವದ ಮೋತಿಗೆ ಮಿತ್ರರನ್ನು ಹುಡುಕಲು ಹೆಚ್ಚಿನ ಕಷ್ಟವಾಗಲಿಲ್ಲ.

ಮುಂಬಾಯಿಯಲ್ಲಿ ಇದ್ದಾಗ, ಹಲವು ಮಿತ್ರರೊಡಗೂಡಿ ಮೋತಿಲಾಲನು ಒಮ್ಮೆ ಒಂದು ಚಿತ್ರಶಾಲೆಯನ್ನು ಸಂದರ್ಶಿಸಿದನು. ಅಲ್ಲಿ ಕೂಡಾ, ಮೊದಮೊದಲು ಅದರಲ್ಲಿ ಸೇರುವ ಇಚ್ಛೆಯು ಅವನಲ್ಲಿ ಅಂಕುರಿಸಲಿಲ್ಲ. ಆದರೆ ಬಂಗಾಳೀ ಗೃಹಸ್ಥನೊಬ್ಬನು ತನ್ನನ್ನೇ ದಿಟ್ಟಿಸಿ ನೋಡುತ್ತಿರುವುದನ್ನು ಕಂಡು ಮೋತಿಗೆ ಆಶ್ಚರ್ಯವಾಗಿ, ಸಂಶಯ ನಿವಾರಣೆಗಾಗಿ, ಅವನಿದ್ದಲ್ಲಿಗೆ ಹೋಗಿ, "ಏನು ತಮ್ಮ ಆಲೋಚನೆ? ಬಹಳ ಹೊತ್ತಿನಿಂದ ನನ್ನನ್ನೇ ನೋಡುತ್ತಿರುವಿರಲ್ಲ! ನಾನೂ ತಮ್ಮ ಹಾಗೆಯೇ ಮನುಷ್ಯ ಹೊರತು ನನಗೆ ತಲೆಯ ಮೇಲೆ ಕೋಡು ಗೀಡು ಇಲ್ಲ". ಎಂದು ಹೇಳಿಬಿಟ್ಟ. ಅದನ್ನು ಕೇಳಿ ಆ ಬಂಗಾಳೀ ಗೃಹಸ್ಥನು ಮೋತಿಯೊಡನೆ ಕ್ಷಮಾಪಣೆ ಕೇಳಿ, ಅಲ್ಲಿಂದ ಬೇರೊಂದು ದಿಕ್ಕಿಗೆ ಹೋದ.

ಅವನೊಬ್ಬ ಚಲಚ್ಚಿತ್ರ ಕಂಪೆನಿಯ ದಿಗ್ದರ್ಶಕನೆಂದು ಮೋತಿಗೆ ನಂತರ ತಿಳಿದುಬಂತು. ಕೆಲವು ದಿನಗಳು ಕಳೆದುಹೋದ ಮೇಲೆ, ಅದೇ ಚಿತ್ರಶಾಲೆ (Studio)ಯಿಂದ ಮೋತಿಗೊಂದು ಕರೆ ಬಂತು. ಯೋಚನೆ ಮಾಡಿ ಹೇಳುವೆನೆಂದು ಅವನು ಉತ್ತರ ಕಳುಹಿಸಿದ. ಒಂದು ವಾರದ ಅವಧಿಯೊಳಗೆ ಪ್ರಯತ್ನಪಟ್ಟು ನಿರ್ಧಾರ ಮಾಡಿ, ಅವನು ತನ್ನ ಮೊದಲನೇ ಚಿತ್ರದಲ್ಲಿ ಅಭಿನಯಿಸಿದ.

ಮೊದಲನೇ ಸಲ ಅಭಿನಯಿಸಿದಾಗ ಮೋತಿಗೆ, ದಿಗ್ದರ್ಶಕರು, ಕಲಾಕರ್ತರು, ಚಿತ್ರಲೇಖಕರು ನಟನನ್ನು ತರಬೇತಿ ಮಾಡುವ ವಿಧಾನವನ್ನು ಕಂಡು, ಚಲಚ್ಚಿತ್ರದ ಮೇಲೆ ಜಿಗುಪ್ಸೆಯು ಉಂಟಾಗಿ, "ಇದರ ಬದಲು ಹಣವನ್ನು ಗಳಿಸುವುದನ್ನು ಕಲಿಯುವುದು ಲೇಸು" ಎಂದು ಕಂಡುಬಂತು. ಆದರೆ, ತಾನು ಅಭಿನಯಿಸಿದ ಮೊದಲನೇ ಚಿತ್ರದಲ್ಲಿಯೇ ಜನರ ಮೆಚ್ಚುಗೆಗೆ ಪಾತ್ರನಾದುದನ್ನು ಕಂಡು ಅವನಿಗೆ ಕಲೆಯಲ್ಲಿ ಪ್ರೀತಿಯುಂಟಾಯಿತು. ಸಾಗರ್ ಕಂಪೆನಿಯವರ "ಲ್ಯೂರ್ ಒಫ್ ದಿ ಸಿಟಿ" (Lure of the City) ಎಂಬ ಚಿತ್ರದಲ್ಲಿ ಮೋತಿಲಾಲನಿಗೆ ನಾಯಕನ ಪಾತ್ರವನ್ನು ಕೊಟ್ಟರು. ನಾಯಕಿಯ ಪಾತ್ರವನ್ನು ಪ್ರಖ್ಯಾತ ನಟಿ ಸಬಿತಾ ದೇವಿಯು ವಹಿಸಿದ್ದಳು. ಈ ಚಿತ್ರದಲ್ಲಿ ಅಭಿನಯಿಸಿದುದರಿಂದ ಮೋತಿಲಾಲನ ಕೀರ್ತಿಯು ಇಮ್ಮಡಿಯಾಯಿತು. ಸಾಗರ್ ಕಂಪೆನಿಯು ತುಂಬಾ ಬೆಳಕಿಗೆ ಬಂತು.

ಮೋತಿಲಾಲನು ಚಿತ್ರದಲ್ಲಿ ಅಭಿನಯಿಸುವಾಗ ತನ್ನನ್ನೇ ತಾನು ಸಂಪೂರ್ಣ ಮರೆತು, ತನ್ನ ಪಾತ್ರದಲ್ಲಿ ಐಕ್ಯವಾಗಿ ನಟನೆ ಮಾಡುತ್ತಾನೆ. ಹೀಗಾಗಿ ಅವನ ನಟನೆಯ ಕಡೆಗೆ ಜನರ ಮೆಚ್ಚುವುದು ಹೆಚ್ಚು. ಅವನ ಅಭಿನಯವು ಸ್ವಾಭಾವಿಕತೆ (Natural) ಇರುತ್ತದೆ. ರಾಜನ ಪಾತ್ರವನ್ನು ಧರಿಸಿದಾಗ ರಾಜನಂತೆ, ಭಿಕ್ಷುವಿನ ವೇಷದಲ್ಲಿ ಭಿಕ್ಷುವಿನಂತೆ ನಟಿಸುವುದು ಹೇಗೆಂಬುದನ್ನು ಮೋತಿಯು ಚೆನ್ನಾಗಿ ಮನಗಂಡಿರುತ್ತಾನೆ. ಕೋಪದ ನಟನೆಯನ್ನು ತೋರಿಸುವಾಗ, ಎರಡು ಬಾರಿ ಅವನು ನಿಜವಾಗಿ ಸ್ಮೃತಿತಪ್ಪಿ ಬಿದ್ದಿರುತ್ತಾನೆ. "ಹೋಳಿ" ಚಿತ್ರದಲ್ಲಿ ಅಭಿನಯಿಸುವಾಗಲೂ ಒಮ್ಮೆ ಹೀಗಾಯಿತು. ಕಲೆಯ ಕಡೆಗೆ ಅವನಿಗಿದ್ದ ಅಭಿಮಾನವನ್ನು ಇದು ಹೊರಗೆಡಹುತ್ತದೆ. 'ಹೋಳಿ'ಯಲ್ಲಿ ಜಮೀನ್ದಾರನ ಹಾಳು ಹುಡುಗನ ಪಾತ್ರದಲ್ಲಿ ಅವನು ಅಭಿನಯಿಸುತ್ತಾನೆ. ಮೋತಿಲಾಲನು ಸಿಟ್ಟಿನ ಭರದಲ್ಲಿ ಪ್ರಜ್ಞೆ ತಪ್ಪಿ ಬಿದ್ದ ದೃಶ್ಯವು, ತಾನು ರಕ್ಷಿಸಿದ ಹುಡುಗಿಯನ್ನು ಕಾಪಾಡಲು ಮಗನು ತಂದೆಗೆ ಸಿಟ್ಟಿನಿಂದ ಜರೆಯುವಾಗ ನಡೆದದ್ದು.

ಇಷ್ಟರ ತನಕ ಮೋತಿಯು ಸಾಧಾರಣ ಹದಿನಾರಕ್ಕೂ ಮೇಲ್ಪಟ್ಟ ಚಿತ್ರಗಳಲ್ಲಿ ಅಭಿನಯಿಸಿರುತ್ತಾನೆ. ಮೋತಿಲಾಲನ ಮಾತೃ ಭಾಷೆಯು ಉರ್ದು; ಗುಜರಾತಿಯನ್ನು ಮುಂಬಾಯಿಯಲ್ಲಿ ಅವನು ಕಲಿತಿರುತ್ತಾನೆ. "ಮುನ್ನೂರು ದಿನಗಳ ನಂತರ" (Three Hundred days After) ಎಂಬ ಚಿತ್ರದಲ್ಲಿ ಉತ್ಕೃಷ್ಟ ನಟನಾಗಿ ಅವನಿಗೆ ಗೋಹರ್ ಸ್ವರ್ಣ ಪದಕವು ಬಹುಮಾನವಾಗಿ ದೊರಕಿರುತ್ತದೆ. 193೦ರಲ್ಲಿ ಕೂಡಾ, ಶ್ರೇಷ್ಠತರದ ಅಭಿನಯಕ್ಕಾಗಿ ಅವನಿಗೆ ಒಂದು ಭಂಗಾರದ ಪದಕವನ್ನು ಕೊಟ್ಟಿರುತ್ತಾರೆ. 193೮ರಲ್ಲಿ 'ನಿಖಿಲ ಹಿಂದೂಸ್ಥಾನ ಚಲಚ್ಚಿತ್ರ ಸಮಿತಿ"ಯವರು 'ಸಿಲ್ವರ್ ಕಿಂಗ್' ಎಂಬ ಚಿತ್ರದಲ್ಲಿ ಯೋಗ್ಯ ರೀತಿಯ ಅಭಿನಯವನ್ನು ಪ್ರದರ್ಶಿಸಿದುದಕ್ಕೆ, ಒಂದು ಭಂಗಾರದ ಪದಕವನ್ನು ಮೋತಿಗೆ ಅರ್ಪಿಸಿರುತ್ತಾರೆ.

"ಮುನ್ನೂರು ದಿನಗಳ ನಂತರ" ಎಂಬ ಚಿತ್ರದಲ್ಲಿ ನಟಿಸಿದುದನ್ನು ಕುರಿತು ಮೋತಿಯೇ ತನ್ನ ಸ್ವಂತ ಮಾತುಗಳಿಂದ ಹೀಗೆಂದಿರುತ್ತಾನೆ: "ನನ್ನ ಜೀವಮಾನದಲ್ಲಿ ನಿಜವಾಗಿ ಮಾಡಬೇಕೆಂದೆಣಿಸಿದ ಹಲವು ಕೃತ್ಯಗಳನ್ನು ಈ ಚಿತ್ರದಲ್ಲಿ ನಾನು ಮಾಡಿರುತ್ತೇನೆ. ಹಜಾಮನಿಂದ ಹಿಡಿದು, ಬೂಟ್ ಪಾಲಿಸ್ ಮಾಡುವವನ ವೃತ್ತಿ ನಡೆಸಿ, ಮಿಲಿಯಾಧೀಶನಾಗುವುದು ಹೇಗೆಂಬುದನ್ನು ನಾನು ತೋರಿಸಿರುತ್ತೇನೆ. ಕೃತ್ರಿಮ ರೀತಿಯಿಂದ ವೇಷ ಬದಲಾಯಿಸುವ ಗೋಜಿಗೆ ನಾನು

ಹೋಗಲಿಲ್ಲ. ಸಹಜ ರೀತಿಯಲ್ಲಿಯೇ ವರ್ತಿಸುತ್ತೇನೆ" ಎಂಬುದು ಅವನು ಹೇಳಿದುದರ ಸಾರಾಂಶ.

ಮೋತಿಲಾಲನು ಅವನ ಜೀವಮಾನದಲ್ಲಿ ಹಲವು ಬಾರಿ ಮೃತ್ಯುವಿನ ದವಡೆಗೆ ಸಿಲುಕಿ, ಅದರಿಂದ ಪಾರಾಗಿರುತ್ತಾನೆ. ಒಮ್ಮೆ ಬೇಟೆಗೆ ಹೋದಾಗ, ನಾಗಸರ್ಪವೊಂದು ಅವನನ್ನು ಕಚ್ಚಿತು. ಅದರಿಂದಲೂ ಪಾರಾದ. ಒಮ್ಮೆ ಶಿಕಾರಿಗೆ ಹೋದ ಕಡೆಯಲ್ಲಿ ಗುಂಡೊಂದು ತಪ್ಪಿ, ಮೋತಿಯ ಬಲಗಾಲಿಗೆ ತಗಲಿತು. ಅದರ ಗುರುತು ಈಗಲೂ ಅವನ ಕಾಲಿನಲ್ಲಿದೆ. ದೇಹದಲ್ಲಿದ್ದ ಪ್ರತಿಯೊಂದು ಮೂಳೆಯನ್ನು ಅವನು ಮುರಿದುಕೊಂಡಿರುವನೆಂದರೆ ಉತ್ಪ್ರೇಕ್ಷೆಯಾಗಲಾರದು. ಧನವನ್ನು ಶೇಖರಿಸಿ ಇಡುವ ರೀತಿಯನ್ನೇ ಅವನು ಕಲಿಯಲಿಲ್ಲ. ನಾಳೆಯ ಸಂಗತಿಯನ್ನು ಅವನು ಈ ದಿನ ತಿಳಿಯುವ ಪದ್ಧತಿ ಇಲ್ಲ. ಹಾಗೆಯೇ ನಿನ್ನೆಯ ಕುರಿತು ಅವನು ಎಣಿಸುವುದೂ ಇಲ್ಲ.

ಮುಂಬಾಯಿಯ ವಾಲ್ಕೇಶ್ವರ್ ರಸ್ತೆಯ ಸಮೀಪ, ಸಮುದ್ರ ಸ್ನಾನಕ್ಕೆ ಹೋದ ಕಡೆಯಲ್ಲಿ, ಕಠಿನ ತರದ ಗಂಡಾಂತರಕ್ಕೆ ಮೋತಿಯು ಸಿಲುಕಿದ್ದ. ಬೆಳಗ್ಗಿನಿಂದ ಕುದುರೆ ಸವಾರಿ ಮಾಡಿ ಆಯಾಸ ಪಟ್ಟುದರಿಂದ, ಸಮುದ್ರ ಸ್ನಾನವನ್ನು ಮಾಡಿ ಕೊಂಚ ದೇಹವನ್ನು ತಣ್ಣಗಿರಿಸೋಣ ಎಂದು ಅವನಿಗೆ ಮನಸ್ಸಾಯಿತು. ಸ್ನಾನದ ಪೋಷಾಕಿನಲ್ಲಿ ಕೂಡಲೇ ಸಮುದ್ರಕ್ಕಿಳಿದು, ಇನ್ನೂರು ಗಜದವರೆಗೆ ಮುಂದೆ ಹೋಗಿ ಕೆಲವು ತಾಸುಗಳ ತನಕ ಈಜತೊಡಗಿದ. ಕಡೆಗೆ ಬಹಳವಾಗಿ ಈಜಾಡಿದುದರಿಂದ, ಮೋತಿಯ ಕೈಕಾಲುಗಳು ಸೋತು. ತೆರೆಗಳ ಆರ್ಭಟವು ಜೋರಿದ್ದುದರಿಂದ, ಹಿಂದೆ ಬರಲು ಅವನಿಗೆ ತುಂಬಾ ಪ್ರಯಾಸವಾಯಿತು. ತೆರೆಗಳು ಹತ್ತಿರದ ಶಿಲೆಯ ಕಲ್ಲಿನ ಮೇಲೆ ಅವನನ್ನು ಉರುಳಿಸಿದವು. ತೆರೆಗಳ ಬಡಿತದಿಂದ ಉಂಟಾದ ಪೆಟ್ಟಿಗೆ, ಮೋತಿಯ ಅಂಗಾಂಗಗಳು ಮುರಿದಂತಾದವು. ಅಂತೂ "ಸಮುದ್ರವು ನನ್ನನ್ನು ಆಶಿಸಲಿಲ್ಲ" ಎಂದು ಸ್ನೇಹಿತರೊಡನೆ ಮೋತಿಯು ನಗುಮುಖದಿಂದ ನುಡಿದನಂತೆ.

ಒಮ್ಮೆ ಚಿತ್ರವನ್ನು ತೆಗೆಯುವಾಗ ಮೂವತ್ತಡಿ ಎತ್ತರದಿಂದ ಕೆಳಗೆ ಹರಿಯುವ ಸರೋವರದಲ್ಲಿ ಹಾರುವ ಪ್ರಸಂಗವು ಮೋತಿಗೆ ಬಂದೊದಗಿತು. ಪ್ರತಿಯೊಂದು ಸನ್ನಿವೇಶದಲ್ಲಿ ಆದಷ್ಟು ಮಟ್ಟಿಗೆ ಸಹಜತ್ವವನ್ನೇ ತೋರಿಸಬೇಕೆಂದು ಅವನ ಬಯಕೆ. ಈ ಸಂದರ್ಭದಲ್ಲಿಯೂ ಹಾಗೆಯೇ ಎಣಿಸಿಕೊಂಡು, ನೀಟ ಹಾರುವುದರ ಬದಲಾಗಿ, ಮೋತಿಯು ಒಂದು 'ಡೈವ್' (Dive) ಹೊಡೆದು ಬಿಟ್ಟ. ಸರೋವರದಲ್ಲಿ ನೀರಿನ ಆಳವು ಮೊಣಕಾಲಿನ ಮಟ್ಟಕ್ಕೆ ಮುಟ್ಟುವಷ್ಟಿದ್ದಿಲ್ಲ. ಹೀಗಾಗಿ ಮೋತಿಯು, ಕೈ ಮತ್ತು ಹೆಗಲಿನ ಮೂಳೆಗಳನ್ನು ಮುರಿದುಕೊಂಡ. ಇದರಿಂದ ವಾಸಿಯಾಗಲು ಎರಡು ತಿಂಗಳ ಕಾಲವು ಹಿಡಿಯಿತು. ಇಷ್ಟಾದರೂ ಅವನು ಆಟಗಳಲ್ಲಿ ಆಸಕ್ತಿ ತೋರಿಸುವುದೆಂದಿಲ್ಲ. "ಚಲಚ್ಚಿತ್ರಕ್ಕೆ ಕೆಲಸ ಮಾಡುವಾಗ, ಕ್ರಿಕೆಟ್ ಆಡಲು ಮತ್ತು ಬೇಟೆಯಾಡಲು ನನಗೆ ಸಮಯ ಸಿಗುವುದು ಕಷ್ಟ. ಆದುದರಿಂದ ಒಮ್ಮೆ ಚಿತ್ರವು ಮುಗಿಯುವುದರೊಳಗೆ ನನಗೆ ಸಾಕೆನಿಸುತ್ತದೆ. ಆಟಗಳಲ್ಲಿ ನಾನು ಪ್ರವೀಣನಲ್ಲದಿದ್ದರೂ ಅವುಗಳನ್ನು ಬಿಟ್ಟಿರಲು ನನಗೆ ಮನಸ್ಸೇ ನಿಲ್ಲಲಾರದು" ಎಂಬದಾಗಿ ಮೋತಿಯು ತನ್ನ ಸ್ನೇಹಿತರೊಡನೆ ಹೇಳಿದವನು.

ಕುದುರೆ ಸವಾರಿ, ಈಜಾಟ, ಹಳೆಯ ಕಾರುಗಳನ್ನು ನಡೆಸುವುದು ಇವು ಮೋತಿಯ ಹೊರಗಿನ ವಿಲಾಸಗಳು. ಅವನ ಹತ್ತಿರ ಹೊಸತೊಂದು ಕಾರು ಅಲ್ಲದೆ ಅದರ ಜೊತೆಗೆ ಇಬ್ಬರು ಕುಳಿತುಕೊಳ್ಳುವ ಅವನ ಮೊದಲಿನ ಹಳೆಯ ಕಾರೂ ಇದೆ. ತನ್ನ ಹಳೆಯ ಕಾರಿನ ಮೇಲೆ ಮೋತಿಗೆ ತುಂಬಾ ಮಮತೆ. ಸ್ವಂತ ಮಗುವಿನಂತೆ ಅದರ ಆರೈಕೆಯನ್ನು ಅವನು ನೋಡಿಕೊಳ್ಳುತ್ತಾನೆ. ಅದರಲ್ಲಿ ಕೂತು ಸಾವಿರಾರು ಮೈಲುಗಳ ಪ್ರಯಾಣವನ್ನು ಅವನು ಮಾಡಿರುತ್ತಾನೆ. ಹತ್ತಿಪ್ಪತ್ತು ಬಾರಿ ಅದರಲ್ಲಿ ಕುಳಿತು, ಘಟ್ಟಗಳ ಮೇಲೂ ಏರಿರುತ್ತಾನೆ. ಘಂಟೆಗೆ ನೂರು ಮೈಲು ವೇಗದಲ್ಲಿ ಅದನ್ನು ನಡೆಸಬೇಕೆಂದು ಅವನ ಹಟ. ಈ ಹಟವನ್ನು ಕೆಲವು ತಿಂಗಳ ಮೊದಲು ಅವನು ಸಾಧಿಸಿಯೇ ಬಿಟ್ಟಿದ್ದಾನೆ. ಆ ಕಾರಿನ ರಿಪೇರಿಗಾಗಿ ಮೋತಿಯು ೨೫೦೦ಕ್ಕೆ ಮೇಲ್ಪಟ್ಟು ರೂಪಾಯಿಗಳನ್ನು ಖರ್ಚುಮಾಡಿರುತ್ತಾನೆ. ಆ ಕಾರನ್ನು ಅವನು ಪಡೆದುದು ಮಾತ್ರ ಬರೇ ೪೦೦ಕ್ಕೆ. ಸಾಮಾನ್ಯ ಜನರಿಗೆ ಇದು ಕೇವಲ ಹುಚ್ಚೆಂದು ಎಣಿಸಬಹುದು. ಆದರೆ ಮೋತಿಗೆ ಮಾತ್ರ ಅದೊಂದು ವಿಲಾಸವಾಗಿದೆ.

ಪುಸ್ತಕಗಳನ್ನು ಓದುವುದರಲ್ಲಿ ಮೋತಿಗೆ ಅಭಿರುಚಿ ಹೆಚ್ಚು. 5000 ಪುಸ್ತಕಗಳಿಗೆ ಮೇಲ್ಪಟ್ಟು ಇರುವ ಒಂದು ಚಿಕ್ಕ ಪುಸ್ತಕಾಲಯವೇ ಅವನ ಮನೆಯಲ್ಲಿ ಇರುತ್ತದೆ. ಅದರಲ್ಲಿ ಪ್ರತಿಯೊಂದನ್ನೂ ಅವನು ಓದಿರುತ್ತಾನೆ. ಸಾಮಾನ್ಯ ವಿಷಯಗಳಿಗಿಂತ ತತ್ವಜ್ಞಾನ (philosophy) ಓದುವುದೆಂದರೆ ಅವನಿಗೆ ತುಂಬಾ ಇಷ್ಟ. ಡೆಲ್ಲಿಯಲ್ಲಿ 'ಡಾಕ್ಟರ' ಕೆಲಸವನ್ನು ಮಾಡುವ ಅವನ ಪತ್ನಿಯೊಮ್ಮೆ ಮುಂಬಾಯಿಗೆ ಬಂದಾಗ, ತನ್ನ ವೈದ್ಯ ಶಾಸ್ತ್ರದ ಕೆಲವು ಪುಸ್ತಕಗಳನ್ನು ಮನೆಯಲ್ಲಿಯೇ ಬಿಟ್ಟುಹೋಗಿದ್ದಳು. ಅದನ್ನು ಕಳುಹಿಸಬೇಕೆಂದು ಡೆಲ್ಲಿಯಿಂದ ಅವಳ ಪತ್ರವು ಬರುವಷ್ಟರಲ್ಲಿ ಮೋತಿಲಾಲನು ಅವುಗಳಲ್ಲಿ ಎಲ್ಲವನ್ನೂ ಓದಿ ಮುಗಿಸಿಬಿಟ್ಟಿದ್ದನು.

ಕೆಲವು ಬಾರಿ, ಹಲವು ತಾಸುಗಳ ತನಕ ಶಾಂತತೆಯಲ್ಲಿ ಮೋತಿಯು ಸಮಯವನ್ನು ಕಳೆಯುವುದುಂಟು. ಜೀವನದ ಏರು ತಗ್ಗುಗಳ ವಿಷಯ ಆಗ ಅವನು ತನ್ನ ಮನಸ್ಸಿನಲ್ಲಿ ಚರ್ಚಿಸುತ್ತಾನೆ. ತಾನು ಕಲಿತ ತತ್ವಜ್ಞಾನವನ್ನು ಆಧಾರವನ್ನಾಗಿ ಇಟ್ಟುಕೊಂಡು ಜೀವನ ಸಮಸ್ಯೆಯನ್ನು ವಿಮರ್ಶಿಸುತ್ತಾನೆ.

ಮೋತಿಲಾಲನಿಗೆ ಅಮೇರಿಕಕ್ಕೆ ಹೋಗಿ, ಹಾಲಿವುಡ್ಡಿನಲ್ಲಿ ಚಿತ್ರ ತಯಾರಿಸುವ ರೀತಿಯನ್ನು ನೋಡಿ ಬರಬೇಕೆಂದು ತುಂಬಾ ಮನಸ್ಸಿದೆ. ಒಮ್ಮೊಮ್ಮೆ ಈ ಬಯಕೆಯನ್ನು ತನ್ನ ಮಿತ್ರರೊಡನೆ ಹೇಳುತ್ತಾನೆ. ಆದರೆ ಇಷ್ಟರವರೆಗೆ ತನ್ನ ಮನೋಭೀಷ್ಟವನ್ನು ನೆರವೇರಿಸುವ ಅನುಕೂಲತೆಗಳು ಮಾತ್ರ ಅವನಿಗೆ ದೊರಕಿದುದಿಲ್ಲ.

ಹೆತ್ತ ತಾಯಿಯನ್ನು ಪೂಜ್ಯ ದೃಷ್ಟಿಯಿಂದ ಮೋತಿಲಾಲನು ನೋಡಿಕೊಳ್ಳುತ್ತಾನೆ. ಎಂತಹ ಕಠಿನ ಪ್ರಸಂಗ ಬಂದೊದಗಿದರೂ, ಅವಳ ಮಾತಿಗೆ ವಿರುದ್ಧವಾಗಿ ಅವನು ನಡೆಯುವುದೆಂದಿಲ್ಲ. 'ನಾನು ನಡೆಸುವ ಪ್ರತಿಯೊಂದು ಕಾರ್ಯದಲ್ಲಿಯೂ, ಅಮ್ಮನ ಆಶೀರ್ವಾದವನ್ನು ಪಡೆದೇ ನಾನು ಮುಂದುವರಿಯುತ್ತೇನೆ. ತಪ್ಪು ಒಪ್ಪುಗಳನ್ನು ವಿಮರ್ಶಿಸಲು ಆಕೆಯು ಹಿತನಾದವು ಯೋಗ್ಯಳೆಂಬುದನ್ನು ನಾನು ಮನಗಂಡಿರುತ್ತೇನೆ. ಅವಳೆಂದಂತೆ ನಡೆದುದರಲ್ಲಿ ನನಗೆ ಅಪಜಯವು ಆಗುವುದೆಂದಿಲ್ಲ' ಎಂಬದಾಗಿ ಮೋತಿಲಾಲನೇ ಹೇಳಿರುತ್ತಾನೆ.

'ಆರೋಗ್ಯವನ್ನು ಕಾಪಾಡಿಕೊಳ್ಳಲು, ಯೋಗ್ಯ ಆಹಾರ ಮತ್ತು ನಿತ್ಯ ವ್ಯಾಯಾಮ ಇವುಗಳ ಕಡೆಗೆ ಎಚ್ಚರಕೊಡಿರಿ. ಆತ್ಮವಿಶ್ವಾಸವನ್ನು ಸರಿಯಾಗಿ ಇಟ್ಟುಕೊಂಡಿರೆಂದರೆ ಜೀವನದಲ್ಲಿ ದುಃಖಕ್ಕೆ ಆಸ್ಪದವಿರುವುದಿಲ್ಲ'. ಇವು ಮೋತಿಯು ತನ್ನಂತಿರುವ ಇತರರಿಗೆ ಹೇಳುವ ಹಿತದ ನುಡಿಗಳು. ಸಾಮಾನ್ಯ ಒಬ್ಬನು ನುಡಿದ ವಾಕ್ಯಗಳು ಎಂದು ನಾವು ಅವುಗಳನ್ನು ಅಲ್ಲಗಳೆಯಬಾರದು. ನಾವಿಕನಾಗಲಿದ್ದ ಮೋತಿಯು ಪ್ರಖ್ಯಾತ ಸಿನೇಮಾ ನಟನೆನಿಸಿಕೊಂಡ. ಅವನು ಹೇಳಿದ್ದಂತೆ ನಡೆದು ನಾವೇಕೆ ನಮ್ಮ ಈಗಿನ ದುಸ್ಥಿತಿಯಿಂದ ಪಾರಾಗಿ, ಬೇರೊಂದು ರೀತಿಯಲ್ಲಿ ಖ್ಯಾತಿ ಪಡೆಯಬಾರದು?

ಗೌಡಸಾರಸ್ವತ ಬ್ರಾಹ್ಮಣ ಪರಿಷತ್ತು, ಮಂಗಳೂರು



ತಾ. 21—12—1941 ಮತ್ತು ತಾ. 22—12—1941ರಲ್ಲಿ. ಗೌಡಸಾರಸ್ವತ ಬ್ರಾಹ್ಮಣ ಪರಿಷತ್ತು. ಶ್ರೀ ಕಾಶೀಮಠಾಧೀಶ ಶ್ರೀಮತ್ ಸುಕೃತೀಂದ್ರತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಆ ಸಂದರ್ಭದಲ್ಲಿ, ಪ್ರಥಮ ದಿನ ತೆಗೆದ ಛಾಯಾಚಿತ್ರವಿದು. ಅಧ್ಯಕ್ಷಸ್ಥಾನ ವಹಿಸಿದ ಶ್ರೀ ಕಾಶೀಮಠಾಧೀಶರು ನಡುವೆ ಕುಳಿತಿರುವರು.

ಮೂಕಿ

(ಲೇಖಕರು:—ಶ್ರೀ ಪಿ. ಕೆ. ನಾರಾಯಣ, ವಿದ್ವಾನ್, ಮಂಗಳೂರು)

ಕುಸುಮೆಗೆ ಥಕ್ಕನೆ ಎಚ್ಚರವಾಯಿತು! ನೋಡುತ್ತಾಳೆ - ಮಂಚದಲ್ಲಿ ತನ್ನ ಪತಿಯಿರಲಿಲ್ಲ! ಗಾಬರಿಯಿಂದ ಈಚೆಗೆ ಹೊರಳಿದಳು. ಗೋಪಾಲನು ಕುರ್ಚಿಯಲ್ಲಿ ಕುಳಿತುಕೊಂಡು, ಕೈಯ್ಯಲ್ಲಿ ಪುಸ್ತಕವೊಂದನ್ನು ಹಿಡಿದು ಯೋಚಿಸುತ್ತಾ ಕುಳಿತಿದ್ದಾನೆ. ಅಸ್ತವ್ಯಸ್ತವಾದ ತನ್ನ ಕೇಶರಾಶಿಯನ್ನು ಸರಿಪಡಿಸಿಕೊಂಡು, ಕುಸುಮೆ ಪತಿಯ ಹಿಂದೆ ಹೋಗಿ ನಿಂತಳು. ಮೇಜಿನ ಮೇಲಿನ 'ಲೇಂಪು' (Lamp) ವಿಷಣ್ಣವಾಗಿ ಉರಿಯುತ್ತಿತ್ತು! ಹೆಸರಿಗೆ ಮಾತ್ರ ಬಿಡಿಸಿದ ಪುಸ್ತಕವು ಕೈಯ್ಯಲ್ಲಿ; ಆದರೆ ಗೋಪಾಲನು ಅದನ್ನು ಓದುತ್ತಿದ್ದಂತೆ ಕಾಣಲಿಲ್ಲ. ಪುಸ್ತಕದೆಡೆಯಲ್ಲಿ ಒಡೆದ ಒಂದು ಕಟ್ಟೋಲೆಯು ಇದೆ.

ಸ್ವಲ್ಪ ಹೊತ್ತು ಮೌನ!

ಆ ಮೇಲೆ ಕುಸುಮೆ ಮೆಲ್ಲನೆ ಮಾತನಾಡಿದಳು:—"ಯಾಕೆ ಹೀಗೆ ಯೋಚಿಸೋದು?....ಏನದು ಕವರಿನೊಳಗೆ?....ನಿದ್ದೆಯೂ ಇಲ್ಲ...."

ಗೋಪಾಲನು ತನ್ನ ಕರದಲ್ಲಿದ್ದ ಪುಸ್ತಕವನ್ನು ಮಡಚಿಕೊಂಡು, ತನ್ನ ಮಡದಿಯ ಕೋಮಲ ಕರಗಳನ್ನು ಹಿಡಿದು, ಆಕೆಯನ್ನು ಎಳೆದು ತನ್ನ ಮಡಿಲಲ್ಲಿ ಕೂರಿಸಿಕೊಳ್ಳುವವರಲ್ಲಿದ್ದನು. ಆದರೆ ಕುಸುಮೆಯು- -"ಇಸ್ಸೀ....ನಾಚಿಕೇನೇ ಇಲ್ಲ...." ಎಂದು ಹೇಳುತ್ತಾ ಕಾಲಮೇಲೆ ಕೂರದೆ ಕೆಳಗೆ ತನ್ನ ಹಸೆಯಲ್ಲೇ ಬಿದ್ದುಕೊಂಡಳು. ಗೋಪಾಲನು ಹಿಡಿದ ಕೈ ಬಿಡದೆ, ಆಕೆ ಬಳಿಯಲ್ಲಿ ಕುಳಿತುಕೊಂಡು ಆ ಚಂದ್ರವದನೆಯನ್ನೇ ನೋಡುತ್ತಾ "ಕುಸುಮಾ" ಎಂದನು.

ಗುಂಗುರು ಕೂದಲು! ಉರುಟು ಮೊಗ! ನೀಳವಾದ ಕಂಗಳು! ಉಬ್ಬಿದ ಕದಪು! ಕೆಂಪಿನ ಒಪ್ಪದಿಂದ ಕೂಡಿದ ಕದಪಿನಲ್ಲಿ ನಗೆಯ ಎಸಳೊಂದು ಸ್ವಾಭಾವಿಕವಾಗಿ ಅರಳುತ್ತಿದೆ. ಮುದ್ದಾದ ಮೂಗು! ಮುದ್ದಾದ ತುಟಿಗಳು! ಮುದ್ದಾದ ಗಲ್ಲ! ತಾನು ಕುಸುಮೆಯನ್ನು ಮದುವೆಯಾಗಿ, ಆಕೆಯೊಡನೆ ಸಂಸಾರವನ್ನು ಹೂಡಿ, ಇದೀಗ ಎಂಟು-ಹತ್ತು ವರ್ಷಗಳು ದಾಟಿ ಹೋಗಿದ್ದರೂ, ಸಂಸಾರದಲ್ಲಿ ಹಲವೊಮ್ಮೆ ಬೇಸರವು ಬಂದಿದ್ದರೂ, ಅವನಿಗೆ ಆಕೆಯ ಸೌಂದರ್ಯದ ಅರಿವಾಗಿರಲಿಲ್ಲ. ತನ್ನ ಕುಸುಮೆ, ಕುಸುಮಬಾಣನ ಅರಗಿಣಿಯೆಂಬ ತಿಳುವಳಿಕೆ ಬಂದಿರಲಿಲ್ಲವೋ ಏನೋ! ಆ ಮುಗ್ಧ ಭಾವದ ಸೌಂದರ್ಯರಾಶಿಯನ್ನು ನೋಡುತ್ತಿದ್ದಂತೆ ಗೋಪಾಲನೊಮ್ಮೆ ಹೊಸದಾಗಿ ಉನ್ಮತ್ತನಾದನು.

ಕೈಯಲ್ಲಿದ್ದ ಪುಸ್ತಕವನ್ನು ಬಿಡಿಸಿ ಕಟ್ಟೋಲೆಯೊಳಗಿಂದ ಒಂದು ಚಿತ್ರವನ್ನು ತೆಗೆದು ಆಕೆಯೊಡನೆ ಕೊಡುತ್ತಾ—"ಕುಸುಮಾ, ಇದಾರು?" ಎಂದು ಕೇಳಿದನು. ಕುಸುಮೆ ಮುಗುಳು ನಗುತ್ತ ತನ್ನ ಕೊಂಕು ದೃಷ್ಟಿಯಿಂದ ಗೋಪಾಲನೆಡೆಗೆ ನೋಡಿ, ಮೇಜಿನ ಬಳಿಗೆ ಹೋಗಿ ಚಿತ್ರವನ್ನು ನೋಡಿದಳು. ಆಕೆಯ ಮುಖವು ಸಂತಸದಿಂದ ಅರಳಿತು.

"ಅಯ್ಯೋ! ಎಷ್ಟು ಚೆನ್ನಾಗಿ ಕಾಣುತ್ತಾಳೆ —ನಮ್ಮ ಪದ್ಮಾ. ಈ ಹಣೆ, ಈ ಕಣ್ಣು, ಈ ಮೂಗು, ಈ ಗಲ್ಲ....ಎಲ್ಲಾ ಎಷ್ಟು ಚೆಂದ! ಮಾತನಾಡುವ ಹಾಗೇ ಕಾಣ್ತಾಳಲ್ಲಾ" ಎಂದವಳೇ ಥಕ್ಕನೆ ನಿಲ್ಲಿಸಿ ಬಿಟ್ಟಳು. ಗೋಪಾಲನು ಆಕೆಯನ್ನೇ ನೋಡುತ್ತಿದ್ದ. ಅರಳು ಮೋರೆಯೊಮ್ಮೆಗೇ ಬಾಡಿಹೋಯಿತು. ಕಪ್ಪಾಯಿತು. ಮುಗಿಲು ಚಂದ್ರನಾವರಿಸಿದ ಬಾನಿನಂತೆ! ಅಳು ಉಕ್ಕಿ ಬಂತು. ಕಣ್ಣಿನಿಂದ ಮುತ್ತಿನ ಹರಳಿನಂತಿರುವ ನಾಲ್ಕು ಹನಿಗಳು ಉದುರಿ ಹೋದುವು.

ಗೋಪಾಲನು ಕುತೂಹಲದಿಂದ ಕೇಳಿದನು:—"ಕುಸುಮಾ! ಏನಿದು? ಏಕೆ ನಿನ್ನ ಮುಖ ವಿವರ್ಣವಾಯಿತು? ಕಣ್ಣಲ್ಲಿ ನೀರೇಕೆ?" ಕುಸುಮೆಗೆ ಉತ್ತರ ಕೊಡಲಾಗಲಿಲ್ಲ.... ಪದ್ಮಾ ... ಮಾತನಾಡುವ ಹಾಗಿದ್ದಾಳೆ! ಆದರೆ ಮಾತನಾಡಿದವಳಲ್ಲ! ಮಾತಾಡುವವಳಲ್ಲ. 'ಆಕೆ ಮೂಕಿ'—ಎಂಬ ಕಠಿಣ ಮಾತುಗಳನ್ನು ಹೇಳುವಷ್ಟು ಕಠಿಣಳು ಆಕೆ ಆಗಿರಲಿಲ್ಲ. ಆ ರೀತಿಯ ಮಾತುಗಳು ಆಕೆಯ ಬಾಯಿಂದ ಹೊರಡದಿದ್ದರೂ ಕಣ್ಣುಗಳು ಮರುಕದಿಂದ ನುಡಿಯುತ್ತಿದ್ದುವು.

ಆ ದಂಪತಿಗಳ ಕಣ್ಣಮುಂದೆ ಪದ್ಮೆಯ ಚಿತ್ರವೊಂದು ಬಂದು ನಿಂತಿತು. ಫೊಟೋದಲ್ಲಿರುವ ಚಿತ್ರಕ್ಕಿಂತಲೂ ಈ ಚಿತ್ರ ಕರುಣಾಜನಕವಾಗಿದೆ. ಅಂದು ಗೋಪಾಲನ ಮದುವೆಯ ದಿನ, ಆ ಮೂಕಿ ತನ್ನ ಭಾವನನ್ನು ಕರುಣಾರ್ದ್ರ ಹೃದಯದಿಂದ ಕಣ್ಣಲ್ಲಿ ನೀರನ್ನು ಮಿಡಿಯುತ ನೋಡುತ್ತಾ ನಿಂತುದನ್ನು ಗೋಪಾಲನೆಂದೂ ಮರೆಯದಾದನು. ಆ ಚಿತ್ರ ಬಂದಾಗಲೆಲ್ಲಾ ಅವನ ಹೃದಯವನ್ನು ಯಾವುದೋ ಒಂದು ನೋವು ಬಂದು ಕೂಡುತಿತ್ತು. ಇಂದು ಆ ನೋವು ಇಮ್ಮಡಿಯಾಗಿದೆ. ತಾನು ಉಕ್ಕಿ ಬರುವ ನಗುವನ್ನು ನಾಚಿಕೆಯಿಂದ ಮುಚ್ಚಿಕೊಳ್ಳಲು ಯತ್ನಿಸಿ ವಿಫಲಳಾಗುತ್ತಿದ್ದುದನ್ನು ತನ್ನ ತಂಗಿಯು ದೂರದಿಂದ ನೋಡಿ, ಗಂಭೀರಳಾಗಿ ಹೋದ ತಂಗಿಯ ಚಿತ್ರವು ಕುಸುಮೆಯ ಕಣ್ಣಮುಂದೆ ಬಂತು. ಅದರೊಡನೆ ಯಾವುವೋ ನೆನಪುಗಳು ಆಕೆಯನ್ನು, ಬಂದು ಬಾಧಿಸತೊಡಗುತ್ತಿದ್ದುವು!

ಪ್ರತಿಯೊಂದು ಪ್ರಾಣಿಯೂ ತನ್ನ ಬಾಳನ್ನು ಸುಗಮವಾಗಿ ಸಾಗಿಸಲು ಇನ್ನೊಂದು ಎದೆಯನ್ನು ಹಂಬಲಿಸುತ್ತಿರುವಾಗ, ಆ ಮೂಕಿ ಪದ್ಮೆ—ಜೀವನದ ಸುಖ-ದುಃಖವನ್ನು ಆಶೆ-ಆತುರವನ್ನು ಅರಿಯಬಲ್ಲ ಪ್ರಬುದ್ಧ ಪದ್ಮೆ -ಹೇಗೆ

> ಪದ್ಮೆಯು ಸುಂದರಿ; ಆದರೆ, ಮೂಕಿ. ಆಕೆಯು ಅಕ್ಕನ ಮದುವೆಯಂದು, ಆ ಮೂಕಿ ತನ್ನ ಭಾವನನ್ನು ಕರುಣಾರ್ದ್ರ ಹೃದಯದಿಂದ ಕಣ್ಣಲ್ಲಿ ನೀರನ್ನು ಮಿಡಿಯುತ್ತ ನೋಡುತ್ತಾ ನಿಂತುದನ್ನು ಗೋಪಾಲನೆಂದೂ ಮರೆಯನು. ಯಾವ ಚಿತ್ರಕ್ಕಿಂತಲೂ ಈ ಚಿತ್ರವು ಕರುಣಾಜನಕವಾಗಿದೆ. ಆ ಚಿತ್ರವು ಸ್ಮರಣೆಗೆ ಬಂದಾಗ, ಗೋಪಾಲನ ಹೃದಯದಲ್ಲಿ ಅತೀವ ನೋವುಂಟಾಗುವುದು. ಗೋಪಾಲನನ್ನು ಯಾವುದೋ ಪ್ರಶ್ನೆಯು ಕಾಡುವುದು. ಅವನು ಉತ್ತರ ಹುಡುಕುತ್ತ ಕಳವಳಗೊಳ್ಳುವನು.

ಸಹಿಸುತ್ತಿರಬಹುದು? (ಯೌವ್ವನದ ಪ್ರೇಮ ಕುರುಡು. ತನಗೊಂದು ಅದೃಷ್ಟವನ್ನು ತರಿಸುತ್ತ ಕೂರಬಹುದು ಸಹಜವಲ್ಲವೇ?) ಅಂತಹ ಕೊರಗು ಆಕೆಯ ಮನೆಯನ್ನು ಆವರಿಸಬಹುದು? ಅದು ಆಕೆಯನ್ನು ಎಂತು ಕೊರೆಯುತ್ತಿರಬಹುದು?....ಎಂದೆಲ್ಲಾ ಆ ದಂಪತಿಗಳು ಯೋಚಿಸುತ್ತಿದ್ದರು.

"ಕುಸುಮಾ, ಪದ್ಮನವರು ಒಂದು ಕಾಗದ ಬರೆದಿದ್ದಾರೆ. ನಾನದನ್ನು ಆಗ ಓದುತ್ತಿದ್ದೆ" ಎಂದು ಗೋಪಾಲನು ಯೋಚನೆಯ ಮಧ್ಯದಲ್ಲಿ ಮಾತನಾಡಿದನು.

"ಏನು?....ಪದ್ಮಾ ಪತ್ರ ಬರೆದಿದ್ದಾಳೆಯೇ?....ನಾನು ನನ್ನೊಡನೆ ಹೇಳಲೇ ಇಲ್ಲ...." ಎಂದು ತನ್ನ ಸಹಜವಾದ ಕೊಂಕು ನುಡಿಯಿಂದ "ಗುಪ್ತವೇ!" ಎಂಬ ಮುಂದಿನ ನುಡಿಯನ್ನು ನುಡಿದಾಯಿತು. ಆ ಮೇಲೆ ಯೋಚನೆಗೆ ಆರಂಭ. ತನ್ನ ಪತಿಯ ವರ್ತನೆಯಲ್ಲಿ ಈ ಸಂದರ್ಭದ ಏಕಾಯಿತು? ಯಾವಾಗಲೂ ಕಾಗದಗಳು ಬಂದೊಡನೆ "ಕುಸುಮಾ, ಈ ಪತ್ರಗಳನ್ನು ಓದೆ" ಎಂದು ನನ್ನಿಂದಲೇ ಓದಿಸಿಕೊಳ್ಳುವವರು. ಇಂದು ತಾನೇ ಏಕೆ ಓದಿಕೊಂಡರು? ಇಂತು ಹೆಣ್ಣಿನ ತಲೆಯಲ್ಲಿ ಹೊಸದಾದ ಯೋಚನೆ ಕಾರಣವನ್ನರಸುತ್ತ ಮುಂದೆ ಸಾಗಿತು.

ಕೋಣೆಯನ್ನು ಆವರಿಸಿದ್ದ ಮೌನವನ್ನು ಗೋಪಾಲನೇ ಒಡೆದನು:—"ಕುಸುಮಾ, ಏನಿದು ಯೋಚನೆ? ಕಾಗದ ಓದುವುದಿಲ್ಲವೇ?...." ಎಂದನು.

ಆಕೆ ಕಾಗದವನ್ನು ಓದತೊಡಗಿದಳು. ಮೌನವಾಗಿ! ಗೋಪಾಲನು ಎವೆಯಿಕ್ಕದೆ ಆಕೆಯನ್ನು ನೋಡುತ್ತಿದ್ದನು. ಕುಸುಮೆಯು ಮುಖವರಳಿತು.... ಗಂಭೀರ ಭಾವ ಮೂಡುತ್ತಾ ಬಂತು....ಹುಬ್ಬುಗಳು ಯೋಚನೆಯನ್ನು ಸೂಚಿಸತೊಡಗಿದುವು....ಕಣ್ಣುಗಳು ಒದ್ದೆಯಾದುವು....ತುಟಿ ಬಿವರಿತು....ಕಣ್ಣುಗಳಿಂದ ನೀರಿನ ಹನಿಗಳು ಉದುರಿದುವು....ಕಾಗದವು ಕೈಯಿಂದ ಕೆಳಗೆ ಜಾರಿತು! ಗೋಪಾಲನು ತನ್ನನ್ನು ಆಕೆಯೊಡನೆ ಅದುಮಿಕೊಂಡು "ಗುಟ್ಟಾಗಿ ಓದಬಾರದೇ...." ಎಂದನು.

"ನೀವು ಓದಿಲ್ಲವೇ?"

"ಓದಿದ್ದೇನೆ."

"ಮತ್ತೆ ನಾನೇಕೆ."

"ನಿನ್ನ ಕಂಠದಿಂದ ಕೇಳಲಿಕ್ಕೆ."

"ಅಯ್ಯೋ! ನನಗಿನ್ನೂ ಒಂದು ಸಲ ಓದಲಿಕ್ಕಿಲ್ಲವೇ...."

ಅಳುವ ಮೋರೆಯಲ್ಲಿ ನಗುವೊಮ್ಮೆ ಮಿಂಚಿ ಮಾಯವಾಯಿತು. ಆ ಮೇಲೆ ಮೌನ!

ಈ ಬಾರಿಯೂ ಗೋಪಾಲನೇ ಮಾತಿಗೆ ಮೊದಲು ಮಾಡಿದನು.

"ಕುಸುಮಾ, ಪದ್ಮನವರ ಕಾಗದಕ್ಕೆ ಉತ್ತರ ಬರೆಯಬೇಡವೇ?"

"ಬೇಕು"

"ಏನೆಂದು ಬರೆವುದು?"

ಕುಸುಮೆಯದು ನಿರುತ್ತರ.

"ಕುಸುಮಾ, ಮಾತನಾಡು. ಏಕೆ ಮೌನ? "ಬಿಡಿಸಲಾಗದ ಈ ಪ್ರಶ್ನೆಯನ್ನು ಬಿಡಿಸಲು ನೀವಿಬ್ಬರೇ ಶಕ್ತರೆಂದು ಮಾವ ಬರೆದಿದ್ದಾರೆ...."

"ಹೌದು." ಎಂಬ ಮಾತು ಕುಸುಮೆಗರಿಯದಂತೆ ಆಕೆಯ ಬಾಯಿಯಿಂದ ಹೊರಬಿತ್ತು.

"ಹಾಗಾದರೆ ಹೇಗೆಂದು? ನಿನಗೇನಾದರೂ ತೋರುತ್ತದೆಯೇ?"

"ಆಕೆಗೆ ತಕ್ಕ ಗಂಡನನ್ನು ಹುಡುಕಿ ಮದುವೆ ಮಾಡಿಸಬೇಕು"

"ಮೂಕಿಗೆ—— " ಗೋಪಾಲನ ಎದೆಗೆ ಸರಳಿಂದ ತಿವಿದಂತಾಯಿತು. ಆ ಶೂಲೆಯನ್ನು ನೋಡಿ, ಕುಸುಮೆ ಬೆಚ್ಚಿ ಆತನನ್ನೇ ನೋಡುತ್ತಿದ್ದಳು. "....ಅಹುದು. ಮೂಕಿಗೆ ತಕ್ಕ ಗಂಡನೆಲ್ಲಿ ಸಿಗುವನು? ...ಮಾವನಲ್ಲಿ ಹೇರಳ ಹಣವಿರುತ್ತಿದ್ದರೆ ಈ ಮಾತು ಸುಲಭದಲ್ಲಿ ಆಗುತಿತ್ತು....ಸಮಾಜದಲ್ಲಿ ಹೆಬ್ಬಾವಿನಂತೆ ಬಾಯಿ ತೆರೆದಿರುವ ಯಾವನಾದರೂ ಒಬ್ಬ ಮದುವೆ ದಲಾಲಿಯಿಂದ ಈ ಕೆಲಸ ಮಾಡಿಸಿಕೊಳ್ಳಬಹುದಿತ್ತು....ಆದರೆ" ಮುಂದೆ ಗೋಪಾಲನು ಮಾತನಾಡಲಾರದಾದನು. ಮೌನ!

ಶ್ರೀನಿವಾಸರಾಯರ (ಗೋಪಾಲನ ಮಾವನವರು) ಜೀವನ ಚಿತ್ರವೊಂದು ಗೋಪಾಲನ ಮನದ ಕಣ್ಮುಂದೆ ಒಮ್ಮೆಗೇ ಬಂದು ನಿಂತು ಚಲಿಸತೊಡಗಿತು:—

ಮುಕ್ತಾಪುರದ ಹಿರೇ ಮನೆತನ! ದಾನಧರ್ಮ ಮಾಡಿದ ಮನೆ! ಹಿರಿಯರ ಹೇರಳವಾದ ಆಸ್ತಿಯನ್ನು ಪಾಲಿಸಿಕೊಂಡು ಬರುವ ಬಡವನಿಗೂ ಧನಿಕನಿಗೂ ಬೇಕಾದ ಮುಂದಾಳು! ವಿದ್ಯಾವಂತ. ಅದರಲ್ಲೂ ವಿಶಾಲಹೃದಯ! ವಿಶಾಲ ದೃಷ್ಟಿ! ಕನಿಕರದಿಂದ ಕೂಡಿದ ಮನಸ್ಸು! ಕೊಡುಗೈಯ್ಯ ದಾನಿ! ಲಕ್ಷ್ಮೀಪುತ್ರರಾಗಿ ಮೆರೆಯುತ್ತಿರುವ ಕಾಲ. ತನ್ನ ಇಬ್ಬರೇ ಪುತ್ರಿಯರು. ಕಿರಿಯಳು ಮೂಕಿ. ಹಿರಿಯಳೇ ಮಗನೂ ಮಗಳೂ ಆಗಿ ಬೆಳೆದವಳು. ಅವಳ ವಿದ್ಯಾಭ್ಯಾಸ. ಕಿರಿಯಳ ಮೇಲಿನ ಪ್ರೇಮ ಪ್ರೀತಿ: ಆಕೆಯ ಲಾಲನೆ ಪಾಲನೆಯಲ್ಲಿ ಆಸಕ್ತಿ: ಹಿರಿಯಳೊಡನೆ ಗೋಪಾಲನ ಮದುವೆ: ಮದುವೆಯ ಆ ವಿಜೃಂಭಣೆ!.... ಆಕಸ್ಮಾತ್ ರಾಜಕೀಯ ಜೀವನದಲ್ಲಿ ರಾಯರ ಬೀಳುವಿಕೆ: ದೇಶದ ಕೂಗು ಅವರನ್ನು ಕರೆಯಿತ್ತು. ಗಾಂಧೀಜಿಯವರ ಅಸಹಕಾರ ಚಳವಳಿ ಸಾಹಸವನ್ನು ಅರಿತು ರಾಯರು ಅವರ ಅನುಯಾಯಿಗಳಾದರು. ನಾಲ್ಕಾರು ತಿಂಗಳುಗಳಲ್ಲಿ ಶ್ರೀನಿವಾಸರಾಯರ ಹೆಸರು ನಾಡಿನಾದ್ಯಂತ ಹರಡಿಹೋಯಿತು. ದೇಶಭಕ್ತರೂ ಬಡವರ ಬಂಧುಗಳೂ ಅವರು. ಎಲ್ಲೆಲ್ಲೂ ದೇಶಭಕ್ತ ರಾಯರ ಹೆಸರು! ಖಾದಿ ಚಳವಳಿಯು ಭರದಿಂದ ಸಾಗತೊಡಗಿತು. ರಾಯರ ಹಿಂದು ಮುಂದು ಎಷ್ಟೋ ಜನ ಧನಿಕರು ತಿರುಗ ತೊಡಗಿದರು. ಎಲ್ಲೆಲ್ಲೂ ಖಾದೀ ಭಂಡಾರಗಳು! ಎಲ್ಲೆಲ್ಲೂ ದೇಶಭಕ್ತ ಶ್ರೀನಿವಾಸರಾಯರ ಮಾತು! ಹೊಗಳಿಕೆ! ಹೊಗಳಿದ ತನ್ನ ಅನುಯಾಯಿಗಳೇ. ತನ್ನ ಹಿರಿಯನ್ನು ಸೂರೆಗೈಯ್ಯುವುದಕ್ಕಾಗಿ ತನ್ನನ್ನು ಮುತ್ತಿದ ಸ್ವಾರ್ಥಿಗಳೆಂದು ಅವರು ತಿಳಿಯದಿದ್ದುದು....ಚಳವಳಿಯ ಮುಗಿದ ಮೊತ್ತಿಗೆ ರಾಯರ ಸಂಪತ್ತೂ ಮುಗಿದು. ಸಾಲದ ಹೊರೆಯಿಂದ ತಲೆ ಎತ್ತಲಾರದವರಾದರು....ತಮ್ಮನ್ನು ಮುತ್ತುಗಟ್ಟಿ. ತನ್ನ ಕಾರ್ಯಕ್ರಮವನ್ನೇ ಹಾಳ್ಗೈದ. ತನ್ನ ಮುಂದೆ ನಲಿಯುತ್ತಿದ್ದ ದೇಶಭಕ್ತರು ಒಬ್ಬೊಬ್ಬರೇ ಇಲ್ಲದಾದರು....ಕೊನೆಗೆ ಬಡವರಾಗಿ. ರಾಜಕೀಯ ಸುಧಾರಣೆಯ ಕಾಲದಲ್ಲಿ ಅವರು ಮೂಲೆ ಸೇರಬೇಕಾದುದು....ಮುಂದೆ ಅವರ ಇಂದಿನ ಬಡತನದ ಬಾಳು....!

ಈ ಚಿತ್ರವು ಅತ್ಯಂತ ವೇಗದಿಂದ ಹರಿದು ಹೋಯಿತು. ಅವನ್ನು ಕಂಡ ಬಳಿಕ ಆ ಕಣ್ಣುಗಳಿಂದ ಕಂಬನಿಗಳು ಉದುರತೊಡಗಿದವು. ಇದನ್ನೆಲ್ಲಾ ಆವಾಕ್ಕಾಗಿ ನೋಡುತ್ತಿದ್ದ ಕುಸುಮೆಯು ತಿಳಿಗೇಡಿಯಾದ ಗೋಪಾಲನನ್ನು ಹಿಡಿದು ಅಲುಗಾಡಿಸಿ—

"ಅಯ್ಯೋ! ಏನಿದು? ಯಾಕೆ ಹೀಗಾಡುತ್ತೀರಿ....ಕಣ್ಣೀರು!...."

ಎಂದು ತನ್ನ ಕೋಮಲ ಕರದಿಂದ ಅವನ ಕಂಬನಿಯನ್ನೊರಸಿದಳು. ಗೋಪಾಲನು ಗದ್ಗದ ಕಂಠದಿಂದ, ಒಂದು ರೀತಿಯ ಉದ್ವೇಗದಿಂದ ತನ್ನ ಮಾತನ್ನೇ ಮುಂದುವರಿಸಿದನು.

"....ಆದರೆ, ಮಾವನವರು ಇಂದು ಸಿರಿವಂತರಲ್ಲ. ದೇಶಭಕ್ತರಲ್ಲ. ದೇಶದ ಧುರೀಣರಲ್ಲ. ಬಡವರ ಬಂಧುವಲ್ಲ. ಸಮಾಜದಿಂದ, ಸಹೋದ್ಯೋಗಿಗಳಿಂದ, ಸ್ನೇಹಿತರಿಂದ ತುಳಿಯಲ್ಪಟ್ಟು. ನ್ಯಾಯಭರಿತರಾಗಿ ಸಮಾಜದ ಕಣ್ಣಿಗೆ ಮುಳ್ಳಿನಂತೆ ಕಾಣುವ ಮೂಕಿಯೊಬ್ಬಳ ತಂದೆ. ಹಣ್ಣು ಹಣ್ಣು. ಮರದಲ್ಲೇ ಯಿಂದ ಕಡಂಭೂತದ ನನಪೆಯೊಳಗಿಂದ ತಪ್ಪಿಸಿಕೊಂಡು. ತನ್ನ ಮುದ್ದು ಮಗಳಿಗೆ ಯೋಗ್ಯ ವರನೊಬ್ಬನನ್ನು ಹುಡುಕಲಾರದೆ ಚಡಪಡಿಸುತ್ತಿರುವ ತಂದೆ....... ಅಂಥವರಿಗೆ ಯಾರು ಸಹಾಯಕ್ಕೆ ಬರುವರು?....

ಈ ಪ್ರಶ್ನೆಯಲ್ಲಿ ಅವನ ಭಾಷಣ ನಿಂತಿತು. "ಯಾರು? ಯಾರು?" ಎಂಬ ಪ್ರಶ್ನೆಯು ಸುತ್ತ ಸುತ್ತ ಅವನ ಮನವನ್ನು ಕಾಟಿತೊಡಗಿತು.

ಲೇಂಪು ಕುರುಡಾಗತೊಡಗಿತು! ಕುಸುಮೆಯ ದೃಷ್ಟಿ ಅತ್ತಕಡೆ ತಿರುಗಿತು. ಆಕೆ ಅದನ್ನು ಸರಿಮಾಡಹೋದಳು. ಅಷ್ಟರಲ್ಲೇ ಹೊರಗಡೆಯಿಂದ ಬಲವಾದೊಂದು ಬಿರುಗಾಳಿ ಬೀಸಿದಂತಾಯಿತು. ಕಿಟಕಿಯ ಕದಗಳು ಪಟಪಟನೆ ಬಡೆಯಲ್ಪಟ್ಟವು. ಲೇಂಪಿನ ಜ್ಯೋತಿಯು ಒಮ್ಮೆಗೇ ದೊಡ್ಡದಾಗಿ ಮಿಣ್ಣೆಂದು ಹೊಗೆ ಕಾರಿ ನಂದಿಹೋಯಿತು! ಇದನ್ನು ನೋಡುತ್ತ ನಿಂತಿದ್ದ ಎರಡು ಜೀವಗಳ ಎದೆಯಲ್ಲೂ ಢವ ಢವ ಶಬ್ದವಾಗಿ ಕತ್ತಲು ಸಮಯ ನಿಶ್ಶಬ್ದವು ಆ ಕೋಣೆಯನ್ನು ಆವರಿಸಿತು.

"ಕುಸುಮಾ. ಅತ್ತ ಬಾ...." ಕತ್ತಲೆಯಲ್ಲೇ ಗೋಪಾಲ ಮಾತನಾಡಿದನು.

"ಏಕೆ...."

"ನಿನ್ನ ಮನದಲ್ಲಿದ್ದ ಯೋಜನೆಯನ್ನು ಹೇಳು...." ಕುಸುಮೆಗೆ ಆಶ್ಚರ್ಯವಾಯಿತು. ತನ್ನ ಮನದಲ್ಲಿ ಆಗ ತಾನೆ ಹೊಳೆದ ಯೋಜನೆ ಅವನಿಗೆಂತು ತಿಳಿಯಿತೆಂದು ಆಶ್ಚರ್ಯಗೊಂಡಳು. ಮೆಲ್ಲನೆ ಬಳಿಗೆ ಬಂದು "ಹೇಳಲೆ...." ಎಂದಳು.

"ಹೇಳು"

....

"ಏಕೆ ಮೌನವಾದೆ? ನಾನೇ ಹೇಳಬೇಕೆ?"

"ಹೂಂ....

"ಕುಸುಮಾ. ನಿನಗೆ ಒಪ್ಪಿಗೆಯಾದರೆ ನಾನೇ ಪದ್ಮೆಯನ್ನು ..."

"ಹೌದು...." ಎಂದು ಕುಸುಮೆಯು ನಿಲ್ಲಿಸಿಬಿಟ್ಟಳು. ಆಕೆಯ ಕಂಠವು ಗದ್ಗದಿತವಾಯಿತು. ನುಡಿಯು ಹೊರಡಲೊಲ್ಲದು. ಭಾವವು ಬಲಿದು ಬಂತು. ಕಣ್ಣು ತುಂಬಿ ಬಂತು. ಮೌನ! ತನ್ನಯ ಪತಿಯ ದೊಡ್ಡ ಮನಸ್ಸಿನ ಎರು ಆಕೆಗೆ ವಿಕಟದಷ್ಟು ಮೇಲೆಂದರಿತಳು! ಆತನು ಮಾನವರೂಪಿನ ದೇವನೆಂದು ಮನದಲ್ಲೇ "ನನ್ನ ದೇವರಿಗೆ ವಂದನೆಗಳು" ಎಂದಳು. ಅಲ್ಲಿಗೂ ಆಕೆಯ ಮನಸ್ಸಿಗೆ ತೃಪ್ತಿಯಾಗಲಿಲ್ಲ. ಕತ್ತಲು. ಆದರೂ ತಡವರಿಸಿ ತನ್ನ ಸ್ವಾಮಿಯ ಪಾದಗಳನ್ನು ಮುಟ್ಟಿ ಕಣ್ಣುಗಳಿಗೆ ಒತ್ತಿಕೊಂಡಳು.

"ಕುಸುಮಾ. ಏನಿದು? ಕಾಲನ್ನೇಕೆ ಹಿಡಿದೆ. ನನ್ನ ಮಾತು ನಿನಗೆ ಮೆಚ್ಚಿಕೆಯಿಲ್ಲವೇ!...."

"ಅಯ್ಯೋ! ಮೆಚ್ಚಿಕೆಯಿಲ್ಲವೆಂದೆನೆ! ನೀವು ದೇವರು. ದೊಡ್ಡ ಮನಸ್ಸು ಮಾಡಿದಿರಿ....ಆದರೆ...."

"ಆದರೆ ಏನು?"

"ಅತ್ತೆಯವರು ಇದಕ್ಕೆ ಒಪ್ಪುವರೇ?"

ಗೋಪಾಲನ ಸಂಭ್ರಮದ ಮದುವೆಯಾದ ಮರುವರ್ಷವೇ, ಅವನ ತಂದೆ ನಾರಾಯಣರಾಯರು ಮಡಿದಿದ್ದರು. ತಾಯಿ ಜಾನಕೀ ಅಮ್ಮನು ಗೃಹಕೃತ್ಯದ ಸಕಲ ಸೂತ್ರವನ್ನೂ ಹಿಡಿದು, ಮಗ-ಸೊಸೆಯ ದಾಂಪತ್ಯ ಜೀವನದ ಸುಖವನ್ನು ನೋಡಿ, ತನ್ನ ಕಷ್ಟವನ್ನು ಮರೆಯುತ್ತಾ ಬಂದಿದ್ದಳು.

"ಅಮ್ಮನೇ! ಒಪ್ಪುವಳು. ಒಪ್ಪಿಸುವುದು ನನ್ನದ್ದು ಕೆಲಸ. ನಾನಿದ್ದರೂ ಹೇಳಿದ ಯಾವ ಮಾತನ್ನೂ ಆಕೆ ತೆಗೆದು ಹಾಕಿಲ್ಲ. ಇನ್ನೂ ಹಾಗೆಯೇ. ತನ್ನ ಅಣ್ಣನ ಕಷ್ಟ ಆಕೆಯ ಕಷ್ಟವಲ್ಲವೇ"

"ಹಾಗಾದರೆ. ಈಗಲೇ ಅವರನ್ನೆಬ್ಬಿಸಿ ಹೇಳಿಬಿಡುವ"

"ಬೇಡ. ಬೆಳಗಾಗಲಿ. (ಜಾಮಿಟಿಯ ಗಡಿಯಾರವು ಮೂರು ಹೊಡೆದುದು) ಹಾ! ಗಂಟೆ ಮೂರಾಯಿತು. ಈಗ ಮಲಗಿಕೊಳ್ಳುವಾ. ಬೆಳಿಗ್ಗೆ ಅಮ್ಮನಿಗೆ ಹೇಳಿ ಮುಂದಿನ ಕೆಲಸ...."

ಗೋಪಾಲನು ಮಲಗಿಕೊಂಡನು. ಮನಸ್ಸಿಗೊಂದು ದೊಡ್ಡ ಹೊರೆ ತಪ್ಪಿದಂತಾದುದರಿಂದ, ಅವನಿಗೆ ಕೂಡಲೇ ಗಾಢ ನಿದ್ದೆ ಹತ್ತಿತು. ಕುಸುಮೆಯೂ ಒಂದು ಬಗೆಯ ಸಂತೋಷದಿಂದ ತನ್ನ ಹಾಸಿಗೆಯಲ್ಲಿ ಮಲಗಿಕೊಂಡಳು. ಆಕೆಗೂ ನಿದ್ದೆ ಹತ್ತಿತು. ಆ ನಿದ್ದೆಯಲ್ಲಿ ಆಕೆಯೊಂದು ಕನಸು ಕಂಡಳು. ಆ ಕನಸು ಆ ಪತಿ-ಪತ್ನಿಯರ ಯೋಜನೆಯ ನನಸಾಗಿತ್ತು.

"....ಶೃಂಗಾರವಾಗಿ, ಹಸನ್ಮುಖರಾಗಿ ಜಾನಕೀ ಅಮ್ಮನೊಡನೆ ಗೋಪಾಲ ಕುಸುಮೆಯರು ಮುಕ್ತಾಪುರಕ್ಕೆ ಹೋಗಿದ್ದಾರೆ. ಶ್ರೀನಿವಾಸರಾಯರು ಜೀವದ ಬಂದರೇ ಬಂಧುಗಳನ್ನು ಎದಿರುಗೊಂಡರು. ಕುಸುಮೆಯು ಮೊದಲಿಂದು ಉತ್ಸಾಹದಿಂದಲೇ ಒಳಹೊಕ್ಕಳು.

"....ಒಳಗಿನ ಕೋಣೆಯಲ್ಲಿ ಹೊಸ ಪದ್ಮೆಯು ಮದುವಣಗಿತ್ತಿಯಾಗಿ ಕುಳಿತಿದ್ದಳು.

"ಪದ್ಮಾ...."

"ಅಕ್ಕಾ...." ಎಂದು ಪದ್ಮೆಯು ಆಕೆಯೆಡೆ ಧಾವಿಸಿದಳು. ಸೋದರಿಯರು ಒಬ್ಬರನ್ನೊಬ್ಬರು ತಬ್ಬಿ ಮುದ್ದಾಡಿದರು. ಕುಸುಮೆಗೆ ಮಿತಿಯಿಲ್ಲದ ಸಂತೋಷ! ಮೂಕಿಯಾಗಿದ್ದ ತನ್ನ ತಂಗಿಯಿಂದು ಮಾತಿನ ಮುದ್ದಿಯಾದಳೆಂದು ಹರ್ಷ! "ಪದ್ಮಾ, ನಿನಗೆ ಮದುವೆಯಂತೇ....ನಿನ್ನ ತಲೆಯ ಮೇಲೆ ಅಮ್ಮ-ಅಪ್ಪರು ಇಂದು ಅಕ್ಷತೆ ಹಾಕುವರು ನಿನಗೆ....

ಪದ್ಮೆಯು ಅವಳ ಬಾಯಿ ಮುಚ್ಚಿ—"ನಾಕು ನಿನ್ನ ಜೇನ್ನ" ಎಂದವಳೇ ಲಜ್ಜಾಭರಿತಳಾಗಿ ಹಿಂದೆ ಸರಿಯಲ್ಪಟ್ಟು ತನ್ನ ಭಾವೀ ಪತಿಯು ನೆಲದಲ್ಲಿ ಬರೆಯಲ್ಪಟ್ಟಿರುವನೋ ಎಂಬಂತೆ, ನೆಲವನ್ನು ನೋಡುತ್ತ ಬೆಡಗಿನಿಂದ ನಿಂತಳು. ಕುಸುಮೆಯಲ್ಲಿಂದ ಹೊರಗೆ ಬಂದಳು. ಅಲ್ಲಿ, ಅಮ್ಮನೊಡನೆ ಮಾತನಾಡಿದಳು. ಶ್ರೀನಿವಾಸರಾಯರಿಗೆ, ತನ್ನ ಮಗಳ ಹಸುಳೆತನದೊಳ್ಳಾತನವನ್ನು ಕಂಡು, ಸಂತೋಷವಾಯಿತು....ಜಾನಕೀ ಅಮ್ಮನೇ ತನ್ನ ಅಣ್ಣನಿಗೆ ಅವರ ಮನದ ಇಂಗಿತವನ್ನರುಹಿದಳು. ಶ್ರೀನಿವಾಸರಾಯರ ತಲೆಯ ಮೊದ್ದನೊಂದು ಭಾರವು ಇಳಿದಂತಾಯಿತು. ಬಾಡಿದ ಮೋರೆ ಅರಳಿತು. ಅಳಿಯನನ್ನು ದೇವರೆಂದೇ ಭಾವಿಸಿದರು....ಕುಸುಮೆಯ ಸಡಗರ ಹೇಳಿ ತೀರದು. ತೀರಾ ಹೊಸರೀತಿಯ ಮದುವೆ. ಕಾನೂನು ಪ್ರಕಾರ. ಶ್ರೀನಿವಾಸರಾಯರ ನಾಲ್ಕಾರು ಬಂಧುಗಳು ಸ್ನೇಹಿತರು ಬಂದಿದ್ದಾರೆ. "ಬರೆಹ"ದಲ್ಲಿ ಆಗುವ ಕೆಲಸವೆಲ್ಲ ಆಗಿದೆ. ವಧೂವರರು ಹಸೆಯಲ್ಲಿ ಕುಳಿತಿದ್ದಾರೆ. ಬಂದ ಬಂಧುಗಳು ಉಡುಗರೆಯಿತ್ತು ಸೇಸೆಯಿಕ್ಕುತಿದ್ದಾರೆ.

"ಗೋಪೂ: ಗೋಪೂ:....ಕುಸೂ....ಕುಸೂ....ಅಯ್ಯೋ....ಗಂಟೆ ಎಂಟಾಯ್ತಲ್ಲಾ....ಇನ್ನೂ ಮಕ್ಕಳು ಹಾಗೇ ಮಲಗೋದೇ...." ಹೇಳಿದವರು. ಜಾನಕೀ ಅಮ್ಮ!

\+ \+ \+ \+

ಕುಸುಮೆಗೆ ಥಕ್ಕನೆ ಎಚ್ಚರವಾಯ್ತು—ಕನಸಿನ ನೂಲು ಕಡಿದು ಹೋಗಿ! ಪತಿಯನ್ನಲುಗಾಡಿಸಿ ಎಬ್ಬಿಸಿದಳು. ಗೋಪಾಲನೆದ್ದು ಮೋರೆಯೊರಸಿಕೊಂಡು ಹೊರಗೆ ಬಂದನು. ಕಾಫಿ ತಯಾರಾಗಿತ್ತು. ಬೇಗ ಬೇಗನೆ ಮೋರೆ ತೊಳೆದುಕೊಂಡು ಅಡಿಗೆಮನೆ ಸೇರಿದರು. ಜಾನಕೀ ಅಮ್ಮ ಮುದುಕಿಯಾದರೂ ಮನೆ ಕೆಲಸಗಳಲ್ಲಿ ಕಾಫಿ ಮಾಡುವುದನ್ನು ಇನ್ನೂ ಬಿಟ್ಟಿಲ್ಲ. ಅತ್ತೆಗೆ ನೆರವಾಗುವ ಸೊಸೆಯೂ ಅವರಿಗೆ ದೊರೆತಿದ್ದಳು.



ಕಲೆಗಾಗಿ!

(ಲೇಖಕ:—ಶ್ರೀ ಎಚ್. ಎನ್. ಶಣೈ)

ಜಮೀನ್ದಾರರು, ತಮ್ಮೊಡನೆ ಇದ್ದುದನ್ನು ಬಡಬಗ್ಗರಿಗೆ ಹಂಚಿ, ಏಕಾಂಗಿಯಾಗಿ ಜೀವಿಸುತ್ತಿದ್ದರು. ತಾವು ಪಟ್ಟ ಆನಂದವನ್ನು ಕವಿತೆಗಳಲ್ಲಿ ಬಯಲು ಮಾಡುತ್ತಿದ್ದರು. ಪರರನ್ನು ಮೆಚ್ಚಿಸುವುದಕ್ಕಾಗಿ ಅವರು ಕವಿತೆಗಳನ್ನು ರಚಿಸಲಿಲ್ಲ. ಹೊಟ್ಟೆ ಹೊರುವುದಕ್ಕಾಗಿಯೂ ಮಾರಲಿಲ್ಲ. ಅಂತರಾತ್ಮದಿಂದ ಹೊರಸೂಸುತ್ತಿದ್ದುದನ್ನು ಬರೆದಿಟ್ಟರು. ಕೀರ್ತಿಗಾಗಿ ದಾಹಪಟ್ಟವರಲ್ಲ. ಆದರೆ, ಅವರಿಗೆ ಕೀರ್ತಿ ತಾನಾಗಿ ಬಂತು.

ಸಾಯುವ ಮೊದಲು ಅವನು ಬರೇ ಜಮೀನುದಾರನಾಗಿದ್ದನು: ಸತ್ತ ಮೇಲೆ ಅವನು ಹೇಗೆ ಕವಿಯಾದನೆಂಬ ವಿಷಯ ಬಹಳ ಜನರಲ್ಲಿ ಆಶ್ಚರ್ಯವನ್ನುಂಟುಮಾಡಿತು. ಜಮೀನುದಾರರು ವಿಚಿತ್ರ ಜೀವಿಗಳಾಗಿದ್ದರು: ತಮ್ಮ ಜಮೀನಿನ ಉತ್ಪತ್ತಿಯನ್ನು ಬಡಬಗ್ಗರಿಗೆಲ್ಲಾ ಹಂಚಿ ತಾವು ಸಾಮಾನ್ಯ ಆಹಾರವನ್ನೇ ಉಂಡು ಬದುಕಿದ್ದರು. ಬಡಬಗ್ಗರು ಅವರ ಗೌರವಾರ್ಥವಾಗಿ ಅವರ ಹುಟ್ಟು ಹೆಸರನ್ನು ಉಚ್ಚರಿಸದೆ, ಜಮೀನುದಾರರೆಂದೇ ಅವರನ್ನು ಸಂಬೋಧಿಸಿದರು. ಬೇರಾರೂ ಅವರ ಗೋಜಿಗೆ ಹೋಗುತ್ತಿರಲಿಲ್ಲ. ಅಂತೂ ಅವರು ಸಾಯುವಾಗ "ಜಮೀನುದಾರರಾಗಿಯೇ" ಕಣ್ಣುಮುಚ್ಚಿದರು.

ಜಮೀನುದಾರರು ಏಕಾಂಗಿಯಾಗಿಯೇ ಜೀವಿಸುತ್ತಿದ್ದರು. ಸೃಷ್ಟಿ ಸೌಂದರ್ಯವನ್ನು ಪಾನಮಾಡುತ್ತ ತಮ್ಮ ಜೀವನವನ್ನು ಕಳೆಯುತ್ತಿದ್ದರು. ತಾವು ಪಟ್ಟ ಆನಂದವನ್ನು ಕವಿತೆಗಳಲ್ಲಿ ಬಯಲುಮಾಡುತ್ತಿದ್ದರು. ಪರರನ್ನು ಮೆಚ್ಚಿಸುವುದಕ್ಕಾಗಿ ಅವರು ಅಂತಹ ಕವಿತೆಗಳನ್ನು ರಚಿಸುತ್ತಿರಲಿಲ್ಲ. ಹೊಟ್ಟೆ ಹೊರುವುದಕ್ಕಾಗಿಯೂ ಅವರು ಅಂತಹ ಕವಿತೆಗಳನ್ನು ಹೊರಸೂಸುತ್ತಿರಲಿಲ್ಲ. ಅದೆಲ್ಲವೂ, ಅವರ ಅಂತರಾತ್ಮದಿಂದ ಹೊರಡುತ್ತಿತ್ತು. ಕವಿತೆಗಳನ್ನು ರಚಿಸಿ, ಪ್ರಚಾರ ಮಾಡಿ. ತಮ್ಮ ಹೆಸರನ್ನು ಮೆರೆಸಬೇಕೆಂದು ಅವರು ಹಂಬಲಿಸುತ್ತಿರಲಿಲ್ಲ.

ಕೈಯಿಂದ ಬರೆದ ಪ್ರತಿಗಳು ರಾಶಿ ರಾಶಿಯಾಗಿ ಅವರ ಕೊಠಡಿಯ ಮೂಲೆಯಲ್ಲಿ ಬಿದ್ದುಕೊಂಡಿದ್ದುವು. ಅವುಗಳಲ್ಲಿ ಅಡಗಿರುವ ಬೆಳಕು ಜಡ ಜಗತ್ತಿಗೆ ಗೋಚರವಾಗಲಿಲ್ಲ. ಅವರು ಒಮ್ಮೊಮ್ಮೆ ತಮ್ಮ ಬಾಲ್ಯದ ಸ್ಮರಣೆಯನ್ನು ಮಾಡುವುದಕ್ಕೋಸ್ಕರ, ತಾನು ಮೊದಲು ರಚಿಸಿದ ಕವಿತೆಗಳನ್ನು ಹುಡುಕಿ ತೆಗೆದು ಓದುತ್ತಿದ್ದರು. ಒಮ್ಮೊಮ್ಮೆ ನಡುರಾತ್ರಿ ದಾಟಿದರೂ ಕೊಠಡಿಯ ದೀಪಿಗೆಯು ಉರಿಯುತ್ತಲೇ ಇತ್ತು. ಹಾಗೆ ಸಿಂಹಾವಲೋಕನ ಮಾಡುತ್ತಿರುವುದರಿಂದ ಅವರಿಗೆ ಅತ್ಯಾನಂದವಾಗುತ್ತಿತ್ತು.

ಒಮ್ಮೊಮ್ಮೆ ಕವಿತೆ ಬರೆಯುವುದರಲ್ಲಿ ಮುಳುಗಿದ್ದರೆ, ತಿಂಡಿ ತೀರ್ಥ ತೆಗೆದುಕೊಳ್ಳುವುದಕ್ಕೂ ಮರೆಯುತ್ತಿದ್ದರು. ಅಷ್ಟು ಏಕಾಗ್ರತೆ! ಪ್ರಪಂಚದ ಸಮಸ್ಯೆಗಳು, ಪ್ರಪಂಚದ ಗೊಂದಲಗಳು, ಪ್ರಪಂಚದ ಸುಂದರ ದೃಶ್ಯಗಳು ಅವರ ಭಾವನೆಯಲ್ಲಿ ಒಂದಾಗಿ, ಅವರ ಕವಿತೆಗಳಲ್ಲಿ ಪ್ರತಿರೂಪವನ್ನು ಮೂಡಿಸಿದ್ದುವು.

ಜಮೀನುದಾರರು, ಕವಿತೆ ಬರೆಯುವುದರಲ್ಲಿ ಯೌವನವನ್ನು ಕಳೆದು, ವೃದ್ಧಾಪ್ಯಕ್ಕೆ ಕಾಲಿಟ್ಟರು. ಆಗಲೂ ಕವಿತೆ ಬರೆಯುವ ಅಭ್ಯಾಸ ಅವರ ಬೆನ್ನು ಬಿಡಲಿಲ್ಲ. ಅವರಿನ್ನೂ, ಬರೆಯುತ್ತಲೇ ಇದ್ದರು - ಏಕೆ, ಏನು ಬರೆಯುತ್ತಿದ್ದರೆಂಬುದು ಒಬ್ಬರಿಗೂ ಗೊತ್ತಿರಲಿಲ್ಲ.

ಒಂದು ದಿನ ಬರೆದುದನ್ನು ಓದುತ್ತ ಇರುವಾಗಲೇ, ಜಮೀನುದಾರರು ಕಣ್ಣುಮುಚ್ಚಿದರು. ಪ್ರಪಂಚದ ಪಾಲಿಗೆ ಅವರು ಸಾಮಾನ್ಯ ಮನುಷ್ಯರಾಗಿದ್ದರು - ಕವಿಗಳಾಗಿರಲಿಲ್ಲ - ಅವರ ಹೆಸರು ಯಾರ ಬಾಯಿಯಲ್ಲಿಯೂ ನಲಿಯುತ್ತಿರಲಿಲ್ಲ. ಅವರು ಸತ್ತಾಗ ಯಾರೂ ಅತ್ತು ಕಣ್ಣು ಕೆಂಪುಮಾಡಿಕೊಳ್ಳಲಿಲ್ಲ. ಯಾರೂ ಅವರ ಗುಣಕಥನ ಮಾಡಲಿಲ್ಲ. ಜಮೀನುದಾರರ ಕೈಯಿಂದ ಉಪ್ಪನ್ನ ತಿಂದು, ಅವರ ನೆನಪಿಟ್ಟುಕೊಂಡ ಬಡಬಗ್ಗರು, ಕೆಲವರು "ಪುಣ್ಯಾತ್ಮರು ತೀರಿಕೊಂಡರು" ಎಂದು ಮರುಗಿದರು: ಅಷ್ಟೆ! ದೂರದ ಸಂಬಂಧಿಕರು, ಜಮೀನಿನ ಆಸೆಗಾಗಿ ಆಪ್ತ ಸಂಬಂಧಿಕರಾಗಿ ಬಂದು ಜಮೀನುದಾರರ ಶವಸಂಸ್ಕಾರ ಮಾಡಿದರು. "ಏನೋ ಹಿಂದಿನ ಜನ್ಮದ ಕರ್ಮದ ಫಲವಾಗಿ ಈ ಪ್ರಾಣಿಗೆ ಈ ಗತಿ ಬಂದು. ತಲೆ ಸ್ವಲ್ಪ ಕೆಟ್ಟು ಹೋಗಿತ್ತು---ಇಲ್ಲದಿದ್ದರೆ ಅರಸನಂತೆ ಮೆರೆಯಬಹುದಿತ್ತು" ಎಂದು ಅವರು ತಮ್ಮ ಅಭಿಪ್ರಾಯವನ್ನು ಸೂಚಿಸಿದರು.

\+ + + + + +

ಜಮೀನುದಾರರು ತೀರಿಹೋದ ಕೆಲವು ವರ್ಷಗಳಲ್ಲಿ ತರುಣನೊಬ್ಬನು ಬಂದು ಈ ಕವಿಗಳು ಬರೆದಿಟ್ಟ, ಕವಿತೆಗಳನ್ನು ತೆಗೆದುಕೊಂಡು ಪ್ರಕಟಗೊಳಿಸಿದನು. ಜಮೀನುದಾರರು ಆಶ್ರಯಕೊಟ್ಟವರಲ್ಲಿ, ಈ ತರುಣನು ಒಬ್ಬನಾಗಿದ್ದನೆಂದು ಅವನು ಪ್ರಚಾರಮಾಡಿದ ಪುಸ್ತಕದಿಂದ ತಿಳಿದುಬಂತು.

ಜಗತ್ತಿಗೆ ಈ ಕವಿತೆಗಳು ಬಹು ಸೊಗಸಾಗಿ ಕಂಡುವು. ಕವಿತೆಗಳನ್ನು ರಚಿಸಿದ ಕವಿಯನ್ನು ನೋಡಬೇಕೆಂದು ಎಷ್ಟೋ ಜನರಿಗೆ ಆಸೆಯಾಗಿತ್ತು! ಆದರೆ ಆ ದಿವ್ಯ ಜ್ಯೋತಿಯೆಲ್ಲಿ? ಜಗತ್ತು ಅವರನ್ನು ನೋಡದಿದ್ದರೂ ಅವರ ಆತ್ಮವನ್ನು ನೋಡಿತು.

ಕಾಫಿ ಕುಡಿಯುತ್ತಿರುವಾಗ ಗೋಪಾಲನು ಆ ಮಾತು ಈ ಮಾತು ಹಾಕಿ. ಮಾವನ ಕಾಗದ, ಅವರ ಇಂದಿನ ದುಸ್ಥಿತಿ, ಅವರ ಆಸೆ....ಕೊನೆಯಲ್ಲಿ ತಮ್ಮ ನಿರ್ಧಾರಗಳನ್ನು ಹೇಳುತ್ತಾ' "ಅಮ್ಮಾ! ಮತ್ತೇನು ಮಾಡುವುದು. ನೀನೇ ಯೋಚಿಸಿ ಹೇಳು....ಹಾಗೇ ಆಗದೇ?"

"ಹೌದು ಮಗಾ! ಅಣ್ಣನ ಸ್ಥಿತಿ ಯಾರಿಗೆ ಬೇಕು. ಹೇಗಾದರೂ ನನ್ನವರನ್ನು ಬಿಡುವುದಕ್ಕೆ ನಾನು ಹೇಳಿಯೇನೇ....ಆದರೆ ಅದು ನಿಮಗೆಲ್ಲ ಆದರೆ ನನಗೂ ಆದೀತು. ಕುಸುಮೆಯು ತಂಗಿಯೇ. ಕುಸುಮೆಗಾದರೆ ಸೌಖ್ಯವಾಗಿದ್ದಾರು. ಹಾಗಾದರೂ ಆಗಿ ಒಬ್ಬ ಚಿಣ್ಣನನ್ನು ಬೇಗ ಪಡೆ. ಮೊಮ್ಮಗರಿಗೆ ಮುಂಜಿ ಮಾಡಿಸಿ ಕಣ್ಣು ಮುಚ್ಚಿ ಅವರ ಪಾದ ಸೇರಿದರೆ ಸಾಕು....ಆಗಲಿ....ಎಲ್ಲವೂ ದೈವಸಂಕಲ್ಪವಿದ್ದಂತಾಗಲಿ...."

ಅಷ್ಟರಲ್ಲಿ ಹೊರಗಿನಿಂದ—"ರಾಯರೇ! ರಾಯರೇ!" ಕೇಳಿಸಿತು. ಗೋಪಾಲ ಕುಸುಮೆಯರು ಕಾಫಿ ಕುಡಿಯುವುದನ್ನು ಅಲ್ಲೇ ನಿಲ್ಲಿಸಿ ಹೊರಗೆ ಬಂದರು. ಟೆಲಿಗ್ರಾಫ್ ಪೇದೆಯು ಕೈಯ್ಯಲ್ಲಿ ಒಂದು ಕವರು ಹಿಡಿದು ನಿಂತಿದ್ದ. ಗೋಪಾಲನು ತನ್ನ ಸಹಿಕೊಟ್ಟು ಅದನ್ನು ಪಡಕೊಂಡು ಓದತೊಡಗಿದನು. ತಂತಿಯೊಂದೊಡನೆ ಕುಸುಮೆಯ ಎದೆ ಬಡೆಯತೊಡಗಿತು.

"ಪದ್ಮನಿಗೆ ವಿಪರೀತ ಕಾಹಿಲೆ"

—ಎಂದು ಓದಿದವನೇ ಕುಳಿತುಬಿಟ್ಟ. ಕುಸುಮೆಯು, ಅವನ ಕೈಯಿಂದ 'ತಂತಿ' ಯನ್ನೆಳೆದು ಓದಿ, ದಂಗುಬಡಿದವಳಂತೆ ಕುಳಿತಳು! ಈ ಹತಭಾಗಿನಿಯು, ಭಾಗ್ಯೋದಯವಾಗುವಾಗಲೇ ತನ್ನ ಇಹದ ಜೀವನದ ಅಸ್ತಮಾನ ಕಾಣುವಳೇ ಇಬ್ಬರೂ ಎದ್ದರು.

\+ + + +

ಪದ್ಮೆಯು ಶಯ್ಯಾಗ್ರಸ್ತಳಾಗಿದ್ದಳು! ಮೂಕಿ—ಮಾತು ಹೊರಡದು! ಅಸ್ಪಷ್ಟ—ಮೈಯೂ ಅಲುಗಾಡುತ್ತಿದ್ದಿಲ್ಲ! ಕಣ್ಣುಗಳನ್ನು ಮುಚ್ಚಿ ನಿರ್ಜೀವಳಾಗಿ ಬಿದ್ದಿದ್ದಳು! ಪ್ರಾಣವಿದೆಯೆಂದು ಸೂಚಿಸಲು ಎದೆಯು ಮಾತ್ರ ವೇಗವಾಗಿ ಬಡಿದುಕೊಳ್ಳುತ್ತಿತ್ತು.

"ಪದ್ಮಾ!"—ಅಕ್ಕ, ಮೆಲ್ಲನೆ ಕೂಗಿದಳು.

"ಪದ್ಮಾ!"—ಗೋಪಾಲನು ಕರೆದ. ಪದ್ಮೆ ಫಕ್ಕನೆ ಕಣ್ತೆರೆದಳು.

ಪದ್ಮೆಗೆ ಕೇಳಿಸಿತೇ?

"ಪದ್ಮಾ! ನನ್ನ ಮುಖವನ್ನು ನೋಡು. ನಾನು ನಿನಗಾಗಿ ಬಂದಿರುವೆನು!"

ಪದ್ಮೆಯ ಕಣ್ಣುಗಳು ವಿಶಾಲವಾಗಿ ತೆರೆದುಕೊಂಡುವು. ಪ್ರಪಂಚದಲ್ಲಿ ತಾನು ಯಾರಿಗೂ ಬೇಡವಾದ ವಸ್ತುವಲ್ಲ—ಎಂದು ಆಕೆಗನಿಸಿತೇ?

"ಪದ್ಮಾ!....ನೀನೇಕೆ ಹೀಗಾದೆ?"

ಪದ್ಮೆಯ ಕಣ್ಣುಗಳಲ್ಲಿ ಒಂದು ತೊಟ್ಟು ನೀರು ಕಾಣಿಸಿಕೊಂಡಿತು.

"ಪದ್ಮಾ! ನಿನ್ನನ್ನು ನಾನು ವರಿಸುವುದಾದರೆ ಒಪ್ಪುವಿಯಾ?"

ಪದ್ಮೆ, ಫಕ್ಕನೆ ಎದ್ದು ಕುಳಿತಳು. ಅವಳ ಕಣ್ಣುಗಳಿಂದ ಧಾರಾವಾಹಿಯಾಗಿ ನೀರಿಳಿಯುತ್ತಿತ್ತು!

"ಪದ್ಮಾ! ಉದ್ರೇಕಗೊಳ್ಳಬೇಡ!" ಗೋಪಾಲನು ಮೆಲ್ಲನೆ ಉಸುರಿದನು.

ಪದ್ಮೆಯ ಬಾಯಿಂದ ಮಾತುಗಳು ಹೊರಟವು—"ನಾನು ಕೃತಜ್ಞಳು!"

ಹಿಂದೂದೇಶದಲ್ಲಿ ಕಾಫಿಯ ಬೆಳೆ

ಅದರ ಪೂರ್ವಚರಿತ್ರೆ.

"ಬಾಬಾಬುಡಾನ್" ಸಾಹೇಬರು ತಂದ ಏಳು ಕಾಳುಗಳ ರಮ್ಯ ಕಥೆ.



ಒಂದು ಕಾಫಿ ತೋಟದ ಚಿತ್ರ. ಇಳಿಜಾರಾದ ಸ್ಥಳದಲ್ಲಿ, ಮರಗಳ ನೆರಳಲ್ಲಿ. ಕಾಫಿ ಗಿಡಗಳನ್ನು ನೆಟ್ಟುದನ್ನು ಇಲ್ಲಿ ಕಾಣಿಸಲಾಗಿದೆ.

ಹಿಂದೂದೇಶದಲ್ಲಿ ಕಾಫಿಯು ಪ್ರಚಾರಕ್ಕೆ ಬಂದ ಕತೆಯು ತುಂಬಾ ಸ್ವಾರಸ್ಯವಾಗಿದೆ. ಕ್ರಿಸ್ತಶಕ 1600ರಲ್ಲಿ ಬಾಬಾ ಬುಡಾನ ಸಾಹೇಬರು, ನಂಬಿಕೆಗೆ ಯೋಗ್ಯರಾದ ಕೆಲವು ಅನುಯಾಯಿಗಳೊಡನೆ ಮೈಸೂರು ಚಂದ್ರಗಿರಿ ದುರ್ಗದಲ್ಲಿ ಹಾವಳಿ ನಡೆಸುತ್ತಿದ್ದ ಚೋರಶಿಖಾಮಣಿಯ ನಿಗ್ರಹಕ್ಕಾಗಿ ಧಾವಿಸಿದರು. ಪೊಲಿಗರ್ ಎಂಬುದಾಗಿ ಈ ಹಾದಿಬಡಕ ಕಳ್ಳನನ್ನು ಕರೆಯುತ್ತಿದ್ದರು. ದೇಶದ ಪ್ರಜೆಗಳನ್ನು ಸುಲಿಯುವುದೇ ಪೊಲಿಗರನ ದಿನಚರಿ. ಬಾಬಾ ಬುಡಾನ ಸಾಹೇಬರ ಪ್ರಚಂಡ ಸಾಹಸದಿಂದ ಪೊಲಿಗರ್ ಮತ್ತು ಅವನ ಅನುಚರರೆಲ್ಲ ಸಂಪೂರ್ಣ ನಾಶವಾದರು. ಬುಡಾನರು ಮಾತ್ರ ತಾನು ಮೆಕ್ಕಾ ಪಟ್ಟಣಕ್ಕೆ ಯಾತ್ರಾರ್ಥಿಯಾಗಿ ಹೋಗಿಬರುವೆನೆಂದು ಚಂದ್ರಗಿರಿಯ ಪರ್ವತ ಗುಹೆಯಲ್ಲಿ ಮಾಯವಾದರು. ಅವರ ಅನುಚರರೆಲ್ಲ (ಹಿಂದೂಗಳು ಮತ್ತು ಮುಸಲ್ಮಾನರು) ಗುಹೆಯ ಹೊರಗೆ ಹಲವು ತಿಂಗಳುಗಳ ಕಾಲ ತಮ್ಮ ಗುರುವಿನ ಆಗಮನವನ್ನು ನಿರೀಕ್ಷಿಸಿ ಕುಳಿತರು. ಅದೊಂದು ದಿನ ಬುಡಾನರ ಕಳ್ಳ ದೇಹವು ಗುಹೆಯ ಒಳದ್ವಾರದಲ್ಲಿ ಕಾಣಿಸಿತು. "ಸಹೋದರರೇ, ಪವಿತ್ರ ಭೂಮಿಯಿಂದ ನಿಮಗಾಗಿ ಏಳು ಕಾಳುಗಳನ್ನು ತಂದಿರುತ್ತೇನೆ. ಈ ಬೀಜಗಳು ವೃಕ್ಷವಾಗಿ ಬೆಳೆದುವೆಂದರೆ ನಿಮಗೆ ಆಹಾರ ಪಾನೀಯಗಳು ಸಮೃದ್ಧವಾಗುವವು' ಎಂದು ಬಾಬಾ ಬುಡಾನ ಸಾಹೇಬರು ತಾನು ಮೆಕ್ಕಾದಿಂದ ತಂದ ಏಳು ಬೀಜಗಳನ್ನು ತನ್ನ ಅನುವರ್ತಿಗಳ ಮುಂದೆ ತೋರಿಸಿದರು. ಬೀಜಗಳನ್ನು ಚಂದ್ರಗಿರಿ ಪರ್ವತ ಪ್ರದೇಶದಲ್ಲೇ ಬಿತ್ತಿದರು. ಅಂದಿನಿಂದ ಆ ಪರ್ವತಕ್ಕೆ ಬಾಬಾ ಬುಡಾನಗಿರಿ ಎಂಬುದಾಗಿ ಹೆಸರಾಯಿತು. ಕಾಫಿಯ ಬೆಳೆಯು ಹಿಂದೂದೇಶದಲ್ಲಿ ಆರಂಭವಾಗಲು ಕಾರಣ ಕರ್ತರು ಬಾಬಾ ಬುಡಾನ ಸಾಹೇಬರು.

ಬ್ರೆಜೀಲ್ ಮತ್ತು ಡಚ್ ಈಸ್ಟ್ ಇಂಡೀಸುಗಳಿಗೆ ಕಾಫಿ ಗಿಡಗಳು ಹಿಂದೂದೇಶದಿಂದ ರವಾನೆಯಾದುವು

ಡಚ್ ಈಸ್ಟ್ ಇಂಡೀಸ್ ಮತ್ತು ಬ್ರೆಜೀಲ್ ಈ ಎರಡು ಕಡೆಗಳಲ್ಲಿ ಕಾಫಿ ಬೆಳೆಯು ಆರಂಭವಾಗಲು ಬಾಬಾ ಬುಡಾನರೇ ಕಾರಣರೆನ್ನಬಹುದು. ಚಂದ್ರಗಿರಿಯಲ್ಲಿ ಬಿತ್ತಿದ ಬೀಜಗಳು ಕೊಂಚ ಕಾಲದಲ್ಲಿ ಗಿಡವಾದುವು. ಕೆಲವು ಗಿಡಗಳನ್ನು ಡಚ್ ಈಸ್ಟ್ ಇಂಡೀಸ್ ಮತ್ತು ಬ್ರೆಜೀಲ್ ರಾಜ್ಯಗಳಿಗೆ ರವಾನಿಸಿದರು. ಡಚ್ ಈಸ್ಟ್ ಇಂಡೀಸ್ ದ್ವೀಪಗಳಿಗೆ 1696ರಲ್ಲಿ ಕಣ್ಣಾನೂರಿನಿಂದ ಕಾಫಿ ಗಿಡಗಳು ಹಡಗುಗಳಲ್ಲಿ ಸಾಗಿಸಲ್ಪಟ್ಟುವು. ಇಂಡೀಸ್ ದ್ವೀಪಗಳಲ್ಲಿ ಮೊದಲು ನೆಟ್ಟ ಗಿಡಗಳನ್ನು ನೆರೆಯು ಕೊಚ್ಚಿಕೊಂಡು ಹೋದುದರಿಂದ ಮೂರು ವರ್ಷಗಳ ನಂತರ ಪುನಃ ಹೊಸ ಗಿಡಗಳನ್ನು ಅಲ್ಲಿಗೆ ರವಾನೆ ಮಾಡಿದರು. ಈ ಗಿಡಗಳ ಸಂತಾನ ವೃಕ್ಷಗಳೇ ಇಂದು ನಾವು 'ಎರೆಬಿಕಾ' ಎಂದು ಕರೆಯುವ ಇಂಡೀಸ್ ಕಾಫಿಯ ಫಲವೃಕ್ಷಗಳಾಗಿವೆ. 1750ನೇ ಇಸವಿಯಲ್ಲಿ ಗೋವಾದಿಂದ ರಿಯೋಡಿ ಜೆನೈರೊ ನಗರಕ್ಕೆ ಸಾಗಿಸಲ್ಪಟ್ಟ ಹಿಂದೂದೇಶದ ಕಾಫಿ ಗಿಡಗಳು, ಬ್ರೆಜೀಲಿನಲ್ಲಿ ಕಾಫಿ ಬೆಳೆಯು ಆರಂಭವಾಗಲು ಕಾರಣವಾದುವು.

ಹಿಂದೂದೇಶದಲ್ಲಿ ಕಾಫಿಯ ಅಭಿವೃದ್ಧಿ

ಆರಂಭದ ಎರಡು ಶತಮಾನಗಳ ತನಕ ಕಾಫಿ ಬೆಳೆಯು ಮಂದಗತಿಯಿಂದ ಸಾಗುತ್ತಿತ್ತು. ವಾಣಿಜ್ಯ ದೃಷ್ಟಿಯಲ್ಲಿ ಕಾಫಿಗೆ ಹೆಚ್ಚಿನ ಮಹತ್ವವಿದೆಯೆಂಬುದು ಬೆಳಕಿಗೆ ಬಂದುದು 1799ರಲ್ಲಿ. ಈಸ್ಟ್ ಇಂಡಿಯಾ ಕಂಪೆನಿಯವರು ವ್ಯಾಪಾರಕ್ಕಾಗಿ ಕಾಫಿ ಬೆಳೆಸಲಾರಂಭಿಸಿದರು. ಪರೀಕ್ಷೆಗಾಗಿ, ತಲಚೇರಿಯಲ್ಲಿ ಕಾಫಿ ಬೆಳೆಯ ಆರಂಭವಾಯಿತು. ಅಂದು ಮೊದಲ್ಗೊಂಡು ದಕ್ಷಿಣ ಹಿಂದೂಸ್ಥಾನದ ಘಟ್ಟ ಪ್ರದೇಶಗಳಲ್ಲಿ ನೂರಾರು ಕಾಫಿ ತೋಟಗಳು ತಲೆದೋರಿದುವು. ಒಂದು ಶತಮಾನದ ಅಲ್ಪಾವಧಿಯೊಳಗೆ, ಸಾವಿರಾರು ಎಕ್ರೆ ಅರಣ್ಯ ಪ್ರದೇಶವೆಲ್ಲ ಮಾಯವಾಗಿ ಮನೋಹರ ಕಾಫಿ ತೋಟಗಳು ಕಂಗೊಳಿಸತೊಡಗಿದುವು. 1872ನೇ ವರ್ಷದ ಆರಂಭದೊಳಗೆ 25,000 ಟನ್ನುಗಳಷ್ಟು ಕಾಫಿಯನ್ನು ಪರದೇಶಗಳಿಗೆ ರಫ್ತು ಮಾಡಲು ಹಿಂದೂದೇಶವು ಸಮರ್ಥವಾಯಿತು.

ಪುನಃ ಇಳಿತ


ಹಿಂದೂದೇಶವು ಅಭಿವೃದ್ಧಿಗೊಳ್ಳಲು ಆರಂಭವಾದ ಕಾಫಿ ಉತ್ಪತ್ತಿಯಲ್ಲಿ ನಡುವೆ ಒಮ್ಮೆ ಇಳಿತವು ಕಂಡುಬಂತು. 'ಹೆಮಿಲೀಯಿಯಾ ವೆಸ್ಟಾಟ್ರಿಕ್ಸ್' ಎಂಬ ರೋಗವು ಜಾಡ್ಯವು ಕಾಫಿ ಗಿಡಗಳಿಗೆ ತಗಲಿ ಬೆಳೆಯು ನಾಶವಾಯಿತು. ಜೊತೆಗೆ ಪರದೇಶದವರು ಕಾಫಿ ದರಗಳಲ್ಲಿ ಸ್ಪರ್ಧೆ ನಡೆಸಲಾರಂಭಿಸಿದುದರಿಂದ ಹಿಂದೂದೇಶದಲ್ಲಿ ಕಾಫೀ ಕೈಗಾರಿಕೆಯು ಅವನತಿ ಹೊಂದಿತು.

ಉತ್ಪತ್ತಿಯಾಗುವ ಸ್ಥಳ ಮತ್ತು ಸ್ಥಳದ ವಿಸ್ತೀರ್ಣ

ಕಾಫಿ ಬೆಳೆಸಲು ದಕ್ಷಿಣ ಹಿಂದೂಸ್ಥಾನದಲ್ಲಿರುವ ಪರ್ವತ ಪ್ರದೇಶಗಳಷ್ಟು ಅನುಕೂಲ ಸ್ಥಳವು ಭೂಲೋಕದಲ್ಲಿ ಬೇರೊಂದಿಲ್ಲ. ಉನ್ನತ ಪ್ರದೇಶ, ಸೂರ್ಯ ಕಿರಣಗಳಿಗೆ ಮುಖಮಾಡಿಕೊಂಡಿರುವ ಇಳುಕಲು, ಉಷ್ಣವಲಯದ ರವಿಕಿರಣಗಳು, ಯಥೇಷ್ಟ ಮಳೆ, ಕಾಡಿನ ರಸವತ್ತಾದ ಮಣ್ಣು ಇವೆಲ್ಲ ಇಲ್ಲಿಯ ಕಾಫಿ ಬೆಳೆಗೆ ಅನುಕೂಲವಾಗಿವೆ. ದಕ್ಷಿಣ ಹಿಂದೂದೇಶದ ಕಾಫಿಯು ಅತ್ಯಂತ ರುಚಿಕರವಿದೆಯೆಂದು ಜನರೆಲ್ಲ ಬಾಯಿತುಂಬಾ ಹೊಗಳುತ್ತಾರೆ. ಮೈಸೂರು ಸಂಸ್ಥಾನದೊಳಗಿನ ಬಾಬಾ ಬುಡಾನಗಿರಿ, ಕೊಪ್ಪಾ ಮತ್ತು ಮೂಡಿಗೆರೆ ಈ ಕಡೆಯ ಕಾಫಿ ತೋಟಗಳು ಬಹಳ ಪ್ರಸಿದ್ಧಿ ಹೊಂದಿವೆ. ಮದ್ರಾಸು ಆಧಿಪತ್ಯದಲ್ಲಿ ಕಾಫಿ ಬೆಳೆಯುವ ತೋಟಗಳು ನೀಲಗಿರಿ, ನೆಡುವಟ್ಟಮ್, ಶೆಲ್‌ವರ್ರ್ಯೊ, ಅನ್ನಾಮಲ ಮತ್ತು ಪಳ್ನಿ ಈ ಕಡೆಗಳಲ್ಲಿವೆ. ತಿರುವಾಂಕೂರು ರಾಜ್ಯದಲ್ಲಿ ಕನ್ನನ್ ದೇವನ್ ಕಾಫಿ ತೋಟವು ಪ್ರಸಿದ್ಧಿ ಪಡೆದಿದೆ. ಇವುಗಳಲ್ಲದೆ ಬಿಲ್ಲಗಿರಿ ಮತ್ತು ನೆಲ್ಲಿಯಮ್ ಪಾತಿ ಎಂಬಲ್ಲಿಯೂ ಕಾಫಿತೋಟಗಳಿವೆ. ಉತ್ತರ ಮತ್ತು ದಕ್ಷಿಣ ಕೊಡಗು, ವಾಯ್‌ನಾಡು ಇಲ್ಲಿಯೂ ಕಾಫಿಯನ್ನು ಬೆಳೆಸುತ್ತಾರೆ. ದಕ್ಷಿಣ ಹಿಂದೂಸ್ಥಾನದಲ್ಲಿ ಕಾಫಿ ಬೆಳೆಸುವ ಪ್ರದೇಶಗಳಲ್ಲ $\frac{1}{2}$ ಭಾಗವು ಮೈಸೂರು ಸಂಸ್ಥಾನದಲ್ಲಿಯೂ $\frac{1}{4}$ ಅಂಶವು ಮದ್ರಾಸು ಆಧಿಪತ್ಯದಲ್ಲಿಯೂ $\frac{1}{8}$ನೆಯದು ಕೊಡಗಿನಲ್ಲಿಯೂ ಉಳಿದುದು ತಿರುವಾಂಕೂರು. ಕೊಚ್ಚಿ ಸಂಸ್ಥಾನಗಳಲ್ಲಿಯೂ ಹರಡಿಕೊಂಡಿದೆ.

ಬೇರೆ ಬೇರೆ ತರಗತಿಯ ಕಾಫಿ ಬೀಜ

ದಕ್ಷಿಣ ಹಿಂದೂಸ್ಥಾನದಲ್ಲಿ ಉತ್ಪತ್ತಿಯಾಗುವ ಕಾಫಿಯಲ್ಲಿ ಅರಬಿಕಾ ಕಾಫಿ. ರೊಬಸ್ಟಾ ಕಾಫಿ, ಲಿಬರಿಕಾ ಕಾಫಿ ಎಂಬ ಮೂರು ಮುಖ್ಯ ತರಗತಿಯ ಕಾಫಿಬೀಜಗಳಿವೆ. ಇವುಗಳಲ್ಲಿ ಅರಬಿಕಾ ಕಾಫಿಯು ಅತ್ಯಂತ ಪ್ರಸಿದ್ಧವಾದುದು. ಬಾಬಾ ಬುಡಾನ ಸಾಹೇಬರು ಅರೇಬಿಯಾದಿಂದ ತಂದ ಕಾಫಿ ಬೀಜಕ್ಕೆ ಈ ತರಗತಿಯ ಕಾಫಿಯು ಸರಿಹೋಲುತ್ತದೆ. ಹಿಂದೂದೇಶದಲ್ಲಿ ಬೆಳೆಸಲ್ಪಡುವ ಕಾಫಿಯಲ್ಲಿ 90% ಕಾಫಿಯು ಈ ತರಗತಿಯದಾಗಿರುತ್ತದೆ. ರೊಬಸ್ಟಾ ಕಾಫಿ ಗಿಡಗಳನ್ನು 1910ರಲ್ಲಿ ಜಾವಾ ದ್ವೀಪಗಳಿಂದ ಹಿಂದೂದೇಶಕ್ಕೆ ತಂದರು. ಹಿಂದೂದೇಶದ ಕಾಫಿ ಉತ್ಪತ್ತಿಯಲ್ಲಿ ಈ ತರಗತಿಯ ಕಾಫಿಯು ಬರೇ 10% ಮಾತ್ರ. ಅರೆಬಿಕಾ ಕಾಫಿಯಲ್ಲಿ 'ಚಿಕ್'. 'ಕೂರ್ಗ್' ಮತ್ತು 'ಕೆಂಟ್' ಎಂಬ



ಕಾಫಿಬೀಜಗಳನ್ನು ಒಣಗಿಸಿ, ಶುದ್ಧಪಡಿಸಿ, ವಿಂಗಡಿಸುವ ವಿಶಾಲವಾದ ಅಂಗಳಗಳು.

ಗ್ರಹಸಹಾಯವೂ ವಾಣಿಜ್ಯವೂ

(ಲೇಖಕರು: ಶ್ರೀ ಎನ್. ಸುಬ್ರಾಯನ್, ಸಾಹಿತ್ಯ ಶಿರೋಮಣಿ, ವಿದ್ವಾನ್)

> ಗ್ರಹಾಣಾಂ ಚರಿತಂ ಸ್ವಪ್ನೋ ।
> ನಿಮಿತ್ತೌತ್ಪಾತಿಕಂ ತಥಾ ॥
> ಫಲಂತಿ ಕಾಕ ತಾಲೀಯಂ ।
> ತೇಭ್ಯ ಪ್ರಾಜ್ಞಾ ನ ಬಿಭ್ಯತಿ ॥

ಗ್ರಹಚಾರ ಫಲ, ಸ್ವಪ್ನ ಫಲ, ಶಕುನ ಫಲ, ಉತ್ಪಾದಕ ಫಲ ಇವುಗಳು ಕಾಕ ತಾಲೀಯ ನ್ಯಾಯದಂತೆ ಫಲಿಸುವವು. ಅವುಗಳಿಗೆ ಪ್ರಾಜ್ಞರು ಬೆದರರು ಎಂಬುದು ಈ ಪದ್ಯದ ಸಾರ. ಮನುಷ್ಯನು ಪ್ರಕೃತಿಯನ್ನು ಹೊಂದಿರುವ ಜೀವಿ. ಗ್ರಹಗಳೂ ಪ್ರಕೃತಿ ಸಂಬದ್ಧಗಳು. ಲೋಕದ ಸಕಲ ವಸ್ತುಗಳನ್ನು ತನ್ನೆಡೆಗೆ ಬೇಕಾದಂತೆ ಉಪಯೋಗಿಸಿಕೊಳ್ಳುವುದು ಮಾನವನ ಕರ್ತವ್ಯ. ಪೃಥ್ವಿಯು ಗೋಲರೂಪವಾದುದು. ರವಿಯು ಅದನ್ನು ತನ್ನೆಡೆಗೆ ಒಲಿದು ತಿರುಗುವಂತೆ ಮಾಡುತ್ತಾನೆ. ಇತರ ಗ್ರಹರೂ ಸೂರ್ಯನ ಪ್ರಭಾವದಿಂದ ಅವನ ಕಡೆಗೆ ಒಲಿಯುವುದನ್ನು ಬಿಟ್ಟಿಲ್ಲ. ಈ ರೀತಿಯಿಂದ ಗೋಳಗಳು ಇಲ್ಲದೆ ಗ್ರಹಗಳ ಚಲನವಲನವಿದೆ. ಇದು ಅವುಗಳ ಪ್ರಕೃತಿ ಸಂಬಂಧ. ಜೋಯಿಸನು ಫಲವನ್ನಾದರೂ ಪ್ರಕೃತಿಯಲ್ಲಿ ಸೇರಿದ ಗ್ರಹಗಳ ಮೂಲಕ ಹೇಳುತ್ತಾನೆ. ವಿಜ್ಞಾನದಲ್ಲಿ ಸೇರಿದುದು ಗೋಲಶಾಸ್ತ್ರ. ಅವುಗಳ ಮಹತ್ವವನ್ನು ತಿಳಿದು ಜೋಯಿಸನು ಫಲೋಪದೇಶಕ್ಕೆ ಕೈಯೂರಬೇಕು. ಇಲ್ಲದೆ ಹೇಳಿದ ಫಲ ವಿಡಂಬನಾಸ್ಪದ. ಸೃಷ್ಟಿಯ ಸಕಲ ಪದಾರ್ಥಗಳ ಬೆಳೆಯು ಗ್ರಹವನ್ನು ಹೊಂದಿದೆ. ಈ ಕಾರಣ ಜಗತ್ತಿನ ವಸ್ತುಗಳನ್ನು ವಿಕ್ರಯಿಸುವ ವಣಿಜರಿಗೆ ಗ್ರಹಗಳ ಫಲವಿಲ್ಲವೆಂದು ಹೇಳಬರುವುದಿಲ್ಲ. ಹಾಗೆ ಹೇಳಿದರೂ ಸಮಂಜಸ ಮತ್ತು ಯುಕ್ತಿಯುಕ್ತವೆನಿಸದು. ಆದುದರಿಂದ ಗ್ರಹರಿಂದ ಯಾವ ಯಾವ ವಸ್ತುಗಳನ್ನು ಚಿಂತಿಸಬೇಕು. ವಣಿಜನು ಗ್ರಹೋಕ್ತವಾದ ವಸ್ತುಗಳನ್ನು ತನಗೆ ತೆಕ್ಕೊಳ್ಳಬಹುದೇ? ಆ ವಸ್ತುಗಳಿಗೆ ಹೇಳಿದ ಗ್ರಹನು ತನ್ನ ಕುಂಡಲಿಯಲ್ಲಿ ಬಲಿಷ್ಠನಿರುವನೇ ಎಂದು ಚಿಂತಿಸುವುದು ಯುಕ್ತ. ಈ ಬಗ್ಗೆ ಗ್ರಹೋಕ್ತ ವಸ್ತುಗಳಾವುವೆಂದು ಅಲ್ಪವಾಗಿ ಚಿಂತಿಸೋಣ.

ಕಂಬಳಿ, ಚಿನ್ನ, ಆಯುಧಸಾಮಗ್ರಿ, ವಿಷ, ಮದ್ದು, ಅಸ್ಥಿ, ಕಟ್ಟಿಗೆ, ಬೆಳಕು ಇವುಗಳ ಕಾರಕತ್ವವು ಸೂರ್ಯನಿಗಿದೆ.

ಚಂದ್ರನಿಗೆ ಹೂ, ಭೋಜನ ಸಾಮಗ್ರಿ, ರತ್ನ, ಬೆಳ್ಳಿ, ರಂಜಿ, ಉಪ್ಪು, ನೀರು, ಮನೋಹರವಾದ ವಸ್ತುಗಳು ಮತ್ತು ಬಟ್ಟೆ, ಆಭರಣ, ಎಣ್ಣೆ ತುಪ್ಪಗಳ ಕಾರಕತ್ವವಿವೆ.

ಕೆಂಪು ತಾವರೆ, ತಾಮ್ರ, ಚಿನ್ನ, ರಸಗಳು, ಹಾಸಿಗೆ ಹೂದಿಸುವ ಸಾಮಗ್ರಿಗಳು, ಭೂಮಿ ಇವುಗಳ ಕಾರಕತ್ವವು ಕುಜನಿಗಿರುವುದು.

ಶಾಸ್ತ್ರೀಯ ಸಾಮಗ್ರಿ, ಪುಸ್ತಕ, ಮುದ್ರಣ ಸಾಮಗ್ರಿ, ಶಿಲ್ಪೀಯ ವಸ್ತುಗಳು, ಉತ್ತಮ ವೃಕ್ಷಗಳ ಕಾರಕನು ಬುಧನು.

ಮಂಗಳಕರವಾದ ವಸ್ತುಗಳು, ಪುಷ್ಟಿಯನ್ನು ಕೊಡುವ ಔಷಧ, ವಿಜ್ಞಾನೋಪಕರಣ, ವಾಹನ, ಆಸನಗಳು, ಚಿನ್ನ, ಧನಧಾನ್ಯಗಳ ಕಾರಕತ್ವವು ಗುರುವಿಗಿದೆ.

ಶುಕ್ರನು ಬಟ್ಟೆ, ರತ್ನ, ಆಭರಣ, ಸುಗಂಧದ್ರವ್ಯ, ವಾಹನಗಳು, ತುಪ್ಪ, ಹಾಲು, ಸಂಗೀತಕಲೆಯ ಉಪಕರಣ, ಬೆಳ್ಳಿ ಇವುಗಳ ಕಾರಕನು.

ಶನಿಯು ಹಿತ್ತಾಳೆ, ಸೀಸ, ಕಬ್ಬಿಣ, ನಿಕೃಷ್ಟ ಧಾನ್ಯಗಳು ಇವುಗಳ ಕಾರಕನು.

ಮನುಜನ ನೌಕರಿಯು ಲಗ್ನ, ರವಿ, ಚಂದ್ರರ ದಶಮಾಧಿಪತಿಯ ಅಂಶವನ್ನು ಹೊಂದಿದೆ. ಅದಲ್ಲದೆ ಷಷ್ಠ ಸ್ಥಾನದಿಂದಲೂ ನೌಕರಿಯನ್ನು ಚಿಂತಿಸಬಹುದಾಗಿದೆ. ಷಷ್ಠಭಾವವು ದಾಸಸ್ಥಾನವಾಗಿರುವುದೇ ಇದಕ್ಕೆ ಕಾರಣ. ಉಭಯಸ್ಥಾನಗಳಲ್ಲಿ ಗ್ರಹರ ನಿಲುವು ಹೆಚ್ಚಿದ್ದರೆ ಸ್ವತಂತ್ರಜೀವನವಾಗಿರುವುದಿಲ್ಲ. ಚರದಲ್ಲಿ ಗ್ರಹರು ಹೆಚ್ಚಿದ್ದರೆ ಅಭಿವೃದ್ಧಿಯು ಅಧಿಕವಾಗಿ ಉಂಟಾಗುತ್ತದೆ. ಸ್ಥಿರ ರಾಶಿಯಲ್ಲಿ ಗ್ರಹರು ಹೆಚ್ಚು ಇರುವುದಾದರೆ ಬಹಳ ಮೆಲ್ಲನೆ ಉನ್ನತಿಯು ಉಂಟಾಗುವುದು. ನೌಕರಿಯನ್ನು ಯಾವ ರೀತಿಯಿಂದ ನಿರ್ಣಯಿಸುವುದು ಎಂಬುದರ ಕುರಿತು ಈ ಮೊದಲು ಪ್ರಭಾತ ಸಂಚಿಕೆಗಳಲ್ಲಿ ಹೇಳಲಾಗಿರುವುದು. ಆದುದರಿಂದ ಪುನ ಚರ್ವಿತ ಚರ್ವಣಕ್ಕೆ ಇಳಿಯಲಾರೆ.

ಗ್ರಹಗಳಿಂದ ವೃತ್ತಿಯನ್ನು ನಿರ್ಣಯಿಸಿದ ಬಳಿಕ ಗ್ರಹಕಾರಕದಲ್ಲಿ ಹೇಳಿದ ವಸ್ತುಗಳಿಂದ ವಾಣಿಜ್ಯವನ್ನು ಬಳೆಯಿಸುವುದು. ಗ್ರಹಗಳ ಬಲವನ್ನು ಹೊಂದಿ ಗ್ರಹಕಾರಕ ವಸ್ತುಗಳನ್ನು ವಣಿಜನು ನಿರ್ಣಯಿಸಬೇಕು. ರವಿಯು ಕರ್ಮಕಾರಣನಾಗಿ ಬಲಹೀನನಾಗಿದ್ದರೆ ಅವನಿಗೆ ಹೇಳಿದ ವಸ್ತುಗಳಲ್ಲಿ ಉಚ್ಚ ವಸ್ತುಗಳಿಂದ ವಾಣಿಜ್ಯವನ್ನು ನಡಿಯಿಸಕೂಡದು. ಇದೇ ರೀತಿಯಿಂದ ಇತರ ಗ್ರಹಗಳ ವಿಷಯದಲ್ಲೂ ತಿಳಿಯುವುದು.

ತುಲಾ, ಕುಂಭ, ಕರ್ಕಾಟಕ, ಧನುಗಳು ದೊಡ್ಡ ದೊಡ್ಡ ವಣಿಜರ ಲಗ್ನವಿಲ್ಲದೆ ರಾಶಿಯಾಗಿರುವುವು. ವೃಷಭವು ಉಚ್ಚ ವರ್ಣಜರದ್ದಾಗಿರುವುದಿಲ್ಲ. ಸಾಂಪತ್ತಿಕ ಸ್ಥಿತಿಯಿಂದ ಉನ್ನತಿಯು ಶನಿ ಶುಕ್ರರ ಅಷ್ಟಮ ಷಷ್ಠ ಸ್ಥಿತಿಯಿಂದ ಉಂಟಾಗುತ್ತದೆ. ಕುಜ ರಾಹುಗಳ ಕೇಂದ್ರ ಸ್ಥಿತಿಯೂ ಉತ್ತಮ. ಅವರು ಷಷ್ಠಾಷ್ಟಮವಾಗಿದ್ದರೂ ಅದರಲ್ಲಿ ರಾಹುದೆಸೆಯು ಉನ್ನತಿ ಫಲದಾಯಕವಾಗಿದೆ. ಗ್ರಹಗಳ ಷಡ್ವಿಧ ಬಲ ನಿರ್ಣಯ ಅವರ ದೃಷ್ಟಿಯ ವಿಚಾರವನ್ನು ವಾಣಿಜ್ಯ ವಿಚಾರದಲ್ಲಿ ಅನೇಕ ತರಹದ ವಸ್ತುಗಳನ್ನು ಸಂಗ್ರಹಿಸುವವರು ಮಾಡುವುದು ಉತ್ತಮ. ವಣಿಜನು ವಸ್ತುಗಳನ್ನು ಕೊಂಡುಕೊಳ್ಳುವಾಗ ವಾಣಿಜ್ಯಕ್ಕೆ ಹೇಳಿದ ನಕ್ಷತ್ರಗಳನ್ನು ತಿಳಿದುಕೊಳ್ಳಬೇಕು. ಆದುದರಿಂದ ಕ್ರಯ ವಿಕ್ರಯಗಳಿಗೆ ಹೇಳಿದ ನಕ್ಷತ್ರಗಳ ವಿಚಾರವನ್ನು ಮಾಡಲಾಗುವುದು.

> ಕ್ರಯರ್ಕ್ಷೇ ವಿಕ್ರಯೋನೇಷ್ಟೋ ವಿಕ್ರಯರ್ಕ್ಷೇ ಕ್ರಯೋSಪಿ ನ
> ಪೌಷ್ಣಾಂಬು ಪಾಶ್ವಿನೀವಾತ—ಶ್ರವಶ್ಚಿತ್ರಾಃ ಕ್ರಯೇಶುಭಾಃ

ವಸ್ತುಗಳನ್ನು ಕೊಂಡುಕೊಳ್ಳಲು ಹೇಳಿದ ನಕ್ಷತ್ರದಲ್ಲಿ ಮಾರಾಟ, ಮಾರಾಟಕ್ಕೆ ಹೇಳಿದ ನಕ್ಷತ್ರದಲ್ಲಿ ಕೊಂಡುಕೊಳ್ಳುವಿಕೆ ಈ ಎರಡೂ ಉತ್ತಮವಲ್ಲ. ರೇವತಿ, ಶತಭಿಷಾ, ಅಶ್ವಿನೀ, ಸ್ವಾತಿ, ಶ್ರವಣಾ, ಚಿತ್ರಾ ಇವು ಕೊಂಡುಕೊಳ್ಳಲು ಹೇಳಿದ ನಕ್ಷತ್ರಗಳು ಎಂಬುದೇ ಸಾರ.

> ಪೂರ್ವಾದ್ವೀಶಕೃಶಾನುಸಾರ್ಪ—ಯಮಭೇಕೇಂದ್ರ ತ್ರಿಕೋಣೇ ಶುಭೈ
> ಷಟ್‌ತ್ರ್ಯಾಯೇಷ್ವಶುಭೈರ್ವಿನಾ ಘಟಿತನುಂ ಸನ್ವಿಕ್ರಯಃ ಸತ್ತಿಥೌ

ಪೂರ್ವಾ ನಕ್ಷತ್ರಗಳು ಮೂರು, ವಿಶಾಖಾ, ಕೃತ್ತಿಕಾ, ಆಶ್ಲೇಷಾ, ಭರಣಿ ನಕ್ಷತ್ರಗಳಲ್ಲಿ ಮಾರುವುದು ಉತ್ತಮ. ಕೇಂದ್ರ ತ್ರಿಕೋಣ ಸ್ಥಾನಗಳಲ್ಲಿ ಶುಭರು ಮೂರು, ಆರು, ಹನ್ನೊಂದು ಭಾವಗಳಲ್ಲಿ ಅಶುಭರೂ ಇರಬೇಕು. ಕುಂಭ ಲಗ್ನವು ವಿಕ್ರಯಕ್ಕೆ ಯೋಗ್ಯವಲ್ಲ. ಇದರಿಂದ ಎಲ್ಲಾ ವಣಿಜರಿಗೆ ಪ್ರಯೋಜನವಿಲ್ಲ. ರಖಮ್ ವ್ಯಾಪಾರಿಗಳಿಗೆ ಯೋಗ್ಯವೆಂದು ಹೇಳಬಹುದು. ಆದರೆ ಇತರ ವ್ಯಾಪಾರಿಗಳೂ ತಮಗೆ ಬೇಕಾದ ವಸ್ತುಗಳನ್ನು ತೆಕ್ಕೊಳ್ಳಲು ಹೇಳಿದ ನಕ್ಷತ್ರದಲ್ಲಿ ಮಾಡಿ ವಿಕ್ರಯದ ವಸ್ತುಗಳನ್ನು ವಿಕ್ರಯಕ್ಕೆ ಹೇಳಿದ ನಕ್ಷತ್ರಗಳಂದು ವ್ಯಾಪಾರಕ್ಕಾಗಿ ಹೊರ ತೆಗೆದಿಡುವುದು ಯೋಗ್ಯ. ಇದರಿಂದ ಲಾಭವು ಉಂಟಾಗುವುದು.

ಶನಿ, ಶುಕ್ರರು ವಾಣಿಜ್ಯಕ್ಕೆ ಕಾರಕರೆಂದು ಕೆಲವು ಗ್ರಂಥಗಳಲ್ಲಿದೆ. ಆದುದರಿಂದ ಶನಿ, ಶುಕ್ರರ ಬಲವನ್ನು ಕುಂಡಲಿಯನ್ನು ನೋಡುವಾಗ ನೋಡಬೇಕು. ಅಂಶಕ ಬಲದಿಂದ ಸ್ಥಾನಬಲದಿಂದ ವಾಣಿಜ್ಯನು ವಸ್ತುಗಳನ್ನು ಅಧಿಕವಾಗಿ ನಿರ್ಣಯಿಸುವುದು.

ಭೇದಗಳನ್ನು ನಂತರ ಕಲ್ಪಿಸಿದರು. ಇವುಗಳಲ್ಲಿ ಮೂರನೆಯದು ಮಾತ್ರ ಈಗ ಪ್ರಸಿದ್ಧಿಯಲ್ಲಿದೆ.

ಕಾಫಿ ಗಿಡವೂ ಅದರ ಉತ್ಪತ್ತಿಯೂ

ನೆಟ್ಟ ಮೂರನೆ ವರ್ಷದಲ್ಲಿಯೇ ಕಾಫಿ ವೃಕ್ಷವು ಫಲಕೊಡುತ್ತದೆ. 5ನೇ ವರ್ಷದಲ್ಲಿ ಅದು ಸಂಪೂರ್ಣ ವಾಗುವುದು. ಬೆಳೆಯ ವಿಷಯ ಸರಿಯಾಗಿ ಜಾಗೃತೆ ತೆಕ್ಕೊಂಡರೆ 50 ವರ್ಷಗಳ ಕಾಲ ವೃಕ್ಷವು ಫಲಕೊಡುತ್ತದೆ. ಹಿಂದೂ ದೇಶದಲ್ಲಿ ಕಾಫಿ ಮರವು ವರ್ಷಕ್ಕೆ ಒಂದೇ ಬಾರಿ ಫಲಕೊಡುತ್ತದೆ. ಮಾರ್ಚ್ ಎಪ್ರಿಲ್ ತಿಂಗಳುಗಳಲ್ಲಿ, ಮೊದಲನೆ ವೃಷ್ಟಿಯಾದ ಕೂಡಲೇ ಮರವು ಹೂ ಬಿಡುತ್ತದೆ. ನಂತರ ಎಂಟೊಂಭತ್ತು ಮಾಸಗಳೊಳಗೆ ಬೀಜವು ಪುಷ್ಟಿಯಾಗುತ್ತದೆ. ಅತ್ಯುನ್ನತ ಪ್ರದೇಶಗಳಲ್ಲಿ ಬೀಜವು ಪುಷ್ಟಿ ಹೊಂದಲು ಹೆಚ್ಚು ಕಾಲ ಬೇಕಾಗುವುದು. ಕೆಲವು ಕಡೆಗಳಲ್ಲಿ ಸಪ್ಟೆಂಬರ್ ತಿಂಗಳೊಳಗೆ ಬೀಜ ಕೊಯ್ಯುತ್ತಾರೆ. ಇನ್ನು ಕೆಲವು ಕಡೆಗಳಲ್ಲಿ ಕೊಯಿಲು ಕಾಲವು ಜನವರಿಯ ವರೆಗೆ ಮುಂದುವರಿಯುವುದೂ ಉಂಟು. ಸರ್ವಸಾಧಾರಣ ಮೇ ತಿಂಗಳೊಳಗೆ ಎಲ್ಲಾ ಕಡೆಯ ಬೆಳೆ ಕೊಯ್ಯಲ್ಪಡುತ್ತದೆ.

ಮಾರಾಟಕ್ಕೆ ಸಿದ್ಧಗೊಳಿಸುವುದು

ಕಾಫೀ ಬೀಜವನ್ನು ಗಿಡದಿಂದ ಕೊಯ್ದೊಡನೆ ಮಾರಾಟಕ್ಕೆ ಕಳಿಸಲು ಸಾಧ್ಯವಿಲ್ಲ. ಮಾರಾಟಕ್ಕೆ ಅದನ್ನು ಸಿದ್ಧಗೊಳಿಸಬೇಕಾದರೆ ನಡೆಯಬೇಕಾದ ಕೆಲವು ವಿಧಾನಗಳಿವೆ. ಮೊದಲನೆಯದಾಗಿ ಬೀಜದ ಹೊರಗಿನ ಪದರು ಮತ್ತು ಅದಕ್ಕೆ ತಾಗಿರುವ ಪದಾರ್ಥವನ್ನು ತೊಳೆದು ತೆಗೆಯುವುದು. ತೊಳೆದಾದ ನಂತರ ಉಳಿಯುವ ಕಾಫಿಗೆ 'ಪಾರ್ಚ್‌ಮೆಂಟ್' ಕಾಫಿಯೆನ್ನುವರು. ಎರಡನೆಯದಾಗಿ 'ಪಾರ್ಚ್‌ಮೆಂಟ್' ಕಾಫಿಯನ್ನು ಬಿಸಿಲಿಗೆ ಒಣಗಿಸುತ್ತಾರೆ. ಒಣಗಿಸಿದ ತರುವಾಯ ಬೇರೆ ಬೇರೆ ತರಗತಿಗಳಾಗಿ ಕಾಫೀ ಬೀಜಗಳನ್ನು ವಿಭಾಗಿಸುತ್ತಾರೆ. ಒಣಗಿಸಿದ ತರುವಾಯ ಕಾಫಿಯು ಮಾರಾಟಕ್ಕೆ ಸಿದ್ಧವಾಯಿತೆನ್ನಬಹುದು. ಆಗ ಅದಕ್ಕೆ 'ಪ್ಲಂಟೇಶನ್ ಕಾಫಿ' ಎಂಬ ಹೊಸ ಬಿರುದು ಕೊಡುತ್ತಾರೆ.



'[illegible]' ಮೊದಲಾದ ಚಿತ್ರಗಳಲ್ಲಿ ಅಭಿನಯಿಸಿ [illegible]

ಚಿತ್ರತಾರೆಯಾಗುವುದು ಸುಲಭವೇ?

ನಟಿಯ ಜೀವನದ ಒಂದೆರಡು ಚಿಕ್ಕ ಘಟನೆಗಳು

ಬಿಸಿಲಲ್ಲಿ, ಕಣ್ಣು ಕುಕ್ಕುವ ವಿದ್ಯುದ್ದೀಪಗಳೆದುರಲ್ಲಿ, ರಕ್ತಸಂಚಾರ ನಿಲ್ಲಿಸುವ ಚಳಿಯಲ್ಲಿ, ...ನಟನು ಅಥವಾ ನಟಿಯು ಎಲ್ಲ ಕಷ್ಟಗಳನ್ನೂ ಸಹಿಸಿ ಅಭಿನಯಿಸುವರು. ನಡುರಾತ್ರೆಯಾದರೂ ಒಮ್ಮೊಮ್ಮೆ ಅಭಿನಯ ಮುಗಿವುದಿಲ್ಲ. ಕೆಲವೊಮ್ಮೆ ಸರಿಯಾದ ನಿದ್ದೆ ದೊರೆವುದಿಲ್ಲ. ಸುಖಾಸನಗಳಲ್ಲಿ ಒರಗಿ ಚಿತ್ರ ನೋಡುತ್ತ ಟೀಕಿಸುವವರು ಇದನ್ನೆಲ್ಲ ಬಲ್ಲರೇ?



[illegible]

ಲಾಗ್ಗನೆ ಹೆಸರಾಗಿ ತೋರುವ ಚಲಚ್ಚಿತ್ರಗಳಲ್ಲಿ ಪಾತ್ರಧರಿಸಿ, ತಾವೂ ನಟರಾಗಬೇಕೆಂದು ಅನೇಕರು ಹಂಬಲಿಸುತ್ತಾರೆ. ಚಲಚ್ಚಿತ್ರದಲ್ಲಿ ನಟಿಸುವುದು ಬಹು ಸುಲಭವೆಂದು ತಿಳಿದುಕೊಂಡಿರಬೇಕು. ಅಂದವಾದ ಉಡುಪುಗಳನ್ನು ಉಡುವುದು, ಇಂಪಾಗಿ ಹಾಡುವುದು, ಸುರಸವಾಗಿ ಸಂಭಾಷಿಸುವುದು, ವಿಲಾಸಪೂರ್ಣ ಜೀವನದಲ್ಲಿ ತೊಡಗುವುದು ಇಷ್ಟೆ, ನಟನಟಿಯರ ಕಾರ್ಯಕ್ರಮವೆಂದು ಅವರ ಎಣಿಕೆ.

ಆದರೆ, ವಿಷಯ ಹಾಗಿಲ್ಲ. ಹೆಚ್ಚಾಗಿ ಹಿಂದೀಯ ಚಲಚ್ಚಿತ್ರಶಾಲೆಗಳಲ್ಲಿ ನಟನಟಿಯರು ತಮ್ಮ ತಮ್ಮ ವೇಷಗಳನ್ನು ತಾವೇ ಮಾಡಬೇಕಾಗುತ್ತದೆ. ಅದು ಕಷ್ಟದ ವಿಷಯವಾಗಿದೆ. ಸಹಾಯಕರಾರೂ ಇಲ್ಲದೆ ವೇಷ ಧರಿಸುವುದು ಸುಲಭದ ಮಾತಲ್ಲ.

ಒಂದೊಂದು ದೃಶ್ಯವನ್ನು ಹಲವು ಬಾರಿ ತರಬೇತಿ ಮಾಡಬೇಕಾಗುತ್ತದೆ. ನಟರು, ತಮ್ಮ ಆಯಾಸವನ್ನು ಒತ್ತಟ್ಟಿಗಿಟ್ಟು, ತಮ್ಮ ಪಾತ್ರಗಳನ್ನು ಅಭಿನಯಿಸಬೇಕು. ಗಾಯನ ವಿಶಾರದರಿಗೂ, ದಿಗ್ದರ್ಶಕರಿಗೂ ತೃಪ್ತಿಯಾಗುವ ತನಕ ನಟರು ಅಭಿನಯಿಸಿಯೇ ತೀರಬೇಕು.

ಪಾತ್ರಕ್ಕನುಸಾರವಾಗಿ ವೇಷ ಭೂಷಣಗಳನ್ನು ತೊಟ್ಟು, ಕಣ್ಣನ್ನು ಕುಕ್ಕುತ್ತಿರುವ ವಿದ್ಯುದ್ದೀಪಗಳ ಮುಂದೆ ನಿಲ್ಲಬೇಕು. ದಿಗ್ದರ್ಶಕನು ಕೊಟ್ಟ ಸೂಚನೆಗನುಸಾರವಾಗಿ ನಡೆಯಬೇಕು.

ಒಂದು ಚಲಚ್ಚಿತ್ರವನ್ನು ತಯಾರಿಸಲು ನೂರಾರು ಜನರು ಬೇಕಾಗುತ್ತಾರೆ. ಇವರಲ್ಲಿ ಬರೇ ಎಂಟು ಯಾ ಹತ್ತು ಮಂದಿ "ಚಲಚ್ಚಿತ್ರ ತಾರೆ"ಗಳಾಗುತ್ತಾರೊ ಇಲ್ಲವೋ ಎಂಬುದು ಸಂಶಯ. ಉಳಿದವರು, ಸವಾರರು, ಯಾತ್ರಿಕರು, ದಂಗೆಖೋರರು, ಕ್ರಾಂತಿಕಾರರು—ಇವರ ಚಟುವಟಿಕೆಗಳಲ್ಲಿ ಭಾಗವಹಿಸುವ ಗುಂಪಿಗೆ ಸೇರಿಬಿಡುವರು. ಇವರಿಗೆ ಹೆಚ್ಚಾಗಿ ಬೇರೆ ವೃತ್ತಿಯಿರುವುದಿಲ್ಲ. ಇಂತಹ ಕಲಾಸೇವೆಯಿಂದ ಅವರಿಗೆ ಸಾಕಷ್ಟು ಹಣವು ದೊರೆಯುವುದಿಲ್ಲ. ಆದರೂ ಇವರು ಇಂತಹ ದೃಶ್ಯಗಳಲ್ಲಿ ಭಾಗವಹಿಸಿಯೇ ಸಿಕ್ಕಿದ ಸ್ವಲ್ಪ ಹಣದಿಂದ ಜೀವನ ಸಾಗಿಸುವರು.

ಒಮ್ಮೊಮ್ಮೆ ನಟರು, ದೂರದೂರದ ಊರುಗಳಿಗೆ ಪ್ರಯಾಣ ಬೆಳೆಸಬೇಕಾಗುತ್ತದೆ. ದಿಗ್ದರ್ಶಕರು ಯಾವ ದೃಶ್ಯಗಳನ್ನು ಆರಿಸುವರೊ ಅಲ್ಲಿ ಅವರು ಅಭಿನಯಿಸಬೇಕು. ಸುಡುತ್ತಿರುವ ಬಿಸಿಲನ್ನು ಕೂಡಾ ಲೆಕ್ಕಿಸದೆ, ಧಾರಾಕಾರವಾಗಿ ಸುರಿಯುವ ಬೆವರನ್ನು ಗಮನಿಸದೆ, ಆಯಾಸವನ್ನು ಗಣನೆಗೆ ತಾರದೆ, ನಟರು ಅಭಿನಯಿಸಬೇಕಾದ ಸಂದರ್ಭಗಳೂ ಬರುತ್ತವೆ.

ಚಳಿಗಾಲದ ರಾತ್ರಿ ಕಾಲದಲ್ಲಿ ಚಿತ್ರಗಳನ್ನು ತಯಾರಿಸುವಾಗ ನಟರಿಗೆ ಬಹಳ ಕಷ್ಟವಾಗುತ್ತದೆ. ತಡೆಯಲಾರದ ಚಳಿಯನ್ನು ಅನುಭವಿಸಬೇಕಾಗುತ್ತದೆ. ತೆಳ್ಳಗಿನ ಬಟ್ಟೆಯುಟ್ಟು ಅಥವಾ ಬರೇ ಮೈ ಬಿಟ್ಟು, ತಂಗಾಳಿಗೆ ಮೈಯೊಡ್ಡುವಾಗ ಎಂತಹ ಸಂಕಟವಾಗುತ್ತಿದೆಯೆಂಬುದು ಸ್ವತಹ ಅನುಭವಿಸಿದವರಿಗೇ ಗೊತ್ತು. ಇಂತಹ ಸಮಯದಲ್ಲಿ "ತಯಾರಾಗಿರಿ. ಈಗ ಚಿತ್ರ ತೆಗೆಯುತ್ತೇವೆ" ಎಂದು ದಿಗ್ದರ್ಶಕರ ಬಾಯಿಯಿಂದ ಆಜ್ಞೆ ಹೊರಡುತ್ತದೆ. ಇದು ತಾರೆಗಳ ಸ್ವಭಾವವಾಯಿತು. ಇತರರು, ಯಾವ ದಿಗ್ದರ್ಶಕರು ಯಾವ ಸಮಯಕ್ಕೆ ಕರೆದರೂ ಕೆಲಸ ಮಾಡಲು ತಯಾರಿರಬೇಕು. ಎಂತಹ ವೇಷ ಧರಿಸಲೂ ಸಿದ್ಧರಾಗಿರಬೇಕು. ಒಮ್ಮೊಮ್ಮೆ ಸಂಜೆಯಿಂದ ಬೆಳಗಿನ ತನಕ ಅವರಿಗೆ ಬಿಡುವು ಸಿಗುವುದಿಲ್ಲ—ಊಟ ಮಾಡುವುದಕ್ಕೂ ಬಿಡುವು ಸಿಗುವುದಿಲ್ಲ. ಇವರು ನಿತ್ಯದಲ್ಲಿಯೂ ಬೆಳಗ್ಗೆ 10 ಗಂಟೆಯಿಂದ ಸಾಯಂಕಾಲ 6 ಗಂಟೆಯ ವರೆಗೆ ಚಿತ್ರಶಾಲೆಯಲ್ಲಿರಬೇಕಾಗುತ್ತದೆ.

ನಟಿಯರ ಜೀವನವು ಬಹಳ ಕಷ್ಟದ್ದಾಗಿರುತ್ತದೆ. ರಾತ್ರಿಯ ವೇಳೆಯಲ್ಲಿ ಚಿತ್ರ ತೆಗೆದ ಬಳಿಕ ಅವರಿಗೆ ಸಾಕಷ್ಟು ವಿರಾಮ ಸಿಗುವುದಿಲ್ಲ. ಮರುದಿನ ಬೆಳಗ್ಗೆಯೂ ತೆಗೆಯುವ ಚಿತ್ರಕ್ಕೆ ಅವರು ಹಾಜರಾಗಬೇಕು. ಕೊಂಚ ತಡವಾದರೆ ದಿಗ್ದರ್ಶಕನ ಆಫೀಸಿನಿಂದ "ಫೋನ್"ನ ಕರೆ ಬರುತ್ತದೆ,—"ನಟಿ ಮಹಾರಾಣಿಯವರು ಏಕೆ ತಡಮಾಡಿದರು?" ಎಂದು. ಒಡನೆಯೇ ಚಿತ್ರಶಾಲೆಯ ಮೋಟರ್‌ಕಾರು ನಟಿಯ ಮನೆಬಾಗಿಲ ಮುಂದೆ ನಿಲ್ಲುವುದು. ನಿದ್ದೆಯ ಕಣ್ಣನ್ನು ಒರಸುತ್ತ, (ತಲೆಸಿಡಿತವಿದ್ದರೆ ಅದನ್ನು ಲೆಕ್ಕಿಸದೆ) ನಟಿಯು ಕಾರನ್ನು ಏರಬೇಕಾಗುತ್ತದೆ. ದಿಗ್ದರ್ಶಕನು ನಟಿಯನ್ನು ಕಂಡೊಡನೆ ಹೆಚ್ಚು ಮಾತುಗಳನ್ನು ಆಡದೆ, ಅವಳನ್ನು ಮೋಟಾರುಕಾರಿನಲ್ಲಿ ಕೂತುಕೊಳ್ಳಿಸಿ, ತಾನೂ ಕೂತು, ಎಲ್ಲಿಗೊ ಹೊರಡುವನು. ನಟಿಯು ಮಾತನಾಡದೆ, ಕಾರಿನಲ್ಲಿ ಕುಳಿತುಕೊಂಡು ಆತನು ಎಲ್ಲಿಗೆ ಕರೆದುಕೊಂಡು ಹೋಗುವನೋ ಅಲ್ಲಿಗೆ ಹೋಗುವಳು. ಮರು ಮಾತೆತ್ತುವ ಅಧಿಕಾರ ಅವಳಿಗಿಲ್ಲ. ಸ್ವಲ್ಪ ಸಮಯದಲ್ಲೇ ಅವರು ಬಟ್ಟೆ ವ್ಯಾಪಾರಿಗಳ ಮಳಿಗೆಗೆ ಮುಟ್ಟುವರು.

"ಬ್ಲೌಸ್ ತಯಾರಾಗಿಲ್ಲವೇ?" ಎಂದು ದಿಗ್ದರ್ಶಕನು ಕೇಳುವನು. ಆದನು ತಯಾರು ಮಾಡಲು ಹೇಳಿದ ಉಡುಪು ಸಿದ್ಧವಾಗಿಲ್ಲವೆಂದರೆ ಅವರು ಪುನಃ ಚಿತ್ರಶಾಲೆಗೆ ತೆರಳುವರು. ದರ್ಜಿಯ ಮೇಲೆ ಬೈಗಳ ಸುರಿಮಳೆಯನ್ನು ಸುರಿಸಿ, "ಉಳಿದ ಚಿತ್ರ ನಾಳೆ ತಯಾರಾಗುವುದು ಈಗ ನೀವು ಹೋಗಬಹುದು" ಎಂದು ದಿಗ್ದರ್ಶಕರು ನಟಿಯನ್ನು ಪುನಃ ಕಳುಹಿಸುವರು. ಇದು ನಟಿಯ ಜೀವನದ ಒಂದು ಚಿತ್ರ.

ಚಿತ್ರಗಳನ್ನು ಬಯಲು ಪ್ರದೇಶದಲ್ಲಿ ತೆಗೆಯುವುದಿದ್ದರೆ, ಸಾಮಾನ್ಯ ನಟಿನಟಿಯರೆಲ್ಲ ಚಿತ್ರಶಾಲೆಯಲ್ಲೇ ವೇಷಗಳನ್ನು ತೊಟ್ಟುಕೊಳ್ಳಬೇಕಾಗುತ್ತದೆ. ಮುಖ್ಯ ಭೂಮಿಕೆಗಳು ಮಾತ್ರ ಚಿತ್ರ ತಯಾರಾಗುವ ಪ್ರದೇಶದಲ್ಲೇ ಅವಸರದಿಂದ ಬಣ್ಣ ಬಳಿದು ಬಟ್ಟೆಬರೆ ತೊಟ್ಟುಕೊಳ್ಳುವವು. ಈ ತಯಾರಿಗಳು ನಡೆಯುತ್ತಿರುವಾಗಲೇ ದಿಗ್ದರ್ಶಕರು ಇತರ ಕೆಲವು ಚಿತ್ರಗಳನ್ನು ತಯಾರಿಸುವರು. ಇಲ್ಲಿಯ ಗೊಂದಲವನ್ನು ವಿವರಿಸಲು ಸಾಧ್ಯವಿಲ್ಲ; ವ್ಯವಸ್ಥೆಯು ತೀರಾ ಕಡಿಮೆ. ದಂಗೆ, ಹೊಡೆದಾಟ, ಬಡಿದಾಟ, ದಾಳಿ—ಇತ್ಯಾದಿ ದೃಶ್ಯಗಳನ್ನು ಈ ಸಂದರ್ಭದಲ್ಲಿ ತೆಗೆಯುವರು.

ಇಂಥ ದೃಶ್ಯಗಳು ಎಲ್ಲಿಯಾದರೂ ಅತೃಪ್ತಿಕರವೆಂದು ಕಂಡರೆ "ಸಿಕ್ಷೆನಿಸಿರಿ" ಎಂದು ದಿಗ್ದರ್ಶಕರು ಚಿತ್ರ ಗ್ರಾಹಕರಿಗೆ ಆಜ್ಞೆ ಕೊಡುವರು. ಈ ರೀತಿ ಕೆಲವು ದೃಶ್ಯಗಳನ್ನು ಹಲವು ಬಾರಿ ತೆಗೆಯಬೇಕಾಗುತ್ತದೆ. ಹೀಗಾಗುವಾಗ ಹೊತ್ತು ನೆತ್ತಿಗೇರಿ ಒಂದೆರಡು ಗಂಟೆಗಳು ಕಳೆಯುವುದೂ ಇದೆ. ತಿಂಡಿತೀರ್ಥಗಳನ್ನು ಮುಟ್ಟದೆ, ನಟನಟಿಯರು ಇಷ್ಟು ಸಮಯದ ವರೆಗೆ ನರಳಬೇಕಾಗುತ್ತದೆ. ಹೊರಗಿನಿಂದ ಸುಡುತ್ತಿರುವ ಬಿಸಿಲು, ಒಳಗಿನಿಂದ ಕರುಳು ಕಡಿಯುವ ಹಸಿವು ನಟನಟಿಯರು ಇಂಥ ಬೇಗೆಯಲ್ಲಿ ತಮ್ಮ ಅನೂಲ್ಯ ಯೌವನದ ಹಲವು ಸಂದರ್ಭಗಳನ್ನು ವ್ಯಯಿಸಬೇಕಾಗುತ್ತದೆ.

ಮೃದುವಾದ ಆಸನದಲ್ಲಿ ಕುಳಿತು ಸಿಗರೇಟಿನ ಹೊಗೆಯನ್ನು ಥಿಯೇಟರಿನ ವಿದ್ಯುತ್ ಬೀಸಣಿಗೆಗೆ ಅರ್ಪಿಸುತ್ತ, ಯಾ ಬಾಯಿತುಂಬ ಎಲೆಯಡಿಕೆ ಜಗಿದು ತಾನು ಕುಳಿತಲ್ಲೇ ಉಗುಳಿ, ರಣರಂಪ ಮಾಡಿ, ಒಂದೆರಡು ಗಂಟೆಗಳ ಕಾಲ ನಡೆಯುವ ಚಿತ್ರಗಳನ್ನು ನೋಡಿ "ಬರೇ ಕೀಳು ಚಿತ್ರ" ಎನ್ನುವ ಮಹಾಶಯರಿಗೆ ಈ ಚಿತ್ರಗಳನ್ನು ತಯಾರಿಸಲು ಎಷ್ಟು ಪ್ರಯಾಸವಾಗುತ್ತಿದೆ ಎಂಬುದು ಗೊತ್ತಿದೆಯೋ ಇಲ್ಲವೋ! ಚಲಚ್ಚಿತ್ರ ಪ್ರಪಂಚದಲ್ಲಿ ಹೆಸರುಗಳಿಸುವುದು ಸುಲಭವಲ್ಲವೆಂದು ಅವರು ತಿಳಿಯುವುದು ಒಳಿತು. ಬೆವರು ಸುರಿಸದೆ, ಕಷ್ಟಗಳನ್ನು ಎಣಿಸದೆ, ಕೀರ್ತಿ ಸಂಪಾದಿಸಲು ಬರುವುದಿಲ್ಲ. ಚಲಚ್ಚಿತ್ರಕ್ಕೆ ಸೇರುವ ಭಾವೀ ನಟನಟಿಯರು ಇಂಥ ಕಷ್ಟಗಳನ್ನು ಅನುಭವಿಸಲು ಸಿದ್ಧರಾದರೆ ಮಾತ್ರ ಅವರು ಈ ಕಲೆಗೆ ಯೋಗ್ಯರೆನ್ನಬಹುದು.

ಮೂದಪ್ಪಯ್ಯ—ಸಾಹುಕಾರ—	ಪ್ರಾಯ ೬೦
ಸುನಂದಾ—ಮೂದಪ್ಪಯ್ಯನ ಹಿರಿಯ ಹೆಂಡತಿ—	ಪ್ರಾಯ ೨೫
ಮಹಾನಂದಾ— ,, ೨ನೇ ಹೆಂಡತಿ ,,	೨೨
ಸಾಂಬ್ರಾಣಯ್ಯ—ಜೋಯಿಸ— ,,	೪೦
ಗಂಗಾಧರ—ನಿರುದ್ಯೋಗಿ ವಿದ್ಯಾವಂತ	೨೨
ಶೀನು—ಗಂಗಾಧರನ ಸ್ನೇಹಿತ ,,	೨೪

ಮೂದಪ್ಪಯ್ಯ ಎಂಡ್ ಸನ್!

(ಏಕಾಂಕ ಪ್ರಹಸನ)

(ಲೇಖಕರು:-- ಕುಡ್ಪಿ ವಾಸುದೇವ ಶೆಣೈ)



ದೃಶ್ಯ ೧

[ಮೂದಪ್ಪಯ್ಯನ ಮನೆ. ಮೂದಪ್ಪಯ್ಯನು ಮದರಾಸಿಗೆ ಹೊರಟಿದ್ದು, [illegible] ಹೋಲ್ಡರ್ ಇಟ್ಟು, ಅದರ ಮೇಲೆ ಕುಳಿತು, ಎರಡೂ ಕೈಗಳನ್ನು ತಲೆಮೇಲೆ ಇಟ್ಟಿರುವನು. ಮೊದಲನೆ ಹೆಂಡತಿ ಸುನಂದೆ ಬಂದು ಬದಿಯಲ್ಲಿ, ಕಿರಿಯ ಹೆಂಡತಿ ಮಹಾನಂದೆ ಮತ್ತೊಂದು ಬದಿಯಲ್ಲಿ, ಒಬ್ಬರಿನ್ನೊಬ್ಬರನ್ನು ನೋಡದೆ ಗಂಡನಿಗೆ ಬೆನ್ನು ಹಾಕಿ ಕುಳಿತಿರುವರು. ಇಬ್ಬರೊಳಗೂ ಮತ್ಸರ, ದ್ವೇಷ.]

ಮೂದಪ್ಪಯ್ಯ:—ನಾನು ಸತ್ತರೂ ನೀವು ದ್ವೇಷ ಬಿಡಬಾರದು. ಏನು! [illegible] ಇದ್ದೇನೆಂತ ನಿಮ್ಮ ಸ್ಥಿತಿ ಇದಲ್ಲವೆ? ಸತ್ತರೂ ಬಿಡಬೇಡಿ. ಬಿಟ್ಟರೆ, ಪ್ರೇತವಾಗಿ ಬಂದು ಕಾಡ್ಯೇನು! ಒಬ್ಬ ಗಂಡನ ಇಬ್ಬರು ಹೆಂಡಿರು; ಒಂದು ರಥದ ಎರಡು ಗಾಲಿಗಳಂತೆ—ಒಂದು ಪಕ್ಷಿಯ ಎರಡು ರೆಕ್ಕೆಗಳಂತೆ—ಒಂದು ದೇಹದ ಎರಡು ಕೈಗಳಂತೆ ಇರಬೇಕೆಂದರೆ, ನೀವು ಒಬ್ಬರಿಗೊಬ್ಬರು ಬೆನ್ನು ಹಾಕಿ ಕುಳಿತುಕೊಳ್ಳಿರಿ—ಏನು!

ಮಹಾನಂದಾ:—ನಾನು ಯಾವ ಕೈ? [illegible]

ಮೂದಪ್ಪಯ್ಯ:—ನೀನು ಯಾವ ಕೈ? [illegible]! [illegible]! ಎರಡೂ ಕೈ [illegible] ಅಂತ ನಾನು ಹೇಳುತ್ತಿದ್ದೇನೆ—ಅವಳಿಗೆ ತಾನು ಯಾವ ಕೈ ಅಂತ ಹೇಳಬೇಕಂತೆ! ನೀನು ಎಡಕ್ಕೆ! ಈಗ ಏನಾಯಿತೆಂದು ಹೇಳು ನೋಡೋಣ [illegible]!

ಮಹಾನಂದಾ:—(ಕಣ್ಣೀರೊರಸುತ್ತ) ನೀವು ಊಟಮಾಡೋದು ಯಾವ ಕೈಯಿಂದಂತೆ?

ಮೂದಪ್ಪಯ್ಯ:—ಏನು? ಊಟಮಾಡೋಕ್ಕೆ? ನಾನು ಊಟಮಾಡೋದು—ನಿಮ್ಮ ಕರ್ಮದಿಂದ ಏಕ್ಕೆ?

ಸುನಂದಾ:—ನಾನು ಬಲಕ್ಕೆ ಯಷ್ಟೆ?

ಮೂದಪ್ಪಯ್ಯ:—ಅಹುದು. ನೀನು ಬಲಕ್ಕೆ! [illegible]! [illegible] ಸಾಕಪ್ಪ ಸಂಸಾರ. ಮಕ್ಕಳು ಹುಟ್ಟಲಿಲ್ಲ—ಬೇಡ

ಮಹಾನಂದಾ:—ಮತ್ತೂ ನನ್ನನ್ನು ಬೈದಿರಿ. ನಮ್ಮನ್ನು ಮದುವೆ ಯಾಕಾದ್ರಂತೆ?

ಮೂದಪ್ಪಯ್ಯ:—ಅದೇ ನನಗೆ ಗೊತ್ತಿಲ್ಲ! [illegible] ಅದು ಗೊತ್ತಿಲ್ಲ.

ಸುನಂದಾ:—ಈಗ ಕಲಿಯಬಾರದೇ?

ಮೂದಪ್ಪಯ್ಯ:—ಒಹೊ. ಕಲಿಯಬಹುದು—ಅದನ್ನೇ ಈಗ ಕಲಿಯುತ್ತಿದ್ದೇನೆ! ಒಬ್ಬಳ ಮುಖ ಉತ್ತರಕ್ಕೆ, ಮತ್ತೊಬ್ಬಳದು ದಕ್ಷಿಣಕ್ಕೆ! ಮದರಾಸಿಗೆ ಹೊರಟ ಗಂಡನಿಗೆ ಬೀಳ್ಕೊಡಲು ಬಂದ ಪತಿವ್ರತೆಯರು ನೀವು!

ಮಹಾನಂದಾ:—ಅಮ್ಮ ಹೇಳುತ್ತಿದ್ದಳು—'ನಿನ್ನ ಜಾತಕ ಒಳ್ಳೇದು ಮಗು, ಗಂಡನಿಗೆ ಭಾಗ್ಯ. ನಿನಗೂ ಭಾಗ್ಯ' ಎಂದು! ಆ ಭಾಗ್ಯವನ್ನೀಗ ಅನುಭವಿಸುತ್ತಿದ್ದೇನೆ!

ಸುನಂದಾ:—ನನ್ನ ಅಮ್ಮನೂ ಹೇಳುತ್ತಿದ್ದಳು.

ಮೂದಪ್ಪಯ್ಯ:—ಸಾಕುಮಾಡು. ಸಾಕುಮಾಡು, ಅಮ್ಮನ ಅಮೃತವಾಣಿ ಸಾಕುಮಾಡು. ನಿಮ್ಮಮ್ಮ ಇಷ್ಟನ್ನು ಮಾತ್ರ ನಿಮಗೆ ಹೇಳಿದಳು. ಗಂಡನ ಮಂಡೆ ಹಾಳುಮಾಡಬಾರದು ಎಂದು ಹೇಳಲಿಲ್ಲ. ಇಬ್ಬರೂ ಪರಸ್ಪರ ಪ್ರೀತಿಯಿಂದ ಇರಬೇಕು ಇದು ಸಹ ಹೇಳಲಿಲ್ಲ. ಜಾತಕ ನೋಡಿದರು—ನನಗೆ ನಿಮ್ಮನ್ನು ಮೂರುವಾರ್ ಮಾಡಿಕೊಟ್ಟು ಅವರು 'ಅತ್ತೆ'ಯೆನಿಸಿ, ನಕ್ಕು ದಿವಂಗತರಾದರು. ಈಗ ಈ ಚಂದ ನೋಡಲು ಅವರಿಲ್ಲ.

ಮಹಾನಂದಾ:—ನನ್ನ ಜಾತಕದಲ್ಲಿ ಕಣ್ಣೀರೇ ಇಲ್ಲವೆಂದು ಅಪ್ಪ ಹೇಳುತಿದ್ದರು.

ಮೂದಪ್ಪಯ್ಯ:—ಈಗ ಅವನಿಗೆ ಕೂಗಿ ತೋರಿಸು. ಆ ಅಂಬಡೆ ಕಣ್ಣುಗಳಲ್ಲಿ ಎಷ್ಟು ಹಂಡೆ ನೀರಿದೆಯೆಂದು ನೋಡಲಿ ಅಪ!

ಸುನಂದಾ:—ನನಗೆ ರಾಣಿಯೋಗವಿದೆಯೆಂದು ನನ್ನ ಅಪ್ಪ ಹೇಳುತಿದ್ದರು.

ಮೂದಪ್ಪಯ್ಯ:—ನಿನಗೆ ಸನ್ನಿಪಾತಯೋಗ! ನಿನ್ನಪ್ಪನಿಗೆ ಗ್ರಾಣಿಯೋಗ! ಯೋಗ! ಅಲ್ಲವೇ? ಈ ವಿಮುಖ-ದ್ವಿಮುಖ ಯೋಗವಿದೆಯೆಂದು ಮಾತ್ರ ನಿಮಗೆ ಯಾರೂ ಹೇಳಲಿಲ್ಲ, ಅಲ್ಲವೇ?

ಮಹಾನಂದಾ:—ನೀವೇನು ಯೋಗಗಳನ್ನು ಹಳಿಯುತ್ತೀರಿ? ನಮ್ಮ ಯೋಗಗಳನ್ನು ನೋಡಿಯಲ್ಲವೆ ನೀವು ನಮ್ಮನ್ನು [illegible]?

ಮೂದಪ್ಪಯ್ಯ:—[illegible]. ಈಗ [illegible]! [illegible]. ಒಬ್ಬಳಿಗೆ, ನಾನು ಮದುವೆಯಾದ ಕಾರಣ ಹೇಳಬೇಕಂತೆ, ಮತ್ತೊಬ್ಬಳಿಗೆ ತಾನು ಬಲಕ್ಕೆಯೆಂತ ಭಾಷೆಕೊಡಬೇಕಂತೆ. ಅಹುದೇ ಮಹಾನಂದಾ, ನಿನ್ನ ಯೋಗನೋಡಿ ಮದುವೆಯಾದುದಲ್ಲದೆ ಮತ್ತೆ ನಿನ್ನ ರೂಲ್ಕ ನೋಡಿಯೊ—ಅಥವಾ ಕೇವಲ ಮೂಗು ನೋಡಿಯೊ? ಅಲ್ಲ, ಏನು! ಇತ್ತ ನೋಡು! (ಮಹಾನಂದೆ ಗಂಡನ ಕಡೆಗೆ ಮುಖ ಮಾಡುವಳು.) ಸುನಂದಾ, ಇಕೋ ನೋಡಿತ್ತ! (ಸುನಂದೆಯೂ ಗಂಡನ ಕಡೆಗೆ ತಿರುಗುವಳು. ಕೂಡಲೇ ಮಹಾನಂದೆ ಬೆನ್ನು ಹಾಕುವಳು. ಅದನ್ನು ನೋಡಿ ಸುನಂದೆಯೂ ಬೆನ್ನು ಹಾಕುವಳು.)

ಮೂದಪ್ಪಯ್ಯ:—ಹೋಯ್ತಪ್ಪ ಹೋಯಿತು! ಇವಳ ಮುಖ ಅವಳು ನೋಡುವುದಿಲ್ಲ. ಅವಳ ಮುಖ ಇವಳು ನೋಡೋದಿಲ್ಲ! [illegible] ನನ್ನ ಮುಖ ನೋಡೋರು ಇಲ್ಲ! [illegible]! ಒಂದು ಮನೆಯಲ್ಲಿದ್ದು ಇಬ್ಬರು [illegible] ಮುಖ ನೋಡುವುದಿಲ್ಲ ಎಂದರೆ. ಯಾರಾದರೂ ನಂಬುವರೋ!

(ಜೋಯಿಸ ಸಾಂಬ್ರಾಣಯ್ಯನ ಪ್ರವೇಶ)

ಸಾಂಬ್ರಾಣಯ್ಯ:—ಏನು ನಂಬಿಕೆ ಸ್ವಾಮಿ?

ಮೂದಪ್ಪಯ್ಯ:—ಸಾಂಬ್ರಾಣಯ್ಯನವರೊ? ಬನ್ನಿ ಸ್ವಾಮಿ. (ಮಹಾನಂದಾ, ಸುನಂದಾ ಇಬ್ಬರೂ ಹೊರಡುವರು.) ನಿಲ್ಲಿ ನಿಲ್ಲಿ—ಹೋಗಬೇಡಿ. (ಇಬ್ಬರೂ ಹಿಂಗಾಲಲ್ಲೆ ನಡಕೊಂಡು ಬರುವರು.) ಸಾಂಬ್ರಾಣಯ್ಯ—

ಸಾಂಬ್ರಾಣಯ್ಯ:—ಸ್ವಾಮಿ!

ಮೂದಪ್ಪಯ್ಯ:—ಹೇಗೆ ಸಾಂಬ್ರಾಣಯ್ಯ ನನ್ನ ಅವಸ್ಥೆ!

ಸಾಂಬ್ರಾಣಯ್ಯ:—ಏನದು ಸ್ವಾಮಿ?

ಮೂದಪ್ಪಯ್ಯ:—ನೋಡೋದಿಲ್ಲವೇ? ಶಾಕಿನಿ—ಡಾಕಿನಿ ನಿಂತ ಕ್ರಮ ನೋಡಿ! (ಸುನಂದಾ, ಮಹಾನಂದಾ ಕೂಗುವರು.) ಅದಕ್ಕೂ ಕೂಗೋದು ಬೇಡ! ನೀವ್ಯಾಕೆ ಕೂಗೋದು? ಸಾಂಬ್ರಾಣಯ್ಯ ನೋಡಿದಿರಲ್ಲಾ! ಈಗ ನಾನು ಮದರಾಸಿಗೆ ಹೊರಟಿದ್ದೇನೆ. ಹದಿನೈದು ದಿನ ಇಲ್ಲ. [illegible] ಪ್ರೇಮ ನೋಡಿ.

ಸಾಂಬ್ರಾಣಯ್ಯ:—ನೋಡಿದೆ ಸ್ವಾಮಿ.

ಮೂದಪ್ಪಯ್ಯ:—ನೋಡಿದಿರಲ್ಲವೊ? ಈಗ ಹೇಳಿ,- ನಾನು ಹೊರಟ ನಕ್ಷತ್ರ ಒಳ್ಳೇದೊ?—ಇವರನ್ನು ಇಲ್ಲಿ ಈ ಸ್ಥಿತಿಯಲ್ಲಿ ಬಿಟ್ಟುಹೋಗೋದು ಸುರಕ್ಷಿತವೊ?—ಎಲ್ಲ ಹೇಳಿಬಿಡಿ ಸ್ವಾಮಿ ಒಮ್ಮೆ!....ನನ್ನ ಕರ್ಮ! ಜಾತಕವೊಂದು ನಂಬುತ್ತೇನೆ ನಾನು ಸಾಂಬ್ರಾಣಯ್ಯ. ಮತ್ತೆ ಈ ಜಾತಕಗಳನ್ನೊ?

ಸಾಂಬ್ರಾಣಯ್ಯ:—ಅಂದರೆ?

ಮೂದಪ್ಪಯ್ಯ:—ಅಂದರೆ ಅದೇ—ಆರು ತಿಂಗಳು ನೇತಾಡಿ, ಏಳನೇ ತಿಂಗಳಲ್ಲಿ ಹಟದಿಂದ ಮಳೆನೀರು ಕುಡಿಯುತ್ತದಲ್ಲಾ—ಕ-ಖ-ಗ-ಘ-ಙ-ಚ—ಚಾತಕ! ಅಹಾ!

ಸಾಂಬ್ರಾಣಯ್ಯ:—ಹೊರಟ ಮುಹೂರ್ತ ಚಿಂತಿಲ್ಲ ಸ್ವಾಮಿ, ಅಶ್ವಿನೀ ನಕ್ಷತ್ರ! ಮತ್ತೆ ಜಾತಕದ ಮಟ್ಟಿಗೆ ತಮ್ಮ ಪಾಪಗ್ರಹರು ಉಪಚಯದಲ್ಲಿದ್ದಾರೆ, ಶುಭಗ್ರಹರು ಕೇಂದ್ರದಲ್ಲಿದ್ದಾರೆ! ಎಲ್ಲದಕ್ಕೂ ಒಳ್ಳೇದು. ಎಲ್ಲಿಗೆ ಬೇಕೊ ಅಲ್ಲಿಗೆ ಹೋಗಿ; ಸುಖವಾಗಿ ಬನ್ನಿ!

ಮೂದಪ್ಪಯ್ಯ:—ನನ್ನ ಗ್ರಹ ಹಾಗಾಯಿತು. ಈಗ ಇವರದು ಹೇಗಂತೆ!

ಸಾಂಬ್ರಾಣಯ್ಯ:—[illegible]

ಮಾದಪ್ಪಯ್ಯ:—[illegible] ಈಗ [illegible] ಅಂತ! ನೀವು ಮನೆಗೆ [illegible] [illegible] ಇನ್ನೊಂದ [illegible] (ನೋಡುವಳು.)....ಮಹಾನಂದಾ. ನೀನೂ ನೋಡು!

ಮಹಾನಂದಾ:—ನಾನು ರಾಣಿಯಲ್ಲವಪ್ಪ?

ಮಾದಪ್ಪಯ್ಯ:—ಕರ್ಮವೆ! ಮತ್ತೆ [illegible] [illegible] ಇನ್ನು [illegible] ಹುಟ್ಟುತ್ತಾನೆ ಅಸ್ಟೆ—ನೀವು [illegible]

ಸಾಂಬ್ರಾಣಯ್ಯ:—(ನಗುತ್ತ) ನಾನ್ಯಾರು ಸ್ವಾಮಿ, ಮತ್ತೆ!

ಮಾದಪ್ಪಯ್ಯ:—ನಿಮಗೂ ಒಂದು [illegible] ನೀವು [illegible]....ಮಹಾನಂದಾ, ನೀವಿಬ್ಬರೂ 'ನಂದಾ' ಒಂದೇ ನಂದಾ [illegible]. ನಿಮ್ಮ ಪ್ರೀತಿಯು ಯಾವಾಗಲೂ ನಂದಾದೀಪದಂತೆ ಉರಿಯುತ್ತಲೇ [illegible]. ಇನ್ನು ನೋಡಿ—ನಾನು ಹೋದಾಗ ನೀವು ಜಗಳಗಿಗಳ ಮಾಡಿ. [illegible] ಇಲ್ಲ ಜನನ್ನ! ಒಬ್ಬಳು ಈ ಕಡೆ ನೋಡೋದು—ಮತ್ತೊಬ್ಬಳು ಆ ಕಡೆ ನೋಡೋದು!....ಅಲ್ಲ. ನಿಮಗೆ ಭೂಮಧ್ಯ ರೇಖೆಯಿಂದ ಒಟ್ಟೊಟ್ಟಿಗೇ ಹೊರಟು ರಷ್ಯಕ್ಕೆ ಹೋಗಿರೆಂದರೆ ಹೇಗೆ ಮುಟ್ಟುವಿರಿ ನೀವು ಅಂತ!

ಸಾಂಬ್ರಾಣಯ್ಯ:—(ನಗುತ್ತ) ನಮ್ಮ ಮನೆಯಲ್ಲಿಯೂ ಹಾಗೆ ಸ್ವಾಮಿ!

ಮಾದಪ್ಪಯ್ಯ:—ನಿಮಗೂ ಇಬ್ಬರು ಹೆಂಡಿರೆ?

ಸಾಂಬ್ರಾಣಯ್ಯ:—ಅಹುದಹುದು, ಇಬ್ಬರೇ—ಮೂವರಿಲ್ಲ! ಒಂದು ಕೊಡ ನೀರು ತಾರೆಂದರೆ ಒಬ್ಬಳು ಕೆರೆಗೆ—ಮತ್ತೊಬ್ಬಳು ನದಿಗೆ!

ಮಾದಪ್ಪಯ್ಯ:—ನೀವು ಪಟ್ಟ—ಸಮುದ್ರಕ್ಕೆ!

ಸಾಂಬ್ರಾಣಯ್ಯ:—ಊಟ ಮಾಡೋದೇ ಕಷ್ಟ ಸ್ವಾಮಿ!

ಮಾದಪ್ಪಯ್ಯ:—ಎಲ್ಲಿಂದಯ್ಯಾ ಊಟ ಮಾಡೋದು—[illegible] ಬೆನ್ನಿಗೆ ಬೆನ್ನು ಹಾಕಿ ನಿಂತರೆ! ಬಡಿಸು ಎಂದರೆ ಒಬ್ಬಳು ಅನ್ನದ ಮಡಕೆ ಹಿಡಕೊಂಡು ಹಿಂಬಾಗಿಲಿಂದ ಹೊರಗೆ—ಮತ್ತೊಬ್ಬಳು ಪಲ್ಯದ ಪಾತ್ರೆ ಹಿಡಕೊಂಡು ಮುಂಬಾಗಿಲಿನಿಂದ ಹೊರಗೆ! ಗ್ರಾಚಾರ ಸ್ವಾಮಿ, ಗ್ರಾಚಾರ!

ಸಾಂಬ್ರಾಣಯ್ಯ:—ಅದನ್ನು ನೂರುಬಾರಿ ಹೇಳಿ! ಗ್ರಹಗತಿ ತಿರುಗಿಸುವುದು ಯಾರಿಂದ ಸಾಧ್ಯ ಸ್ವಾಮಿ? (ತೆರೆ.)

ದೃಶ್ಯ ೨.

[ರಸ್ತೆ. ಗಂಗಾಧರನೂ ಶೀನುವೂ ಬರುತ್ತಿರುವರು.]

ಗಂಗಾ:—ಸಣ್ಣ ಅಂಗಡಿಗೆ ಹೋದರೆ ವ್ಯಾಪಾರವಿಲ್ಲ—ದೊಡ್ಡ ಅಂಗಡಿಯಲ್ಲಿ ಜನ ಬೇಡ—ಆಫೀಸುಗಳಿಗೆ ಹೋದರೆ ಯುದ್ಧ—ಯುದ್ಧಕ್ಕೆ ಸೇರುವ ಅಂದರೆ ಎದೆ ಅಳತೆ ಕಡಮೆ—ಕೆರೆಗೆ ಹಾರುವಾ ಎಂದರೆ ನೀರಿಲ್ಲ—ಸಮುದ್ರಕ್ಕೆ ಧುಮುಕುವಾ ಎಂದರೆ, ಅದರಲ್ಲಿ ಸ್ವಿಮರು ಮುಳುಗಿ ಮುಳುಗಿ, ಇಷ್ಟೆ (ಮೊಣಕೈ ತೋರಿಸಿ) ನೀರು! ಎಲ್ಲಿ ಹುಡುಕೋದಪ್ಪಾ ಕೆಲಸ! ಹೇಳು!

ಶೀನು:—ಬಹಳ ಕಷ್ಟ!

ಗಂಗಾ:—ಅಯ್ಯೊ—ಇತ್ತ ಕೆಲಸ ದೊರೆಯೋದಿಲ್ಲ, ಅತ್ತ ಪ್ರಾಣ ಹೋಗುವುದೂ ಸಾಧ್ಯವಿಲ್ಲವೆಂದಾಯ್ತೊ? ಇನ್ನು, ಕೈಗಾರಿಕೆ ಮಾಡೋಣೆಂದರೆ ಏನು ಮಾಡೋದು? ಕಂಬಳಿ ಮಾಡಿ ಮಿಲಿಟರಿಗೆ ಮಾರಬಹುದು—ನಮ್ಮೊಡನೆ ಕುರಿಯಿಲ್ಲ—ಹಣವಿಲ್ಲ. ಚಾಪೆ ಮಾಡಿ ಮಾರಬಹುದು—ಆದರೆ, ನನ್ನ ಚಾಪೆಯೇ ಹರಿದಿದೆ. ಮತ್ತೆ ಗುಂಡು ಗಿಂಡು, ಬಂದೂಕು ಗಿಂದೂಕು, ಮೆಶಿನ್‌ಗನ್ನು ಇದನ್ನೆಲ್ಲ ಮಾಡಿದರೆ ಗಿರಾಕಿ ಉಂಟು.

ಶೀನು:—ಗುಂಡುಸೂಜಿಗೆ ಗತಿಯಿಲ್ಲದಿದ್ದರೆ ಗುಂಡು ಮಾಡೋದೆಲ್ಲಿಂದ!

ಗಂಗಾ:—ಅಯ್ಯೊ—ಕೊನೆಗೆ ಟೂತ್ ಪೌಡರ್ ಆದರೂ ಮಾಡಿ ಮಾರಾಟ ಮಾಡುವಾ ಅಂತ ಎಣಿಸಿದೆ.

ಶೀನು:—ಅಯ್ಯೊ—ಮಾಡಲಿಲ್ಲವೇಕೆ?

ಗಂಗಾ:—ಯಾರಿಗಾಗಿ ಮಾಡೋದು? ದೊಡ್ಡವರಿಗೆ ಜಗಿದದ್ದು ಹೆಚ್ಚಾಗಿ ಎಲ್ಲ ಹಲ್ಲು ಹೋಗಿದೆ—ಬಡವರಿಗೆ ಜಗಿಯಲಿಕ್ಕೇನೂ ಇಲ್ಲದ ಹಲ್ಲು ತೊಳೆವ ಅವಶ್ಯಕತೆಯೇ ಇಲ್ಲ. ಮತ್ತೆ—ಯಾರಿಗೆ ಕೊಡಲಿ ಟೂತ್ ಪೌಡರ್? ನಾವು ಕೇಳಿದ ಮಟ್ಟಿಗೆ, ದನ—ಎಮ್ಮೆ—ಆಡು—ಕೋಣ—ಇವುಗಳೆಲ್ಲಾ ಟೂತ್ ಪೌಡರ್ ಹಾಕಿ ಹಲ್ಲು ತಿಕ್ಕುವುದಿಲ್ಲವಂತೆ!

ಶೀನು:—ಇತ್ತ ಉದ್ಯೋಗ ಇಲ್ಲ—ಅತ್ತ ಮನೆ [illegible] ಇಲ್ಲ ಅಂದರೆ ಮತ್ತೆ ಉಳಿದ ಉದ್ಯೋಗ 'ಬಿಡ್'.

ಗಂಗಾ:—ಅದನ್ನಾದರೂ ಮಾಡುತಿದ್ದೆ—ಆಗಲಿಲ್ಲ. ಕೇಳು. 'ಅಂಜನ'ದ ನಂಬ್ರದಲ್ಲಿ ಹಾಕಿದೆ—ಕಣ್ಣಿಗೆ ಅಂಜನವಾಯಿತು: 'ಸಾಧು'ವಿನ ನಂಬ್ರದಲ್ಲಿ ಹಾಕಿದೆ—ಲೇದು ಆಯಿತು: ಕಾರಿನ ನಂಬ್ರದಲ್ಲಿ ಹಾಕಿದೆ—ಖಾರ ಆಯಿತು: ಕನಸಿನಲ್ಲಿ ಕಂಡ ನಂಬ್ರದಲ್ಲಿ ಹಾಕಿದೆ—ಕನಸಿನ ಗಂಟೇ ಆಯಿತು: ಭಟ್ಟರ ನಂಬ್ರದಲ್ಲಿ ಹಾಕಿದೆ—ಪೊಟ್ಟು ಆಯಿತು. ಈಗ ಹಾಕೋದೇ ಇಲ್ಲ—ಆದರೆ. ನಾನು ಹೇಳಿದ ನಂಬ್ರ ಬರುತ್ತದೆ.

ಶೀನು:—ನೀನು ಹೇಳಿದ ನಂಬ್ರ ಬರುತ್ತದೆಯೇ? [illegible]. ಇತರರು ನಿನ್ನಿಂದ ಪ್ರಯೋಜನ ಪಡೆಯಬಹುದಲ್ಲವೇ?

ಗಂಗಾ:—ಗಾಬರಿ ಮಾಡಬೇಡ—ಹಾಗೆಲ್ಲ ಅದು ಹುಡುಗಾಟವಲ್ಲ. ನಂಬ್ರ ಮೊದಲು ಬರುತ್ತದೆ, ಮತ್ತೆ ನಾನು ಹೇಳುತ್ತೇನೆ. ಮೂರ್ಖಾ—ನಂಬ್ರದಲ್ಲಿ ಹಣ ಮಾಡೋದಾದರೆ, ಜಗತ್ತಿನಲ್ಲಿ ಪಡೆವವರೇ ಹೆಚ್ಚು. ಕೊಡುವವರು ಕಾಣೆಯಾಗುವರಲ್ಲವೇ? ದಾಸರು ಪೂರ್ವಕಾಲದಲ್ಲಿ, ಕೋಪ ಬಂದರೆ. 'ನಿನ್ನ ಮನೆಗೆ ನಾಲ್ಕು ವ್ಯಾಜ್ಯ ಬೀಳಲಿ' ಎಂದು ಶಪಿಸುತ್ತಿದ್ದರಂತೆ. ನಾಲ್ಕು ವ್ಯಾಜ್ಯ ಬಿದ್ದರೆ ನಾಲ್ಕು ತಲಾಂತರಗಳ ವರೆಗೆ ದಾರಿದ್ರ್ಯ-ದುಃಖ ಎಂದರ್ಥ. ಈಗಲಾದರೂ, ಒಬ್ಬನು ನಾಶವಾಗಬೇಕಾದರೆ, ಅದೇ ಮಾತನ್ನು ಹೇಳಿದರಾಯಿತು—ನಿನ್ನ ಮನೆಗೆ ನಾಲ್ಕು ನಂಬ್ರ ಬೀಳಲಿ!' ಅಂತ.

ಶೀನು:—ಅಹುದೊ ಗಂಗಾ, ಈ ಹಿಂದೂದೇಶದಲ್ಲಿ ಈ ನಿರುದ್ಯೋಗ ರೋಗವು ಗುಣವಾಗುವುದು ಯಾವಾಗ ಮಾರಾಯಾ?

ಗಂಗಾ:—ಅದು ಕೇಳು. ಬರಕೋ. (೧) ನಾಲ್ಕಕ್ಷರ ಕಲಿತ ಕೂಡಲೇ ಕಣ್ಣು ತಿರುಗಿಸೋದು—ನಾಲ್ಕು ಕಾಸು ಕೈಗೆ ಎಟಕಿದರೆ ಕಣ್ಣು ಮುಚ್ಚೋದು—ಇದು ಹೋಗಬೇಕು. (೨) ಉದಾರ ಮತ—ವಿಶಾಲ ತತ್ವ ಎಂದು ಬಾಯಲ್ಲಿ ಆಡುತ್ತ, ಸಹೋದರರನ್ನು ದೂಡುವುದು ನಿಲ್ಲಬೇಕು. (೩) ನೂರಾರು ಮೂಕ ದೇವರಿಗೆ ಹರಕೆ ಹೊರುವುದನ್ನು ನಿಲ್ಲಿಸಿ, ನಮ್ಮ ಬಳಿಯ ನಾಲ್ಕಾರು ದರಿದ್ರ ದೇವತೆಗಳಿಗೆ ಕೊಡಬೇಕು.

ಶೀನು:—ಸ್ವಾತಂತ್ರ್ಯ [illegible] ನಾನನ್ನೋದು.

ಗಂಗಾ:—ಅದು ಸರಿ. ನಾನು ಹೇಳಿದ ತಂತ್ರ ಹೋಗಬೇಕು—ಆಗ ಸ್ವಾತಂತ್ರ್ಯ ಬರುವುದು.

(ಮಾದಪ್ಪಯ್ಯ ಮತ್ತು ಸಾಂಬ್ರಾಣಯ್ಯನವರ ಪ್ರವೇಶ)

ಮಾದಪ್ಪಯ್ಯ:—ಏನೊ ಸ್ವಾಮಿ— ನಾನು ತಮ್ಮನ್ನೇ ನಂಬೋದು. ನೂರು ಜನರಿಗೆ ಜಾತಕ ತೋರಿಸೋದು ಯಾಕೆ?

ಶೀನು:—ನೋಡು ಗಂಗಾ—ಎಲ್ಲಿ ನೋಡಿದರೂ ಜಾತಕದ ಹುಚ್ಚು!

ಗಂಗಾ:—ಜಾತಕ—ನೋಡಲಿ—ನೋಡಲಿ! ನಮಗೆ ಜಾತಕವೂ ಇಲ್ಲ, ಪಾತಕವೂ ಇಲ್ಲ. ಹೆಬ್ಬಾವಿನಂತೆ ಉಪವಾಸ ತೆಗಿಯೋದು—ಬಾಯಿಗೆ ಬಂದಂತೆ ಮಾತಾಡೋದು. ಇಲ್ಲಿ ಬಾ, ಆ ಬದಿಯಲ್ಲಿ ಸ್ವಲ್ಪ ಕುಳಿತುಕೊಳ್ಳೋಣ. (ಕುಳಿತುಕೊಳ್ಳುವರು.)

ಸಾಂಬ್ರಾಣಯ್ಯ:—ನೀವು ಏನು ಯೋಚನೆ ಮಾಡಬೇಡಿ ಸ್ವಾಮಿ. ನಿಮಗೆ ಬೇಗನೆ ಪುತ್ರಲಾಭವಿದೆ.

ಮಾದಪ್ಪಯ್ಯ:—ಪುತ್ರಲಾಭ ಎಂದರೆ ನನಗೆ ಆಡಿಸೋದಕ್ಕೆ ಅಲ್ಲ ಮಗು, ಏನು ಆಡಿಸೋದು ಸ್ವಾಮಿ—ಈ ವ್ಯಾಪಾರದ ಗಲಾಟೆಯಲ್ಲಿ! ಒಟ್ಟಾರೆ ಒಂದು ಮಗು ಬೇಕು ಅಂತ. ನಿಮ್ಮೊಡನೆ ಗುಟ್ಟು ಹೇಳುತ್ತೇನೆ. ನನಗೆ ಇಂಗ್ಲೀಷು ಬರೋದಿಲ್ಲ. ಆದರೆ, ಮಗ ಎಂದರೆ ಇಂಗ್ಲೀಷಿನಲ್ಲಿ 'ಸನ್' ಎಂದು [illegible]

ಸಾಂಬ್ರಾಣಯ್ಯ:—ಹಾಂ?

ಮಾದಪ್ಪಯ್ಯ:—ಅಹುದು. ಮಗ ಎಂದರೆ ಸನ್, ಸನ್ ಎಂದರೆ ಮಗ. ಒಬ್ಬ ಮಗ ಹುಟ್ಟಿದರೆ "ಮಾದಪ್ಪಯ್ಯ ಎಂಡ್ ಸನ್" ಎಂದು ನನ್ನ ಸಂಸ್ಥೆಗೆ ಹೆಸರಿಡಬೇಕೆಂದಿದ್ದೇನೆ—ಅಷ್ಟೆ.

ಸಾಂಬ್ರಾಣಯ್ಯ:—(ನಗುತ್ತ) [illegible] ಸ್ವಾಮಿ ನೀವು!

ಮಾದಪ್ಪಯ್ಯ:—ಅದನ್ನಲ್ಲಿ [illegible] ಗಿಶಾರು ಏನೂ ಇಲ್ಲ. ಇರುತ್ತಾ ನಲ್ಲವೋ ಒಬ್ಬ ಮಗ, ವ್ಯಾಪಾರ ಗೀಪಾರ ನೋಡಿಕೊಂಡು! ಅದೊಂದು ಬಯಕೆ,—ಅಷ್ಟೆ. ಯಾರ್ಯಾರ ಮಕ್ಕಳನ್ನು ಕರತಂದು ವ್ಯಾಪಾರ ಯಾಕೆ ಕಲಿಸಬೇಕು? ನನ್ನ ಮಗನೇ ಕಲಿಯಲಿ!

ಸಾಂಬ್ರಾಣಯ್ಯ:—ಆಗುತ್ತದೆ ಸ್ವಾಮಿ, ದೇವರ ದಯೆಯಿಂದ ಆಗುತ್ತದೆ. ತಮಗೆ ಆ ಯೋಗ ಉಂಟು. ತಮ್ಮ ಹೆಂಡತಿಯ ಜಾತಕದಲ್ಲಿಯೂ ಪುತ್ರ [illegible]

ಮಾದಪ್ಪಯ್ಯ:—ಹಾಗೆಯೇನು? ಯಾರಿಗೆ ಈ ಪುತ್ರಲಾಭದ ಯೋಗ. ಹಿರಿಯವಳಿಗೋ ಕಿರಿಯವಳಿಗೆ [illegible]

ಸಾಂಬ್ರಾಣಯ್ಯ:—ಕಿರಿಯವಳಿಗೆ. ಕಿರಿಯವಳಿಗೆ. ಭಾರಿ ಜಾತಕ ಸ್ವಾಮಿ ಅವಳದು.

ಮಾದಪ್ಪಯ್ಯ:—(ಸಂತೋಷದಿಂದ ತಲೆದೂಗಿ) ಹ್ಞೆ! [illegible] ಲೋಲ್ಕದ [illegible] ಪುತ್ರಲಾಭ [illegible]

ಸಾಂಬ್ರಾಣಯ್ಯ:—ಅಹುದು. [illegible] ಪುತ್ರನೇ ಹುಟ್ಟುವನು. ಭಾರೀ ಜಾತಕ ಸ್ವಾಮಿ ಅವಳದು. ಸಪ್ತಮಾಧಿಪತಿ ಉಚ್ಚ ಸ್ಥಾನದಲ್ಲಿದ್ದಾನೆ. ಉಚ್ಚ ಗ್ರಹ[illegible] ನೋಡುತ್ತಿದ್ದಾರೆ. ಪತಿಗ ಒಳ್ಳೇದು. ಅವಳಿಗೂ ಒಳ್ಳೇದು.

ಮಾದಪ್ಪಯ್ಯ:—ಮತ್ತೆ ನನ್ನಲ್ಲಿ ಯೋಗ ಚಿಲ್ಲರ ಜಾತಕದವರಾದರೆ ಮದುವೆಯಾಗುತ್ತೇನೋ—ಸಾಂಬ್ರಾಣಯ್ಯನವರೆ? ನನಗ ಮದುವೆಗ[illegible] [illegible] ಜಾತಕ ಕೇವಲ ಜಾತಕ. ಜಾತಕ ಒಳ್ಳೆದಿದೆಯೆಂದರೆ ಯಾರೂ ನೂರು ಹೆಣ್ಣುಗ[illegible] ನನ್ನ ಅಭಿಪ್ರಾಯ ಸಾಂಬ್ರಾಣಯ್ಯನವರೆ; ಏನನ್ನುತ್ತೀರಿ?"

ಸಾಂಬ್ರಾಣಯ್ಯ:—ಮನುಷ್ಯನಿಗೆ ಜಾತಕ ಬಿಟ್ಟರೆ ಮತ್ತೇನಿದೆ ಸ್ವಾಮಿ?

ಮಾದಪ್ಪಯ್ಯ:—ನನಗೆ ಇದು ಮೂರನೇ ಮದುವೆಯಾದುದು—ನಮ್ಮ ಮಹಾನಂದಾ! ಕೇಳಿದರು ಒಬ್ಬರು 'ನೀವೇಕೆ ಇಷ್ಟು ಮದುವೆ ಮಾಡಿಕೊಂಡಿರಿ?' ಅಂತ. 'ನೀವೇಕೆ ಮಾಡಿಕೊಳ್ಳಲಿಲ್ಲ?' ಎಂತ ನಾನು ಕೇಳಿದೆ. ನನಗೆ ಬೇಡವೆಂದರು ಅವರು. ನನಗೆ ಬೇಕು ಅಂದೆ ನಾನು. ಹೇಗೆ, ಸಾಂಬ್ರಾಣಯ್ಯನವರೆ?

ಸಾಂಬ್ರಾಣಯ್ಯ:—[illegible] ಸ್ವಾಮಿ ತಮ್ಮ ಉತ್ತರ.

ಮಾದಪ್ಪಯ್ಯ:—ಜಗತ್ತಿನಲ್ಲಿ ಇರುವುದು ಫಕ್ತಾ ಜಾತಕ ಸಾಂಬ್ರಾಣಯ್ಯ. ಜಾತಕ ಬಿಟ್ಟಾ—ಮನುಷ್ಯ ಕೆಟ್ಟಾ.

ಸಾಂಬ್ರಾಣಯ್ಯ:—ಒಳ್ಳೇ ಯೋಗಗಳಿದ್ದ ಹೆಣ್ಣೆಂದರೆ ಸಂಪತ್ತಿನ ಖಣಿ.

ಮಾದಪ್ಪಯ್ಯ:—ಮನುಷ್ಯನು ಬೇರೇನೂ ಮಾಡಬೇಕಾಗಿಲ್ಲ. ಒಳ್ಳೇ ಜಾತಕ ಇದ್ದ ಹೆಣ್ಣುಗಳನ್ನು ವಿವಾಹವಾದರೆ ಸಾಕು—ಸಂಪತ್ತು, ಆರೋಗ್ಯ, ಆಯುಷ್ಯ ಎಲ್ಲಾ ತಾನಾಗಿ ಬರುವುದೆಂದು ನನ್ನ ಅಭಿಮತ. ಏನೋ ನನ್ನ ಮೊದಲಿನ ಹೆಂಡತಿ, ಸ್ವಲ್ಪ ಗೆರೆ ತಪ್ಪಿ ಇಹಬಿಟ್ಟು ಹೋದಳು. ಆದರೆ, ಅವಳ ಗ್ರಹಗಳ ಪ್ರಭಾವದಿಂದೆಂಬಂತೆ ನೋಡಿ—ಈಗಲೂ ನನಗೆ.......ಏನೋ....... ನಾನು ಏನು ಹೇಳಲಿ!

ಸಾಂಬ್ರಾಣಯ್ಯ:—ತಮ್ಮ ಮೊದಲಿನ ಹೆಂಡತಿ ತೀರಿಹೋಗಿ ಎಷ್ಟು ವರ್ಷವಾಯಿತು ಸ್ವಾಮಿ?

ಮಾದಪ್ಪಯ್ಯ:—ಸುಮಾರು ಇಪ್ಪತ್ತೆರಡಾಗಲಿಕ್ಕಿಲ್ಲವೆ? ಮೂರು ವರ್ಷದ ಒಂದು ಗಂಡುಮಗುವೂ ಇತ್ತು. ಅದನ್ನೂ ಹೊಡಕೊಂಡು ಹೋದಳು ಪುಣ್ಯಾತ್ಮೆ! ಇಲಿಗೆ ಅಂತ ಬಾಳೆಹಣ್ಣಿನಲ್ಲಿ ಹಾಕಿಟ್ಟ ಪಾಷಾಣ ತಿಂದಿತು—ಸತ್ತಿತು.

ಸಾಂಬ್ರಾಣಯ್ಯ:—ಚಿಂತಿಸಬೇಡಿ ಮಾದಪ್ಪಯ್ಯನವರೆ. ಈಗ ತಮಗೆ ಪುತ್ರಲಾಭವಾಗುವುದಾದರೂ ಅದೇ ಮಗು.

ಮಾದಪ್ಪಯ್ಯ:—ಅದೇ ಮಗುವೆ?

ಸಾಂಬ್ರಾಣಯ್ಯ:—ಅದೇ ಮಗು! ಅದು ನಿಮ್ಮನ್ನು ಬಿಟ್ಟು ಎಲ್ಲಿಯೂ ಹೋಗಿಲ್ಲ. ಪುನಃ ಬಂದೇ ಬರುವುದು.

ಮಾದಪ್ಪಯ್ಯ:—ಬರುವುದೇ?

ಸಾಂಬ್ರಾಣಯ್ಯ:—ಬರುವುದು. ಬರುವುದು. [illegible] ಒಂದು ಚಿಕ್ಕ, ಸ್ವರ್ಣದ ಕೃಷ್ಣನ ಮೂರ್ತಿ ಮಾಡಿ ವೈದಿಕರಿಗೆ ದಾನಮಾಡಿ [illegible] ಅಷ್ಟೆ.

ಮಾದಪ್ಪಯ್ಯ:—ದಾನ ಯಾರಿಗೆ! ತಮಗೇ!

ಸಾಂಬ್ರಾಣಯ್ಯ:—ತಮ್ಮ ಇಚ್ಛೆ!

ಮಾದಪ್ಪಯ್ಯ:—(ಕಿಸೆ ಗಡಿಯಾರ ತೆಗೆದು ನೋಡಿ) ರೈಲಿಗೆ ಹೊತ್ತಾಯಿತು ಸಾಂಬ್ರಾಣಯ್ಯ—ಹೋಗೋಣ. (ಹೋಗುವರು.)

ಗಂಗಾ:—(ಫಕ್ಕನೆ ಎದ್ದು ನಿಂತು) ಶೀನು!

ಶೀನು:—ಏನೋ ಗಂಗಾ?

ಗಂಗಾ:—ಶೀನು, ನೀನನ್ನು [illegible]

ಶೀನು:—ಹೇಗೇ ಗಂಗಾ?

ಗಂಗಾ:—ಗಂಗಾ! ಭೂಪತಿ ರಂಗಾ! ಮೂರ್ಖರ ಭಂಗಾ

ಶೀನು:—[illegible]

ಗಂಗಾ:—ತಿಳಿಯದೆ ಫಂಗಾ! [illegible] ಮಂಗಾ!!

ಶೀನು:—[illegible] ಕುಮಾಡು. ಒಮ್ಮೆ ವಿವರಿ[illegible]

ಗಂಗಾ:—ನೋಡು, ಈ ಮುದುಕ ಜಾತಕ [illegible] ಜೆಪ್ಪು [illegible] ಪ್ರೇತ—ಎಲ್ಲಾ ನಂಬುತ್ತಾನೆ.

ಶೀನು:—ನಂಬಲಿ. ಅದಕ್ಕೆ?

ಗಂಗಾ:—ಈಗ ಅವನಿಗೆ "ಮಾದಪ್ಪಯ್ಯ ಎಂಡ್ ಸನ್" ಎಂಬ ಒಂದು ಹುಚ್ಚು ಹಿಡಿದಿದೆ.

ಶೀನು:—ಇರಬಹುದು ಏನಾಯಿತು?

ಗಂಗಾ:—ಅವನಿಗೆ ಪುತ್ರಲಾಭವಿದೆಯೆಂದು ಜೋಯಿಸರು ಹೇಳಿದ್ದಾರೆ. ಅವ ನಂಬಿದ್ದಾನೆ.

ಶೀನು:—ಸರಿ.

ಗಂಗಾ:—ಅವನ ಮೊದಲನೆ ಹೆಂಡತಿಯೂ ಮಗುವೂ ತೀರಿಹೋಗಿ ಇಪ್ಪತ್ತೆರಡು ವರ್ಷವಾಯಿತು.

ಶೀನು:—ಅದರಲ್ಲೇನು?

ಗಂಗಾ:—ನನಗೂ ಇಪ್ಪತ್ತೆರಡು ವರ್ಷ ಪ್ರಾಯ!

ಶೀನು:—ನೀನು ಇಪ್ಪತ್ತೆರಡು ವರ್ಷದ ಕೋಣ.

ಗಂಗಾ:—ಕೋಣವಲ್ಲ, ಕರಡಿ. ಮಾದಪ್ಪಯ್ಯನಿಗೆ. ತೀರಿಹೋದ ಆ ಮಗುವೇ ಪುನಃ ಮಗನಾಗಿ ಬರುವುದೆಂದು ಜೋಯಿಸರು ಹೇಳಲಿಲ್ಲವೇ

ಶೀನು:—ಹೇಳಿದರೆ ನಿನಗೇನು?

ಗಂಗಾ:—ನನಗೇನು? ಮೂರ್ಖ—ನಾನೇ ಆ ಮಗು!

ಶೀನು:—ತೀರಿಹೋದ ಆ ಮಗು ನೀನು?

ಗಂಗಾ:—ನಾನೇ! ಪೂರ್ವಜನ್ಮದ ಸ್ಮರಣೆ ಸಹಿತ ಹುಟ್ಟಿದ್ದೇನೆ. [illegible] ಪಾಷಾಣಪೂರಿತ ಬಾಳೆಹಣ್ಣು—ತಿಂದೆ—ಸತ್ತೆ!

ಶೀನು:—ಈಗ ಏನು ಮಾಡುತ್ತಿ ಮ್ಹಾರಾಯಾ?

ಗಂಗಾ:—ಹೊಸ ತಂದೆ ಸಿಗುತ್ತಾರೆ! ನಾನಿನ್ನು ಏನು ಮಾಡಿದರೂ ಚಂದ

ಶೀನು:—ಸ್ವಲ್ಪ ವಿವರಿಸಬಾರದೇ?

ಗಂಗಾ:—ಏನು ವಿವರಿಸೋದು? ಇನ್ನೂ ತಿಳಿಯಲಿಲ್ಲವೇ? ಮಾದಪ್ಪಯ್ಯನ ಮನೆಗೆ ಹೋಗೋದು—ಜೋಥೆ ತಪ್ಪಿ ಬೀಳೋದು—ಕಣ್ಣಿಗೆ ನೀರು ತಾಗಿಸಿದರೆ ಎದ್ದು ಒಂದುಜಾತಿ ಪೂರ್ವಜನ್ಮದ ಸ್ಮರಣೆ ಮಾತಾಡೋದು—"ಅಮ್ಮಾ—ಹಣ್ಣು—ಅಪ್ಪಾ—ಸತ್ತೆ—ಹೊಟ್ಟೆ ಬೆಂಕಿ—ಕಣ್ಣು ರಿ—"

ಶೀನು:—ಹಾಗೆ ಕೂಗಿದರೆ?

ಗಂಗಾ:—ಹಾಗೆ ಕೂಗಿದರೆ ಪ್ರಥಮ ಬಹುಮಾನ ನನಗೆ. ಮಾದಪ್ಪಯ್ಯನ ಮಗನಾಗುವೆನು—ಮೇದಿನಿಯನ್ನಾಳುವೆನು. ಧಿಕ್ಕಾರವಿರಲಿ ಸಮಾಜದ ಮೇಲೆ! ಕೇಳಿದರೆ ಕೊಡದ ಬೇಡಿದರೆ ಕೊಡದ—ಕಾಡಿದರೆ ಕೊಡದ—ದುಷ್ಟಸಮಾಜದ ಮೇಲೆ ಧಿಕ್ಕಾರ! ಆ ಸಮಾಜದ ಮೇಲೀಗ ನನ್ನ ಸೇಡು! ಢಿಲ್ಲಿಯಲ್ಲಿ ಕೆಲವು ವರ್ಷಗಳ ಹಿಂದೆ ಪೂರ್ವಜನ್ಮದ ಗಂಡನನ್ನು ಹುಡುಕಿದ ಹುಡುಗಿಯೊಬ್ಬಳ ವದಂತಿ ಕೇಳಿಲ್ಲವೆ? ಈಗ ಇಲ್ಲಿ ಪೂರ್ವಜನ್ಮದ ತಂದೆ ಹುಡುಕಿದ ಹುಡುಗ ಬಂದಿ[illegible]ನೆ! ನೋಡುತ್ತಿರು ನೀನು, ಶೀನು! ಮತ್ತೆ ನನ್ನನ್ನು ನೋಡಲು ಸಿಕ್ಕ ಸಾವಿರ ಜನರು—ಉಪಚರಿಸಲು ಹಲವರು—ಮಾದಪ್ಪಯ್ಯನ ದಯೆಯಿಂದ ಮೃಷ್ಟಾನ್ನ, ಮೃದು ತಲ್ಪ—!

ಶೀನು:—ಮೃತ್ಯು ಮಾತ್ರ ಬಾರದಿರಲಿ!

ಗಂಗಾ:—ಇಲ್ಲ ಮೃತ್ಯುಂಜಯನಾದೆನು! (ತೆರೆ)

ದೃಶ್ಯ ೨

[ಮಾದಪ್ಪಯ್ಯನ ಮನೆ. ಮಹಾನಂದಾ ಮತ್ತು ಸುನಂದಾ, ಏನುಉಶರಾಗಿ ಕುಳಿತಿರುವರು. ಸಾಂಬ್ರಾಣಯ್ಯನ ಪ್ರವೇಶ.]

ಸಾಂಬ್ರಾಣಯ್ಯ:—ಅಮ್ಮಾ, ನನಗೆ ಹೇಳಿಕಳಿಸಿದವರ್ಯಾರಮ್ಮ?

ಮಹಾನಂದಾ:—ನಾನು, ಜೋಯಿಸರೆ.

ಸಾಂಬ್ರಾಣಯ್ಯ:—ಸರಿ.

ಸುನಂದಾ:—ನಾನು ಹೇಳಿಕಳಿಸಿದ್ದೆ ಜೋಯಿಸರೇ

ಸಾಂಬ್ರಾಣಯ್ಯ:—ಸರಿಸರಿ. ಇಬ್ಬರೂ!....ಈಗ [illegible] ಏನು ಬೇಕು? ಹೇಳೋಣಾಗಲಿ.

ಮಹಾನಂದಾ:—ಜೋಯಿಸರೇ—

ಸಾಂಬ್ರಾಣಯ್ಯ:—ಹಾಂ....

ಸುನಂದಾ:—ಜೋಯಿಸರೇ!—

ಸಾಂಬ್ರಾಣಯ್ಯ:—ಹಾಂ ಹಾಂ—

ಮಹಾನಂದಾ:—ನನ್ನ ಜಾತಕವನ್ನು ಸ್ವಲ್ಪ ನೋಡಿ ಹೇಳಬೇಕು ಅಂತ.

ಸಾಂಬ್ರಾಣಯ್ಯ:—ಯಾರು ಅಲ್ಲವೆಂತಾರೆ?

ಸುನಂದಾ:—ನನ್ನ ಜಾತಕ ನೋಡಬೇಕೆಂತ ನಾನು ಕರಿಸಿದೆ, ಸಾಂಬ್ರಾಣಯ್ಯ.

ಸಾಂಬ್ರಾಣಯ್ಯ:—ಅವಶ್ಯವಾಗಿ ನೋಡಬೇಕು. ಇತ್ತ ಕೊಡಿ

(ಇಬ್ಬರೂ ಜಾತಕದ ಪುಸ್ತಕಗಳನ್ನು ಕೊಡುವರು.)

ಸಾಂಬ್ರಾಣಯ್ಯ:—(ಗುಣಿಸಿ ನೋಡುತ್ತ) ಮಹಾನಂದಾ ಅಮ್ಮ, ಈ ಮನೆಗೆ ಪುತ್ರಲಾಭವಿದೆ.

ಸುನಂದಾ:—ಪುತ್ರಲಾಭವೇ? ಯಾರಿಗೆ ಜೋಯಿಸರೇ?

ಮಹಾನಂದಾ:—ಯಾರಿಗೆ ಸಾಂಬ್ರಾಣಯ್ಯ?

ಸಾಂಬ್ರಾಣಯ್ಯ:—(ತನ್ನೊಳಗೇ) ಇದಕ್ಕಿಂತ ದೊಡ್ಡ ಗ್ರಹಚಾರವಿಲ್ಲ. ನನ್ನ ಮೇಲೆ ಬಂದ ಕಂಟಕ ಇದು! ಈಗ ಇವಳಿಗೆ ಪುತ್ರಲಾಭವೆಂದರೆ ಅವಳು ಕೇಳಲೊಲ್ಲಳು; ಅವಳಿಗೆಂದರೆ ಇವಳಿಗಾಗದು. [illegible] ಮನೆಯ ಕರ್ಮ ಅನುಭವಿಸಿ! (ಪ್ರಕಟವಾಗಿ) ಪುತ್ರಲಾಭ ಯಾರಿಗೆ, ಅಮ್ಮಾ? (ಎರಡೂ ಜಾತಕಗಳನ್ನು ಒಟ್ಟೊಟ್ಟಿಗೇ ಹಿಡಿದು ನೋಡಿ) . . ಅಮ್ಮಾ, ಸಂದೇಹ ಬೇಡ—ನಿಮ್ಮ ಗಂಡನಿಗೆ ಪುತ್ರಲಾಭವಾಗುವುದು.

ಸುನಂದಾ:—ಅಷ್ಟೂ ಗೊತ್ತಿಲ್ಲವೆ ಸಾಂಬ್ರಾಣಯ್ಯ ನನಗೆ? ಆ ಗಂಡನ ಮಗು—ಈ ಹೆಂಡತಿಯಲ್ಲೋ ಅಂತ!

ಸಾಂಬ್ರಾಣಯ್ಯ:—ಒಬ್ಬಾಕೆ ಹೆಂಡತಿಯಲ್ಲೆ!

ಮಹಾನಂದಾ:—ಅದೇ ಹೇಳಿ—ನಮ್ಮಿಬ್ಬರಲ್ಲಿ ಯಾರಲ್ಲಿ?

ಸಾಂಬ್ರಾಣಯ್ಯ:—ನಿಮ್ಮ ಮನೆಯಲ್ಲಿ!

ಸುನಂದಾ:—ಹೆರುವುದು ಯಾರು ಸ್ವಾಮಿ?

ಸಾಂಬ್ರಾಣಯ್ಯ:—ಹೆರುವುದು ಹೆಂಗುಸು, ಅಮ್ಮಾ! (ಸ್ವಗತ) ಪರ ಮಾತ್ಮ, [illegible] ಗಂಡುಹುಲಿಗಳ ಕಾಟವಾಯಿತು—ಎರಡು ಹೆಣ್ಣು ಹುಲಿಗಳ [illegible] (ಗಾಳಿಹಾಕಿಕೊಳ್ಳುವನು.)

ಮಹಾನಂದಾ:—ಸಾಂಬ್ರಾಣಯ್ಯನವರೇ—ಎಂತಹ ಜ್ಯೋತಿಷ್ಯ ಇದು! ಸ್ಪಷ್ಟ ಹೇಳಬಾರದೆ—ನಮ್ಮಿಬ್ಬರಲ್ಲಿ ಯಾರಿಗೆ ಪುತ್ರಲಾಭ?

ಸಾಂಬ್ರಾಣಯ್ಯ:—ಇಬ್ಬರಿಗೆ ಒಂದು ಮಗು! (ಸ್ವಗತ) ನರಸಿಂಹಾ, [illegible]!

ಸುನಂದಾ:—[illegible]

ಸಾಂಬ್ರಾಣಯ್ಯ: (ಸ್ವಗತ) ಭಗವಂತಾ, ಇಬ್ಬರಿಗೆ ಎರಡು ಮಕ್ಕಳನ್ನು ಹುಟ್ಟಿಸಬಾರದೇ? (ಪ್ರಕಟವಾಗಿ) ಅಮ್ಮಾ—ಯಾರು ಗರ್ಭಧಾರಣೆ ಮಾಡುವರೆಂದು ಹೇಳುವುದು ಸ್ವಲ್ಪ ಕಷ್ಟ. ಏಕೆಂದರೆ, ಇದರ ಜತೆಗೆ ಮಾದಪ್ಪಯ್ಯನವರ ಜಾತಕವೂ ಬೇಕು. ಅಂತೂ, ಪುತ್ರಯೋಗವಿದೆ. ಇಬ್ಬರಿಗೆ ಒಂದು ಮಗು!

(ಸುನಂದಾ, ಮಹಾನಂದಾ—ಸುಯ್ ಎಂದು ಸಿಟ್ಟುಸಿರಿಡುವರು.)

ಸುನಂದಾ:—ಬೇರೇನು ಸ್ವಾಮಿ?

ಸಾಂಬ್ರಾಣಯ್ಯ: ಬೇರೆ . . . . ಸಾಮಾನ್ಯವಾಗಿ ಎಲ್ಲ ಒಳ್ಳೇದೇ. ಆದರೆ . . . . !

ಸುನಂದಾ: ಆದರೇನು?

ಸಾಂಬ್ರಾಣಯ್ಯ:—ಆದರೆ.....ನಿಮಗೆ ಬೇಸರವಾಗುತ್ತದೊ ಏನೊ!

ಮಹಾನಂದಾ:—ಬೇಸರಗೀಸರ ಏನೂ ಇಲ್ಲ—ತಾವು ಹೇಳಬೇಡಿ.

ಸಾಂಬ್ರಾಣಯ್ಯ:—ನಿಮಗೆ ಬರಿ ಆದರೆ—ಅವ [illegible]

ಮಹಾನಂದಾ:—ಗಾಬರಿ ಇಲ್ಲ ಜೋಯಿಸರೆ.

ಸಾಂಬ್ರಾಣಯ್ಯ:—ಸೈ—ನೀವು ಅಷ್ಟು ಹೇಳಿದರಾಯಿತು. ಹೇಳಲೆ? ನಿಮ್ಮ ಪತಿಗೆ ಕಂಟಕವಿದೆ!

ಸುನಂದಾ:—ಅಯ್ಯೋ—ಮದರಾಸಿಗೆ ಹೋಗಿರುವರಲ್ಲ! ಇನ್ನೂ ಹತ್ತು ದಿನ ಆಗಿಲ್ಲ!

ಸಾಂಬ್ರಾಣಯ್ಯ:—ಬಹಳ ಕಂಟಕ. ಪ್ರಾಣಹೋಗಲೂ ಬಹುದು!

ಸುನಂದಾ, ಮಹಾನಂದಾ: [illegible]!

ಸಾಂಬ್ರಾಣಯ್ಯ:—[illegible]

ಸುನಂದಾ: [illegible] ಗಾಬರಿಯಾಗದೆ ಉಂಟೆ ಸಾಂಬ್ರಾಣಯ್ಯ?

ಮಹಾನಂದಾ:—ಯಾರ ಪ್ರಾಣ ಹೋಗೋದು ಜೋಯಿಸರೆ?

ಸಾಂಬ್ರಾಣಯ್ಯ:—ಪತಿಗೆ ಕಂಟಕ ಅಮ್ಮಾ. ಹೇಳಲಿಕ್ಕೆ ಬೇಸರ. ಏನು ಮಾಡೋದು—ಗ್ರಹಚಾರ ತಪ್ಪೋದುಂಟೆ!

ಸುನಂದಾ:—ಮತ್ತೆ ನೀವು ನಮ್ಮ ಯೋಗ, ನಮ್ಮ ಪತಿಯೋಗ ಚೆನ್ನಾಗಿದೆ ಚೆನ್ನಾಗಿದೆ ಅನ್ನುತಿದ್ದಿರಲ್ಲಾ—ಸುಳ್ಳೆ ಸುಳ್ಳೇ ಹೇಳುತಿದ್ದೀರೇ? ನಮ್ಮ ಕುಂಡಲಿ ಗಟ್ಟಿಯಿದ್ದರೆ ಪತಿಗೆ ಕೆಡುಕಾಗುವುದು ಹೇಗೆ?

ಸಾಂಬ್ರಾಣಯ್ಯ:—ಅಷ್ಟಮದಲ್ಲಿ ಅಂಗಾರಕನಿದ್ದಾನೆ ಅಮ್ಮ!

ಇಬ್ಬರೂ:—ಯಾರಿಗೆ?

ಸಾಂಬ್ರಾಣಯ್ಯ:—ಯಾ—ರಿ—ಗೆ!....ಕೋಪಮಾಡಬೇಡಿ; ಸುನಂದಾ ದೇವಿಯವರಿಗೆ!

ಸುನಂದಾ:—ಹಾಗೆ ಇದ್ದರೆ ಏನು ಫಲ ಸ್ವಾಮಿ?

ಸಾಂಬ್ರಾಣಯ್ಯ:—ವೈಧವ್ಯ

ಇಬ್ಬರೂ:—ವೈಧವ್ಯ? (ಕೂಗುವರು.)

ಇದರಲ್ಲಿ, ಪೂರ್ವಜನ್ಮದ ಸ್ಮರಣೆಯಾಗಿ ಗಂಗಾಧರನು ಮಾದಪ್ಪಯ್ಯನನ್ನು ವಂಚಿಸಲು ನೋಡುವ ಅಂಶವು, ಶ್ರೀ ಎಸ್. ಎನ್. ಹೊಳ್ಳರವರ 'ಪೂರ್ವಜನ್ಮ' ಎಂಬ ಪ್ರಹಸನದಿಂದ ಪ್ರೇರಿತವಾದುದು. —ಕುಡ್ಪಿ ವಾಸುದೇವ ಶೆಣೈ.

ಸಾಂಬ್ರಾಣಯ್ಯ:—ನೀವು ಗಾಬರಿ ಪಡಬೇಡಿ ಮಹಾನಂದಮ್ಮ. ನಿಮಗೆ ಅಷ್ಟಮದಲ್ಲಿ ಅಂಗಾರಕನಿಲ್ಲ. ನೀವು ವಿಧವೆಯಾಗಲಾರಿರಿ.

ಸುನಂದಾ:—(ಕಣ್ಣೀರೊರಸುತ್ತ) ಒಳ್ಳೆ ಜೋಯಿಸರು ನೀವು! ನಾನು ವಿಧವೆಯಾದರೆ ಅವಳು ಸಧವೆಯಾಗಿ ಉಳಿಯುವುದು ಹೇಗೆ ಸಾಂಬ್ರಾಣಯ್ಯ?

ಸಾಂಬ್ರಾಣಯ್ಯ:—(ಕಪ್ಪಗೆ ಮುಖಮಾಡಿ)—ಅದು ಅಹುದು. ಆದರೆ.... ಮಹಾನಂದಾದೇವಿಯವರ ಜಾತಕ ಸ್ವಲ್ಪ ಒಳ್ಳೇದು. ಈಗ ಸಪ್ತಮಾಧಿಪತಿ ಉಚ್ಚಸ್ಥಾನದಲ್ಲಿದ್ದಾನೆ.

ಮಹಾನಂದಾ:—ಅವಳ ಜಾತಕವೇ ಕೆಟ್ಟದು, ಸಾಂಬ್ರಾಣಯ್ಯ.

ಸುನಂದಾ:—ಇವಳದೇನು ಬಂಗಾರಪ್ಪೊ! ಭಾರೀ ಕುಂಡಲಿಯವಳು. ಇವಳನ್ನು ಬೆಳಸಿ ತಂದು ಮದುವೆ ಮಾಡಬೇಕಾದರೆ ಅಪ್ಪ ಸತ್ತ—ಅಣ್ಣ ಊರುಬಿಟ್ಟು ಹೋದ—ಮನೆ ಸುಟ್ಟುಹೋಯಿತು—ಅಕ್ಕಿಗೆ ಕ್ರಯವೇರಿತು.

ಮಹಾನಂದಾ:—ಮತ್ತೆ ಇವಳ ಕುಂಡಲಿ ವಜ್ರ ಎಂದು ತೋರುತ್ತೆ. ತವರುಮನೆಯಲ್ಲಿ ಕೂಳಿಲ್ಲ—ಇಲ್ಲಿ ಇದ್ದವರಿಗೂ ಅನಿಷ್ಟ. ದರಿದ್ರಯೋಗಕ್ಕೆ ಏನು ಹೇಳುತ್ತಾರೆ ಜೋಯಿಸರೆ?

ಸಾಂಬ್ರಾಣಯ್ಯ:—ಕೇಮದ್ರುಮಯೋಗ ಅಂತ!

ಮಹಾನಂದಾ:—ಅವಳ ಕುಂಡಲಿಯಲ್ಲಿ ಆ ದರಿದ್ರಯೋಗ ಉಂಟೋ ನೋಡಿ.

ಸುನಂದಾ:—ಇತ್ತ ಕೊಡಿ ಸಾಂಬ್ರಾಣಯ್ಯ ನೀವು. (ಪುಸ್ತಕ ಎಳೆಯುವಳು.) ನೀವೊಬ್ಬ ಭಾರೀ ಜೋಯಿಸರು—ಅವಳೊಬ್ಬ ಭಾರೀ ಜಾತಕದವಳು!

ಸಾಂಬ್ರಾಣಯ್ಯ:—(ಸ್ವಗತ) ಸತ್ತೆ ನಾನು ಸತ್ತೆ. ಅತ್ತ ಮಿದುಳು ಹೋಯಿತು—ಇತ್ತ ಮೈಯನ್ನು ಹರಿದು ತಿನ್ನುವ ಹಾಗಾಗಿದೆ. (ಪ್ರಕಟವಾಗಿ) ಅವ್ವಾ—ನಿಮ್ಮ ದಮ್ಮಯ್ಯ. ಹೊಡೆದಾಡಿಕೊಳ್ಳಬಾರದು. ಮಾದಪ್ಪಯ್ಯನವರ ಎರಡು ಕಣ್ಣುಗಳು ನೀವು.

ಸುನಂದಾ:—ಮತ್ತೆ ಅವಳಿಗೇನು ಮುಸುಡು!

ಸಾಂಬ್ರಾಣಯ್ಯ:—ಸಮಾಧಾನ ಮಾಡಿಕೊಳ್ಳಿ. ಪತಿಯ ಕಂತಕ ಸಮಯ—ನೀವು ಹೊಡೆದಾಡಿಕೊಳ್ಳಬಾರದು.

ಇಬ್ಬರೂ:—(ಅಳುತ್ತ) ಅದಕ್ಕೆ ಪರಿಹಾರವೇ ಇಲ್ಲವೆ?

ಸಾಂಬ್ರಾಣಯ್ಯ:—[illegible] ಪರಿಹಾರವಿರದೆ [illegible]ಂಟೆ? ಜಗತ್ತಿನಲ್ಲಿ ಪ್ರತಿಯೊಂದಕ್ಕೂ ಪರಿಹಾರವಿದೆಯಮ್ಮ.

ಸುನಂದಾ:—ಏನು ಮಾಡಬಹುದು ಸಾಂಬ್ರಾಣಯ್ಯ?

ಸಾಂಬ್ರಾಣಯ್ಯ:—ಮೃತ್ಯುಂಜಯ ಹೋಮ ಮಾಡಿಸಬೇಕಮ್ಮ.

ಮಹಾನಂದಾ:—ಮೃತ್ಯುಂಜಯ ಹೋಮ ಮಾಡಿಸಿದರೆ ಮತ್ತೆ ಸಾವಿಲ್ಲವೆ?

ಸಾಂಬ್ರಾಣಯ್ಯ:—ಸಾವು ಇಲ್ಲವೆ ಎಂಬುದು ಬಹು ದೊಡ್ಡ ಪ್ರಶ್ನೆ. ನನ್ನಪ್ಪ ಬದುಕಿದ್ದಾನೊ? ಒಟ್ಟಾರೆ, ಈಗ ಬಂದ ಕಂತಕ ದೂರಮಾಡಬಹುದು!

ಸುನಂದಾ:—ಆ ಹೋಮಕ್ಕೆ ಏನು ಖರ್ಚು ಇದೆ ಜೋಯಿಸರೆ?

ಸಾಂಬ್ರಾಣಯ್ಯ:—ಖರ್ಚು.......(ಲೆಕ್ಕ ಹಾಕಿದಂತೆ ಮಾಡಿ)—ಒಂದು ಆರುನೂರು ರೂಪಾಯಿ ಅಷ್ಟೆ!

ಮಹಾನಂದಾ:—ಆರುನೂರೊ? ಎಂತಹ ಹೋಮ ಅಪ್ಪ ಇದು!

ಸಾಂಬ್ರಾಣಯ್ಯ:—ಭಕ್ತ—ಆರುನೂರು ರೂಪಾಯಿ—ಒಂದಾಣೆ ಕಡಿಮೆ ಇಲ್ಲ. ಒಂದು ರೂಪಾಯಿ ಕಡಿಮೆ ಮಾಡಿ 599 ಖರ್ಚುಮಾಡಿದರೆ, ಒಂದು ರೂಪಾಯಿ ತೂಕ ಪ್ರಾಣ ಹೋದೀತು!

ಸುನಂದಾ:—ನಾಲ್ಕು ವರ್ಷದ ಹಿಂದೆ ಇಂತಹ ಹೋಮಕ್ಕೆ ಎಷ್ಟು ಖರ್ಚು ಇತ್ತು ಸಾಂಬ್ರಾಣಯ್ಯ?

ಸಾಂಬ್ರಾಣಯ್ಯ:—ಅಷ್ಟೆ ಆರುನೂರೇ!



ಶ್ರೀಮಚ್ಛ್ರೀ ಸುಕೃತೀಂದ್ರತೀರ್ಥ ಶ್ರೀಪಾದಂಗಳವರು, ಈ ತಿಂಗಳ ತಾ. 12ರಲ್ಲಿ ಮಂಗಳೂರಲ್ಲಿ, ಒಂದು ಸೇವಾ ಸಂಘದ ಬಾಲಕಾಶ್ರಮದ ಉದ್ಘಾಟನಾ ಸಮಾರಂಭ ಜರಗಿಸಿದ ಸಂದರ್ಭದಲ್ಲಿ ತೆಗೆದ ಛಾಯಾಚಿತ್ರ

ಸುನಂದಾ:—ಈಗ ದವಸಧಾನ್ಯಗಳ ಕ್ರಯ ಹೆಚ್ಚಿದೆಯಲ್ಲಾ—ಆರುನೂರೇ ಅಂತ ಏಕೆ ಹೇಳಿದಿರಿ? ಈಗಿನ ಲೆಕ್ಕದಲ್ಲಿ ಒಂದು ಸಾವಿರ ರೂಪಾಯಿಯಾದರೂ ಆಗಬಹುದು.

ಮಹಾನಂದಾ:—ಅಹುದು. ಆ ಲೆಕ್ಕದಲ್ಲಿ, ನೀವು 400 ರೂಪಾಯಿ ತೂಕ ಪ್ರಾಣ ತೆಗೆದಂತಾಗಲಿಲ್ಲವೆ?

ಸಾಂಬ್ರಾಣಯ್ಯ:—ಅದು ನಿಜ. ಆದರೆ,.......

(ಮಾದಪ್ಪಯ್ಯನ ಪ್ರವೇಶ. ಕೈಯಲ್ಲಿ ಹಾಸಿಗೆ ಕಟ್ಟು ಮತ್ತು ಚೀಲ ಇವೆ.)

ಇಬ್ಬರು ಹೆಂಡಿರು:—ದೇವಾ! ಬಂದರು!—(ಎನ್ನುತ್ತ ಹೋಗಿ, ಇಬ್ಬರು ಎರಡು ಕೈಗಳನ್ನು ಹಿಡಿದು ಸೆಳೆದಾಡುವರು,—ಮತ್ತು ಅಳುವರು)

ಮಾದಪ್ಪಯ್ಯ:—(ಕಂಗಾಲಾಗಿ) ಎಲ ಎಲ ಎಲ! ಎಂತಹ ಉಪಚಾರ! ಹೋಗಿ! ~~ನೋಡುವ ಅತ್ತ~~! ನಾನೇನು ಕಾಲೇಜು ಹುಡುಗನೊ? ನನಗಾಗುವುದಿಲ್ಲ ಹಾಗೆಲ್ಲ ವೇಷ ಮಾಡಿದರೆ! 500 ಮೈಲು ಪ್ರಯಾಣಮಾಡಿ ಪಾ[illegible] ಹೋಗಿದೆ ಇಲ್ಲಿ—ಇವರು ಬಂದು ಎಳೆಯುತ್ತಾರೆ!

ಸುನಂದಾ:—ತಮ್ಮನ್ನು ನೋಡುವ ಭಾಗ್ಯ ಲಭಿಸಿದ್ದಕ್ಕೆ ಹಾಗೆ ಹಾಯಬೇಡಿರಿ!

ಮಹಾನಂದಾ:—ಗಂಡನೆಂದು ಬಳಿಗೆ ಬಂದರೆ ಒದೆಯಬೇಡಿರಿ!

ಮಾದಪ್ಪಯ್ಯ:—ಏನು? ಒದೆಯೋದು? ರೈಲ್ವೆಸ್ಟೇಶನಿನಿಂದ ಇಲ್ಲಿ ತನಕ ನಡೆದು ನಡೆದು ಕಾಲು ಚೂರಾಗಿದೆ. ಏನು ಮಾತಾಡುತ್ತೀರಿ ನೀವು!........... ಏನಿದು ಸಾಂಬ್ರಾಣಯ್ಯ?

ಸಾಂಬ್ರಾಣಯ್ಯ:—(ತಾನೇನೂ ಅರಿಯೆನು ಎಂಬ ಅರ್ಥದಲ್ಲಿ ಕೈ ಬರಿದು ಮಾಡಿ ತೋರಿಸುವನು. ಮತ್ತು ಅಲ್ಲಿಂದ ಮೆಲ್ಲನೆ ಹೋಗುವನು.)

ಮಹಾನಂದಾ:—ಪ್ರಾಣಪ್ರಿಯಾ!

ಮಾದಪ್ಪಯ್ಯ:—ಸುಡು! ಹೋದೆ ನಾನು! ಇನ್ನೊಮ್ಮೆ ಹಾಗೆ ಹೇಳಬೇಡ! ಪ್ರಾಣಪ್ರಿಯ ಎಂದರೆ ಪ್ರಾಣ ಬಿಟ್ಟೇನು! ಪ್ರೀತಿ ಎಂದರೆ ನನಗೇನೆಂದು ಗೊತ್ತಿಲ್ಲ. ನಾಲ್ಕು ಸೂಡಿ ವೀಳ್ಯದೆಲೆ—ಭಂಡಸಾಲೆ—ಎರಡು ಊಟ—ಇವರ ಹೊರಗೆ ನಾನೇನೂ ಅರಿಯೆ! ನೀವು ಹೆಂಡಿರಹುದು—ನಾನು ನಿಮ್ಮ ಗಂಡ ಅಹುದು. ಪ್ರೀತಿ ನನಗೆ ಗೊತ್ತಿಲ್ಲ. ನೀವು ಕಲಿಸಬಾರದು. ಖುಶಿ ಇದ್ದರೆ ನಾಲ್ಕು ಮಾತು ಮಾತಾಡೋದು—ಇಲ್ಲವಾದರೆ ಬಿಡೋದು.

ಸುನಂದಾ:—ಹೆಂಡತಿಯು ಗಂಡನನ್ನು ಪ್ರೀತಿಸದೆ ಮತ್ತಾರನ್ನು ಪ್ರೀತಿಸಲಿ?—

ಮಾದಪ್ಪಯ್ಯ:—ಚೆಕ್ಕಿಗೆ ಪ್ರೀತಿಸು—ಚೆಕ್ಕಿಗೆ!

ಮಹಾನಂದಾ:—ಒಂದು ಮಗುವಿನ ಭಾಗ್ಯವನ್ನೂ ಕೊಡಲಿಲ್ಲ ದೇವರು!

ಮಾದಪ್ಪಯ್ಯ:—ದೇವರು ಕೊಡದಿದ್ದರೆ ನೀನು ಹೆತ್ತುಕೊಳ್ಳಬಹುದಿತ್ತಲ್ಲ! ಹೆರಲಿಲ್ಲವೇಕೆ ಹತ್ತಿಪ್ಪತ್ತು ಮಕ್ಕಳನ್ನು? ಯಾರು ಬೇಡ ಅಂದರು? (ಸುನಂದೆಯನ್ನು ನೋಡಿ) ನೀನು ಅವಳಿಗಿಂತ ಪ್ರಾಯದಲ್ಲಿ ಎರಡು ವರ್ಷ ಹೆಚ್ಚಿನವಳು. ನೀನು ಹೆರಲಿಲ್ಲವೇಕೆ?—ಮತ್ತೇನು ಮಾಡಿದ್ದು ನೀವು ಇಷ್ಟು ವರ್ಷ ಈ ಮನೆಯಲ್ಲಿ?

ಮಹಾನಂದಾ:—ಅದೃಷ್ಟ ಬೇಡವೆ?

ಮಾದಪ್ಪಯ್ಯ:—ಅದಕ್ಕೆ ನಾನೇನು ಮಾಡಬೇಕು? ಒಳ್ಳೇ ಜಾತಕ ಅಂತ ನಿನ್ನನ್ನು ಮದುವೆಯಾಗಿದ್ದೇನೆ—ಆದರೆ, ಪುತ್ರಲಾಭವಿಲ್ಲ. ಯಾರು ಏನು ಮಾಡೋದು?........ಹೋಗಿ, ಹೋಗಿ, ಬಿಸಿನೀರು, ಅನ್ನಗಿನ್ನ ತಯಾರಾಗಿದೆಯೇ ನೋಡಿ. ಅದನ್ನೆಲ್ಲ ಬಿಟ್ಟು,—ಮದರಾಸಿನಿಂದ ಬಂದು ಇಳಿದವನಿಗೇ 'ಪ್ರಿಯಕರಾ' ಎಂದು ಮೈಮೇಲೆ ಬಿದ್ದರೆ ಪುನಃ ಮದರಾಸಿಗೆ ಹೋದೇನು!

ಸುನಂದಾ:—ಪುನಃ ಹೋಗಬೇಡಿ!

ಮಾದಪ್ಪಯ್ಯ:—ಹಾಗೆ ಹೇಳು. ಹೋಗೋದಿಲ್ಲ. ಏನು: ನನಗೇನು ಮುಂಡೆ ಇಲ್ಲವೇ? ಯಾಕೆ ಹೋಗೋದು? ಒಂದು ಮಾತಿಗೆ ಹೇಳಿದೆ—ಹೋಗುತ್ತೇನೆಂತ........ಸಾಂಬ್ರಾಣಿಯು ಒಳ್ಳೆ ಹೋದರು! ಸಾಂಬ್ರಾಣಿಯು........ಇಲ್ಲ. ಹೋದರು ಕಾಣುತ್ತದೆ, ಕರ್ಮ ಅವರದು. ಅವರಿಗೂ ಉಂಟಲ್ಲ—ಇದೇ ರೀತಿ ಒಂದು ಜತ ಎಮ್ಮೆ! (ತೆರೆ.)

ದೃಶ್ಯ ೪

[ರಸ್ತೆ:—ಗಂಗಾ ಮತ್ತು ಶೀನು ಬರುತ್ತಿರುವರು.]

ಶೀನು:—ಏನಯ್ಯಾ—ಮಾದಪ್ಪಯ್ಯ ಬಂದಿರುವರು. ರೈಲಿನಿಂದ ಇಳಿದು ಬರುವುದನ್ನು ನೋಡಿದ.

ಗಂಗಾ:—ಅಪ್ಪನೇ?

ಶೀನು:—ಏನು. ಅಷ್ಟು ಬೇಗ ಅಪ್ಪ ಎನ್ನಲಿಕ್ಕಾರಂಭ! ಇನ್ನೂ ದತ್ತ ತೆಕ್ಕೊಂಡು ಆಗಿಲ್ಲ.

ಗಂಗಾ:—ಇವ ದತ್ತದ ಮಗನಲ್ಲ—ಮಾರಾಯಾ. ಸತ್ತದ ಮಗ! ಇಪ್ಪತ್ತೆರಡು ವರ್ಷಗಳ ಹಿಂದೆ. ಮೂರು ವರ್ಷದ ಮಗು. ಇಲಿ ಪಾಷಾಣ ಹಾಕಿಟ್ಟ ಬಾಳೆಹಣ್ಣು ತಿಂದು ಪ್ರಾಣಬಿಟ್ಟಿತು!

ಶೀನು:—ಹ್ಞೆ? ಪ್ರಾಣಬಿಟ್ಟಿತು, ಅಲ್ಲವೆ? ಈಗ ಪುನಃ ಈ ರೀತಿ ಇಲಿಯಾಗಿ ಬಂದು, ಆ ಮುದುಕನಿಗೆ ಪಾಷಾಣಸ್ವರೂಪಿಯಾಗುತ್ತಿದೆ.

ಗಂಗಾ:—(ವಿನೋದದಿಂದ) ಅಕೋ ಜೋಕೆ! ನನ್ನನ್ನು ಇಲಿ ಗಿಲಿ ಎನ್ನಬೇಡ. ಪ್ರಾಯವೇನೊ ಅರುವತ್ತು ಆಗಿರಬಹುದು. ಆದರೂ ಮುದುಕ ಎಂದರೆ ನನಗಾಗೋದಿಲ್ಲ. ನಾನು ಯಾರು ಗೊತ್ತೆ?

ಶೀನು:—ಮಾದಪ್ಪಯ್ಯನ ಮಗ. ಪೂರ್ವಾಶ್ರಮದ ಹೆಸರು ಗಂಗಾ. ಈಗ ಯಮುನಾ ಅಂತ ಹೆಸರಿಡಬಹುದು.

ಗಂಗಾ:—"ಮಾದಪ್ಪಯ್ಯ ಎಂಡ್ ಸನ್" ಕಂಪೆನಿಯ ಮನೇಜರ ನಾನು. ವ್ಯಾಪಾರದಲ್ಲಿ ಹುಲಿ—ಮನೆಯಲ್ಲಿ ಸಿಂಹ.

ಶೀನು:—ನನ್ನ ಮಟ್ಟಿಗೆ ನರಿ!

ಗಂಗಾ:—ದೋಸ್ತಿ ವಿಚಾರ ಬೇರೆ. ಆದರೂ, ನಿನ್ನಲ್ಲಿ ಮಾತನಾಡುವ ಜನ ಯಾದರೆ ಗಂಗಾಧರರಾವ್ ಎಂದು ಕರಿ.

ಶೀನು:—ನಮಸ್ಕಾರ ಗಂಗಾಧರರಾಯರೇ!

ಗಂಗಾ:—ನಮಸ್ಕಾರ! ಯಾವಾಗ ಬರೋಣಾಯಿತು?

ಶೀನು:—(ದೈನ್ಯ ನಟಿಸಿ) ಈ ದಿನವೇ ಬಂದೆ ಸ್ವಾಮಿ! ಸೌಖ್ಯವೇ?

ಗಂಗಾ:—(ಗಾಂಭೀರ್ಯ ನಟಿಸಿ) ಹಂ! ಈ ವರ್ಷ ಮ್ಹಾಲು ಎಲ್ಲಿ ತೆಗೆದಿರಿ?

ಶೀನು:—ತೆಗೆಯಲಿಲ್ಲ ಸ್ವಾಮಿ. ಈಗ ಖರೀದಿ ಮಾಡಲಿಕ್ಕೆ ಧೈರ್ಯವಿಲ್ಲ.

ಗಂಗಾ:—ಧೈರ್ಯವಿಲ್ಲವೇಕೆ! ಇನ್ನು ಕ್ರಯವೇರುತ್ತದೆ—ಏರುತ್ತಾ ಹೋಗುತ್ತದೆ. ಬೇಗ ತಕ್ಕೊಳ್ಳುವುದು ಒಳ್ಳಿತು.

(ಒಬ್ಬರು ಇನ್ನೊಬ್ಬರನ್ನು ನೋಡಿ ಒಳ್ಳೊಳ್ಳನೆ ನಗುವರು.)

ಗಂಗಾ:—ಹೇಗೆ—ಮಾದಪ್ಪಯ್ಯನಿಗೆ ಈ ಮಗ ಸಿಕ್ಕಿದ್ದು ಪುಣ್ಯ ಅಹುದೋ ಅಲ್ಲವೊ? ಹೆರಿಗೆಯಿಲ್ಲ—ಹರಕೆಯಿಲ್ಲ. ಬೆಳೆಸಿ ತರುವ ಕಷ್ಟವೂ ಇಲ್ಲ. "ಶನಿ ಪ್ರಭಾವ"ದಲ್ಲಿ ಬಸಕ್ಕೆಂದು ಆಕಾಶದಿಂದ ಶನಿ ಇಳಿದು ಬಂದಂತೆ ಬಂದಿದ್ದಿ. ಹುಟ್ಟುವಾಗಲೇ ಇಪ್ಪತ್ತೆರಡು ವರ್ಷ.

ಗಂಗಾ:—ಈ ದಿನವೇ ನೂರರ ಐದು ನೋಟು ಜಾರಿಸೋದು!

ಶೀನು:—ಹೆಚ್ಚು ಸಿಕ್ಕಿದರೆ ಹೆಚ್ಚು! ಅಪ್ಪನ ಗಂಟಲ್ಲವೆ?

ಗಂಗಾ:—ಆದರೆ—ಅಹುದೊ ಶೀನು! ಅದರಲ್ಲಿ ಆ ದೊಡ್ಡ ಅಮ್ಮ ಇದ್ದಾಳಲ್ಲ—ಅವಳನ್ನು ನೋಡಿದ ಕೂಡಲೇ ನನಗೆ ಕೈಕಾಲೇ ತಣ್ಣಗಾಗುತ್ತದೆ ಮ್ಹಾರಾಯಾ!

ಶೀನು:—ನಿನಗೇನು ಸನ್ನಿಪಾತ! ಇಬ್ಬರನ್ನೂ ಅಮ್ಮಾ ಎಂತ ಕರೆ! ಪೂರ್ವ ಜನ್ಮದ ಅಮ್ಮ ಆ ಕಿರಿಯವಳು, ನೆನಪಿರಲಿ!

ಗಂಗಾ:—ಆ ಲೋಲ್ಕದವಳೇ? ಅದನ್ನು ನೋಡಿದರೆ ನನಗೆ ಮಗುವಿನ ಹಾಗೆ ಕಾಣೋದು ಶೀನು! 'ಅಮ್ಮ' ಎಂತ ಕರೆಯಲಿಕ್ಕೆ ನಾಲಿಗೆ ಕೇಳೋದೇ ಇಲ್ಲ.

ಶೀನು:—'ಅಮ್ಮ' ಎಂದು ಕರೆಯದಿದ್ದರೆ ಚಿಂತೆಯಿಲ್ಲ 'ಮಗು' ಎಂದು ಮಾತ್ರ ಸಂಬೋಧಿಸಬೇಡ!

ಗಂಗಾ:—ಹಾಗೇನು ನನಗೆ ಹುಚ್ಚೆ? (ಹೋಗುವರು.)

ದೃಶ್ಯ ೫

[ಮಾದಪ್ಪಯ್ಯನ ಮನೆ. ಸುನಂದೆಯು [illegible] ಮಹಾನಂದೆ ಬರುವಳು.]

ಸುನಂದಾ:—ದೇವಾ. [illegible] ಹಾಗೆ ಹೇಳಲಾರೆ. [illegible] ಕುಲವೇ [illegible]ಲ್ಲ. ನನ್ನ ಪತಿಯನ್ನು ದೀರ್ಘಾಯುವಾಗಿ ಮಾಡು—ಅಷ್ಟೇ ಬೇಡಿಕೊಳ್ಳುವೆನು. ಅವನ ಮೇಲೆ ಬರುವ ಕಂಟಕಗಳನ್ನೋಡಿಸಲು ನನ್ನಲ್ಲಿ ಯೋಗ್ಯತೆ ಕೊಡು. ನಾನು ಸುಮಂಗಲೆಯಾಗಿಯೇ ಸಾಯುವಂತೆ ವರವನ್ನು ಕರುಣಿಸು.

ಮಹಾನಂದಾ:—ಅಕ್ಕಾ!

ಸುನಂದಾ:—ಮಹಾನಂದೆಯೋ?

ಮಹಾನಂದಾ:—(ಕಣ್ಣೀರೊರಸುತ್ತಾ) ಏನಿಲ್ಲ ಅಕ್ಕಾ. ನಿನಗೇನಾದರೂ ನಾಲ್ಕು ಕೆಟ್ಟ ಮಾತುಗಳನ್ನಾಡಿದ್ದರೆ, ಕ್ಷಮಿಸು ಅಕ್ಕಾ.

ಸುನಂದಾ:—ಇಸೀ.—ನಾನೂ ಮಾತಾಡಲಿಲ್ಲವೇ? ಆದುದೆಲ್ಲ ಆಗಿ ಹೋಯಿತು. ಈಗ ನಮ್ಮ ಪತಿಯ ಮೇಲೆ ಬಂದ ಕಂಟಕವನ್ನು ತಪ್ಪಿಸುವಂತೆ ಇಬ್ಬರೂ ಕೂಡಿ [illegible].

ಮಹಾನಂದಾ:—(ಫೋ' [illegible]) ನಾನು ನೋಡಲಿಲ್ಲ—ನನ್ನ ಮುಖವನ್ನು ನೀನು ನೋಡಲಿಲ್ಲ.

ಸುನಂದಾ:—ಈಗ ನೋಡುತ್ತಿದ್ದೆವಲ್ಲಾ—ಇನ್ನೇಕೆ ದುಃಖ? ನೋಡು—ಅವರಿಗೆ ದೀರ್ಘಾಯುಷ್ಯ ಕೊಡುವಂತೆ ದೇವರಲ್ಲಿ ಬೇಡಿಕೊಳ್ಳಬೇಕು. ಮತ್ತು ಮೂರ್ಖರಾಗಿ ಸುಮ್ಮನೆ ಕುಳಿತುಕೊಳ್ಳುವುದಲ್ಲ. ಅವರ ಇನ್ಸೂರ್ ಗಿನ್ಸೂರ್ ಉಂಟೇ—ಯಾವ ಹಣವನ್ನು ಎಲ್ಲಿ ಎಷ್ಟು ಇಟ್ಟಿದ್ದಾರೆ. [illegible]

ಮಹಾನಂದಾ:—ಅವರು ಪೆಟ್ಟಿಗೆಗೆ ಬೀಗ ಹಾಕಿರುವರಲ್ಲಾ!

ಸುನಂದಾ:—ನನ್ನೊಡನೆ ಬೀಗದ ಕೈ ಇದೆ ಬಾ. (ಬಂದು ಪೆಟ್ಟಿಗೆಯ ಬಾಗಿಲು ತೆಗೆದು, ಕಾಗದ ಪತ್ರಗಳನ್ನು ಕೆಳಗೆ ಹಾಕುವರು. ಅಷ್ಟರಲ್ಲಿ ಗಂಗಾಧರನು, ತಲೆ ತಿರುಗಿದಂತೆ ನಟನೆ ಮಾಡುತ್ತಾ ಬರುವನು.)

ಮಹಾನಂದಾ:—ಅಕ್ಕಾ. ಇಲ್ಲಿ ನೋಡಿ—ಇದ್ದಾರು?

ಸುನಂದಾ:—ಅಯ್ಯ—ಇದೇನು ವೇಷ!

ಗಂಗಾ: (ಥಕ್ಕನೆ ಅವರ ಕಡೆಗೆ ನೋಡಿ. ಬೆಚ್ಚಿಬಿದ್ದು. ಸ್ವಗತನಾಗಿ) ಹೇ ಪರಮಾತ್ಮಾ—ಈ ಹೆಣ್ಣು ಹುಲಿಗಳು ಇಲ್ಲಿದ್ದಾವೆಯೆಂದು ಯಾರಿಗೆ ಗೊತ್ತಪ್ಪ! ಈಗೇನು ಮಾಡಲಿ!

ಸುನಂದಾ:—ಯಾರಯ್ಯಾ ನೀನು? ಕುಡಿದು ಬಂದಿರುವಿಯೋ?

ಗಂಗಾ:—(ನಟಿಸುತ್ತಾ) ಅಪ್ಪಾ—ಅಮ್ಮಾ—ಇಲಿ ಪಾಷಾಣ—ಬಾಳೆ ಹಣ್ಣು

ಸುನಂದಾ:—ಇಸಸಸಸ! ಇದೇನಪ್ಪ ಹೊಸ ರೋಗ. ಎಂಥಾ ಇಲಿ ಪಾಷಾಣವಂತೆ?

ಗಂಗಾ:—ಹೊಟ್ಟೆ ಉರಿ—ಮೈಗೆ ಬೆಂಕಿ—ಇಪ್ಪತ್ತೆರಡು ವರ್ಷ— — —

ಮಹಾನಂದಾ:—ಇಪ್ಪತ್ತೆರಡು ವರ್ಷದಿಂದ ಹೊಟ್ಟೆಗೆ ಬೆಂಕಿ ಅಂತೆ!

ಸುನಂದಾ: ಅದಕ್ಕೆ ಇಲ್ಲೇಕೆ ಬರೋದು—ಆಸ್ಪತ್ರೆಗೆ ಹೋಗಲಿ!

ಗಂಗಾ:—ಅಮ್ಮಾ ಹೋದಳು—ಅಪ್ಪ ಭಂಡಸಾಳೆ— —(ಮೂರ್ಛೆ ಹೋದಂತಾಗುವನು. ಸುನಂದಾ, ಮಹಾನಂದೆಯರು ಮುಖದ ಮೇಲೆ ಸೆರಗು ಹಾಕಿ ನಾಚಿದವರಂತೆ ನಿಂತುಕೊಳ್ಳುವರು.)

(ಮಾದಪ್ಪಯ್ಯನ ಮತ್ತು ಸಾಂಬ್ರಾಣಯ್ಯನ ಪ್ರವೇಶ.)

(ಸುನಂದಾ-ಮಹಾನಂದಾ-ಇಬ್ಬರೂ ಓಡಿಹೋಗಿ ಮಾದಪ್ಪಯ್ಯನ ಎರಡೂ ಕೈಗಳನ್ನು ಹಿಡಿವರು.

ಮಾದಪ್ಪಯ್ಯ:—ಹೇ ದೇವರೇ—ಬಂದರಲ್ಲಾ ಪುನಃ ತಿನ್ನಲಿಕ್ಕೆ! ಈ ದಿನ ಮುಖಮುಖ ನೋಡಿಕೊಂಡು ರಾಜಿಯಲ್ಲಿದ್ದಾರ. ಹೋಗಿರಿ. ಇಲ್ಲಿಂದ—ಹುಂ!

[illegible]

ಮಾದಪ್ಪಯ್ಯ ನೀವು ಹೋಗದಿದ್ದರೆ ನಾನೇ ಹೋಗುತ್ತೇನೆ. ಹೀಗೆಲ್ಲ ಮಾಡಿದರೆ ನನ್ನ ಪ್ರಾಣ ಹೋಗುತ್ತದೆಂದು ನೂರು ಸಲ ಹೇಳಿದ್ದೇನೆ. ವ್ಯಾಪಾರ ಮಾಡಿ ಮಾಡಿ ನನ್ನ ನರಗಳು ಗಟ್ಟಿಯಾಗಿವೆ. ಹೆಂಗುಸರು ನನ್ನ ಮೈಗೆ ಮುಟ್ಟಿದರೆ ನಾನು ಕಲ್ಲಾದೇನು!

ಇಬ್ಬರೂ: (ಅವನ ಕಾಲುಗಳನ್ನು ಹಿಡಿದು) ಬೇಡ-ಬೇಡ ಹೋಗಬೇಡಿ!

ಮಾದಪ್ಪಯ್ಯ: [illegible]

[illegible] (ಗಂಗಾಧರನನ್ನು ನೋಡಿ)

ಇದೇನು—[illegible] ಹೇಳಬೇಕು—ಇಲ್ಲದಿದ್ದರೆ ಮನೆಗೆ ಬೆಂಕಿ ಕೊಡುತ್ತೇನೆ.

ಸುನಂದಾ:—ಹಾಗೆ ಮಾಡಬೇಡಿ!

ಮಾದಪ್ಪಯ್ಯ—ಹಾಗೆಯೇ ಮಾಡುತ್ತೇನೆ. ಮನೆಯೆಂದರೆ ಮನೆ—ಬೆಂಕಿಯೆಂದರೆ ಬೆಂಕಿ!

ಮಹಾನಂದಾ:—ತಮಗೆ ಕಂಠಕವಿದೆ. ಬೆಂಕಿಗೆ ಮುಟ್ಟಬೇಡಿರಿ.

ಸಾಂಬ್ರಾಣಯ್ಯ:—ಆಹುದು. ಸ್ವಾಮಿ—ಭಾರೀ ಕಂಠಕ. ಬೆಂಕಿಗೆ ಮುಟ್ಟಿದರೆ ಕೈ ಸುಟ್ಟೀತು!.......ಅಮ್ಮಾ ಒಳಗೆ ಹೋಗಿ ಬೆಂಕಿಪೆಟ್ಟಿಗೆ ಅಡಗಿಸಿ ಬನ್ನಿ. ಹೋಗಿ!

ಮಾದಪ್ಪಯ್ಯ:—ಕಂಠಕ? ಕಂಠಕವಿದ್ದರೆ ಮೊದಲೇ ಹೇಳಲಿಲ್ಲ ಏಕೆ?

ಸಾಂಬ್ರಾಣಯ್ಯ:—ತಾವು ಗಾಬರಿ ಪಟ್ಟರೆ......

ಮಾದಪ್ಪಯ್ಯ: ಗಾಬರಿ ಯಾಕೆ? ಗಾಬರಿ ಗೀಬರಿ ಒಂದೂ ಇಲ್ಲ. ಬಂದದ್ದನ್ನು ಅನುಭವಿಸುವುದು. ಆದರೆ. ಇವರು ಹುಡುಕುತಿದ್ದುದೇನು?

ಮಹಾನಂದಾ:—ತಮ್ಮ ಇನ್ಶೂರ್ ಗಿನ್ಶೂರ್ ಇದ್ದರೆ.......?

ಮಾದಪ್ಪಯ್ಯ:—ಎಂಥಾದ್ದು? ಇನ್ಶೂರು? .... ಇದೆ ಇನ್ಶೂರು ಐವತ್ತು ಸಾವಿರಕ್ಕೆ! ಆದರೆ, ನಿಮಗೆ ಸಿಕುವುದಿಲ್ಲ. ಅದರ ಬದಲಿಗೆ ಪಿ ಆ......... (ಎಂದು ತಿರುಗುವಾಗ, ಅಲ್ಲಿ ಬಿದ್ದುಕೊಂಡ ಗಂಗಾಧರನನ್ನು ನೋಡಿ)—ಎಲವೊ—ಇದೇನು! ಇನ್ಶೂರ್ ಏಜಂಟೇ ಅಂತೆ!

ಸುನಂದಾ:—ಅವನೊಬ್ಬ ಕುಡಿಕನೊ ಏನೋ! ಈಗ ತಾನೆ ಬಂದು ಬಿದ್ದುಕೊಂಡಿದ್ದಾನೆ.

ಮಹಾನಂದಾ:—ಹೊಟ್ಟೆ ಬೆಂಕಿ ಅಂತೆ! (ಗಂಗನು ಎದ್ದು, ಕಣ್ಣು ತಿರುಗಿಸುವನು. ಮತ್ತು—)

ಗಂಗಾ:—ಅಪ್ಪಾ—ಅಮ್ಮಾ—ಇಲಿಪಾಷಾಣ—ಬಾಳೆಹಣ್ಣು!

ಮಾದಪ್ಪಯ್ಯ:—(ಆಶ್ಚರ್ಯದಿಂದ) ಏನು-ಇಲಿಪಾಷಾಣ-ಬಾಳೆಹಣ್ಣು! ಟೆಲಿಗ್ರಾಮ್ ಬರೆದ ಹಾಗೆ ಮಾತಾಡುತ್ತಾನೆ! ಏನು ಸಾಂಬ್ರಾಣಯ್ಯ ಇದು?

ಸಾಂಬ್ರಾಣಯ್ಯ:—ಗಿರಾವೋ ಏನೋ!

ಮಾದಪ್ಪಯ್ಯ:—ಗಿರಾವು ಆದರೆ, ಇಲ್ಲೇಕೆ ಬಂದು ಬಿದ್ದು ಈ ರೀತಿ ಅಪ್ಪಾ—ಅಮ್ಮಾ—ಇಲಿಪಾಷಾಣ ಎಂತ ಟೆಲಿಗ್ರಾಫ್ ಹೊಡೆಯಬೇಕು, ಟೆಲಿಗ್ರಾಫ್ ಆಫೀಸಿಗೆ ಹೋಗಲಿ!

ಗಂಗಾ:—ಇಪ್ಪತ್ತೆರಡು ವರ್ಷ—ಅಮ್ಮ ಹೋದಳು—ಪಾಷಾಣ—ಬಾಳೆ ಹಣ್ಣು!

ಸಾಂಬ್ರಾಣಯ್ಯ:—(ಕುಳಿತು) ಏನು, ಸರಿಹೇಳು!

ಗಂಗಾ:—ಅಪ್ಪಾ—ಅಮ್ಮಾ!

ಮಾದಪ್ಪಯ್ಯ:—ಏನಂತೆ ಸಾಂಬ್ರಾಣಯ್ಯ? ಯಾರ ಅಪ್ಪನಂತೆ?

ಸಾಂಬ್ರಾಣಯ್ಯ:—ಮಾದಪ್ಪಯ್ಯನವರೆ,—ಇದು ಗಿರಾವೂ ಅಲ್ಲ—ಟೆಲಿಗ್ರಾಫೂ ಅಲ್ಲ. ಇದು ನಾನು ಹೇಳಿದಲ್ಲಿಗೇ ಬಂತು!

ಮಾದಪ್ಪಯ್ಯ:—ಎಲ್ಲಿ ಬಂತು?

ಸಾಂಬ್ರಾಣಯ್ಯ:—ಅರ್ಥವಾಗಲಿಲ್ಲವೆ? ಇವ ನಿಮ್ಮ ಮಗ!

ಮಾದಪ್ಪಯ್ಯ:—ನನ್ನ ಮಗ?

ಸುನಂದಾ, ಮಹಾನಂದಾ:—ಮಗ!

ಸಾಂಬ್ರಾಣಯ್ಯ:—ಮಗ, ಥೇಟು ಮಗ! ಇಪತ್ತೆರಡು ವರ್ಷಗಳ ಹಿಂದೆ ಇಲಿಪಾಷಾಣ ತಿಂದು ಸತ್ತ ನಿಮ್ಮ ಮಗ—!

ಸುನಂದಾ:—ಏನು ಸ್ವಾಮಿ ಇದು ವಿಪರೀತ! ಈಗ ಎಲ್ಲಿ ಇಷ್ಟು ದೊಡ್ಡದಾಗಿ ಹುಟ್ಟಬಂತು? [illegible]

ಮಾದಪ್ಪಯ್ಯ: ಇಲಿಪಾಷಾಣ ತಿಂದ ಮಗು ಈಗ ಜನ್ಮ ತಾಳಿ ಬಂದಿದೆ! ಎಲ್ಲಿತ್ತು ಇದು!

ಸಾಂಬ್ರಾಣಯ್ಯ:—ತಿಳಿಯದೆ ಸ್ವಾಮಿ? ಎಲ್ಲಿಯೋ ಪುನಃ ಹುಟ್ಟಿತು ಆದರೆ. ಕರ್ಮಧರ್ಮ ಸಂಯೋಗದಿಂದ ಪೂರ್ವ ಜನ್ಮ [illegible] ದಕ್ಕೀಗ ನಾನು ಹೇಳಲಿಲ್ಲವೆ ಮೊನ್ನೆ—[illegible]

ಮಾದಪ್ಪಯ್ಯ:—(ಆಶ್ಚರ್ಯ—ಸಂತೋಷದಿಂದ 'ಹಂ' ಎನ್ನುತ್ತ ಹೋಗಿ ಗಂಗಾಧರನನ್ನು ಅಪ್ಪಿ ಹಿಡಿದು) ಬಂದೆಯಾ ಮಗನೇ ನಾಪಾಷಾಣ! ಇಲಿಪಾಷಾಣ ತಿಂದು ಹೋಗಿ—ಈಗ ಮಾದಪ್ಪಯ್ಯನಿಗೆ [illegible] ಕೊಡಲು ಬಂದಯಾ ಕುಲದೀಪವೇ?

ಗಂಗಾ:—ಅಪ್ಪಾ!

ಮಾದಪ್ಪಯ್ಯ:—ಓ ಓ! ಇಲ್ಲಿದ್ದೇನೆ ಮಗನೇ ನಾನು! [illegible] ಹೋಗೋದಿಲ್ಲಾ—ನಿನ್ನನ್ನು ಬಿಟ್ಟು ಹಾಕುವುದಿಲ್ಲ. ಏನು! ಸಾಂಬ್ರಾಣಯ್ಯ!

ಸಾಂಬ್ರಾಣಯ್ಯ:—ಸ್ವಾಮಿ ಇಲ್ಲಿದೇನೆ!

ಮಾದಪ್ಪಯ್ಯ:—ತನಿಯಾ ಮಾಡಿದ್ದು ಇಷ್ಟೆಲ್ಲ— ಸಾಂಬ್ರಾಣಯ್ಯ! ಇಲಿ ಕೊಲ್ಲುತ್ತೇನೆಂತ ನನ್ನ ಈ ಹುಲಿಯನ್ನು ಕೊಂದಾಳೆ ಪುಣ್ಯಾತ್ಮ!

ಸಾಂಬ್ರಾಣಯ್ಯ:—ದು ಖಿಸಬೇಡಿ ಮಾದಪ್ಪಯ್ಯನವರೆ. ಈಗ ಪುನಃ ಲಭಿಸಿದೆ. ಅವನಿಗೆ ಕೊಂಚ ವಿಶ್ರಾಂತಿಯಿರಲಿ!

ಮಾದಪ್ಪಯ್ಯ:—ಇಲ್ಲ—ಇಕೊಳ್ಳಿ ಒರಸಿದೆ ಕಣ್ಣೀರು! (ಸುನಂದೆಯ ಕಡೆಗೆ ತಿರುಗಿ)—ಸುನಂದಾ. ಒಂದು ಕಪ್ ಕಾಫಿ ಮಾಡಿ ತಾರೇ. [illegible]

ಸುನಂದೆ: ಕಾಫಿ? ನಿಮಗೆ ಹುಚ್ಚುಗಿಚ್ಚು ತಾಗಿದೆಯೋ? ಯಾವ ಮಗ—ಯಾವ ಅಪ್ಪ!

ಮಾದಪ್ಪಯ್ಯ ಸುನಂದಾ, ನೀನು ಈವರೆಗೆ ಬಯ್ದುದು ಸಾಕು. ಇನ್ನು ಬಯ್ಯಬೇಡ! ನನ್ನ ಮಗ ನನಗೆ ಸಿಕ್ಕಿದ್ದಾನೆ—ಅಪಚಾರ ಆಡಬೇಡ. ನಮ್ಮನ್ನು ಬಿಟ್ಟುಬಿಡು!

ಸಾಂಬ್ರಾಣಯ್ಯ:—ಆಹುದು. ಸುನಂದಾದೇವಿಯವರೇ! ಇಪ್ಪತ್ತೆರಡು ವರ್ಷಗಳ ನಂತರ ತಂದೆ-ಮಕ್ಕಳ ಭೇಟಿ! ಮಾತಾಡಬೇಡಿ!

ಸುನಂದಾ: ಇಪ್ಪತ್ತೆರಡು ವರ್ಷಗಳ ನಂತರ ತಲೆಗೊರಟು ಬಾಲ! ತಂದೆ ಮಕ್ಕಳ ಭೇಟಿಯಂತೆ!

ಗಂಗಾ:—ಅಪ್ಪಾ—ಹೊಟ್ಟೆ ಉರಿ!

ಮಾದಪ್ಪಯ್ಯ:—ಹೋಗೇ—ಸುನಂದಾ! ಹೊಟ್ಟೆ ಬೆಂಕಿಯಂತೆ. ಒಂದು ಕಪ್ ಕಾಫಿ ತಾ!

ಮಹಾನಂದಾ:—ನಾನು ತರಲೇ?

ಮಾದಪ್ಪಯ್ಯ:—ಹೋಗು—ಹೋಗು, ನೀನು ತಾ! ಸಾಂಬ್ರಾಣಯ್ಯ ಇವಳು ನಮ್ಮ ರಮೇಶನ ತಾಯಿಯಾಗಿರಲಿಲ್ಲವೆ?

ಸಾಂಬ್ರಾಣಯ್ಯ:—ಮೊದಲೇ ಹೇಳಿದ್ದೇಕೆ ಸ್ವಾಮಿ ಇನ್ನು ಕೇಳೋದು ಬೇಡ!

ಮಾದಪ್ಪಯ್ಯ ರಮೇಶ, ನಿನ್ನ ಅಮ್ಮನನ್ನು ನೋಡು. ನಿಮ್ಮಿಬ್ಬರಿಗೂ ಪ್ರಾಯ ಒಂದೇ! ಆದರೆ, ಅವಳು ನಿನ್ನ ಪೂರ್ವ ಜನ್ಮದ ತಾಯಿ—ನೀನು ಅವಳ ಮಗ ನೀನು!

ಸುನಂದಾ:—(ಮಹಾನಂದೆಯನ್ನು ತಡೆದು) ನಿಲ್ಲು ತಂಗಿ! ಕಾಫಿ ಗೀಫಿ ತಂದುಕೊಡಬೇಡ! ಪುನಃ ಒಂದು ಬಾಳೆ ಹಣ್ಣಿನಲ್ಲಿ ಸ್ವಲ್ಪ ಇಲಿ ಪಾಷಾಣ ಹಾಕಿ ತಂದುಕೊಟ್ಟು ಈ ಹುಳವನ್ನು ಇಲ್ಲೇ ಮುಗಿಸುವ!

ಸಾಂಬ್ರಾಣಯ್ಯ:—ಶಾಂತಂ ಪಾಪಂ!

ಮಾಹಾನಂದ:—ಅಯ್ಯೋ, ನನ್ನ ಪುತ್ರ!

ಸುನಂದಾ:—ನಿನ್ನ ಪುತ್ರ ಅಲ್ಲ—ಅಮಾವಾಸ್ಯೆಯ ಪಿತ್ರ ಇದು! ಎಲ್ಲಿಂದಲೋ ಹಸಿದು ಬಂದ ವಂಚಕನಿಗೆ ಪುತ್ರ ಎಂದು ಸಂಬೋಧಿಸಿ ನಿನ್ನ ತಾಯ್ತನಕ್ಕೆ ಅಪಮಾನ ಮಾಡಿಕೊಳ್ಳಬೇಡ!

ಮಹಾನಂದಾ:—ಹಸಿದವರಿಗೆ ತಾಯಿಯಾದರೆ ಪುಣ್ಯ ಉಂಟು!

ಮಾದಪ್ಪಯ್ಯ:—ಏನು ಗೊತ್ತಿದೆಯಯ್ಯಾ ಇವಳಿಗೆ! ನನ್ನ ಮಗುವಿಗೆ ಇಲಿಪಾಷಾಣ ಇಡುತ್ತಾಳಂತೆ—ಘಟಿಂಗ ಅಂತೆ!...... ಸಾಂಬ್ರಾಣಯ್ಯ. ಇವಳನ್ನೀಗ ನಾನು ಇಲ್ಲೇ ಕೊಂದರೆ ಏನಾಗುವುದು!

ಸಾಂಬ್ರಾಣಯ್ಯ:—ಅಂತಹ ಅವಶ್ಯಕತೆಯೇನೂ ಇಲ್ಲ ಅಂತ ಇಟ್ಟು ಕೊಳ್ಳಿರಿ! ಸುನಂದಾ ದೇವಿಯವರೇ—ಏನೋ ನಿಮ್ಮ ಪೂರ್ವ ಜನ್ಮದ ಸುಕೃತ ದಿಂದ ನಿಮಗೆ ಒಂದು ಮಗು ಸಿಕ್ಕಿತು!

ಸುನಂದಾ:—ಸುಮ್ಮಗಿರಿ ನೀವು ಸಾಂಬ್ರಾಣಯ್ಯ! ಸುಳ್ಳು ಹೇಳಿ ಹೇಳಿ ನಮ್ಮ ಕುಟುಂಬವನ್ನು ಪೂರ್ಣ ಮುಗಿಸಿದ್ದಾಯಿತು ನೀವು! ಏಕೋ ನಿಮ್ಮನ್ನು ನಂಬಬಾರದೆಂದು ನನ್ನ ಅಂತರ್ಯ ಹೇಳುತ್ತದೆ . . . . (ಗಂಡನ ಕಡೆಗೆ ನೋಡಿ)—ಇವರಿಗೆ ಜಾತಕ ನೋಡಿ ನೋಡಿ ಹುಚ್ಚಾಗಿದೆ! ವ್ಯಾಪಾರ ಮಾಡಿ ಮಾಡಿ ಮನೆಯನ್ನು ಮರೆತಿದ್ದಾರೆ! ಕೋಣ ಹೆತ್ತಿತೆಂದರೂ ನಂಬುತ್ತಾರೆ.

ಮಾದಪ್ಪಯ್ಯ:—ಅಹುದು, ಕೋಣ ಹೆತ್ತಿತೆಂದರೆ ನಂಬುತ್ತೇನೆ. ಎಮ್ಮೆಯಾದ ನೀನು ಹೆರುವುದಿಲ್ಲವೆಂದಮೇಲೆ ಕೋಣಗಳು ಹೆರಬೇಕಾಯ್ತಲ್ಲ.

ಸುನಂದಾ: [illegible] ಜಾತಕ ನೋಡಿ ಘಟಿಂಗರಿಗೆ ಆಶ್ರಯ ಕೊಡಬೇಡಿರೆಂದೇ ನಾನು ನಿಮ್ಮೊಡನೆ ಬೇಡುವುದು. ನಿಮ್ಮ ವ್ಯಾಪಾರ ಕೌಶಲ್ಯವು ಇಂತಹ ಮೂಢ ನಂಬಿಕೆಗಳಿಂದ ಮುಸುಕಾಗಿದೆ. ಲೋಕವನ್ನಾಳುವ ಶಕ್ತಿವಂತರು ನೀವು; ನಿಮ್ಮನ್ನು ಆಳಲು ಒಂದು ಗೇಣುದ್ದ ಕೂಸು ಬಂದಿದೆಯೆಂದರೆ ನಿಮಗೆ ನಾಚಿಗೆಯಾಗುವುದಿಲ್ಲವೆ? ಅವನು ಈ ಕೋಣೆಗೆ ಬಂದ ಕೂಡಲೇ, ನನ್ನನ್ನು ನೋಡಿ ಬೆಚ್ಚಿ ಬಿದ್ದನು.

ಸಾಂಬ್ರಾಣಯ್ಯ:—ಹೇಗಿದ್ದರೂ —ಅವನು ನಿಮ್ಮ ಮನೆಯ ಕೂಸು ಅಮ್ಮಾ! ಸಂಶಯವಿಲ್ಲ!

ಸುನಂದಾ:—ನಿಮಗೇನೋ ಕಮಿಶನ್ ಇದೆ ಸಾಂಬ್ರಾಣಯ್ಯ ಈ ತಂತ್ರದಲ್ಲಿ! ಇವನು ಈ ಮನೆಯ ಕೂಸೇ? ಇವನು ಕೂಸಾದರೆ ನಾನು ತಾಯಿ.

ಮಹಾನಂದಾ:—ತಾಯಿ ನಾನಂತೆ.

ಸುನಂದಾ: [illegible])

ಮಾದಪ್ಪಯ್ಯನವರು: [illegible] ನಾಲ್ಕಾಣೆ! ಜುಗಾರಾಡಿ ಹಾಳುಮಾಡಬೇಡ! ಹೊಟ್ಟೆಗೆ ತಿನ್ನು. (ಎನ್ನುತ್ತ ನಾಲ್ಕಾಣೆ ಚವಲ ಕೊಡಲು, ಗಂಗಾಧರನು ಹೊರಟು ಹೋಗುವನು.)

(ತೆರೆ)

ಸಮಾಪ್ತ.

ದಿ ಪೊಪ್ಯುಲರ್ ಇನ್ಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್, ಮಂಗಳೂರು.

ನ[illegible] ಯುದ್ಧ ಪರಿಸ್ಥಿತಿಯಿಂದ ಸಾರ್ವ[illegible] ಉಂಟಾಗಿದ್ದರೂ, ಪೊಪ್ಯುಲರ [illegible] ಕಂಪೆನಿಯ ಮೇಲೆ ಜನರಿಗಿದ ಆದರ, ಅಭಿಮಾನಗಳನ್ನು ವ್ಯಕ್ತ ಮಾಡುತ್ತದೆ.



ಶ್ರೀ ಬಿ. ವಿಠ್ಠಲರಾವ್.
ಪೊಪ್ಯುಲರ್ ಇನ್ಶ್ಯೂರೆನ್ಸ್ ಕಂಪೆನಿಯ ಮೆನೇಜಿಂಗ್ ಡೈರೆಕ್ಟರರು.

[illegible] ಸರಕಾರೀ ಪತ್ರ(ಭದ್ರತೆ)ಗಳಲ್ಲಿ ಕಂಪೆನಿಯು [illegible] 113,186. [illegible] ಇದೆ. [illegible] ಅಸಲು ಹಣವನ್ನು ಮಾತ್ರ ತೋರಿಸಲಾಗಿದೆ. ಈ ಭದ್ರತೆಗಳಿಂದ [illegible] ದಾಯಕ ಠೇವಣಾತಿಗಳೂ ಅನೇಕ ಇವೆ.

ಕಂಪೆನಿಯ ಮೆನೇಜಿಂಗ್ ಡೈರೆಕ್ಟರರಾದ ಶ್ರೀ ಬೋಳಾರ ವಿಠ್ಠಲರಾಯರು ಸರ್ವಪರಿಚಿತರೂ ವ್ಯವಹಾರ ಕುಶಲರೂ ಆಗಿರುವರು. ಅವರ ಸಂಘಟನಾ ಶಕ್ತಿ, ಕಾರ್ಯಕ್ಷಮತೆ, ವಿಚಕ್ಷಣತೆ, ಇವುಗಳೆಲ್ಲ ಜನಜನಿತವಾಗಿವೆ. ಇಂತಹ ಮಹನೀಯರ ನೇತೃತ್ವದಲ್ಲಿ ಕಂಪೆನಿಯು ಸರ್ವತೋಮುಖವಾದ ಪ್ರಗತಿ ಹೊಂದಿ ಮುನ್ನಡೆಯುತ್ತಿರುವುದು ಆಶ್ಚರ್ಯವಲ್ಲ. ಕಂಪೆನಿಯು, ದೇಶದ ದೂರದೂರದ ನಗರಗಳಲ್ಲಿಯೂ ತನ್ನ ಶಾಖೆಗಳನ್ನು ಹರಡಿರುವುದು ಸಂತೋಷದ ಹಾಗೂ ಗೌರವದ ವಿಷಯವಾಗಿದೆ. ನಮ್ಮ ಜಿಲ್ಲೆಯದೇ—ನಮ್ಮ ನಾಡಿನದೇ ಆದ ಈ ಕಂಪೆನಿಗೆ ಸರ್ವ ಕನ್ನಡಿಗರೂ ಹೆಚ್ಚುಹೆಚ್ಚಾದ ಆದರ—ಪ್ರೋತ್ಸಾಹಗಳನ್ನಿತ್ತು, ನಮ್ಮದೇ ಆದ ಈ ಸಂಸ್ಥೆಯನ್ನು ಮಹಾ ಪ್ರಾಸಾದವಾಗಿ ವೃದ್ಧಿಗೊಳಿಸುವುದು ಅವರ ಕರ್ತವ್ಯ! ಕಂಪೆನಿಗೆ ಉತ್ತರೋತ್ತರ ಅಭಿವೃದ್ಧಿ ಬಯಸುವೆವು!

ಸೊವರಿನ್ ಟೈಲ್ ವರ್ಕ್ಸ್, ಮಂಗಳೂರು

[illegible]



ಸೊವರಿನ್ ಟೈಲ್ ವರ್ಕ್ಸಿನ ಮ್ಯಾಲಕರು.

1929ರಲ್ಲಿ ಸ್ಥಾಪನೆ ಹೊಂದಿದ ಈ ಸಂಸ್ಥೆಯು, ಶ್ರೀ ಕೇಶವನಾಯ್ಕರ ಅವಿಶ್ರಾಂತ ಶ್ರಮದಿಂದ ಮುಂದುವರಿಯುತ್ತ, ಇಂದು ಪ್ರಥಮ ತರಗತಿಯ ಸಂಸ್ಥೆಯೆನಿಸಿದೆ. 'ಸೊವರಿನ್' ಮಾರ್ಕಿನ ಹಂಚುಗಳು ದೂರದೂರದ ನಗರಗಳಲ್ಲಿಯೂ ಮಂಗಳೂರು ಹಂಚುಗಳ ಶ್ರೇಷ್ಠತೆಯನ್ನು ಸಾರುತ್ತಿವೆ. ಶ್ರೀ ನಾಯ್ಕರು ಏಕಾಕಿಯಾಗಿ ಈ ಸಂಸ್ಥೆಯನ್ನು ಇಂದಿನ ಈ ಸುಸ್ಥಿತಿಗೆ ತಂದಿರುವರು. ಸಂಸ್ಥೆಗೆ ಉತ್ತರೋತ್ತರ ಅಭಿವೃದ್ಧಿಯನ್ನು ಬಯಸುವೆವು.

ಮಹಾರಾಜಾ ಇಂಡಸ್ಟ್ರಿಯಲ್ಸ್ ಇವರ ಹೊಸ ಶಾಖೆ

ಹಲವು ವರ್ಷಗಳಿಂದ ಮಂಗಳೂರಲ್ಲಿ ಪ್ರಸಿದ್ಧವಾಗಿರುವ ಮಹಾರಾಜಾ ಇಂಡಸ್ಟ್ರಿಯಲ್ಸ್, ಇವರು ತಮ್ಮ ಗಿರಾಕಿಗಳ ಸೌಕರ್ಯಕ್ಕಾಗಿ ಒಂದು ಹೊಸ ಶಾಖೆಯನ್ನು ರಥಬೀದಿಯಲ್ಲಿ, ಬಲ್ಲಾಳ್ ಬಿಲ್ಡಿಂಗ್ಸ್‌ನಲ್ಲಿ ತೆರೆದಿರುವರು. ಮಹಾರಾಜಾ ಇಂಡಸ್ಟ್ರಿಯಲ್ಸ್‌ರವರ ಎಲ್ಲ ತಯಾರಿಕೆಗಳೂ ಅಲ್ಲಿ ಯಾವಾಗಲೂ ಎಂದಿನ ಸಾಮಾನ್ಯ ದರಗಳಲ್ಲಿ ವಿಕ್ರಯಕ್ಕಿರುತ್ತವೆ. ಮಹಾಜನರು ಎಂದಿನಂತೆ ಈ ಸಂಸ್ಥೆಗೆ ತಮ್ಮ ಆದರ—ಪ್ರೋತ್ಸಾಹಗಳನ್ನು ಪ್ರದರ್ಶಿಸಬೇಕಾಗಿ, ಮ್ಯಾಲಕರಾದ ಶ್ರೀ ಸುಬ್ರಾಯ ಕಾಮತ್‌ರವರ ವಿನಂತಿ.

ನಾಲ್ಕು ಕುಡ್ತೆ ಹಾಲು!

(ಲೇಖಕ:—ಭ್ರಮರ)

ಅಂದು ರಾತ್ರೆ ಮನೆಗೆ ಹೋಗುತ್ತಲೇ ಸುಶೀಲೆಯನ್ನು ಕರೆದು ಕ್ಲಬ್ಬಿನಲ್ಲಿ ಸಂಜೆ ಒಂದು ಪತ್ರಿಕೆಯಲ್ಲಿ ಕಂಡ ಒಗಟನ್ನು ಕೇಳಬೇಕೆಂದಿದ್ದೆ. ಆದರೆ ಮನೆಗೆ ಹೋದಾಗ ಅದು ಮರೆತೇ ಹೋಯಿತು. ಊಟವಾಗಿ ಹೊರಗೆ ಬಂದು ಒರಗು ಕುರ್ಚಿಯಲ್ಲಿ ಕುಳಿತಾಗ ನೆನಪಾಯಿತು. ಆಗಲೇ ಸುಶೀಲೆಯು ಅಲ್ಲಿಗೆ ಬಂದಳು. ಕೇಳಿದೆ.

"ಸುಶೀ, ಈ ದಿನ ಕ್ಲಬ್ಬಿನಲ್ಲಿ ಒಂದು ಪತ್ರಿಕೆಯಲ್ಲಿ ಒಂದು ಒಗಟನ್ನು ಕಂಡೆ. ಬಹಳ ಸೊಗಸಾಗಿತ್ತು. ಅದನ್ನು ಬಿಡಿಸಲು ಸ್ವಲ್ಪ ಚುರುಕುತನ ಬೇಕು. ನೀನು ಅದನ್ನು ಬಿಡಿಸುವಿಯಾ"? ಎಂದೆ.

"ನೋಡುವ, ಹೇಳಿರಂತೆ" ಎಂದಳು, ಸುಶೀಲೆ.

"ಒಬ್ಬ ಹೆಂಗುಸು ಒಬ್ಬ ಹುಡುಗನನ್ನು ಕರೆದು ಒಂದು ಐದು ಕುತ್ತಿಯ ಪಾತ್ರೆಯನ್ನೂ ಒಂದು ಮೂರು ಕುತ್ತಿಯ ಪಾತ್ರೆಯನ್ನೂ ಕೊಟ್ಟು ಅವುಗಳಲ್ಲಿ ನಾಲ್ಕು ಕುತ್ತಿ ಹಾಲು ತರಲು ಹೇಳಿದಳು. ಮತ್ತು ಹಾಲನ್ನು ಈ ಎರಡು ಪಾತ್ರೆಗಳ ಹೊರತು ಬೇರೆ ಯಾವ ಪಾತ್ರೆಯಲ್ಲಿಯೂ ಅಳತೆ ಮಾಡಕೂಡದೆಂದೂ ಹೇಳಿದಳು. ಚುರುಕು ಬುದ್ಧಿಯ ಆ ಹುಡುಗನು ಕಷ್ಟವಿಲ್ಲದೆ ನಾಲ್ಕು ಕುತ್ತಿ ಹಾಲನ್ನು ತಂದನು. ಅವನು ಹೇಗೆ ಹಾಲನ್ನು ಅಳತೆ ಮಾಡಿದನು?" ನಾನು ಒಗಟನ್ನು ಹೇಳಿದೆ.

"ಹುಡುಗನಿಗೆ ಎಷ್ಟು ಪ್ರಾಯ?" ಎಂದಳು ಸುಶೀಲೆ.

"ಯಾಕೆ?" [illegible]ರ್ಯದಿಂದ ಕೇಳಿದೆ, ನಾನು.

"ಐದು [illegible]ಡುಗ ಸಣ್ಣವ[illegible] ನಾಲ್ಕು ಕುತ್ತಿ ಹಾಲೆಲ್ಲ ಮನೆಗೆ ತರುವಾ[illegible] ಮ[illegible] ಪಾಲಾಗುವುದು. [illegible]ಗೆ ಬುದ್ಧಿ ಇಲ್ಲ" ಎಂದಳು, ಸುಶೀಲೆ.

"ಓಹೋ, ಹಾಗೆ ತಾನೇ? ಸರಿ. ಹುಡುಗನಿಗೆ ಸಾಧಾರಣ ಹದಿನಾರು ವರ್ಷ ಪ್ರಾಯವೆಂದಿಟ್ಟುಕೊ. ಆ ಹಾಲನ್ನು ಚೆಲ್ಲದೆ ಮನೆಗೆ ತರುವಷ್ಟು ಬಲವೂ ಇದೆ ಎಂದೆನ್ನುವಾ'' ಎಂದು ಹೇಳಿ ನಾನು ಸುಶೀಲೆಯ ಈ ಕಷ್ಟವನ್ನು ಪರಿಹರಿಸಿದೆ.

"ಅವರ ಮನೆಯಲ್ಲಿ ಮದುವೆಯೇ?" ಎಂಬುದು ಸುಶೀಲೆಯ ಮುಂದಿನ ಪ್ರಶ್ನೆ.

"ಯಾರ ಮನೆಯಲ್ಲಿ?" ಎಂದು ನಾನು ಕೇಳಿದೆ.

"ಆ ಹೆಂಗಸಿನ ಮನೆಯಲ್ಲಿ. ಇಲ್ಲದಿದ್ದರೆ ನಾಲ್ಕು ಕುತ್ತಿ ಹಾಲೇಕೆ?" ಎಂದಳು, ಸುಶೀಲೆ.

"ಅದನ್ನೆಲ್ಲ ಒಗಟಿನಲ್ಲಿ ಹೇಳಲಿಲ್ಲ. ಅದು ಅಗತ್ಯವೂ ಇಲ್ಲ" ಎಂದೆ ನಾನು, ಸ್ವಲ್ಪ ಕೋಪದಿಂದ.

"ಓಹೋ, ತಿಳಿಯಿತು" ಎಂದಳು ಸುಶೀಲೆ; "ನಿಮಗೆ ಕುತ್ತಿಯೋ ಕುಡ್ತೆಯೋ ಎಂಬುದು ಮರೆತಿರಬೇಕು. ಹುಡುಗನಿಗೆ ಹೇಳಿದ್ದು ನಾಲ್ಕು ಕುಡ್ತೆ ಹಾಲು ತರಲಿಕ್ಕೆ, ನಾಲ್ಕು ಕುತ್ತಿಯಲ್ಲ! ಇಲ್ಲದಿದ್ದರೆ, ಯಾರೂ ಒಬ್ಬ ಸಣ್ಣ ಹುಡುಗನನ್ನು ನಾಲ್ಕು ಕುತ್ತಿ ಹಾಲು ತರಲು ಕಳುಹಿಸುವರೇ? ಕಳುಹಿಸಿದರೆ ಅದರಲ್ಲಿ ಅರ್ಧ ಅವನು ಖಂಡಿತ ಚೆಲ್ಲುವನು. ನಮ್ಮ ಮನೆಯಲ್ಲಿ ಹಾಲು ತರುವ ಹುಡುಗನೂ ಕೂಡ ಒಂದು ಕುತ್ತಿಯಲ್ಲಿ ಒಂದು ಕುಡ್ತೆ ಚೆಲ್ಲಿ ತರುತ್ತಾನೆ".

ನನ್ನ ಕೋಪ ಇನ್ನೂ ಸ್ವಲ್ಪ ಹೆಚ್ಚಾಯಿತು.

"ನಮ್ಮ ಹುಡುಗ ಹಾಲು ಕಡಿಮೆ ತರುತ್ತಾನಾದರೆ ಹಾಲು ಕುಪ್ಪಮ್ಮನಿಗೆ ಹೇಳಿಕಳುಹಿಸು. ಹುಡುಗ ಹಾಲನ್ನು ಚೆಲ್ಲುತ್ತಾನೋ ಕುಡಿಯುತ್ತಾನೋ ದೇವರೇ ,ಬಲ್ಲ! ಮತ್ತು ನಿನಗೆ ಇಷ್ಟು ಸುಲಭ ಒಗಟನ್ನು ಬಿಡಿಸಲಾಗದಿದ್ದರೆ ಬೇರೆ ನೆವಗಳನ್ನೆಲ್ಲ ಹುಡುಕದೆ 'ನನಗೆ ತಿಳಿಯದು' ಎಂದು ಸೋಲನ್ನೊಪ್ಪಿದರೆ ಸಾಕಲ್ಲ!" ಎಂದೆ, ನಾನು.

"ಒಗಟು ಬಿಡಿಸಲಾಗುವುದಿಲ್ಲ ಎಂದರಾರು?'' ಎಂದಳು ಸುಶೀಲೆ "ಸರಿ, ನೋಡುವ. ಎರಡು ಪಾತ್ರೆಗಳು, ಒಂದು ಐದು ಕುಡ್ತೆಯದು, ಇನ್ನೊಂದು ಮೂರು ಕುಡ್ತೆಯದು. ನಾಲ್ಕು ಕುಡ್ತೆ ಹಾಲು ತರಬೇಕು. ಅಲ್ಲವೇ?'' ಎಂದು ಕೇಳಿದಳು.

"ಹೌದು'' ನಾನೆಂದೆ.

"ಹೇಗೂ ಎರಡು ಪಾತ್ರೆಗಳನ್ನು ಕೊಟ್ಟಿದ್ದಾಳೆ, ಹೆಂಗುಸು; ಮೂರು ಕುಡ್ತೆಯ ಪಾತ್ರೆಯ ಬದಲಿಗೆ ಒಂದು ಕುಡ್ತೆಯ ಪಾತ್ರೆ ಕೊಟ್ಟಿದ್ದರೆ, ಪಾಪ ಆ ಹುಡುಗನಿಗೆ ಕಷ್ಟವೇ ಇರುತ್ತಿರಲಿಲ್ಲ" ಎಂದಳು, ಸುಶೀಲೆ.

"ಒಗಟೂ ಇರುತ್ತಿರಲಿಲ್ಲ" ಎಂದು ನಾನು ಬೋಧಿಸಿದೆ.

"ಹಾಲುಗಾರನ ಹತ್ತಿರ ಪಾತ್ರೆ ಇಲ್ಲ[illegible] ಮತ್ತೊಂದು ಪ್ರಶ್ನೆ.

ಉತ್ತರ ಕೊಡುವ ತಾಳ್ಮೆ ತಪ್ಪಿ ನಾನು ಸುಶೀಲೆಯನ್ನು[illegible] ನೋಡಿದೆ.

"ಓಹೋ, ಮರೆತೆ. ಬೇರೆ ಪಾತ್ರೆಯನ್ನು ಉಪಯೋಗಿಸಬಾರದಂತೆ." ಎಂದು ಹೇಳಿ ಸುಶೀಲೆ ಈ ಸಲ ಸ್ವಲ್ಪ ಆಲೋಚಿಸಲು ಪ್ರಾರಂಭಿಸಿದಳು. ಅವಳ ಒಗಟಿನಲ್ಲಿ ನಿಜವಾದ ಅಭಿರುಚಿ ತೋರಿಸುವುದನ್ನು ಕಂಡು ನಾನು ಸಂತೋಷ ಪಡಲು ಆರಂಭಿಸುವಷ್ಟರಲ್ಲಿ ಸುಶೀಲೆ ಹೇಳಿದಳು:—

"ಸುಲಭ! ಐದು ಕುಡ್ತೆಯ ಪಾತ್ರೆಯಲ್ಲಿ ಅಂದಾಜಿನಿಂದಲೇ ನಾಲ್ಕು ಕುಡ್ತೆ ಹಾಲು ಹೊಯ್ದು ತಂದನು, ಹುಡುಗ."

"ಅದಾಗದು" ಎಂದೆ, ನಾನು.

"ಯಾಕಾಗದು? ನಾನಾದರೆ ತರುತ್ತಿದ್ದೆ. ಸ್ವಲ್ಪ ಹೆಚ್ಚೇ ಹೊರತು ಕಡಿಮೆ ಅಲ್ಲ. ಬೇಕಾದರೆ ನಿಮ್ಮೊಡನೆ ಪಂಥ" ಎಂದು ಹೇಳಿದಳು, ಸುಶೀಲೆ.

"ಅದಾಗದು ಎಂದರೆ ಹಾಗೆ ಮಾಡಕೂಡದು ಎಂದು ಹೇಳಿದುದು, ನಾನು" ಎಂದು ನಾನು ವಿವರಿಸಿದೆ.

"ಪಾಪ, ಹುಡುಗನಿಗೆ ಎಷ್ಟು ಉಪದ್ರ ಕೊಡುವುದಪ್ಪಾ! ಸಾಕಾದಷ್ಟು ದೊಡ್ಡ ಪಾತ್ರೆ ಕೊಟ್ಟು 'ನಾಲ್ಕು ಕುಡ್ತೆ ಹಾಲು ತಾ' ಎಂದು ಹೇಳಿದರೆ ತರುತ್ತಿದ್ದಿಲ್ಲವೇ ಆ ಹುಡುಗ? ಎರಡು-ಮೂರು ತರದ ಪಾತ್ರೆಗಳನ್ನು ಕೊಟ್ಟು, 'ಹಾಗೆ ಮಾಡಬಾರದು, ಹೀಗೆ ಮಾಡಬಾರದು' ಎಂದು ಹೇಳಿದರೆ ...." ಎಂದು ಉದ್ಗಾರ ತೆಗೆಯುತ್ತಿದ್ದಳು, ಸುಶೀಲೆ. ಆಗಲೇ ನಡುವೆ ಬಾಯಿಹಾಕಿ ನಾನು ಹೇಳಿದೆ:—

"ಆ ಹುಡುಗನು ಚುರುಕು ಬುದ್ಧಿಯವನೆಂಬುದನ್ನು ನೀನು ಮರೆಯುತ್ತೀ, ಸುಶೀಲಾ. ಮತ್ತು ಇದು ಒಗಟು ಎಂಬುದನ್ನೂ ನೀನು ಮರೆಯುತ್ತೀ".

"ಹಾ! ನಾನು ಮರೆತಿದ್ದೇನೆ ಏನೆಂದರೆ ಹಾಲಿನ ಪಾತ್ರೆಗೆ ಮುಚ್ಚಲಿಕ್ಕೆ. ನಾಳೆ ಮಜ್ಜಿಗೆ........" ಎನ್ನುತ್ತ ಸುಶೀಲೆ ಅಡಿಗೆ ಕೋಣೆಗೆ ಓಡಿದಳು.

ನಾನು ಅಷ್ಟರ ತನಕ ಆ ಒಗಟನ್ನು ಬಿಚ್ಚಿರಲಿಲ್ಲ. ಆದುದರಿಂದ ಆಲೋಚಿಸುತ್ತ ಕುಳಿತೆ. ಒಗಟು ಬಹಳ ಸುಲಭವಿದ್ದಂತೆ ತೋರುತ್ತಿತ್ತು. ಆದರೆ ಅದರ ಉತ್ತರವು ಕಂಡುಹಿಡಿಯುವಷ್ಟರಲ್ಲಿ ಫಕ್ಕನೆ ಮಾಯವಾಗುತ್ತಿತ್ತು. ಸುಶೀಲೆ ತಿರುಗಿ ಬಂದ ಮೇಲೆ ನಾನು ಅವಳೊಡನೆ ಒಗಟಿನ ಪ್ರಸ್ತಾಪ ಎತ್ತಲಿಲ್ಲ. ಪೇಪರನ್ನು ಓದುವವನಂತೆ ನಟಿಸುತ್ತ ಒಗಟನ್ನು ಬಿಚ್ಚಲು ಪ್ರಯತ್ನಿಸುತ್ತಿದೆ. ಸುಶೀಲೆ ಕೆಲಸಮುಗಿದ ಮೇಲೆ ಹೋಗಿ ಮಲಗಿದಳು. ನಾನು ಒಂದು ಪೆನ್ಸಿಲ[illegible] ಹಿಡಿದು ಪೇಪರಿನ ಬದಿಗಳನ್ನೆಲ್ಲ ಅಂಕೆ-ಸಂಖ್ಯೆಗಳಿಂದ ತುಂಬಿಸಿದರೂ ಉತ್ತ[illegible] ಇನ್ನೂ ದೂರವೇ ಇತ್ತು. ನಾನು ಹೋಗಿ ಮಲಗಿದೆ. ನಿದ್ದೆ ಬೀಳುವ ಸಮಯಕ್ಕೆ ಇನ್ನೊಮ್ಮೆ ಒಗಟಿನ ಉತ್ತರವು ಹೊಳೆದಂತಾಯಿತು. ಸರಿಯಾಗಿ ಎಚ್ಚತ್ತು ಆಲೋಚಿಸಿ ನೋಡಿದಾಗ ಉತ್ತರವೂ ಮಾಯವಾಗಿತ್ತು, ನಿದ್ದೆಯೂ ದೂರವಾಗಿತ್ತು.

ಮರುದಿನ ಬೆಳಿಗ್ಗೆ ಕಾಫಿ ಕುಡಿದು ಹೊರಗೆ ಬಂದು ಕುರ್ಚಿಯಲ್ಲಿ ಕುಳಿತು ಆಲೋಚಿಸಿದೆ. ಒಗಟಿನ ಉತ್ತರವು ಆಗಾಗ ಹೊಳೆದಂತಾದರೂ ಸರಿಯಾಗಿ ಆಲೋಚಿಸುವಷ್ಟರಲ್ಲಿ ದೂರವಾಗುತಿತ್ತು. ಮಾನವನ ಮನಸ್ಸು ಎಷ್ಟು ವಿಚಿತ್ರ? ಎಂದುಕೊಂಡೆ. ಅಷ್ಟೊತ್ತಿಗೆ ಸುಶೀಲೆ ಬಂದು "ಏನು ಆಲೋಚಿಸುತಿದ್ದೀರಿ?" ಎಂದಳು.

"ನಿನ್ನೆಯ ಒಗಟು, ಸುಶೀ", ಎಂದೆ.

"ನೀವು ಉತ್ತರವನ್ನು ಕಂಡು ಹಿಡಿದಿರಾ?" ಎಂದು ಕೇಳಿದಳು, ಸುಶೀಲೆ.

ನಾನು ಹೇಳಿದೆ:—"ಅದೇ ಆಲೋಚಿಸುತಿದ್ದೆ....... ನೋಡುವ. ಹುಡುಗನು ಮೊದಲು ಐದು ಕುಡ್ತೆಯ ಪಾತ್ರೆಯಲ್ಲಿ ಹಾಲು ತುಂಬಿಸಿದನು. ಅದರಿಂದ ಮೂರು ಕುಡ್ತೆಯ ಪಾತ್ರೆ ತುಂಬಿಸಿದನು. ಮತ್ತು ಐದು ಕುಡ್ತೆಯ ಪಾತ್ರೆಯನ್ನು ಪುನಃ ತುಂಬಿಸಿ, ಸಣ್ಣ ಪಾತ್ರೆಯನ್ನು ಬರಿದು ಮಾಡಿ. . . . . ."

"ಮೊದಲಿನ ಸ್ಥಿತಿಗೇ ಬಂದು ಮುಟ್ಟಿದನು!" ಎಂದು ಹೇಳಿ ನಕ್ಕಳು, ಸುಶೀಲೆ.

"ಆಂ. . . . . ಓ, ಹಾಗಲ್ಲ . . . . ಸುಶೀ, ಒಗಟು ತಪ್ಪಾಗಿರಬೇಕು" ಎಂದೆ ನಾನು.

"ಯಾಕೆ?" ಕೇಳಿದಳು, ಸುಶೀಲೆ.

"ಬಹುಶಃ ಅವನಿಗೆ ಹೆಂಗಸು ಹೇಳಿದ್ದು ಒಂಬತ್ತು ಕುಡ್ತೆ ಹಾಲು ತರಲಿಕ್ಕೆ" ಎಂದು ನಾನು ಯೋಚಿಸುತ್ತ ಕುಳಿತೆ.

"ಹಾಗಾದರೆ ಅದು ಅಸಾಧ್ಯ. ಎರಡು ಪಾತ್ರೆಗಳಲ್ಲಿ ಒಟ್ಟು ಹಿಡಿಯುವುದು ಎಂಟು ಕುಡ್ತೆ" ಎಂದು ಸುಶೀಲೆಯ ತರ್ಕ.

"ಹಾಗಾದರೆ ಎಂಟು ಕುಡ್ತೆಯಾಗಿರಬೇಕು". ಎಂದು ನಾನು ಬೇರೆ ಹಾದಿಕಾಣದೆ ಹೇಳಿದೆ.

"ಎಂಟು ಕುಡ್ತೆಯಾದರೆ ಒಗಟೇ ಇರುತ್ತಿರಲಿಲ್ಲ" ಎಂದು ಬೋಧಿಸಿದಳು ಸುಶೀಲೆ.

ನಾನು ಆಲೋಚಿಸುತ್ತ ಕುಳಿತೆ.

ಸಾಂಬ್ರಾಣಯ್ಯ:—ಅಂತಹ ಭ ಒಗಟನ್ನು ಇನ್ನೂ ಬಿಚ್ಚಲಾಗಲಿಲ್ಲವೇ, ಕೊಳ್ಳಿರಿ! ಸುನಂದಾ ದೇವಿಯ್ಯನ್ನನ್ನೆ ರಾತ್ರಿಯೇ ಬಿಚ್ಚಿದ್ದೇನೆ. ನಿಮ್ಮೊಡನೆ ಹೇಳಲು ದಿಂದ ನಿಮಗೆ ಒಂದು ಸುಶೀಲೆ ಹೇಳಿದಳು, ನಸುನಗುತ್ತ.

ಸುವನೋಡುವ, ಹೇಳು" ಎಂದೆ ನಾನು.

ನಮ್ಮ ಸುಶೀಲೆ ಸ್ವಲ್ಪ ನಕ್ಕು ಹೇಳಿದಳು:—

ನಂ "ಹುಡುಗನು ಮೊದಲು ಐದು ಕುಡ್ತೆಯ ಪಾತ್ರೆಯನ್ನು ತುಂಬಿಸಿ, ಅದರೊಳಗಿನ ಹಾಲಿನಿಂದ ಮೂರು ಕುಡ್ತೆಯ ಪಾತ್ರೆಯನ್ನು ತುಂಬಿಸಿ, ಚಿಕ್ಕ ಪಾತ್ರೆಯನ್ನು ಕೂಡಲೆ ಬರಿದುಮಾಡಿ ದೊಡ್ಡ ಪಾತ್ರೆಯಲ್ಲಿ ಉಳಿದ ಹಾಲು ಎಂದರೆ ಎರಡು ಕುಡ್ತೆಯನ್ನು ತಿರಿಗಿ ಸಣ್ಣ ಪಾತ್ರೆಯಲ್ಲಿ ಹಾಕಿ ದೊಡ್ಡ ಪಾತ್ರೆಯನ್ನು ಪುನಃ ಬೇರೆ ಹಾಲಿನಿಂದ ತುಂಬಿಸಿ, ಅದರಿಂದ ಸಣ್ಣ ಪಾತ್ರೆಯನ್ನು ತುಂಬಿಸುವನು. ಆಗ ದೊಡ್ಡ ಪಾತ್ರೆಯಿಂದ ಒಂದು ಕುಡ್ತೆ ಹಾಲು ಸಣ್ಣ ಪಾತ್ರೆಗೆ ಹೋಗಿ, ಅದರಲ್ಲಿ ಸರಿಯಾಗಿ ನಾಲ್ಕು ಕುಡ್ತೆ ಹಾಲು ಉಳಿಯುವುದು"

"ಅದರಲ್ಲಿ ಎಂದರೆ ಸಣ್ಣ ಪಾತ್ರೆಯಲ್ಲಿಯೇ?" ಎಂದು ನಾನು ಕೇಳಿದೆ.

"ಓಹೋ, ಮೂರು ಕುಡ್ತೆಯ ಪಾತ್ರೆ ಫಕ್ಕನೆ ದೊಡ್ಡದಾಯಿತೋ ಏನೊ, ನಾಲ್ಕು ಕುಡ್ತೆ ಹಿಡಿಯಲಿಕ್ಕೆ" ಎಂದಳು ಸುಶೀಲೆ.

"ಅಲ್ಲ, ಸುಶೀ, ನೀನು ಅಷ್ಟು ವೇಗದಿಂದ ಹೇಳುವಾಗ ಯಾವ ಪಾತ್ರೆ ಯಾವುದೆಂಬುದು ಫಕ್ಕನೆ ಮರೆತುಹೋಯಿತು. ಇನ್ನೊಮ್ಮೆ ಸ್ವಲ್ಪ ನಿಧಾನವಾಗಿ ಹೇಳು" ಎಂದು ಹೇಳಿದೆ ನಾನು.

ಸುಶೀಲೆ ಇನ್ನೊಮ್ಮೆ ವಿವರವಾಗಿ ಹೇಳಿದಳು. ನಾನು ಆಲೋಚಿಸಿ ಹೇಳಿದೆ:—"ಸರಿ, ನೀನೇನೋ ಒಂದು ಉತ್ತರವನ್ನು ಕಂಡು ಹಿಡಿದಿರುತ್ತೀ. ಅಲ್ಲವೆನ್ನುವುದಿಲ್ಲ ನಾನು. ನಾನು ಇಷ್ಟರೊಳಗೆ ಎಂಟು ಬೇರೆ ಬೇರೆ ಉತ್ತರಗಳನ್ನು ಕಂಡುಹಿಡಿಯುವುದರಲ್ಲಿದ್ದೆ. ಆದರೆ ಪ್ರತಿ ಸಲವೂ ಸರಿಯಾಗಿ ಹಿಡಿಯುವಷ್ಟರಲ್ಲಿ ಉತ್ತರವು ದೂರವಾಗುವುದು. ಎಷ್ಟೋ ಉತ್ತರಗಳು ನನ್ನ ಮನಸ್ಸಿನಲ್ಲಿ ಚಲ್ಲಾಪಿಲ್ಲಿಯಾಗಿರಬೇಕು. ಆದರೆ, ಒಂದೂ ಸರಿಯಾಗಿ ಹೊರಗೆ ಬರುವಷ್ಟರಲ್ಲಿ ಮಾಯವಾಗುವುದು....ಮನಸ್ಸೆಂಬುದು ಒಂದು ವಿಚಿತ್ರ ವಸ್ತು, ಸುಶೀ...."

ಸುಶೀಲೆ ನನ್ನ ಎಲ್ಲ ಮಾತುಗಳನ್ನು ಕೇಳುತ್ತಿದ್ದಳೋ ಇಲ್ಲವೋ. ಅವಳು ಏನನ್ನೊ ಹುಡುಕುತ್ತಿದ್ದಳು.

"ವಿಚಿತ್ರ! ವಿಚಿತ್ರವೆಂದರೆ ನಾನು ನಿನ್ನೆ ಸಂಜೆ ಇಲ್ಲಿಟ್ಟ ಪೆನ್ಸಿಲು ಮಾಯವಾದ ರೀತಿ! ಈಗ ಸಾಮಾನಿನ ಪಟ್ಟಿ ಬರಿಯಲಿಕ್ಕೆ ಬೇಕು....ನೋಡುವ, ನೀವು ಏಳಿರಿ. ಆ ಕುರ್ಚಿಯ ಮೇಲಿದೆಯೋ ನೋಡುವ"

ನಾನು ಎದ್ದೆ. ಪೆನ್ಸಿಲೂ ಸಿಕ್ಕಿತು.

(ಆಂಗ್ಲ ಕತೆಗಾರನೊಬ್ಬನ ಕತೆಯ ಆಧಾರದಿಂದ)

ಶಾಂತಿಃ ಶಾಂತಿಃ ಶಾಂತಿಃ

ಸಾಂಬ್ರಾಣಯ್ಯ:—ಅಂತಹ
ಕೊಳ್ಳಿರಿ! ಸುನಂದಾ ದೇವಿಯ್ನ
ದಿಂದ ನಿಮಗೆ ಒಂದು ಸುಶೀಲೆ ಹೆ

ಸು ...ನೋಡುವ, ಹೇಳು
ನಮ್ಮ ... ಸುಶೀಲೆ ಸ್ವಲ್ಪ ನಕ್ಕು
ನಂ ... "ಹುಡುಗನು ಮೊದ
ರೊಳಗಿನ ಹಾಲಿನಿಂದ
ಯನ್ನು ಕೂಡಲೆ
ಎರಡು ಕುಡ್ತೆ ಯನ
ಪುನಃ ಬೇರೆ ಹಾಲಿ
ವನು. ಆಗ ದೊಡ
ಹೋಗಿ, ಅದಗಲಿ

Printed by U. Keshavacharya at the City Press Limited, Mangalore and Edited and Published by K. Vasudeva Shenoy at the office of Newspaper Publishers, Ltd., Mangalore.